


ಸಂಚಿಕೆಗಳು 95/ 96/ 97/ 98

ಏಪ್ರಿಲ್ 2013 / ಮಾರ್ಚ್ 2014

ಸುವರ್ಣ ಸಂಭ್ರಮ


ಸಂಯುಕ್ತ ವಿಶೇಷ ಸಂಚಿಕೆ

# ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿ ತ್ರೈಮಾಸಿಕ

ಡಾ.ನಟರಾಜ.ಎಸ್.ಬೂದಾಳು
ಡಾ.ಜಯಪ್ರಕಾಶ್ ಶೆಟ್ಟಿ
ಡಾ.ಬಸವರಾಜ ಸಾದರ
ಬಸು ಬೇವಿನಗಿಡದ
ಆರ್.ವಿಜಯರಾಘವನ್
ತಾ.ಶ್ರೀ.ಗುರುರಾಜ್
ಡಿ.ಎನ್.ಶ್ರೀನಾಥ್

ಅನಿಕೇತನ



ಅನಿಕೇತನ

ಅನಿಕೇತನ

Registration No. 45656/88 -
Price : 30/-

# ಅನಿಕೇತನ

**ಕರ್ನಾಟಕ ಸಾಹಿತ್ಯ ಅಕಾಡೆಮಿಯ**
**ತ್ರೈಮಾಸಿಕ**

ಏಪ್ರಿಲ್ ೨೦೧೩ – ಮಾರ್ಚ್ ೨೦೧೪



**ಪ್ರಧಾನ ಸಂಪಾದಕರು**
**ಪ್ರೊ.ಮಾಲತಿ ಪಟ್ಟಣಶೆಟ್ಟಿ**
**ಸಂಪಾದಕರು**
**ಲಕ್ಷ್ಮೀಪತಿ ಕೋಲಾರ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ.ರಸ್ತೆ,
ಬೆಂಗಳೂರು–೫೬೦೦೦೨
ದೂರವಾಣಿ – ೨೨೨೧೧೬೩೦

**ANIKETHANA**

A literary Journal (Quarterly)

Edited by
Lakshmipathykolara

Published by :
**Smt. C.H.Bhagya, Registrar, Karnataka Sahithya Academy,**
**Kannada Bhavana, J.C.Road, Bengaluru-560002**

Pages : **168 + 2**

Price : 50/-


ಸಂಪುಟ : ೨೪
ಸಂಚಿಕೆಗಳು: ೯೧, ೯೨, ೯೩, ೯೪
ಪ್ರತಿಗಳು : ೧೫೦೦

**ಪ್ರಧಾನ ಸಂಪಾದಕರು**
ಪ್ರೊ.ಮಾಲತಿ ಪಟ್ಟಣಶೆಟ್ಟಿ, ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
**ಪ್ರಕಾಶಕರು**
ಶ್ರೀಮತಿ ಸಿ.ಎಚ್.ಭಾಗ್ಯ, ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ,
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–೦೨

ಬಿಡಿ ಪ್ರತಿ : ರೂ. ೫೦/–
ವಾರ್ಷಿಕ ಚಂದಾ : ರೂ. ೨೦೦/–
ಆಜೀವ ಚಂದಾ : ರೂ. ೧೦೦೦/–

ರಕ್ಷಾಪುಟ
ಒಳಪುಟ ವಿನ್ಯಾಸ : ಮಂಜುನಾಥ.ಎಸ್. ಬೆಂಗಳೂರು

ಮುದ್ರಣ : **ಕ್ರಿಯಾ ಪ್ರಕಾಶನ**



## ಪ್ರಧಾನ ಸಂಪಾದಕರ ಮಾತು....

ಪ್ರಿಯ ಓದುಗರೇ,

ಭಾರತೀಯ ಭಾಷೆಗಳೆಲ್ಲದರ ಸೃಜನಶೀಲ ಪ್ರತಿಭಾ ಮೊತ್ತವನ್ನು ಸಾರಾಸಗಟಾಗಿ ಭಾರತೀಯ ಕಾವ್ಯ ಮೀಮಾಂಸೆಯ ಪ್ರಭಾವವೆಂದೇ ಠಂಕಿಸುತ್ತ ಬಂದಿರುವ ಉತ್ತರದ ಸಾಂಸ್ಕೃತಿಕ ರಾಜಕಾರಣದ ಬಗ್ಗೆ ನಮ್ಮಲ್ಲಿ ದನಿಗಳೆದ್ದದ್ದು ಕಡಿಮೆ. ಇಲ್ಲವೆಂದರೂ ನಡೆದೀತು. ಆದರೆ ಕನ್ನಡದ ಮಟ್ಟಿಗೆ ಅದರದ್ದೇ ಆದ ಸ್ವತಂತ್ರ ಕಾವ್ಯ ಮೀಮಾಂಸೆಯ ಪ್ರಸ್ಥಾನವೊಂದು ಪ್ರಾಚೀನ ಕಾಲದಿಂದಲು ತನ್ನ ಪರಂಪರೆಯೊಂದನ್ನು ಕಟ್ಟಿಕೊಳ್ಳುತ್ತಲೇ ಬಂದಿದೆಯೆಂಬ ಮಹತ್ವದ ಅಜ್ಞಾತ ನೋಟವನ್ನು ಆಧುನಿಕ ದಾರ್ಶನಿಕ ಲೇಖಕ ಮಿತ್ರರಾದ ಡಾ.ನಟರಾಜ ಬೂದಾಳರು ಪರಿಶ್ರಮಪೂರ್ವಕವಾದ ತಮ್ಮ ಅಧ್ಯಯನ ಮತ್ತು ಒಳನೋಟಗಳೊಂದಗೆ ಮಂಡಿಸಿರುವ ಲೇಖನ 'ಕನ್ನಡ ಕಾವ್ಯ ಮೀಮಾಂಸೆ– ಪ್ರಾಥಮಿಕ ಲಕ್ಷಣಗಳು'. ಹೀಗೆ ಕನ್ನಡ ಕಾವ್ಯ ಮೀಮಾಂಸೆಯ ದರ್ಶನವನ್ನು ಮಂಡಿಸುವ ಪ್ರಯತ್ನವೇ ಹೊಸತು, ಪ್ರಪ್ರಥಮ ಮತ್ತು ಅನನ್ಯವಾದುದು. ಈ ಲೇಖನ ಕನ್ನಡ ಕಾವ್ಯ ಮೀಮಾಂಸೆಯ ಕುರಿತು ಬೂದಾಳರು ಬರೆಯುತ್ತಿರುವ ಪುಸ್ತಕದ ಪ್ರವೇಶಿಕೆಯ ಅಧ್ಯಾಯ ಮಾತ್ರ. ಎಚ್ಚರದ ಸಂವಾದವೊಂದನ್ನು ಹುಟ್ಟುಹಾಕಬಲ್ಲ ಸಾಮರ್ಥ್ಯದ ಈ ಲೇಖನ ಕನ್ನಡ ಕಾವ್ಯ ಮೀಮಾಂಸೆಯೊಂದಿಗೆ ಭಾರತದ ಬಹುತ್ವದ ಹಿನ್ನೆಲೆಯಲ್ಲಿ ಅನೇಕ ಕಾವ್ಯ ಮೀಮಾಂಸೆಗಳು, ಅಂದರೆ ಭಾರತೀಯ ಕಾವ್ಯ ಮೀಮಾಂಸೆಯ ಮೂಲ ನೆಲೆ, ನಿಯಮಗಳನ್ನೇ ಮುರಿದಿಕ್ಕಬಲ್ಲ ಮೀಮಾಂಸೆಗಳಿರಬಲ್ಲವೆಂದು ಸಾಬೀತುಪಡಿಸಲಿಕ್ಕೆ ನಟರಾಜ ಬೂದಾಳರು ವಿಜ್ಞಾನದೊಂದಿಗೆ ಪ್ರಾಚೀನ ಶಂಗಂ ಸಾಹಿತ್ಯದ ಮೂಲಕ ಸಮರ್ಥನೆ ಮತ್ತು ಅಧಿಕೃತತೆಗಳನ್ನು ಒದಗಿಸಿಕೊಡಬಲ್ಲ ಪರಿಯೇ

ಕುತೂಹಲಕರವಾದುದು. ಇಂತಹ ಮಹತ್ವದ ಲೇಖನ–ಚಿಂತನೆಗಳನ್ನು ಕನ್ನಡಿಗರಿಗೆ ಮೊದಲು ಪರಿಚಯಿಸುತ್ತಿರುವುದು 'ಅನಿಕೇತನ'ವೇ ಎಂಬುದು ನಮಗೆ ಹೆಮ್ಮೆಯ ವಿಚಾರ.
ಅವಳಿ ವಿರೋಧಗಳ ಮಿತಿಯನ್ನು ದಾಟಿ, ಪ್ರತ್ಯೇಕ ಮೀಮಾಂಸೆಯ ಪರಿಕಲ್ಪನೆಯ ಮೂಲಕವೇ ದೇಶಭಾಷೆಯಾದ ಕನ್ನಡ ತನ್ನನ್ನು ತಾನು ನಿರೂಪಿಸಿಕೊಳ್ಳಬಲ್ಲ ಛಾತಿಯನ್ನು ಪಡೆದಿದೆಯೆಂದು ಖಚಿತವಾಗಿ ಹೇಳುವ ಲೇಖಕರು ಆ ಕಾರಣದಿಂದಾಗಿಯೇ ಯಾವುದೆ ದೇಶಭಾಷೆಯೂ ಸಂಸ್ಕೃತಕ್ಕೆ 'ಪರಿಶಿಷ್ಟ'ವಾಗಬೇಕಿಲ್ಲವೆಂಬ ಅಸ್ಮಿತೆ ಮತ್ತು ಆತ್ಮಗೌರವದ ಕದಗಳೆರಡನ್ನೂ ಘನತೆಯಿಂದಲೇ ತೆರೆದಿಡುವ ಪರಿ ಹೆಮ್ಮೆಗೆ ಕಾರಣವಾಗಿದೆ. ಈ ಲೇಖನವನ್ನು ಓದದೇ ಹೋಗುವುದೆಂದರೆ ಅಷ್ಟರಮಟ್ಟಿಗೆ ದೇಸೀ ಚಿಂತಕರ ಪಾಲಿಗೆ ನಷ್ಟವೆಂದೇ ಭಾವಿಸುವಂತಿದೆ.

ನಮ್ಮ ಹೆಮ್ಮೆಯ ಮತ್ತೊಬ್ಬ ಚಿಂತಕರಾದ ಡಾ.ಜಯಪ್ರಕಾಶ್ ಶೆಟ್ಟಿ ಅವರು ವಡ್ಡಾರಾಧನೆಯ ಕುರಿತು ತಮ್ಮ ಅಪೂರ್ವವೆಂಬಂತಿರುವ ಒಳನೋಟಗಳನ್ನು 'ವಡ್ಡಾರಾಧನೆ ಕಥೆಗಳ ಮತೀಯ ಸಾಂಸ್ಥಿಕತೆ, ಸಮಾಜ ಮತ್ತು ಅಧಿಕಾರ ಸಂಬಂಧಗಳು' ಎಂಬ ವಿಮರ್ಶಾ ಲೇಖನದ ಮೂಲಕ ಅದ್ಭುತವಾದ ರೀತೀಲಿ ವಿಶ್ಲೇಷಿಸಿದ್ದಾರೆ.
ಜೈನ ನೆಲೆಯ ಲೋಕೋತ್ತರ ದಿವ್ಯಸುಖ ಪ್ರಾಪ್ತಿಗೆ ಪಾತ್ರರಾಗುವವರೆಲ್ಲರೂ ಜೈನ ಹಾಗು ಜೈನೇತರ ರಾಜರು, ಬ್ರಾಹ್ಮಣರು ಮತ್ತು ವಣಿಕರು ಮಾತ್ರ! ಉತ್ತಮರ ಕುಲದ ಶ್ರಾವಕರ ಬಸಿರಲ್ಲಿ ಹುಟ್ಟುವುದು ಪುಣ್ಯವಾದಂತೆಯೇ, ಹೊಲೆಯರ ಮನೆಯಲ್ಲಿ ಹುಟ್ಟುವುದು ಶಾಪವೇ! ಬ್ರಾಹ್ಮಣ್ಯವನ್ನೇ ಎದುರಾಳಿಯನ್ನಾಗಿಸಿಕೊಂಡೂ, ಅದೇ ಬ್ರಾಹ್ಮಣ್ಯವನ್ನು ಅನುಕರಿಸುವ ಶ್ರೇಣೀಕೃತ ಪರಿಕಲ್ಪನೆಯ ಅಪಾಯವನ್ನೇ ಜೈನ ಆವರಣದಲ್ಲೂ ಮುಂದುವರೆಸುವ ತಾತ್ವಿಕ ತಂತ್ರವೊಂದನ್ನು ವಡ್ಡಾರಾಧನೆ ಒಳಗೊಂಡಿರುವ ಪರಿಯನ್ನು ಎಳೆಎಳೆಯಾಗಿ ಬಿಚ್ಚಿ ಸೋದಾಹರಣವಾಗಿ ಮಂಡಿಸಿರುವ ಜೆ.ಪಿ. ಅವರು ತಮ್ಮ ಸಮರ್ಥ ವಿಶ್ಲೇಷಣೆಗೆ ಅನುಗುಣವಾದ ಭಾಷಾ ಸಾಮರ್ಥ್ಯವನ್ನೂ ಒದಗಿಸಿಕೊಂಡಿರುವುದು ನಿಜಕ್ಕೂ ಒಂದು ವಿಶೇಷವೇ. ವಡ್ಡಾರಾಧನೆಯಲ್ಲಿನ ಮಹಿಳಾ ನಗಣ್ಯ ನೆಲೆಗಳತ್ತಲೂ ಗಮನ ಸೆಳೆವೆ ಜೆ.ಪಿ. ಕುಟುಂಬವೂ ಹೆಣ್ಣಿನ ಪಾಲಿಗೆ ಸುರಕ್ಷಿತವಲ್ಲವೆಂಬ ಆತಂಕಿತ ಅಂಶಗಳನ್ನೂ ಚರ್ಚಿಸಿದ್ದಾರೆ. ಹೀಗೆ ಪ್ರಭುತ್ವ, ವರ್ಣ, ಲಿಂಗಗಳೆಂಬ ಬಹುವಿಧಗಳ ಯಾಜಮಾನ್ಯದ ಮಾದರಿಗಳಿಗೇ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮುದ್ರೆಯೊತ್ತುವ ಮೂಲಕ ಯಥಾಸ್ಥಿತವಾದವನ್ನೇ ವಡ್ಡಾರಾಧನೆ ಅಂತಿಮವಾಗಿ ಎತ್ತಿ ಹಿಡಿವ ಸತ್ಯವನ್ನು ಜೆ.ಪಿ. ನಿರುದ್ವಿಗ್ನ ರೀತೀಲಿ ಮಂಡಿಸಿದ್ದಾರೆ.
ಪ್ರಾಮಾಣಿಕತೆಯೇ ಪರಮಧರ್ಮವೆಂಬಂತಿರುವ ಡಾ.ಬಸವರಾಜ ಸಾದರ ಅವರು ಬಸವರಾಜ ಕಟ್ಟೀಮನಿ ಕುರಿತು ಬರೆದಿರುವ ನೆನಪು ಮೀಟುವ ಲೇಖನ ಮತ್ತು ಬಸು ಅವರ ಕತೆ ಓದುಗರಿಗೆ ಪ್ರಿಯವಾಗುವಂತಿವೆ. ಕ್ರಾಂತಿಯ ಕರೆ ಎಂಬ ಪುಟ್ಟ ನಾಟಕ, ರೂಮಿಯ ಕವಿತೆಗಳು ಕೂಡ ಈ ಸಂಚಿಕೆಯ ಮೌಲ್ಯವನ್ನು ಹೆಚ್ಚಿಸಿವೆ. ಎಲ್ಲ ಲೇಖಕ ಮಿತ್ರರಿಗೂ ನೆನಕೆಗಳು.
ಎಂದಿನಂತೆ ನಿಮ್ಮ ಪ್ರತಿಕ್ರಿಯೆಗಳಿಗೆ ಸ್ವಾಗತ.

**–ಪ್ರೊ.ಮಾಲತಿ ಪಟ್ಟಣಶೆಟ್ಟಿ.**



# ಪುಟ ತೆರೆದಂತೆ...




ಕನ್ನಡ ಕಾವ್ಯ ಮೀಮಾಂಸೆ : ಪ್ರಾಥಮಿಕ ಪರಿಕಲ್ಪನೆಗಳು । 7

ಡಾ.ಎಸ್.ನಟರಾಜ ಬೂದಾಳು



ಹಕ್ಕಿಗಳು । 35

ಹಿಂದಿ ಮೂಲ : ನಿರ್ಮಲ್ ವರ್ಮಾ

ಕನ್ನಡಕ್ಕೆ : ಡಾ.ಬಸು ಬೇವಿನಗಿಡದ



ವಡ್ಡಾರಾಧನೆ ಕಥೆಗಳ ಮತೀಯ ಸಾಂಸ್ಥಿಕತೆ, ಸಮಾಜ ಮತ್ತು ಅಧಿಕಾರ ಸಂಬಂಧಗಳು । 85

ಡಾ. ಜಯಪ್ರಕಾಶ್ ಶೆಟ್ಟಿ. ಹೆಚ್

ಡಿ.ಎನ್.ಶ್ರೀನಾಥ್ ಅನುವಾದಿಸಿದ ಕವಿತೆಗಳು । 116





ಕ್ರಾಂತಿಕಾರಿ ಬರಹಗಾರ - ಬಸವರಾಜ ಕಟ್ಟೀಮನಿ । 110

ಡಾ.ಬಸವರಾಜ ಸಾದರ

ಮೆವ್ಲಾನಾ ಜೆಲಾಲುದ್ದಿನ್ ರೂಮಿ । 133

ಆರ್. ವಿಜಯರಾಘವನ್





ರೂಮಿಯ ಒಂದಿಷ್ಟು ದಿವಾನ್‌ಗಳು । 140

ಆರ್. ವಿಜಯರಾಘವನ್

ಕ್ರಾಂತಿಯ ಕರೆ । 158

ಕತೆ : ಲಿಯೋನಿಡ್ ಆಂಡ್ರೆಯೆವ್
ರಂಗರೂಪ : ವಾಲ್ಟರ್ ವೈಕ್ಸ್
ಅನುವಾದ : ತಾ.ಶ್ರೀ. ಗುರುರಾಜ್






ತಿಲಕ್ ಕವಿತೆಗಳಿಗೊಂದು ಮುನ್ನುಡಿ । 144

ತಿಲಕರ ಹತ್ತು ಅನುವಾದಿತ ಕವಿತೆಗಳು

ಅನುವಾದ : ಸ.ರಘುನಾಥ



# ಕನ್ನಡ ಕಾವ್ಯ ಮೀಮಾಂಸೆ : ಪ್ರಾಥಮಿಕ ಪರಿಕಲ್ಪನೆಗಳು

ಡಾ.ಎಸ್.ನಟರಾಜ ಬೂದಾಳು

ಭಾರತೀಯವೆಂದು ಕರೆದುಕೊಳ್ಳುವ ಸಂಸ್ಕೃತ ಕಾವ್ಯಮೀಮಾಂಸೆಯ ಅಡಿಯಲ್ಲಿಯೇ ಕನ್ನಡದ ಕಾವ್ಯ ಕಲೆಗಳ ಅಭಿವ್ಯಕ್ತಿಯನ್ನೂ ವ್ಯಾಖ್ಯಾನಿಸುವ ಕ್ರಮವು ದೀರ್ಘಕಾಲದಿಂದ ಚಾಲ್ತಿಯಲ್ಲಿದೆ. ಇದರ ಜೊತೆಗೇ ಕನ್ನಡ ಮತ್ತು ಇತರ ದ್ರಾವಿಡ ಭಾಷೆಗಳಲ್ಲಿ ಸ್ವತಂತ್ರವಾದ ಕಾವ್ಯಮೀಮಾಂಸೆಯ ಪ್ರಸ್ಥಾನವನ್ನು ಕಂಡುಕೊಳ್ಳುವ ಪ್ರಯತ್ನಗಳೂ ನಡೆಯುತ್ತ ಬಂದಿವೆ. ಕನ್ನಡವನ್ನು ಒಂದು ಸ್ವತಂತ್ರ ಮೀಮಾಂಸಾ ವಲಯವನ್ನಾಗಿ ಕಾಣುವ ಪ್ರಯತ್ನ ಕೂಡಾ ಪ್ರಾಚೀನವಾದುದೇ ಆಗಿದೆ. ಇದಕ್ಕೆ ಪೂರಕವಾಗಿ ಕನ್ನಡದ ಮೀಮಾಂಸೆಯನ್ನು ಕಟ್ಟಿಕೊಳ್ಳಲು ಬೇಕಾದ ತಾತ್ವಿಕ ಆಕರಗಳು ಕನ್ನಡದ ನಿಡುಗಾಲದ ಬದುಕಿನೊಂದಿಗೆ ಹಾಸುಹೊಕ್ಕಾಗಿಯೇ ಹರಿದುಬಂದುದಿದೆ. ಕನ್ನಡದ ಬದುಕನ್ನು ರೂಪಿಸಿರುವ ಈ ಬಹುಮಾದರಿಯ

ಚಿಂತನಾ ಪ್ರಸ್ಥಾನಗಳ ತಾತ್ವಿಕ ಆಕರವನ್ನು ಆಧರಿಸಿದ ಕನ್ನಡದ ಕಾವ್ಯಮೀಮಾಂಸೆಯೊಂದು ಅದಾಗಲೇ ನಮ್ಮ ನಡುವೆ ಇದೆ.

ಮೀಮಾಂಸೆಯೆಂಬುದು ಮೂಲತಃ ಲೋಕವನ್ನು ನೋಡುವ ಕಣ್ಣು. ಬದುಕುವ ಜಗತ್ತನ್ನು ಬದುಕಿನ ಸ್ವರೂಪಕ್ಕೆ, ಅದರ ಅಗತ್ಯಕ್ಕೆ ಅನುಸಾರವಾಗಿ ವಿವರಿಸಿಕೊಳ್ಳುವ ಬಗೆ. ಈ ವಿವರಣಕ್ರಮ ಜಡವಾದುದಾಗಿರಬೇಕಿಲ್ಲ. ಕಾಲಕಾಲಕ್ಕೆ ಒದಗಿಬರುವ ಬದುಕಿನ ತಿರುವುಗಳು ತರುವ ಅನುಭವಲೋಕದಲ್ಲಿನ ವಿಸ್ತರಣೆಗಳು ಅದರ ಮೀಮಾಂಸಾ ಜಗತ್ತಿನ ವಿಸ್ತರಣೆಗೆ ಕಾರಣವಾಗುತ್ತದೆ. ಜೀವನ ಕ್ರಮಕ್ಕೆ ಹೊಸ ವಿಸ್ತರಣೆಗಳು ಒದಗಿಬಂದ ಹಾಗೆ ಕಾವ್ಯಮೀಮಾಂಸೆಯ ವ್ಯಾಪ್ತಿಯೂ ಹಿಗ್ಗುತ್ತಾ ಹೋಗಬೇಕಾಗುತ್ತದೆ. ಹೊಸ ಅರಿವನ್ನು ಒದಗಿಸಿಕೊಡುವ ಅನೇಕ ಮಾಧ್ಯಮಗಳು ಇಂದು ನಮ್ಮೆದುರಿಗೆ ಇವೆ. ಅವುಗಳ ಅನುಸಂಧಾನದ ಜೊತೆಗೆ ನಮ್ಮ ಮೀಮಾಂಸೆಯು ಸಾಗಬೇಕು. ನಿಶ್ಚಯವಾಗಿ ಇದರಲ್ಲಿ ವಿಜ್ಞಾನದ ಬಹಳ ದೊಡ್ಡ ಪಾಲಿದೆ. ಕನ್ನಡದ ಬದುಕಿನ ವರ್ತಮಾನದ ಅವಸ್ಥೆಯನ್ನು ವಿಜ್ಞಾನವನ್ನು ಹೊರಗಿಟ್ಟು ವಿವರಿಸಲು ಸಾಧ್ಯವಿಲ್ಲ. ಕನ್ನಡದ ಕಾವ್ಯ ಕಲೆಗಳ ಅಭಿವ್ಯಕ್ತಿ ಕೂಡ ಇದಕ್ಕೆ ಹೊರತಲ್ಲ. ಹಾಗಾಗಿ ಕನ್ನಡ ಮೀಮಾಂಸೆಯು ವಿಜ್ಞಾನದ ಸಾಹಚರ್ಯದಲ್ಲಿಯೇ ಸಾಗಬೇಕಾಗಿದೆ. ಆದರೆ ಭಾರತೀಯವೆಂದು ಕರೆದುಕೊಂಡಿರುವ ಸಂಸ್ಕೃತ ಕಾವ್ಯ ಮೀಮಾಂಸೆಯಲ್ಲಿ ಆಧುನಿಕ ವಿಜ್ಞಾನಕ್ಕೆ ತಾವಿಲ್ಲ. ವಿಜ್ಞಾನದ ಹೊಸ ತಿಳುವಳಿಕೆಯು ಎದುರಾದಾಗ ಮೀಮಾಂಸೆಯ ತಾತ್ವಿಕ ಆಕರಗಳು ಅವುಗಳ ಎದುರಿಗೆ ತಮ್ಮನ್ನು ಸಾಬೀತುಗೊಳಿಸಿಕೊಳ್ಳುವ ಜವಾಬ್ದಾರಿಯನ್ನು ಈವರೆಗೆ ತೋರಿಲ್ಲ. ಬದಲಿಗೆ ಪ್ರಶ್ನಿಸಲಾಗದ ಪ್ರಮಾಣಗಳಾಗಲು ಆತುರ ತೋರಿರುವುದೇ ಹೆಚ್ಚು. ಇದರಿಂದಾದ ಊನಗಳು ನಮ್ಮ ಜೀವನ ಮತ್ತು ಕಾವ್ಯ ಮೀಮಾಂಸೆಯಲ್ಲಿ ಮುಂದುವರಿದಿವೆ. ವಿಜ್ಞಾನಕ್ಕೆ ಒಂದು ಮುಕ್ತ ಗುಣ ಇದೆ. ಅದು ಯಾವ ಸಿದ್ಧಾಂತವಾದರೂ ಸರಿಯೆ ನಿರಾಕರಣೆಗೆ ಅರ್ಹ ಎಂದು ಖಾತ್ರಿಯಾದರೆ ನಿರಾಕರಿಸಿಬಿಡುತ್ತದೆ. ದೀರ್ಘಕಾಲದಿಂದ ಇರುವ ಸಿದ್ಧಾಂತ ಎಂಬುದಾಗಲೀ, ಮಹಾನ್ ವಿಜ್ಞಾನಿಯ ಕೊಡುಗೆ ಎಂಬ ಸಂಗತಿಯಾಗಲೀ ಅಡ್ಡಿಯಾಗುವುದಿಲ್ಲ. ಮೀಮಾಂಸೆಯ ದಾರಿ ಕೂಡ ಇದಕ್ಕಿಂತ ಭಿನ್ನವಾಗಿರಬೇಕಿಲ್ಲ. ಏಕೆಂದರೆ ನಿರಂತರ ಚಲನಶೀಲ ಜಗತ್ತಿನ ಕಾವ್ಯ ಕಲಾಭಿವ್ಯಕ್ತಿಗಳು ಸ್ಥಗಿತ ಅವಸ್ಥೆಯಲ್ಲಿ ಇರಲು ಸಾಧ್ಯವಿಲ್ಲ. ಅವುಗಳನ್ನು ರೂಪಿಸುತ್ತಿರುವ ಕಾರಣ ಮತ್ತು ಪರಿಸ್ಥಿತಿಗಳು ಮತ್ತು ಅವುಗಳ ಪರಿಣಾಮಗಳನ್ನು ಸ್ಥಗಿತ ಮಾನದಂಡಗಳ ಮೂಲಕ ವ್ಯಾಖ್ಯಾನಿಸಿ ಬೆಲೆಗಟ್ಟಲಾಗದು. ಯಾವ ತಾತ್ವಿಕ ಆಕರಗಳು ಒಂದು ಸಮೂಹದ ಬದುಕನ್ನು ರೂಪಿಸುತ್ತವೆಯೋ ಅವೇ ಆಕರಗಳು ಕಾವ್ಯ ಮೀಮಾಂಸೆಯನ್ನೂ ರೂಪಿಸುತ್ತವೆ. ಕಾವ್ಯ ಮೀಮಾಂಸೆ ಮತ್ತು ಒಂದು ಸಮೂಹದ ಜೀವನ ಮೀಮಾಂಸೆಯ ಆಕರಗಳು ಸಾಮಾನ್ಯವಾಗಿ ಒಂದೇ ಆಗಿರುತ್ತವೆ.

ಮೀಮಾಂಸೆಯ ದಾರಿ ಮತ್ತು ಪ್ರಭುತ್ವದ ದಾರಿ ಬೇರೆಬೇರೆಯಾಗಿರುವುದಿಲ್ಲ. ಕವಿರಾಜಮಾರ್ಗವು ಇದನ್ನು ಸೂಚಿಸುತ್ತದೆ. ಜೀವನಕ್ರಮವನ್ನು ನಿಯಂತ್ರಿಸುವ

ಮೂಲಕ ಅಧಿಕಾರ ಕೇಂದ್ರಗಳು ತಮ್ಮ ಅಧಿಕಾರವನ್ನು ರೂಢಿಸಿಕೊಳ್ಳುವುದರಿಂದ ಸಹಜವಾಗಿ ಕಾವ್ಯಮೀಮಾಂಸೆ ಮತ್ತು ಜೀವನ ಮೀಮಾಂಸೆಗಳು ಅಧಿಕಾರ ರೂಢಿಸಿಕೊಳ್ಳುವ ಪ್ರಮುಖ ಹತಾರುಗಳಾಗಿರುತ್ತವೆ. ಏಕ ಕೇಂದ್ರಿತ ಪ್ರಾಬಲ್ಯವನ್ನು ಪ್ರಶ್ನಾತೀತವಾಗಿ ಸ್ಥಾಪಿಸಬಯಸುವ ಸಂಸ್ಕೃತ ಕಾವ್ಯ ಮೀಮಾಂಸೆಯು ಸ್ಥಳೀಯ ಜೀವನಕ್ರಮಗಳನ್ನು/ಮೀಮಾಂಸೆಗಳನ್ನು– ಒಂದೋ ನನ್ನ ಯಜಮಾನಿಕೆಯನ್ನು ಒಪ್ಪಿಕೊಂಡು ಇರಿ ಇಲ್ಲವೇ ತಿರಸ್ಕೃತರಾಗಿ– ಎಂಬ ಎರಡೇ ಆಯ್ಕೆಗಳನ್ನು ಮುಂದಿಟ್ಟಕೊಂಡು ಅಧಿಕಾರ ನಡೆಸುತ್ತ ಬಂದಿದೆ. ಸ್ಥಳೀಯ ಜೀವನಕ್ರಮಗಳು ಅಲ್ಲಲ್ಲಿ ಸಿಟ್ಟನ್ನು ದಾಖಲಿಸಿದರೂ ತಮ್ಮ ಚಹರೆಗಳನ್ನು ಅನ್ಯಮಾರ್ಗವಿಲ್ಲದೆ ಕಳೆದುಕೊಳ್ಳುತ್ತಲೇ ಬಂದಿವೆ. ಹಾಗಾಗಿ ಇದು ತುಂಬಾ ಎಚ್ಚರದಿಂದ ನಡೆಯಬೇಕಾದ ದಾರಿ. ಈ ಪ್ರಯತ್ನದ ಹಿಂದಿರುವ ಪ್ರೇರಣೆಗಳೆಂದು ಕೆಳಗಿನ ಸಂಗತಿಗಳನ್ನು ಗುರುತಿಸಿಕೊಳ್ಳಲಾಗಿದೆ:



1. ಇಂದು ಯಾವುದನ್ನು ಭಾರತೀಯ ಕಾವ್ಯಮೀಮಾಂಸೆ ಎಂದು ಕರೆಯಲಾಗುತ್ತಿದೆಯೋ ಆ ಮೀಮಾಂಸೆಯು ಈ ದೇಶದ ಸಾಮೂಹಿಕ ಪ್ರತಿನಿಧೀಕರಣದ ಅರ್ಹತೆಯನ್ನು ಹೊಂದಿರುವ ಪ್ರಸ್ಥಾನಮಾರ್ಗವಲ್ಲ. ಅಲ್ಲಿ ಬಳಕೆಯಾಗುತ್ತಿರುವ ಪರಿಭಾಷೆ ಮತ್ತು ಪರಿಕಲ್ಪನೆಗಳು ಈ ದೇಶದ ಸಕಲೆಂಟು

ಪಂಥ, ತತ್ವಗಳ ವಿಚಾರಬಹುತ್ವಗಳಿಗೆ ಎಡೆಕೊಡುವ ಮಾದರಿಯದೂ ಅಲ್ಲ. ಮುಖ್ಯವಾಗಿ ಅದು ಲೋಕದಾಚೆಗಿನ ಅಮೂರ್ತ ಪರಿಕಲ್ಪನೆಯಾದ ಆತ್ಮವನು ಅವಿನಾಶಿ ಎಂದು ನಂಬುವ ಆತ್ಮವಾದಿ ಚಿಂತನಾಕ್ರಮ. ಆತ್ಮದ ಕುರಿತಾದ ಯಾವುದೇ ಆಲೋಚನೆ ಆತ್ಮದ ಒಡನಾಡಿಯಾಗಿ ಕಟ್ಟಿಕೊಡುವ ಕುಲ, ಕರ್ಮ, ಯೋಗ್ಯತೆ, ಅನುಗ್ರಹ, ಪತಿತ, ಪಾಪಿಷ್ಠ ಇವೆಲ್ಲವುಗಳ ಒಟ್ಟು ಬುತ್ತಿಯೂ ಆಗಿರುತ್ತದೆ. ಅದು ಇಲ್ಲಿಯದಾಗದೇ ಅಲ್ಲಿ ಸಲ್ಲುವ ಮಾತಾಡುತ್ತದೆ. ಭಾರತೀಯವೆಂದು ಕರೆದುಕೊಂಡಿರುವ 'ಉತ್ತರಪ್ರಣೀತ' ಸಂಸ್ಕೃತ ಕಾವ್ಯ ಮೀಮಾಂಸೆಯು ಸಮಸ್ತ ಭಾರತದ ಸಾಮೂಹಿಕ ಬದುಕಿನ ಚಹರೆಗಳನ್ನು ಒಳಗೊಳ್ಳದೆ, ನಿರ್ದಿಷ್ಟ ತತ್ವಮಾರ್ಗವನ್ನಾಧರಿಸಿ ಕಟ್ಟಿಕೊಂಡಿರುವ ಮೀಮಾಂಸೆಯಾಗಿದ್ದು, ಅದರ, ಧ್ವನಿ, ಅಲಂಕಾರ ಔಚಿತ್ಯ ಮುಂತಾದ ಕಾವ್ಯ ಪರಿಕರಗಳಾಗಲೀ, ರಸ–ಧ್ವನಿ–ಆನಂದ–ಪರಬ್ರಹ್ಮ ಮುಂತಾದ ಕಾವ್ಯೋದ್ಯೋಗವಾಗಲೀ ಭಾರತದ ಬಹುತ್ವವನ್ನು ಸಮಗ್ರವಾಗಿ ಪ್ರತಿನಿಧಿಸಲಾರದು. ಅಖಿಲ ಭಾರತ ವ್ಯಾಪ್ತಿಯ ಅನೇಕ ತತ್ವಪ್ರಸ್ಥಾನಗಳು ಮತ್ತು ಆಧುನಿಕ ಪ್ರಜಾಪ್ರಭುತ್ವದ ಜೀವನ ಕ್ರಮವು ಭಾರತೀಯ ಬದುಕು ಮತ್ತು ಇಂದಿನ ಕಾವ್ಯಾಭಿವ್ಯಕ್ತಿಗೆ ಕಾರಣವಾಗಿವೆ. ಅವುಗಳ ತಾತ್ವಿಕತೆಯ ಸೇರ್ಪಡೆಗೆ ಮತ್ತು ನಿರಂತರವಾಗಿ ಹರಿಯುತ್ತಿರುವ ಪ್ರಜ್ಞಾ ಪ್ರವಾಹಕ್ಕೆ ಸೇರ್ಪಡೆಯಾಗುವ ವಿಜ್ಞಾನ ಇತ್ಯಾದಿ ಹೊಸ ತಿಳುವಳಿಕೆಗೆ ಸಂಸ್ಕೃತ ಕಾವ್ಯ ಮೀಮಾಂಸೆಯಲ್ಲಿ ಅವಕಾಶವಿಲ್ಲದಿರುವುದರಿಂದ ಅದು ಮುಚ್ಚಿದ ಮತ್ತು ಸೀಮಿತ ದೃಷ್ಟಿಕೋನವನ್ನಾಧರಿಸಿದ ಮೀಮಾಂಸೆಯಾಗಿದೆ. ಈ ಸಂಸ್ಕೃತ ಕಾವ್ಯ ಮೀಮಾಂಸೆಯು ಕನ್ನಡ ಸಾಹಿತ್ಯದ ಪ್ರಮುಖ ಭಾಗಗಳಾದ ಜೈನ ಸಾಹಿತ್ಯ, ವಚನ ಸಾಹಿತ್ಯ, ತತ್ವಪದ, ಸಿದ್ಧ ಸಾಹಿತ್ಯ, ಜನಪದ ಮಹಾಕಾವ್ಯಗಳು ಮತ್ತು ಆಧುನಿಕ ಕನ್ನಡ ಸಾಹಿತ್ಯದ ಅನೇಕ ಭಾಗಗಳನ್ನು ಅನುಸಂಧಾನ ಮಾಡಲಾರದು.

2. ಕಾವ್ಯ ಮೀಮಾಂಸೆ ಎಂದರೆ ಕೇವಲ ಭಾಷಿಕ ಪರಿಕರಗಳಾದ ರಸ, ಧ್ವನಿ, ಔಚಿತ್ಯ, ಅಲಂಕಾರಗಳು ಮಾತ್ರ ಎನ್ನುವ ಕ್ರಮದಲ್ಲಿ ಅದನ್ನು ಪ್ರತಿಷ್ಠಾಪಿಸಿ, ಸಾಮಾನ್ಯ ಲೋಕವ್ಯವಹಾರದ ನಿತ್ಯ ಅಗತ್ಯವಾದ ನಿಸರ್ಗವಿವೇಕ ಮತ್ತು ಬದಲಾಗುತ್ತಿರುವ ಭಾಷಿಕ ಹತಾರುಗಳನ್ನು ಮೀಮಾಂಸೆಯ ವ್ಯಾಪ್ತಿಯ ಆಚೆಗೆ ಇಡಲಾಗಿದೆ. ಹೀಗಾಗಿ ಅರಿವಿನ ಹೊಸ ವಿಸ್ತರಣೆಗಳನ್ನು ನೀಡುತ್ತಿರುವ ವಿಜ್ಞಾನದ ವಿಷಯಗಳಾಗಲೀ, ಮಾನವಿಕ ಶಿಸ್ತುಗಳಾಗಲೀ ಕಾವ್ಯ ಮೀಮಾಂಸೆಯನ್ನು ರೂಪಿಸುವ, ವಿಸ್ತರಿಸುವ ಸಂಗತಿಗಳಾಗಲು ಬಿಡುತ್ತಿಲ್ಲ. ಮೀಮಾಂಸೆ ಎಂದಾಕ್ಷಣ ಅದನ್ನು ಕೆಲವು ಪರಿಭಾಷೆಗಳ, ಪರಿಕಲ್ಪನೆಗಳ ಕಸರತ್ತಾಗಿಯೇ ನೋಡುವ ಪರಿಪಾಠ ಬೆಳೆದಿದೆ. ಆ ಪರಿಕಲ್ಪನೆಗಳೂ ಸಾಮಾನ್ಯರಿಗೆ ಅರ್ಥವಾಗದ ಅತೀತರ ಸ್ವತ್ತುಗಳಾಗಿವೆ. ಓದು ಬರಹದ ವಾರಸುದಾರರಿಗಷ್ಟೇ ಸಾಧ್ಯವಾಗಬಹುದಾದವುಗಳಾಗಿ ಸ್ಥಾಪನೆಗೊಂಡಿವೆ. ಹೀಗೆ 'ಸಾಹಿತ್ಯ ಎಲ್ಲರಿಗೂ ಅಲ್ಲ' ಹಾಗೆಯೇ 'ಮೀಮಾಂಸೆಯೂ ಎಲ್ಲರಿಗಲ್ಲ ಮತ್ತು ಎಲ್ಲರದಲ್ಲ' ಆಗಿಬಿಟ್ಟಿದೆ. ಗೊರವರ ಡುಂಡುಚಿ, ಬೀರನಕತೆ, ಬೀದಿವರೆ ಇತ್ಯಾದಿಗಳು ಕಾವ್ಯಗಳಾಗಲೀ, ಮೀಮಾಂಸಾ ಜಗತ್ತಿನ ವಿಶ್ಲೇಷಣೆಯ ಸರಕುಗಳಾಗಲೀ ಆಗದೆ ಉಳಿದಿವೆ.

ಇವನ್ನು ಉದಾಹರಣೆಗಳ ಆವರಣದೊಳಕ್ಕೂ ಬರದಂತೆ ತಡೆಯುವ ಮೂಲಕ ನಮ್ಮದಲ್ಲದ ನಿರೂಪಣೆಗಳ ಮಾದರಿಗಳೇ ನಾವು ಕಲಿಯುತ್ತಿರುವ ಮೀಮಾಂಸೆಯ ನೆಲೆಗಟ್ಟಾಗಿದೆ. ರಸ, ಧ್ವನಿ, ಅಲಂಕಾರ ಮುಂತಾದ ಕಾವ್ಯ ಪರಿಕರಗಳು ಮಾತ್ರ ಮೀಮಾಂಸೆಯೆಂದೂ ಮತ್ತು ಅದು ಈಗಾಗಲೇ ತೀರ್ಮಾನವಾಗಿರುವ ಸಂಗತಿ ಎಂಬಂತೆಯೂ ಪ್ರತಿಪಾದಿತವಾಗುತ್ತಿದೆ. ಸ್ವಲ್ಪ ಹಿಂದಕ್ಕೆ (ಶಂಗಂ ಕಾಲಕ್ಕೆ) ಹೋದರೆ...



ಕಾವ್ಯ ಮೀಮಾಂಸೆಯನ್ನು ನಿರ್ಧರಿಸುವ ಸಂಗತಿಗಳೆಂದರೆ ಒಂದು ಸಮೂಹವು ಬದುಕುತ್ತಿರುವ ಭೌಗೋಳಿಕ ಆವರಣ ಮತ್ತು ಮಾಡುತ್ತಿರುವ ಕಸುಬು ಮಾತ್ರ ಎಂದು ತೊಲ್ಕಾಪ್ಪಿಯನಾರ್ ಹೇಳುತ್ತಾನೆ. ಕವಿರಾಜಮಾರ್ಗಕಾರನೆಂದೂ ಆ ದಿಕ್ಕಿನಲ್ಲಿ ಯೋಚಿಸಿದಂತೆ ಕಾಣಲಿಲ್ಲ. ಯಾವುದು ಪ್ರಭುತ್ವಕ್ಕೆ ಅಗತ್ಯವಾದ ಒಪ್ಪಿಗೆಯನ್ನು ಆಯಾ ಕಾಲದಲ್ಲಿ ಸಮೂಹದಿಂದ ಉತ್ಪಾದಿಸಿಕೊಡುತ್ತಿತ್ತೋ ಅದಕ್ಕೆ ಕಾವ್ಯದ ಸ್ಥಾನವನ್ನು ಕೊಟ್ಟಿರುವುದು ಕಂಡುಬರುತ್ತದೆ. ದಿವ್ಯಪ್ರಭುತ್ವವನ್ನು ಮುಂದಿಟ್ಟ ದರ್ಶನಗಳನ್ನು ಮಾತ್ರ ಉಳಿಯಗೊಟ್ಟು ಹಾಗೆ ಮಾಡದುವುಗಳನ್ನು ಅಂಚಿಗೆ ತಳ್ಳಲಾಗಿದೆ. ಪ್ರಭುತ್ವವನ್ನು ಸಾರಭೂತಗೊಳಿಸುವ ಚಾಕರಿಯನ್ನು ಕೈಗೊಳ್ಳದ ವಚನಗಳಾಗಲೀ, ಜನಪದ ಕಾವ್ಯಗಳಾಗಲೀ, ತತ್ವಪದಗಳಾಗಲೀ ಕಾವ್ಯವೆಂದು ಪರಿಗಣಿತವಾಗಲೇ ಇಲ್ಲ. ಶ್ರಮಣಧಾರೆಗಳ ತಾತ್ವಿಕತೆಯಿಂದ ಪ್ರಣೀತವಾದ ಕಾವ್ಯಮೀಮಾಂಸೆಗೆ ಅಧಿಕಾರ ಕೇಂದ್ರಗಳೆಂದೂ ಮನ್ನಣೆ ನೀಡಿಲ್ಲ.

3. ವಿಜ್ಞಾನ ಮತ್ತು ಪ್ರಜಾಪ್ರಭುತ್ವ; ಈ ಎರಡೂ ಸಂಗತಿಗಳು ನಮ್ಮ ಬದುಕಿನ ಕ್ರಮವನ್ನು ನಿರ್ಣಾಯಕವಾಗಿ ರೂಪಿಸಬಲ್ಲ ಶಕ್ತಿಗಳು. ಇಂದು ನಾವು ಇವೆರಡಕ್ಕೂ ತೆರೆದುಕೊಂಡಿದ್ದೇವೆ. ಪ್ರಜಾಪ್ರಭುತ್ವವನ್ನು ನಮ್ಮ ಜೀವನಧರ್ಮವನ್ನಾಗಿಯೂ

ವಿಜ್ಞಾನವನ್ನು ನಮ್ಮ ಚಿಂತನೆಯ ನೆಲೆಗಟ್ಟನ್ನಾಗಿಯೂ ಸ್ವೀಕರಿಸಿರುವ ಕಾಲವಿದು. ಇವುಗಳಿಗೆ ತೆರೆದುಕೊಂಡಿರುವ ನಮ್ಮ ಜೀವನಕ್ರಮವು ಯಾವುದೇ ಸ್ಥಗಿತ ತಾತ್ವಿಕತೆ ಮತ್ತು ಪ್ರಶ್ನಿಸಲಾಗದ ಪ್ರಮಾಣಗಳನ್ನು ಒಪ್ಪಿಕೊಳ್ಳಬೇಕಾಗಿಲ್ಲ. ನಿರಂತರ ಬದಲಾವಣೆ ಮತ್ತು ಪ್ರಯೋಗಕ್ಕೆ ತೊಡಗಿಸಿಕೊಂಡಿರುವ ಜೀವನಕ್ರಮಗಳಿಗೆ ಪೂರಕವಾದ ಮೀಮಾಂಸೆ ಕೂಡ ನಿತ್ಯ ಬದಲಾವಣೆಗೆ ತೆರೆದುಕೊಳ್ಳಬೇಕಾಗುತ್ತದೆ.

4 ಸಂಸ್ಕೃತ ಕಾವ್ಯ ಮೀಮಾಂಸೆಯು ಪೋಷಿಸುತ್ತಿರುವ ಅಸ್ಮಿತೆಗಳಿಗೆ ಯಾವ ನೈಸರ್ಗಿಕ ಬುನಾದಿಗಳೂ ಇಲ್ಲ. ವೇದೋಪನಿಷತ್ತುಗಳನ್ನಾಧರಿಸಿದ್ದು, ದ್ವೈತಾದ್ವೈತಗಳನ್ನಾಧರಿಸಿದ್ದು, ಈಶ್ವರ ಪ್ರತ್ಯಭಿಜ್ಞೆಯನ್ನಾಧರಿಸಿದ್ದು ಎಂಬ ಕಾರಣಕ್ಕೆ ಈ ಕಾವ್ಯ ಮೀಮಾಂಸೆಯನ್ನು ಪ್ರಶ್ನಿಸಲಾಗದ 'ಶಬ್ದಪ್ರಮಾಣ'ವನ್ನಾಗಿ ಪ್ರತಿಷ್ಠಾಪಿಸಲಾಗಿದೆ. ಇಂತಹ ಪ್ರಯತ್ನಗಳು ಕುಮಾರಿಲಭಟ್ಟರ ಕಾಲದಲ್ಲಿಯೇ (ಸುಮಾರು ಕ್ರಿ.ಶ. ಎಂಟನೆಯ ಶತಮಾನ) ಆರಂಭವಾಗಿರುವುದನ್ನು ಕಾಣಬಹುದು. "ಲೋಕದಲ್ಲಿ ಮೀಮಾಂಸೆಯು ಬಹುಮಟ್ಟಿಗೆ ಲೋಕಾಯತಗೊಳಿಸಲ್ಪಟ್ಟಿದೆ. ಅದನ್ನು ಆಸ್ತಿಕ ಮಾರ್ಗಕ್ಕೆ ತರುವ ಸಲುವಾಗಿ ನಾನು ಈ ಮೀಮಾಂಸಾ ಪ್ರಯತ್ನ ಮಾಡುತ್ತಿದ್ದೇನೆ. ವೇದಗಳ ಮೇಲೆ ಅಪಾರವಾದ ಗೌರವವುಳ್ಳ ನಾನು ಎಡವಿದರೂ ದೂರಬಾರದು. ಸನ್ಮಾರ್ಗದಲ್ಲಿ ನಡೆಯುತ್ತಿರುವವನು ಜಾರಿಬಿದ್ದರೂ ನಿಂದ್ಯನಲ್ಲ. ಲೋಕದ ಯಾವುದೇ ವಸ್ತುವಿನ ನಿರ್ದೋಷತ್ವದ ಬಗೆಗೆ ಏಕವಾಕ್ಯತೆಯಿಲ್ಲ. ಮೋಕ್ಷ, ಸ್ವರ್ಗಗಳಂಥವುಗಳ ಬಗೆಗೂ ಜನರು ಅಪವಾದವನ್ನು ಕೊಡುತ್ತಾರಷ್ಟೆ." (ಕುಮಾರಿಲಭಟ್ಟ, ಎಂ. ಪ್ರಭಾಕರ ಜೋಶಿ, ಎಂ ಎಂ ಹೆಗಡೆ ಪುಟ. 137) ಇದು ಕುಮಾರಿಲಭಟ್ಟ ತನ್ನ ಮೀಮಾಂಸಾ ನಿಲುವನ್ನು ಪ್ರಕಟಿಸುವ ಮುನ್ನವೇ ತನ್ನನ್ನು ಪ್ರಶ್ನಾತೀತನನ್ನಾಗಿಸಿಕೊಂಡ ಕ್ರಮ!. ಇಂತಹ ನಿಲುವುಗಳಿಂದಲೇ ತುಂಬಿರುವ ಸಂಸ್ಕೃತ ಕಾವ್ಯ ಮೀಮಾಂಸೆಯು ಈವರೆಗೆ ವಿಜ್ಞಾನವನ್ನು ಎದುರಾಗುವ ಗಂಭೀರ ಪ್ರಯತ್ನವನ್ನು ಮಾಡಿಲ್ಲ. ಯಾವುದೇ ಒಂದು ಸಮೂಹದ ಮನಸ್ಸು ಮತ್ತು ಅದರ ಅಂತಃಸತ್ವದ ಸಾಕ್ಷಿಯಾಗಬಲ್ಲ ಸಾಹಿತ್ಯವು ವಿಜ್ಞಾನ ಮತ್ತು ಇತರ ಜ್ಞಾನ ಶಿಸ್ತುಗಳೊಡನೆ ಕೊಳು ಕೊಡುಗೆ ನಡೆಸದೆ ಹೋದರೆ ಊನಗೊಂಡ ಬಾಳುವೆಯನ್ನು ನಡೆಸಬೇಕಾಗುತ್ತದೆ. ಹಾಗಾಗಿ ಸಂಸ್ಕೃತ ಕಾವ್ಯ ಮೀಮಾಂಸೆಯು ಕನ್ನಡವನ್ನೂ ಒಳಗೊಂಡಂತೆ ದೇಶಿ ಜೀವಂತ ಭಾಷಾಪರಂಪರೆಗಳ ಸಮೂಹಗಳ ಮೇಲೆ ಪ್ರಶ್ನಿಸಲಾಗದ ಪ್ರಮಾಣವಾಗಿ ಕುಳಿತು ಅವುಗಳ ಬದುಕನ್ನು ಊನಗೊಳಿಸಿದೆ ಮತ್ತು ಭಾರತದ ಇತರ ಭಾಷೆಗಳಿಗೆ ಪ್ರಶ್ನಿಸಲಾಗದ ಪ್ರಮಾಣವಾಗಿ ಪರಿಣಮಿಸಿದೆ.

5 ಈ ನಾಡಿಗೆ ಸಮೂಹವೊಂದರ ಬಾಳುವೆಗೆ ಬೇಕಾಗುವ ತಾತ್ವಿಕ ಆಕರವಾಗುವ ಸಾಮರ್ಥ್ಯವಿದೆ. ಇದು ಕೇವಲ ಈ ನೆಲದ ಮೇಲಿನ ಅಭಿಮಾನದ ಮಾತಲ್ಲ. ಕ್ರಿ.ಶ. ಎರಡನೆಯ ಶತಮಾನದ ಹೊತ್ತಿಗಾಗಲೇ ಅಂದಿನ ಭಾರತದಲ್ಲಿ ಇದ್ದ ಐದು ವಿಶ್ವವಿದ್ಯಾಲಯಗಳಲ್ಲಿ (ನಲಂದ, ತಕ್ಷಶಿಲಾ, ಕಾಂಚೀಪುರಂ, ಮಹಿಷಮಂಡಲ ಮತ್ತು ಕೋಢಿಮಠ) ಎರಡು ವಿಶ್ವವಿದ್ಯಾಲಯಗಳು (ಮಹಿಷಮಂಡಲ ಮತ್ತು

ಕೋಢಿಮಠ=ಇಂದಿನ ಬಳ್ಳಿಗಾವಿ) ಕರ್ನಾಟಕದಲ್ಲಿದ್ದವು. ಇಲ್ಲಿಗೆ ಭೇಟಿ ನೀಡಿದ್ದ ಹುಯನ್ತ್ಸಾಂಗ್ ಕಾಂಚೀಪುರಂ ಮತ್ತು ಕೋಢಿಮಠಕ್ಕೆ ಭೇಟಿ ಇತ್ತು ಕಂಡುದನ್ನು ದಾಖಲಿಸಿದ್ದಾನೆ. ಈ ಸಂಗತಿಗಳನ್ನೆಲ್ಲ ಅನುಕೂಲಕರವಾಗಿ ವಿಸ್ಮೃತಿಗೆ ತಳ್ಳಲಾಗಿದೆ. ಇವೆಲ್ಲ ಬೌದ್ಧ ವಿಶ್ವವಿದ್ಯಾಲಯಗಳಾಗಿದ್ದವು ಮತ್ತು ಕೋಢಿಮಠವು ಒಂದು ಬಹುಶಿಸ್ತೀಯ ಅಧ್ಯಯನ ಕೇಂದ್ರವಾಗಿತ್ತು ಎಂಬ ಸಂಗತಿಯನ್ನೂ ಮರೆಮಾಚಲಾಗಿದೆ. ಭಾರತೀಯ ತಾತ್ವಿಕತೆಯ ಸಂದರ್ಭದಲ್ಲಿ ಕರ್ನಾಟಕವು ಆಯಕಟ್ಟಿನ ಭಾಗ. ಅದು ನೀಡಿರುವ ಮಹಾಯಾನ, ಸಿದ್ಧ, ವಚನ, ನಾಥ, ದ್ವೈತ ದರ್ಶನಗಳು ಮೀಮಾಂಸಾ ಪ್ರಸ್ಥಾನವೊಂದಕ್ಕೆ ಅಗತ್ಯವಾದ ತಾತ್ವಿಕ ಆಕರವಾಗಬಲ್ಲವು. ಹಾಗಾಗಿ ಕನ್ನಡವು ತನ್ನದೇ ಆದ ಕಾವ್ಯ ಮೀಮಾಂಸೆಯೊಂದನ್ನು ಒದಗಿಸಿಕೊಳ್ಳಬಲ್ಲ ಸಾಮರ್ಥ್ಯ ಹೊಂದಿದೆ ಎಂಬ ನಂಬಿಕೆಯು ಈ ಪ್ರಯತ್ನಕ್ಕೆ ಒತ್ತಾಸೆಯಾಗಿ ಇದೆ.

6. ದೀರ್ಘಕಾಲೀನ ಸಾಂಸ್ಕೃತಿಕ ವಸಾಹತುಶಾಹಿಯ ಅಡಿಯಲ್ಲಿ ನಲುಗಿದ ಕಾರಣಕ್ಕೆ ಬಹಳ ಗಂಭೀರವಾದ ಊನಗಳಿಂದ ಕೂಡಿದ ಬಾಳನ್ನು ನಾವು ಬಾಳುತ್ತಿದ್ದೇವೆ. ಅನೇಕ ರೀತಿಯ ತಾತ್ವಿಕ ಸಂಘರ್ಷಗಳಿಂದ ತುಂಬಿ ಹೋಗಿರುವ ನಮ್ಮ ಚರಿತ್ರೆಯು ಇದಕ್ಕೆ ಸಮರ್ಥನೆಯನ್ನೊದಗಿಸುತ್ತದೆ. ಸಮೂಹವೊಂದು ಬಾಳುವ ಬಾಳು ಮತ್ತು ಕಟ್ಟಿಕೊಳ್ಳುವ ಕಾವ್ಯ ಮೀಮಾಂಸೆಯ ತಾತ್ವಿಕ ಆಕರ ಒಂದೇ ಆಗಿರುವುದರಿಂದ ನಮ್ಮ ಜೀವನ ಮೀಮಾಂಸೆಯಲ್ಲಿರುವ ಊನಗಳೆಲ್ಲ ನಮ್ಮ ಕಾವ್ಯ ಮೀಮಾಂಸೆಯಲ್ಲಿಯೂ ಇರಲೇಬೇಕು.

7. ಸಂಸ್ಕೃತ ಕಾವ್ಯ ಮೀಮಾಂಸೆಯನ್ನು 'ಉತ್ತರದ' ಮೂಲಕ ಭಾರತವನ್ನು ಕಾಣಿಸಿಕೊಡುವ, ನಿಯಂತ್ರಿಸುವ ಸಾಂಸ್ಕೃತಿಕ ರಾಜಕಾರಣದ ಭಾಗವಾಗಿ ನೋಡಲು ಸಾಧ್ಯವಿದೆ. ದಕ್ಷಿಣದ ಸ್ವಂತ ಚಹರೆಗಳಾದ ಜಲಸಂಸ್ಕೃತಿ, ಶೈವ ಸಂಸ್ಕೃತಿ, ನಾಗ ಸಂಸ್ಕೃತಿ, ಮಾತೃ ಸಂಸ್ಕೃತಿಗಳನ್ನು ಸಂಶಯಕ್ಕೀಡುಮಾಡುವ, ಹತ್ತಿಕ್ಕುವ ಸಾಂಸ್ಕೃತಿಕ ವಸಾಹತೀಕರಣದ ಮುಂದುವರಿಕೆಯಾಗಿ ಉತ್ತರದ ಕಾವ್ಯ ಮೀಮಾಂಸೆಯನ್ನು ಕನ್ನಡದ ಸಂಸ್ಕೃತಿ ಚಿಂತನೆಯಲ್ಲಿ ಗುರುತಿಸಿರುವುದನ್ನು ಕಾಣಬಹುದು. ಇದರ ವಿಸ್ತಾರವಾದ ಅಧ್ಯಯನಕ್ಕೆ ಪ್ರಸ್ತುತ ಪ್ರಯತ್ನವು ವೇದಿಕೆಯನ್ನೊದಗಿಸಬಲ್ಲದು.

8. ಸ್ಥಳೀಯ ಕಾವ್ಯ ಮೀಮಾಂಸೆಯನ್ನು ಕುರಿತಾದ ಗಂಭೀರ ಚರ್ಚೆಯನ್ನು ತೊಲ್ಕಾಪ್ಪಿಯನಾರ್ ತನ್ನ ತೊಲ್ಕಾಪ್ಪಿಯಮ್‌ನಲ್ಲಿ ಆರಂಭಿಸಿದ್ದಾನೆ. ತಮಿಳು ಕಾವ್ಯ ಮೀಮಾಂಸೆಯ ಶೋಧನೆಯು ಸುಮಾರು ಎರಡು ಸಾವಿರ ವರುಷಗಳಷ್ಟು ಪ್ರಾಚೀನವಾದುದು. ಕಾವ್ಯ ಮೀಮಾಂಸೆಯ ಪರಿಕಲ್ಪನೆಗಳನ್ನು ರೂಪಿಸಿಕೊಳ್ಳಲು ಕೇವಲ ತತ್ವಶಾಸ್ತ್ರವಷ್ಟೇ ಅಲ್ಲ, ಸಮೂಹವೊಂದು ಬದುಕುತ್ತಿರುವ ನಿಸರ್ಗದ ಆವರಣ ಮತ್ತು ಮಾಡುತ್ತಿರುವ ಕಸುಬುಗಳು ಕೂಡ ಆಕರವಾಗಬೇಕೆಂಬ ಪ್ರತಿಪಾದನೆಯನ್ನು ಅಲ್ಲಿಯೇ ಕಾಣಬಹುದಾಗಿದೆ.

9. ಇನ್ನು ಸಂಸ್ಕೃತ ಕಾವ್ಯ ಮೀಮಾಂಸೆಯ ಪ್ರಧಾನ ಪರಿಕಲ್ಪನೆಗಳಾದ ರಸ, ಧ್ವನಿ, ಔಚಿತ್ಯ, ಆನಂದಗಳ ಮೂಲಕ ಬ್ರಹ್ಮವನ್ನು ತಲುಪುವ ಕಾವ್ಯ ಮೀಮಾಂಸೆಯನ್ನು ಕನ್ನಡಕ್ಕೆ ಹಾಗೆ ಇಡಿಯಾಗಿ ಅನ್ವಯಿಸಿಕೊಳ್ಳಲಾಗದು. ಯಾಕೆಂದರೆ ಬ್ರಹ್ಮವಾದಿಗಳಲ್ಲದ, ಅನಾತ್ಮವಾದಿಗಳೂ ಅನೇಕಾಂತವಾದಿಗಳೂ ಆದ ಜೈನರಿಗೆ ಈ ಕಾವ್ಯಮೀಮಾಂಸೆಯನ್ನು ಹೇಗೆ ಹೊಂದಿಸಲು ಸಾಧ್ಯ? ರಸಕ್ಕಾಗಿ, ಧ್ವನಿಗಾಗಿ, ಆನಂದಕ್ಕಾಗಿ ಎನ್ನುವ ಲೋಕದ ಹಂಗು ಹರಿದ ಸುಖಿಗಳಿಗಾಗಿ ಯಾವ ವಚನಕಾರನಾದರೂ ಯಾವುದಾದರೂ ವಚನವನ್ನು ಕಟ್ಟಿರಲು ಸಾಧ್ಯವೆ? ಹಾಗಾಗಿ ವಚನಕಾರರಿಗೂ ಇದರ ಅನ್ವಯ ಸಾಧ್ಯವಿಲ್ಲ. ರಸ, ಧ್ವನಿ, ಔಚಿತ್ಯ ಮುಂತಾದ ಕಾವ್ಯ ಸಲಕರಣೆಗಳನ್ನು ಕೇವಲ ಸಲಕರಣೆಗಳಾಗಿ ಯಾವ ಮೀಮಾಂಸೆಗಳೂ ನಿರಾಕರಿಸಲಾರವು. ಆದರೆ ಅವುಗಳ ಉದ್ಯೋಗವನ್ನು ಈಗ ಇರುವ ರೂಪದಲ್ಲೇ ಸ್ವೀಕರಿಸುತ್ತವೆ ಎಂದೇನೂ ಅಲ್ಲ. ಬದಲಿಗೆ ಇವುಗಳ ಜೊತೆಗೆ ಹೊಸ ಪರಿಕಲ್ಪನೆಗಳು ಸೇರಿಕೊಂಡಾವು. ಆದರೆ ಕಾವ್ಯ ಕಲೆಗಳ ಅಭಿವ್ಯಕ್ತಿಯ ಉದ್ದೇಶವನ್ನೇ ರಸಕ್ಕೆ, ಧ್ವನಿಗೆ, ಆನಂದಕ್ಕೆ, ಪರಾವಾಕ್ಕಿಗೆ, ಪರಬ್ರಹ್ಮಕ್ಕೆ ತಲುಪಿಸುವುದರ ಮೂಲಕ ಭಾರತೀಯ ಮನಸ್ಸನ್ನೇ ಬಂಧಿಸುವ ಬಲವಾದ ಬ್ರಹ್ಮಬಂಧವೊಂದು ಕಾವ್ಯಮೀಮಾಂಸೆಯಾಗಿ ಸುತ್ತಿಕೊಂಡಿದೆ. ಭಾರತೀಯ ಮನಸ್ಸನ್ನು ಇಡಿಯಾಗಿ ಬಂಧಿಸಿದ ದ್ವೈತಾದ್ವೈತಗಳಿಂದ ಬಿಡುಗಡೆ ದೊರಕಿಸಿಕೊಡಲು ಜೈನರು, ಬೌದ್ಧರು, ವಚನಕಾರರು, ಆಜೀವಿಕರು, ಚಾರ್ವಾಕರು ಮುಂತಾದವರ ತಾತ್ವಿಕ ಪ್ರಯತ್ನಗಳು ಕೂಡ ಅಷ್ಟೇ ಗಂಭೀರವಾದವುಗಳು. ಆದರೆ ಅವುಗಳನ್ನು ವಿಸ್ಮೃತಿಗೆ ತಳ್ಳುವ ಸಾಂಸ್ಕೃತಿಕ ರಾಜಕಾರಣ ಸದಾ ಕ್ರಿಯಾಶೀಲವಾಗಿರುವುದರಿಂದ ಶ್ರಮಣಧಾರೆಗಳಿಂದ ದೊರಕಿರುವ ಮೀಮಂಸಾಪರಿಕಲ್ಪನೆಗಳನ್ನು ಮತ್ತೊಮ್ಮೆ ನೆನಪಿಸಿಕೊಡುವ ಅಗತ್ಯವಿದೆ. ಕನ್ನಡದ ಬದುಕಿನ ಅಂತಃಸ್ಸತ್ವ ಬೇರೆಯೇ ಇದೆ ಮತ್ತು ಅದರ ಎಚ್ಚರವೂ ಅದಕ್ಕಿದೆ. ಹಾಗಾಗಿಯೇ ಉತ್ತರದ ಕಾವ್ಯ ಧಾರೆಯನ್ನು ನಿರಾಕರಿಸಿ ಕನ್ನಡ ನೆಲದ ಕಾವ್ಯವನ್ನು ಮಾತ್ರ ಮುಂದಿಡುವ ಹಠವನ್ನು ಹರಿಹರ, ಚಾಮರಸ ಮುಂತಾದ ಕವಿಗಳಲ್ಲಿ ಕಾಣಬಹುದು. ಈವರೆಗೆ ಪ್ರಸ್ತಾಪಿಸಿರುವ 'ಜನಸಮೂಹದ ನಡುವಿನ ಕಾವ್ಯ'ಗಳು ಉತ್ತರದ ಕಾವ್ಯ ಮಾರ್ಗ ಮತ್ತು ಸಂಸ್ಕೃತ ಕಾವ್ಯ ಮೀಮಾಂಸೆಯ ಪ್ರಧಾನ ನಿಲುವುಗಳಾದ ಏಕಮೂಲವಾದ, ಆತ್ಮವಾದ, ಪ್ರಮಾಣ ಸ್ವೀಕರಣೆ, ವರ್ಣಾಶ್ರಮ ವ್ಯವಸ್ಥೆ, ಬ್ರಹ್ಮಾನಂದವೇ ಕಾವ್ಯಪ್ರಯೋಜನ ಮುಂತಾದ ನಿಲುವುಗಳನ್ನು ಎಚ್ಚರದಿಂದ ನಿರಾಕರಿಸುತ್ತವೆ. ಕನ್ನಡಕ್ಕೆ ಅತ್ಯಂತ ಹೆಚ್ಚು ವಿಸ್ತಾರವಾದ ಕಾವ್ಯವನ್ನು ಕೊಟ್ಟಿರುವ ತತ್ವಪದಕಾರರು ಕೂಡ ಈ ನಿರಾಕರಣೆಯಲ್ಲಿ ಹಿಂದೆ ಬಿದ್ದಿಲ್ಲ. ಆಧುನಿಕ ಕನ್ನಡದ ಸಂದರ್ಭದಲ್ಲಿ ವಿಜ್ಞಾನ, ಎಡಪಂಥೀಯ ಚಿಂತನೆಗಳು ಮತ್ತು ಸಮಾಜಮುಖಿ ಚಿಂತನೆಗಳ ಪ್ರಭಾವ ಹೆಚ್ಚಾಗಿರುವುದರಿಂದ ಸಹಜವಾಗಿ ಬ್ರಹ್ಮಾನಂದವು ನಗೆಪಾಟಲಾಗುವ ಸಾಧ್ಯತೆಗಳೇ ಹೆಚ್ಚು. ಹಾಗಾದರೆ ಇನ್ನು ಕನ್ನಡ ಕಾವ್ಯ ಪರಂಪರೆಯಲ್ಲಿ ಭಾರತೀಯ ಕಾವ್ಯಮೀಮಾಂಸೆಯನ್ನು ಅನ್ವಯಿಸಬಹುದಾದವರು ಯಾರು? ಲಕ್ಷ್ಮೀಶ, ಕುಮಾರವ್ಯಾಸ,

ಕನಕದಾಸ, ಪುರಂದರದಾಸ, ಭಕ್ತಿಪಂಥ ಮತ್ತು ಇತರ ಅದ್ವೈತ ಕಾವ್ಯಗಳು ಮಾತ್ರ ಭಾರತೀಯ ಕಾವ್ಯ ಮೀಮಾಂಸೆಯ ಅನ್ವಯ ಸಾಧ್ಯತೆಗಳನ್ನು ಹೊಂದಿವೆ.

10 ಇಲ್ಲೇ ಸ್ಪಷ್ಟಪಡಿಸಬೇಕಾದ ಸಂಗತಿಯೊಂದಿದೆ. ಕನ್ನಡ ಕಾವ್ಯ ಮೀಮಾಂಸೆಯು ಸಂಸ್ಕೃತ ಕಾವ್ಯಮೀಮಾಂಸೆಗೆ ಪ್ರತಿಮೀಮಾಂಸೆಯಾಗಿ ರೂಪುಗೊಂಡಿರುವುದಲ್ಲ. ಅದರೊಡನೆ ಇಷ್ಟು ಕಾಲದ ಒಡನಾಟದಲ್ಲಿ ಅನೇಕ ಪ್ರತಿಕ್ರಿಯೆಗಳು ಮೂಡಿವೆ ನಿಜ. ಸಂಸ್ಕೃತ ಕಾವ್ಯ ಮೀಮಾಂಸೆಯು ಯಾವ ತಾತ್ವಿಕ ಆಕರಗಳಿಂದ ರೂಪುಗೊಂಡಿದೆಯೋ ಆ ತಾತ್ವಿಕ ಆಕರಗಳು ಇಲ್ಲಿಗೆ ಒಗ್ಗುತ್ತವೆಯೋ ಇಲ್ಲವೋ ಎಂಬ ವಿಶ್ಲೇಷಣೆಯ ಮೂಲಕ ಈ ಮೀಮಾಂಸೆ ರೂಪುಗೊಂಡಿಲ್ಲ. ಕನ್ನಡದ ಮೀಮಾಂಸೆಯು ಈ ನೆಲದ ಅನ್ನಾಹಾರಗಳು, ಕಸುಬು–ಕೌಶಲಗಳು, ಇಲ್ಲಿಯ ನಿಸರ್ಗ ಒದಗಿಸಿರುವ ವಿವೇಕ– ಇವುಗಳಿಂದ ಪ್ರಣೀತವಾದ ಮೀಮಾಂಸೆಯೆಂದುಕೊಳ್ಳುವುದೇ ಸಾಧುವಾದ ಕ್ರಮ. ಇದಕ್ಕೆ ಅಗತ್ಯವಾದ ತಾತ್ವಿಕ ಆಕರ ಕನ್ನಡದಲ್ಲಿದೆ. ಹಾಗಾಗಿ ಕನ್ನಡ ಕಾವ್ಯ ಮೀಮಾಂಸೆಯೆನ್ನುವುದೊಂದು ವಾಸ್ತವ ಸಂಗತಿಯಾಗಿದೆ.

ಭಾರತದ ಸಂದರ್ಭದಲ್ಲಿ, ಭಾಷೆ, ಕಾವ್ಯ, ದರ್ಶನ ಮತ್ತು ಕಾವ್ಯ ಮೀಮಾಂಸೆಗಳನ್ನು ಬರಹ ರೂಪಕ್ಕೆ ಇಳಿಸಿರುವ ಅಥವಾ ದಾಖಲಾತಿಗೊಳಿಸಿರುವ ಕ್ರಮದಲ್ಲಿಯೇ ಯಾವುದನ್ನು ಮಾನ್ಯವೆಂದು ಒಪ್ಪಿಸಬೇಕು ಯಾವುದನ್ನು ಅಮಾನ್ಯಗೊಳಿಸಬೇಕು ಎನ್ನುವ ಸಾಂಸ್ಕೃತಿಕ ರಾಜಕಾರಣದ ಸಂಕಥನವೊಂದು ನಿರಂತರವಾಗಿ ಕ್ರಿಯಾಶೀಲವಾಗಿದೆ. ಹೀಗಾಗಿ ಇಂತಹ ಚರಿತ್ರೆಯನ್ನಾಧರಿಸಿದ, ದಾಖಲಾತಿಗಳನ್ನಾಧರಿಸಿದ ಮೀಮಾಂಸೆಯನ್ನು 'ನಮ್ಮಮೀಮಾಂಸೆ' ಎಂದು ಒಪ್ಪಿಕೊಳ್ಳಲಾಗದು. ಬದಲಿಗೆ ಸಾಂಸ್ಕೃತಿಕ ವಸಾಹತುಶಾಹಿಯಿಂದ ನಿರ್ಲಕ್ಷಕ್ಕೆ ಈಡಾಗಿರುವ ಮೀಮಾಂಸೆಗಳು ಸಮೂಹದ ಮೀಮಾಂಸೆಗಳಾಗಿರುವ ಸಾಧ್ಯತೆಗಳು ನಿಚ್ಚಳವಾಗಿವೆ. ಸಮೂಹಗಳು ತಮ್ಮನ್ನು ತಾವು ಕಂಡುಕೊಳ್ಳಲು ನಡೆಸುವ ಎಚ್ಚರದ ಅಧ್ಯಯನಗಳು ಮಾತ್ರ ನಿಜವನ್ನು ಕಟ್ಟಿಕೊಳ್ಳುವ ಪ್ರಾಮಾಣಿಕ ಪ್ರಯತ್ನವಾಗಬಲ್ಲವು. ಉತ್ತರಕ್ಕೆ ಇರುವ ದಕ್ಷಿಣದ ಬಗೆಗಿನ ತಿರಸ್ಕಾರ ಮತ್ತು ದಕ್ಷಿಣಕ್ಕೆ ಉತ್ತರದ ಬಗೆಗಿನ ಅಸಮಾಧಾನವು ಉದ್ದಕ್ಕೂ ಮಸೆಯುತ್ತಲೇ ಬಂದಿದೆ. ಭಾರತವನ್ನು ಆಳುತ್ತಿರುವ ಈ ಉತ್ತರದ ಯಜಮಾನಿಕೆಯನ್ನು ಗಟ್ಟಿಗೊಳಿಸುವ ಸಾಂಸ್ಕೃತಿಕ ರಾಜಕಾರಣದ ಭಾಗವಾಗಿ ಸಂಸ್ಕೃತ ಕಾವ್ಯ ಮೀಮಾಂಸೆಯನ್ನು ಭಾರತೀಯ ಕಾವ್ಯ ಮೀಮಾಂಸೆಯ ಹೆಸರಿನಲ್ಲಿ ಕನ್ನಡದ ಮೇಲೆ ಹೇರಲು ಉತ್ತರದ ಕಾವ್ಯ ಮಾರ್ಗವು ಸಲೀಸಾಗಿ ಒದಗಿಬಂದಿರುವುದನ್ನು ಕಾಣಬಹುದು. ಕನ್ನಡದ ಮಟ್ಟಿಗೆ ನಿರ್ದಿಷ್ಟ ಸಮೂಹಗಳಿಗೆ ಅಧಿಕಾರವನ್ನು ರೂಢಿಸಿಕೊಡುವ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳನ್ನು ಈ ಕಾವ್ಯ ಮಾರ್ಗವೇ ಆಕ್ರಮಿಸಿಕೊಂಡಿದೆ. ಕನ್ನಡ ಜನಪದ ಮಹಾಕಾವ್ಯಗಳಾದ ಮಂಟೇಸ್ವಾಮಿ ಕಾವ್ಯ, ಮಲೇಮಾದೇಶ್ವರನ ಕಾವ್ಯ, ಜುಂಜಪ್ಪನ ಕಾವ್ಯ. ವೈಲಾರಲಿಂಗನ ಕಾವ್ಯ, ಮುಂತಾದುವು ಇಂದಿಗೂ

ಶೈಕ್ಷಣಿಕ ವಲಯದೊಳಕ್ಕೆ ಪ್ರವೇಶಿಸಲು ಸಾಧ್ಯವಾಗಿಲ್ಲ. ಕನ್ನಡ ಸಮೂಹದಿಂದ ಅತ್ಯಂತ ಹೆಚ್ಚು ಓದಿಸಿಕೊಂಡಿರುವ ಚಿದಾನಂದಾವಧೂತನ ದೇವಿ ಮಹಾತ್ಮೆ ಇಂದಿಗೂ ಶೈಕ್ಷಣಿಕವಲಯಗಳಿಗೆ ಅಪರಿಚಿತವಾಗಿಯೇ ಇದೆ. ಕನ್ನಡ ಸಾಹಿತ್ಯದಲ್ಲಿ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಕಾವ್ಯ ಸೃಷ್ಟಿಯಾಗಿರುವುದು ತತ್ವಪದಕಾರರಲ್ಲಿ. ಅವರಿಗಿನ್ನೂ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸಲ್ಲಬೇಕಾದ ಸ್ಥಾನ ಸಿಕ್ಕಿಲ್ಲ. ದೇಶಭಾಷೆಗಳ ಕಾವ್ಯ ಮೀಮಾಂಸೆಯನ್ನು ಪುನಾರಚಿಸುವಾಗ ವಿದ್ವಾಂಸರು ಸಂಸ್ಕೃತ ಭಾಷೆಯನ್ನು ಮತ್ತು ಉತ್ತರದ ಕಾವ್ಯ ಮಾರ್ಗವನ್ನು ಕೇಂದ್ರದಲ್ಲಿರಿಸಿಕೊಂಡು ತಮ್ಮ ಚಿಂತನೆಗಳನ್ನು ರೂಪಿಸುತ್ತಾರೆ ಅಥವಾ ಸಾಹಚರ್ಯದೊಡನೆ ಸ್ವಾಯತ್ತತೆ ಎಂಬ ನಿಲುವನ್ನು ಪ್ರಯತ್ನಿಸುತ್ತಾರೆ. ಕನ್ನಡ ಕಾವ್ಯ ಮೀಮಾಂಸೆಯ ಇದುವರೆಗಿನ ಪ್ರಯತ್ನಗಳಲ್ಲೂ ಈ ರೀತಿಯ ಅಘೋಷಿತ ಒಪ್ಪಂದಗಳು ಏರ್ಪಟ್ಟಿವೆ. ಕನ್ನಡ ಅಥವಾ ಕನ್ನಡದ ಚಿಂತನಾ ಜಗತ್ತನ್ನು ಅಧೀನ, ಮತ್ತು ಸಹಯಾನಿಯಾದ ಅನುಬಂಧವಾಗಿಯೇ ಕಟ್ಟಿಕೊಡಲಾಗಿದೆ. ಶೈಕ್ಷಣಿಕ ವಲಯದ ಇಂತಹ ಸ್ಥಾಪನೆಗಳ ಹಿಂದೆ ವಸಾಹತುಶಾಹಿ ನಿರೂಪಿತ ರಾಷ್ಟ್ರೀಯತೆಯ ಸಂಕಥನಗಳ ಕೊಡುಗೆ ಇದೆ. ಅನೇಕಗಳಲ್ಲಿ ಏಕವನ್ನು ಕಾಣುವ ಕಲ್ಪನೆಯಿಂದ ಪ್ರಣೀತವಾದ ರಾಷ್ಟ್ರೀಯತೆಯ ಭಾವನೆಯು ಭಾರತನ್ನು 'ಸಮನ್ವಯ' ದೃಷ್ಟಿಯಲ್ಲಿ ನೋಡುವ ಸಲುವಾಗಿ ಸಂಸ್ಕೃತದ ಯಜಮಾನಿಕೆಯನ್ನು ಎತ್ತಿಹಿಡಿಯಿತು. ಅದು ಭಾರತದ ವೈವಿಧ್ಯಮಯ ಸಂಸ್ಕೃತಿಗಳನ್ನು, ವೈಶಿಷ್ಟ್ಯಗಳನ್ನು ಬದಿಗಿರಿಸಿ ಏಕರೂಪದಲ್ಲಿ ನೋಡುವಂತೆ ಪ್ರೇರೇಪಿಸಿತು. ಹಾಗಾಗಿ ಕನ್ನಡದ ಕಾವ್ಯ ಮೀಮಾಂಸೆಯನ್ನು ಗುರುತಿಸಿಕೊಳ್ಳುವ ಪ್ರಯತ್ನವು ಸಹಜವಾಗಿ ಸಾಂಸ್ಕೃತಿಕ ವಸಾಹತುಶಾಹಿಯಿಂದ ಬಿಡುಗಡೆ ಪಡೆಯುವ ಪ್ರಯತ್ನವೂ ಹೌದು ಮತ್ತು ಕನ್ನಡದ ಅಸ್ಮಿತೆಯನ್ನು ಕಾಪಾಡಿಕೊಳ್ಳುವ ಪ್ರಯತ್ನವೂ ಹೌದು.

ಕನ್ನಡ ಕಾವ್ಯ ಮೀಮಾಂಸೆಯನ್ನು ರೂಪಿಸಿರುವ ಈ ನೆಲದ ಪ್ರಮುಖ ತಾತ್ವಿಕ ಆಕರಗಳನ್ನು ಗುರುತಿಸುವುದು ಸುಲಭದ ಕೆಲಸವೇನಲ್ಲ. ಅನೇಕಗಳು ಬೆರೆತಾಗ ಅಂತರ್ ವೈರುಧ್ಯಗಳೂ, ವಿರೋಧಾಭಾಸಗಳೂ ಎದುರಾಗುವುದು ಸ್ವಾಭಾವಿಕ. ಬಹುತ್ವದ ಗುಣವೇ ಪ್ರಮಾಣವನ್ನು ನಿರಾಕರಿಸುವುದು. ತಾನೂ ಬಾಳುವ ತನ್ನ ಸುತ್ತಲಿನ ಎಲ್ಲರನ್ನೂ ಬಾಳಗೊಡಿಸುವ ಆಶಯಗಳು ಅಲ್ಲಿ ಕ್ರಿಯಾಶೀಲವಾಗಿರುತ್ತವೆ. ಪರರ ವಿಚಾರಗಳನ್ನು ಸೈರಿಸುವುದೆ ಅಲ್ಲಿಯ ಸಂಪತ್ತು. ಅದು ಕನ್ನಡದ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಸಂಸ್ಕೃತ ಕಾವ್ಯಮೀಮಾಂಸೆಯು ಸ್ಥಳೀಯ ಸ್ವಂತಿಕೆಗಳನ್ನು ನಿರ್ಲಕ್ಷಿಸಲು, ನಿರಾಕರಿಸಲು, ನಾಶಮಾಡಲು, ದಿವ್ಯಪ್ರಭುತ್ವದ ಮತ್ತು ಆಧುನಿಕ ಸಂದರ್ಭದಲ್ಲಿ ರಾಷ್ಟ್ರೀಯವಾದದ ನೆರವನ್ನು, ಅಧಿಕಾರ ಕೇಂದ್ರಗಳನ್ನು ಮತ್ತು ಪ್ರಶ್ನಿಸಲಾಗದ ಪ್ರಮಾಣಗಳನ್ನು ಬಳಸಿಕೊಳ್ಳುತ್ತದೆ. ಆದರೆ ಕನ್ನಡ ಕಾವ್ಯಮೀಮಾಂಸೆಯಂತಹ ದೇಶಭಾಷೆಗಳ ಪ್ರಯತ್ನಗಳಿಗೆ ಇಂತಹ ಹೊರ ಸಹಾಯಗಳು ಒದಗಿಬರುವುದಿಲ್ಲ. ಇದಿಷ್ಟು ಹಿನ್ನೆಲೆಯೊಡನೆ ಕನ್ನಡ ಕಾವ್ಯ ಮೀಮಾಂಸೆಯ ಪ್ರಧಾನ ಪರಿಕಲ್ಪನೆಗಳನ್ನು ರೂಪಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಬಹುದು.


**ಕನ್ನಡದ್ದೇ ಆದ ಕಾವ್ಯ ಮೀಮಾಂಸೆ:**

ತೀನಂಶ್ರೀಯವರ 'ಭಾರತೀಯ ಕಾವ್ಯ ಮೀಮಾಂಸೆ' ಕೃತಿಯ ಮುನ್ನುಡಿಯ ರೂಪದಲ್ಲಿ ಶ್ರೀ ಕುವೆಂಪು ಅವರು ಅನೇಕ ಸಂಗತಿಗಳನ್ನು ಪ್ರಸ್ತಾಪಿಸಿದ್ದಾರೆ. ಅದರಲ್ಲಿ ಅನ್ಯ ಮೀಮಾಂಸೆಯೊಂದರ ಅನ್ವಯದಿಂದಾಗುವ ಪರಿಣಾಮಗಳ ಬಗೆಗೆ ಎಚ್ಚರದ ಮಾತೊಂದಿದೆ.

**"ಇದುವರೆಗೆ ಕನ್ನಡ ಸಾಹಿತ್ಯದಲ್ಲಿ ಮೂಡಿರುವ ಕಾವ್ಯ ಮೀಮಾಂಸೆ ಏನಿದ್ದರೂ ಅದೆಲ್ಲ ಸಂಸ್ಕೃತದ ಪಡಿನೆಳಲಂತಿದೆ. ಮುಂದೆ ಬರುವ ಕಾವ್ಯ ಮೀಮಾಂಸೆ ಮತ್ತು ಸಾಹಿತ್ಯವಿಮರ್ಶೆ ಪಾಶ್ಚಾತ್ಯದ ಪಡಿನೆಳಲಾದರೆ ಅದಕ್ಕಿಂತಲೂ ಅಪಾಯಕರವಾಗುತ್ತದೆ. ಏಕೆಂದರೆ ತನ್ನತನವನ್ನೆ ಕಳೆದುಕೊಳ್ಳುವ ಸಂಭವವಿರುವುದರಿಂದ, ನಮ್ಮ ಮುಂದಿನ ಕಾವ್ಯ ಮೀಮಾಂಸೆ ಮತ್ತು ಸಾಹಿತ್ಯವಿಮರ್ಶೆಗಳು ಪಾಶ್ಚಾತ್ಯ ಮತ್ತು ಭಾರತೀಯ ಕಾವ್ಯ ಮೀಮಾಂಸೆಗಳಿಂದ ಮಾತ್ರವಲ್ಲದೆ ತತ್ವಶಾಸ್ತ್ರ, ಯೋಗವಿಜ್ಞಾನ, ಸೌಂದರ್ಯ ಮೀಮಾಂಸೆ ಮತ್ತು ಮನಶ್ಶಾಸ್ತ್ರ– ಇವುಗಳಿಂದಲೂ ಬೆಳಕು ಪಡೆದು ಧೀರವಾಗಿ ಸ್ವತಂತ್ರವಾಗಿ ಪೂರ್ಣದೃಷ್ಟಿಯ ಕಡೆಗೆ ಮುನ್ನಡೆಯಬೇಕಾಗುತ್ತದೆ. ಬಹುಶ: ಆ ಹೊಸ ಬೆಳಕಿನಲ್ಲಿ ಹಳೆಯ ತತ್ತ್ವಗಳು ತಮ್ಮ ನಿಗೂಢರಹಸ್ಯಗಳನ್ನೆಲ್ಲ ಬಿಚ್ಚಿಕೊಟ್ಟು ನಮ್ಮನ್ನು ಹೊಸ ಹೊಸ ರಸಾನುಭವಗಳಿಗೂ ಹೊಸಹೊಸ ತುಷ್ಟಿಪುಷ್ಟಿಗಳಿಗೂ ಕೊಂಡೊಯ್ಯಬಹುದು. ಪಾಶ್ಚಾತ್ಯದ ಅಂಧಾನುಕರಣವಾಗಲಿ ಭಾರತೀಯತೆಯ ಅಂಧಾನುಸರಣವಾಗಲಿ ಉತ್ತಮ ಸೃಷ್ಟಿಗೆ ಕಾರಣವಾಗದು ಎಂದ ಮೇಲೆ ಸಮನ್ವಯ ರೂಪವಾದ ಒಂದು ನವವಿಧಾನವನ್ನು ಅನುಸರಿಸಿ ತನ್ನ ವೈಶಿಷ್ಟ್ಯವನ್ನು ಸ್ಥಾಪಿಸುವುದರ ಮೂಲಕ ಲೋಕದ ಕಾವ್ಯವಿಮರ್ಶೆಗೂ ತನ್ನ ಕಾಣಿಕೆಯನ್ನು ಸಲ್ಲಿಸಬೇಕಾಗಿದೆ."
(ಶ್ರೀ ಕುವೆಂಪು –ಭಾರತೀಯ ಕಾವ್ಯ ಮೀಮಾಂಸೆ ಕೃತಿಯ ಮುನ್ನುಡಿಯಲ್ಲಿ)**

ಸಂಸ್ಕೃತ ಕಾವ್ಯ ಮೀಮಾಂಸೆಯನ್ನು ಕನ್ನಡಕ್ಕೆ ಅನ್ವಯಿಸಿಕೊಂಡಿರುವ ಈ ಸಂದರ್ಭಕ್ಕೆ ಕುವೆಂಪು ಆಡಿರುವ ಮಾತುಗಳಿವು. ಒಂದಂತೂ ನಿಶ್ಚಿತ. ಕನ್ನಡ





ಕಾವ್ಯ ಮೀಮಾಂಸೆಯ ಶೋಧಕ್ಕೆ ಒಂದು ದೀರ್ಘ ಪರಂಪರೆಯಿದೆ. ಅದು ಕವಿರಾಜಮಾರ್ಗಕಾರನಲ್ಲಿಯೇ ವ್ಯಕ್ತವಾಗುತ್ತದೆ. ಸ್ಥಳೀಯ ದರ್ಶನ ಪರಂಪರೆಗಳೂ ಪ್ರಾಸಂಗಿಕವಾಗಿ ತಮ್ಮ ನಿಲುವುಗಳನ್ನು ವ್ಯಕ್ತಪಡಿಸುತ್ತಲೇ ಬಂದಿವೆ. ಕನ್ನಡದ್ದೇ ಆದ ಮೀಮಾಂಸೆಯೊಂದರ ಶೋಧ ಆಧುನಿಕ ಸಂದರ್ಭದಲ್ಲಿಯೂ ಮುಂದುವರೆದಿದೆ. ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯವನ್ನು ಇಲ್ಲಿ ನೆನೆಯಬೇಕು: “ಸಂಸ್ಕೃತ ಸಾಹಿತ್ಯದಲ್ಲಿ ಕಾವ್ಯಾಂತರ್ಗತ ಕಾವ್ಯಚರ್ಚೆಯೊಂದು, ಕನ್ನಡದಲ್ಲಿರುವಂತೆ ಒಂದು ಪರಂಪರೆಯಾಗಿ ಬೆಳೆದಿಲ್ಲ. ಇದು ಬಹುಶ: ಕನ್ನಡಕ್ಕೇ ವಿಶಿಷ್ಟವಾದದ್ದು. ಯಾಕೆಂದರೆ ಸಂಸ್ಕೃತದಲ್ಲಿ ಕಾವ್ಯ ನಿರ್ಮಿತಿಯೇ ಬೇರೆ, ಅಲಂಕಾರ ಶಾಸ್ತ್ರವೇ ಬೇರೆ.

ಇನ್ನೂ ಆಳವಾದ ಅಧ್ಯಯನದಿಂದ ಕನ್ನಡಕ್ಕೆ ತನ್ನದೇ ಆದ ಸ್ವತಂತ್ರವಾದ ಕಾವ್ಯ ಚಿಂತನೆಗಳೇನಾದರೂ ಇವೆಯೆ ಎಂಬ ಶೋಧನೆ ನಡೆಯಬೇಕಾಗಿದೆ. ಹಾಗೆಯೇ ವಿವಿಧ ಪ್ರಾದೇಶಿಕ ಸಾಹಿತ್ಯಗಳು ಸಂಸ್ಕೃತಕ್ಕೆ ಭಿನ್ನವಾದ ಹಾಗೂ ಸಮಾನಾಂತರವಾದ ಕಾವ್ಯ ಚಿಂತನೆಗಳನ್ನೇನಾದರೂ ಕಟ್ಟಿಕೊಂಡಿವೆಯೆ ಎಂಬ ಕೆಲಸ ನಡೆಯಬೇಕಾಗಿದೆ. ಆಗ ನಾವು ನಿಜವಾದ ಅರ್ಥದ 'ಭಾರತೀಯ ಕಾವ್ಯ ಮೀಮಾಂಸೆಯನ್ನು' ಗುರುತಿಸಲು ಸಾಧ್ಯವಾಗಬಹುದು. ಅಲ್ಲಿಯವರೆಗೂ 'ಸಂಸ್ಕೃತ ಕಾವ್ಯ ಮೀಮಾಂಸೆಯೆ' ಭಾರತೀಯ ಕಾವ್ಯ ಮೀಮಾಂಸೆ ಎಂಬ ಭ್ರಮೆಯಿಂದ ಪಾರಾಗಲು ಸಾಧ್ಯವಿಲ್ಲ." (ಡಾ. ಜಿ ಎಸ್ ಶಿವರುದ್ರಪ್ಪ, ' ಕವಿರಾಜಮಾರ್ಗ–ಸಾಂಸ್ಕೃತಿಕ ಮುಖಾಮುಖಿ' ಸಂ: ರಹಮತ್ ತರೀಕೆರೆ, ಪ್ರ: ಪ್ರಸಾರಾಂಗ, ಕನ್ನಡ ವಿವಿ, ಹಂಪಿ/2000). ಸಂಸ್ಕೃತಮೀಮಾಂಸೆಯನ್ನೇ ಅನುಸರಿಸಿಕೊಂಡು ಬಂದ ಘಳಿಗೆಯಲ್ಲೂ ತಾವೊಂದು ಭ್ರಮೆಯಲ್ಲಿರುವುದನ್ನು ಕನ್ನಡದ ಹಿರಿಯ ಚೇತನಗಳು ಮತ್ತೆ ಮತ್ತೆ ನೆನೆಸಿಕೊಂಡೇ ಬಂದಿದ್ದಾರೆ. ಅದರರ್ಥ ಅವರಿಗೆ ತಾವು ನಡೆಯುತ್ತಿರುವ ದಾರಿ ತಮ್ಮದಲ್ಲ ಎಂಬುದರ ಅರಿವಿತ್ತು. ಕಣ್ಣೆದುರಿನ ಬದುಕನ್ನು ತಾವು ಓದುತ್ತಿರುವ ಮೀಮಾಂಸೆ ಪ್ರತಿನಿಧಿಸುತ್ತದೆಯೇ ಎಂಬ ಅನುಮಾನವಿತ್ತು. ಈ ಅನುಮಾನಗಳ ಹಾಕಿಕೊಟ್ಟ ಕಿರುದಾರಿ ಮತ್ತು ಕನಸುಗಳೇ ನಾವು ಕಟ್ಟಿಕೊಳ್ಳಬೇಕಿರುವ ನಮ್ಮ ಮೀಮಾಂಸೆಯ ಅಡಿಗಲ್ಲುಗಳಾಗಿಯೂ ಒದಗಿಬರುತ್ತವೆ. ಬಹಳ ಮುಖ್ಯವಾಗಿ ವ್ಯಾಕರಣ ಮತ್ತು ಮೀಮಾಂಸೆ ಈ ಕ್ಷೇತ್ರಗಳಲ್ಲೂ ಈ ಸಮಸ್ಯೆ ಬಹುವಾಗಿಯೇ ಕಾಡಿದೆ. ಕನ್ನಡ ಕಾವ್ಯ ಮೀಮಾಂಸೆಯ ಪ್ರಾಥಮಿಕ ಪರಿಕಲ್ಪನೆಗಳ ಶೋಧವು ಕೆಲವು ಸಂಗತಿಗಳನ್ನು ಮೊದಲು ನಿಚ್ಚಳಗೊಳಿಸಿಕೊಳ್ಳಬೇಕಾಗಿದೆ.

### ಅವಜ್ಞೆಗೀಡಾದ ಸ್ಥಳೀಯ ಮೀಮಾಂಸೆಗಳು

ಕನ್ನಡ ಕಾವ್ಯಮೀಮಾಂಸೆಯು ಮತ್ತೊಂದು ಮೀಮಾಂಸೆಯಲ್ಲ; ಪ್ರತಿಮೀಮಾಂಸೆಯಲ್ಲ, ಕೇವಲ ನಿರಾಕರಣೆ / ಸ್ವೀಕರಣೆಯ ಉದ್ದೇಶದ್ದಲ್ಲ. ಕನ್ನಡದ ಬದುಕಿನೊಳಗಿನಿಂದ ಕಟ್ಟಿಕೊಂಡಿರುವ ಕನ್ನಡದ ಕಾವ್ಯಮೀಮಾಂಸೆ ಆಗಿರುವುದರಿಂದ ಇದು ಕನ್ನಡದ ಜೀವನ ಮೀಮಾಂಸೆಯೂ ಹೌದು. ಹಾಗೆಂದ ಮಾತ್ರಕ್ಕೆ ಇದರ ಅನ್ವಯ ಕನ್ನಡಕ್ಕೆ ಮಾತ್ರ ಸೀಮಿತವಾದುದೆಂದಲ್ಲ. ಇಲ್ಲೊಂದು ಸ್ಥಳೀಯತೆಯನ್ನಾಧರಿಸಿದ ವೈಶ್ವಿಕ ನೋಟವಿದೆ. ಸಂಸ್ಕೃತ, ತಮಿಳು, ಹಿಂದಿ ಭಾಷೆಗಳು ಹೇಗೆ ಭಾರತವನ್ನು ಕಾಣಿಸಿಕೊಡಬಲ್ಲವೋ ಹಾಗೆಯೇ ಕನ್ನಡವೂ, ಕನ್ನಡದ ರೀತಿಯ ಹಲವು ದೇಶಭಾಷೆಗಳೂ ಭಾರತವನ್ನು ಕಾಣಿಸಿಕೊಡಬಲ್ಲವೆಂಬ ಸಮಾನ ನಂಬಿಕೆಯನ್ನು ಇದು ಆಧರಿಸಿದೆ. ಅಧಿಕಾರ ಕೇಂದ್ರದ ಅಂಚಿನಲ್ಲೇ ಉಳಿದುಹೋದ ಆದರೆ ಸಾಂಸ್ಕೃತಿಕವಾಗಿ ಅತ್ಯಂತ ಸಮೃದ್ಧವಾದ ತಾತ್ವಿಕ ಗಟ್ಟಿತನವುಳ್ಳ ಹಾಗೂ ಭಾರತದ ತಳಸಮುದಾಯಗಳ ಜೀವನಾಡಿಯಂತಿರುವ ಶ್ರಮಣಧಾರೆಗಳ ಚಿಂತನೆಗಳ ಹಿನ್ನೆಲೆಯಲ್ಲಿ ಈ ಮೀಮಾಂಸೆಯು ತಾತ್ವಿಕ ಆಕೃತಿಗಳನ್ನು ರೂಪಿಸಿಕೊಳ್ಳಲು

ಯತ್ನಿಸಲಾಗಿದೆ. ಹೀಗೆ ರೂಪಿಸಿಕೊಳ್ಳುವ ಸಂದರ್ಭದಲ್ಲಿ ಇಲ್ಲೊಂದು ಸಮಸ್ಯೆಯೂ ಇದೆ. ಅದೇನೆಂದರೆ ಈ ಚಿಂತನಾ ಪ್ರಸ್ತಾನಗಳು ಮುಂದಿಟ್ಟ ಕಾವ್ಯ ಮೀಮಾಂಸೆಯ ಪರಿಕಲ್ಪನೆಗಳು ಚದುರಿಹೋಗಿವೆ. ನಿರಂತರವಾಗಿ ಅವುಗಳನ್ನು ಅವಜ್ಞೆಗೆ ಗುರಿಮಾಡುವ ಸಾಂಸ್ಕೃತಿಕ ರಾಜಕಾರಣದೆದುರು ಅವು ಸೆಣಸಾಡುತ್ತಲೇ ಬಂದಿವೆ. ಭಾರತೀಯ ಶ್ರಮಣಧಾರೆಗಳ ತಾತ್ವಿಕತೆಯನ್ನಾಧರಿಸಿದ ಜೀವನಕ್ರಮಗಳು ತಮ್ಮ ವಿರುದ್ಧದ ಸಾಂಸ್ಕೃತಿಕರಾಜಕಾರಣಕ್ಕೆ ಪ್ರತಿರೋಧವನ್ನೊಡ್ಡುತ್ತಲೇ ಬಂದಿವೆ. ಅಧಿಕಾರದ ಹಪಾಹಪಿಯಿಲ್ಲದೆ ಜನರ ನಡುವೆಯೇ ಉಳಿದುಹೋದ ಕಾರಣಕ್ಕಾಗಿ, ತಮ್ಮನ್ನು ವ್ಯಾಖ್ಯಾನಕ್ಕೊಳಪಡಿಸಿ ಪ್ರತಿಷ್ಠಾಪಿಸಿಕೊಳ್ಳುವ ಜರೂರತ್ತನ್ನು ಅವುಗಳು ಎದುರಾಗದೇ ಹೋದ ಕಾರಣಕ್ಕಾಗಿ, ಎಲ್ಲಕ್ಕಿಂತ ಹೆಚ್ಚಾಗಿ ತಮ್ಮ ನಿಸರ್ಗ ಸಹಜ ಚಹರೆಯನ್ನು ವಿಶೇಷವಾಗಿ ಕಟ್ಟಿಕೊಡುವ ಅಗತ್ಯವಿಲ್ಲ ಎಂದುಕೊಂಡುದರಿಂದಾಗಿ ಸಾಂಸ್ಥಿಕ ಹಿತಾಸಕ್ತಿಯಾಗದೆ ಅಧಿಕಾರಕೇಂದ್ರದಿಂದ  ಈ ಜೀವನಕ್ರಮಗಳು ದೂರವುಳಿದವು. ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ರಾಜಕೀಯ ಅಧಿಕಾರ ಕೇಂದ್ರಗಳಿಂದ ಮಾನ್ಯತೆ ಪಡೆಯಲಾಗದುದರ ಜೊತೆಗೆ ವಿರೋಧಿ ಪ್ರಸ್ಥಾನಗಳು ಪ್ರಚುರಪಡಿಸಿದ ಮಿಥ್ಯಾಮಾರ್ಗಗಳ ಸಾಧಕ–ಬಾಧಕಗಳನ್ನು ಅನಾವರಣಮಾಡುವ ಇಬ್ಬಂದಿ ಒತ್ತಡದಲ್ಲಿ ಅವು ತೊಳಲಾಡುತ್ತಿವೆ. ಸಮೂಹದಲ್ಲಿದ್ದ ಜೀವಪರ ಆಶಯವೇ ಅವುಗಳಿಗೆ ಪ್ರೇರಕ ಚೈತನ್ಯವಾಗಿತ್ತು.  ಹಾಗಾಗಿ ಕಾವ್ಯ–ಕಲೆಗಳಲ್ಲಿ ಸ್ಥಗಿತ ಮೌಲ್ಯಗಳನ್ನು ನಿರಾಕರಿಸಿ ಚಲನಶೀಲರಾಗಲು ಅಗತ್ಯವಾದ ಮೀಮಾಂಸೆಯನ್ನು ಭಾರತೀಯ ಶ್ರಮಣಧಾರೆಗಳು ಒದಗಿಸಿಕೊಡಲು ಸಾಧ್ಯವಾಯಿತು.  ಜೈನ, ಬೌದ್ಧ, ನಾಥ, ಸಿದ್ಧ, ವಚನ, ತತ್ವಪದ ಮುಂತಾದ ಶ್ರಮಣಧಾರೆಗಳು ರೂಪಿಸಿಕೊಟ್ಟಿರುವ ಮೀಮಾಂಸೆಯನ್ನು ನಾವೀಗ ಪುನರ್ ರೂಪಿಸಿಕೊಳ್ಳಬೇಕಾದ ಅಗತ್ಯವಿದೆ.

ಕನ್ನಡ ಭಾಷೆಯನ್ನು ಬಳಸಿಕೊಂಡ ತೀನಂಶ್ರೀಯವರ 'ಭಾರತೀಯ ಕಾವ್ಯ ಮೀಮಾಂಸೆಯಲ್ಲಿ' ನಾವು ಎಚ್ಚರಿಕೆಯಿಂದ ಗಮನಿಸಬೇಕಾದ ಮೂರು ಮಾತುಗಳಿವೆ. 1) ಭಾರತೀಯ ಭಾಷೆಗಳಿಗೆ ಸಂಸ್ಕೃತವೇ ಮೂಲವಸ್ತುವನ್ನು, ರೂಪರೇಖೆಗಳನ್ನು ಒದಗಿಸಿದೆಯೆಂದು ನಂಬಬಹುದು.  ಆ ಮಟ್ಟಿಗಾದರೂ ಸಂಸ್ಕೃತ ಗ್ರಂಥಗಳಲ್ಲಿ ಕಾಣಬರುವ ಕಾವ್ಯ ಮೀಮಾಂಸೆ ನಿಸ್ಸಂದೇಹವಾಗಿ ಭಾರತೀಯ ಕಾವ್ಯ ಮೀಮಾಂಸೆಯೇ ಆಗುತ್ತದೆ. 2) ನಮ್ಮ ಕಾವ್ಯ ಮೀಮಾಂಸೆಯ ತಿರುಳೆಲ್ಲ ರಸ–ಧ್ವನಿ–ಔಚಿತ್ಯ ಎಂಬ ಮಾತುಗಳಲ್ಲಿ ಅಡಗಿದೆ. 3) ಇವುಗಳ ಸಾರವನ್ನು ತಕ್ಕಮಟ್ಟಿಗೆ ವಿಸ್ತಾರವಾಗಿ ಪ್ರತಿಪಾದಿಸುವ ಯಾವ ಆಧುನಿಕ ಗ್ರಂಥವೂ ಕನ್ನಡದಲ್ಲಿ ಇರಲಿಲ್ಲ. ಮೊದಲಿಗೆ ಈ ಗ್ರಂಥವನ್ನು ಪ್ರಮಾಣವನ್ನಾಗಿಸುವ ಹವಣಿಕೆಯನ್ನು ಗಮನಿಸಿ.  ಇಡಿಯಾಗಿ ಭಾರತೀಯತೆಯನ್ನು ವ್ಯಾಖ್ಯಾನಿಸಿಕೊಡುವ ಉದ್ಯೋಗವನ್ನು ಸಂಸ್ಕೃತಕ್ಕೆ ಒಪ್ಪಿಸುವ ನಿಲುವು ನಮ್ಮ ಚರಿತ್ರೆಯಲ್ಲಿ ಎಂದಿಗೂ ಪ್ರಶ್ನಾತೀತವಾಗಿಲ್ಲ. ಇದು ಈ ವಿದ್ವಾಂಸರಿಗೆ ಅರಿವಿಲ್ಲದ ಸಂಗತಿಯೇನಲ್ಲ. ಈ ಮಾತುಗಳಲ್ಲಿ ವ್ಯಕ್ತವಾಗುವ 'ಆತ್ಮೀಯ ಶತೃತ್ವ'ವನ್ನು ಡಿ ಆರ್ ನಾಗರಾಜ್ ಹೀಗೆ ವ್ಯಾಖ್ಯಾನಿಸುತ್ತಾರೆ: "ಆತ್ಮೀಯ ಶತೃತ್ವವೆನ್ನುವುದು ಭಾರತೀಯ ಸಂಸ್ಕೃತಿಯ ಮೂಲಭೂತ ಗುಣಗಳಲ್ಲೊಂದು.



ಭಾರತೀಯ ಸಂಸ್ಕೃತಿಯು ಏಕರೂಪಿಯಾದುದು, ಏಕ ಶಿಲಾಕಾರದ್ದು ಎನ್ನುವುದು ನಮ್ಮ ತೀರಾ ಇತ್ತೀಚಿನ ಅಧ್ಯಯನ ಕ್ರಮಗಳಿಂದ ರೂಪಿತವಾಗಿರುವ ಒಂದು ಕಲ್ಪನೆ. ವಾಸ್ತವದಲ್ಲಿ ಅನೇಕಾನೇಕ ವೈರುಧ್ಯಗಳು ಹಾಗೂ ಸಂಘರ್ಷಗಳು ತುಂಬಿಕೊಂಡಿವೆ. ಅದರ ಬಹುಧಾರೆಗಳಲ್ಲಿ ಪ್ರತಿಯೊಂದು ಕೂಡಾ ಇನ್ನೊಂದನ್ನು ತನ್ನ ವಿರೋಧಿಯಂತೆ ಪರಿಗಣಿಸುತ್ತಾ ಜೊತೆಗೆಯೇ ಆ ಇನ್ನೊಂದನ್ನು ನಿರಂತರವಾಗಿ ಜೀರ್ಣಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿಕೊಂಡಿರುತ್ತದೆ. ಇಂಥದೊಂದು ಪ್ರಕ್ರಿಯೆಯಲ್ಲಿ ಹಿಂಸೆಯೆನ್ನುವುದೂ ಒಂದು ಅನಿವಾರ್ಯ ಅಂಶವಾಗಿರುತ್ತದೆ. ಭಾರತೀಯ ಸಂಸ್ಕೃತಿ ಅಥವಾ ಕನ್ನಡ ಸಂಸ್ಕೃತಿ ಯ ಏಕಾಕೃತಿಯ ಕೃತಕ ಕಲ್ಪನೆಯ ಸುಂದರರೂಪದ ಹಿಂದೆ ಇಂಥ ಹಿಂಸೆಯ ಅನೇಕ ವಿದ್ಯಮಾನಗಳು ಅಡಗಿಕೊಂಡಿರುತ್ತವೆ."

(ಡಿ.ಆರ್. ನಾಗರಾಜ್: ಸಾಹಿತ್ಯ ಕಥನ/ ಪುಟ 12) ಸಂಸ್ಕೃತ

ಮತ್ತು ದೇಶಭಾಷೆಗಳ ನಡುವಿನ ಸಂಘರ್ಷ ಕೇವಲ ಸ್ವಾಭಿಮಾನದ, ಭಾವೋದ್ವೇಗದ ಅಭಿವ್ಯಕ್ತಿಯಲ್ಲ.

ಬದಲಿಗೆ ಅದು ಸಾಂಸ್ಕೃತಿಕ ಸಾಮ್ರಾಜ್ಯಶಾಹಿಯೊಂದರ ಆಕ್ರಮಣಕಾರಿ ನಡೆಯನ್ನು ಪ್ರತಿರೋಧಿಸಿ ನೆಲದ ಬದುಕಿನ ಕ್ರಮಗಳು ಚಾಲ್ತಿಗೆ ಬರಲಿ ಎನ್ನುವ ನಿಸರ್ಗವಿವೇಕದ ಅಭಿವ್ಯಕ್ತಿಯಾಗಿದೆ. ಕನ್ನಡದಲ್ಲಿ ದೊರೆಯುವ ಲಕ್ಷಣ ಗ್ರಂಥವನ್ನು ಕುರಿತ ಒಂದು ಅಧ್ಯಾಯ ಇದಕ್ಕೆ 'ಪರಿಶಿಷ್ಟ'ವಾಗಿ ಬಂದಿದೆ. ತೀನಂಶ್ರೀ ಅವರ ಮಾತು ಹಾಗೂ ಭಾರತೀಯ ಕಾವ್ಯ ಮೀಮಾಂಸೆ ಪುಸ್ತಕ ಮತ್ತು ಶೈಕ್ಷಣಿಕ/ಸಾಂಸ್ಕೃತಿಕ ವಲಯದ ಈ ಯಜಮಾನಿಕೆಯ ಎದುರಿಗೆ ಕುಳಿತ ನಮಗೆ ಅರಿವಾಗಬೇಕಾದ ಸಂಗತಿಯೊಂದಿದೆ. ಅದೇನೆಂದರೆ 'ಸಂಸ್ಕೃತ' ಮತ್ತು 'ಉತ್ತರದ ವಸಾಹತುಶಾಹಿಗೆ ಒಳಗಾದ ನಮ್ಮ ಪಾಲಿಗೆ ವಸಾಹತೋತ್ತರ ಕಾಲವೆಂಬುದಿಲ್ಲ. ಇಲ್ಲಿ ನಡೆದುದೇನೆಂದರೆ ಒಂದು ಸಮೂಹ ಬಾಳುತ್ತಿದ್ದ ಕ್ರಮವನ್ನು ಯಾರೋ ಹೊರಗಿನಿಂದ ಬಂದವರು ವ್ಯಾಖ್ಯಾನಿಸಿ, ವ್ಯಾಖ್ಯಾನ ಮಾದರಿಗಳನ್ನು ಮುಂದಿಟ್ಟದ್ದು. ಈ ವ್ಯಾಖ್ಯಾನಗಳ ಮುನ್ನ ನಮ್ಮದೊಂದು ಸ್ವಂತ ಬಾಳುವೆ ಇತ್ತು. ನಮ್ಮನ್ನು ವ್ಯಾಖ್ಯಾನಿಸಿಕೊಡಿ ಎಂದೇನೂ ನಾವು ಅವರನ್ನು ಕೇಳಿರಲಿಲ್ಲ. ಹಾಗೆ ಕೇಳುವ ಅಗತ್ಯ ಇಂದಿಗೂ ಒದಗಿಲ್ಲ. ಆದರೆ ಈ ವ್ಯಾಖ್ಯಾನಕಾರರಿಗೆ ನಮ್ಮ ಆಗ್ರಹ, ಅಗತ್ಯಗಳು ಬೇಕಿವೆಯೇ? ಅದವರ ರಾಜಕೀಯ ಉದ್ಯೋಗದ ಭಾಗ. ಭಾರತೀಯ ಕಾವ್ಯ ಮೀಮಾಂಸೆಯೆಂದು ಕರೆದುಕೊಂಡಿರುವ ಸಂಸ್ಕೃತ ಕಾವ್ಯ ಮೀಮಾಂಸೆಯು ಈ ವ್ಯಾಖ್ಯಾನ ರಾಜಕಾರಣದ ಭಾಗವಾಗಿದೆ.

ಮೊದಲನೆಯದಾಗಿ ಕನ್ನಡಕ್ಕೆ ತನ್ನನ್ನು ತಾನು ನಿರೂಪಿಸಿಕೊಳ್ಳುವ ಶಕ್ತಿ ಇದೆ. ಕನ್ನಡವಾಗಲೀ, ಕನ್ನಡದ ರೀತಿಯ ಹಲವಾರು ದೇಶಭಾಷೆಗಳಾಗಲೀ ಸಂಸ್ಕೃತಕ್ಕೆ 'ಪರಿಶಿಷ್ಟ'ವಾಗಬೇಕಿಲ್ಲ. ಭಾರತವನ್ನು ಓದಲು ತಮಿಳು, ಸಂಸ್ಕೃತ, ಇಂಗ್ಲಿಷ್, ಹಿಂದಿಗಳಷ್ಟೇ ಅಲ್ಲ, ಕನ್ನಡವೂ ಮಾಧ್ಯಮವಾಗಬಲ್ಲುದು. ಏಕೆಂದರೆ ಭಾರತೀಯ ಜೀವನ ಮೀಮಾಂಸೆಯ ದೇಶವಾಚಿಕೆಗಳೆನ್ನಬಹುದಾದ ಬೌದ್ಧ ಮಹಾಯಾನ, ಅನೇಕ ಸಿದ್ಧ ಪಂಥಗಳು, ವಚನ, ನಾಥಪಂಥ ಕರ್ನಾಟಕದ ಕೊಡುಗೆ. ಭಾರತೀಯ ಜೀವನ ಶೈಲಿಯನ್ನು ರೂಪಿಸಿರುವ ಪ್ರಧಾನ ತಾತ್ವಿಕತೆಗಳು ಇವೇ ಆಗಿವೆ. ಹಾಗಾಗಿ ಕನ್ನಡವನ್ನು ಒಂದು ಮೀಮಾಂಸಾ ವಲಯವನ್ನಾಗಿ ಪರಿಗಣಿಸಲು ಬಲವಾದ ಕಾರಣಗಳಿವೆ. ತಮಿಳು ಶಂಗಂ ಸಾಹಿತ್ಯವು ತಮಿಳುನಾಡಿನಲ್ಲಿ ಐದು ಮೀಮಾಂಸಾವಲಯಗಳನ್ನು ಗುರುತಿಸುತ್ತದೆ. ಇದು ಕೇವಲ ಕನ್ನಡದ ಬಗೆಗಿನ ಅಭಿಮಾನದ ಮಾತಲ್ಲ. ಸಂಸ್ಕೃತಕಾವ್ಯ ಮೀಮಾಂಸೆಯ ಒಡನಾಟದಿಂದ ಕನ್ನಡದ ಜ್ಞಾನವಲಯ ವಿಸ್ತರಿಸಿದೆ ಎನ್ನುವುದನ್ನು ನಿರಾಕರಿಸಬೇಕಿಲ್ಲ. ಕನ್ನಡವು ಮೂಲತಃ ಒಳಗೊಳ್ಳುವ ಗುಣವುಳ್ಳದ್ದು. ಅದು 'ವಸುಧಾವಲಯವಿಲೀನವಿಶದವಿಷಯವಿಶೇಷ. ಆದರೆ ಅದು ಕನ್ನಡದ ತಿಳುವಳಿಕೆ ಅಲ್ಲ. "ಕನ್ನಡ ವೈಯ್ಯಾಕರಣರು ಮತ್ತು ಕಾವ್ಯ ಮೀಮಾಂಸಕರು ಯಾವುದನ್ನು ಕನ್ನಡದ 'ದೇಶಿ' ಎಂದು ಕರೆದರೋ ಅದು ಮಾರ್ಗಕ್ಕೆ

ಒಪ್ಪಿತವಾಗುವ ಹಾಗೂ ಮಾರ್ಗದ ಜೊತೆಗೆ ಹೊಂದಾಣಿಕೆ ಸಾಧಿಸುವ ದೇಶಿಯೆ ಹೊರತು ಅದರಿಂದ ಹೊರಗಿರುವ ದೇಶಿಯಲ್ಲ." (ಡಿ.ಆರ್.ನಾಗರಾಜ್–ಸಂಸ್ಕೃತಿ ಕಥನ, ಪುಟ14). ಸಂಸ್ಕೃತದೊಂದಿಗಿನ ಕೊಳು ಪಡೆಯಲ್ಲಿ ಕನ್ನಡದ ಅರಿವಿನ ವಲಯ ವಿಸ್ತರಿಸಿದೆ ಎಂಬುದು ಪ್ರಶ್ನಿಸಬೇಕಾದ ಸಂಗತಿಯೇನಲ್ಲ. ಆದರೆ ಕನ್ನಡದ ವಿವೇಕವನ್ನು ಸಂಸ್ಕೃತದ ನೆರವಿನಿಂದ ಮಾತ್ರವೇ ಕಂಡುಕೊಳ್ಳಬೇಕೆ? ನಿರ್ವಚನವೆನ್ನುವುದು ಸಾಪೇಕ್ಷವಾಗಿ ನಡೆಯುವ ಪ್ರಕ್ರಿಯೆ. ಆದರೆ ಯಾವುದಾದರೂ ಒಂದರ ಮೂಲಕವೇ ಆಗಲಿ ಎನ್ನುವುದು ವಸಾಹತುಶಾಹಿ ಪ್ರವೃತ್ತಿ. ಇಂತಹ ಅನೇಕ ನಿರ್ವಚನಗಳು ನಮ್ಮ ನಡುವೆ ನಡೆಯುತ್ತಿರುತ್ತವೆ. ವಚನಗಳನ್ನು ಕಾಶ್ಮೀರ ಶೈವದ ಮೂಲಕವೋ, ತಮಿಳಿನ ಶೈವ ಸಿದ್ಧಾಂತದ ಮೂಲಕವೋ ನೋಡಿದಾಗ ಕಂಡದ್ದನ್ನು ಹೇಳುತ್ತಿದ್ದೇವೆಯೇ ಹೊರತು ಈ ನೆಲದ ಬೌದ್ಧ ವಜ್ರಯಾನದ ಮೂಲಕವಾಗಲೀ, ಮಹಾಯಾನದ ಮೂಲಕವಾಗಲೀ, ನಾಥಪಂಥದ ಮೂಲಕವಾಗಲೀ, ಸಿದ್ಧ ಪರಂಪರೆಗಳ ಮೂಲಕವಾಗಲೀ, ಆಜೀವಿಕರ ಮೂಲಕವಾಗಲೀ ನೋಡಲು ಪ್ರಯತ್ನಿಸಿಲ್ಲ. ಇವೆಲ್ಲ ಕನ್ನಡ ನೆಲದಲ್ಲಿ ರೂಪು ಪಡೆದ ತಾತ್ವಿಕತೆಗಳಾದ್ದರಿಂದ, ಇವುಗಳ ಮೂಲಕ ವಚನಗಳನ್ನು ನೋಡಬೇಕಾದ ಒತ್ತಡಗಳು ಒಳಗಿನಿಂದಲೇ ಮೂಡಿವೆ. ವಾಸ್ತವದಲ್ಲಿ ಭಾರತದ ತಾತ್ವಿಕ ನಕಾಶೆಯಲ್ಲಿ ಕರ್ನಾಟಕ ಒಂದು ಆಯಕಟ್ಟಿನ ಭಾಗ. ಭಾರತೀಯತೆಯನ್ನು ರೂಪಿಸುವಲ್ಲಿ ಅದು ಮಹತ್ತರ ಭೂಮಿಕೆಯನ್ನು ನಿರ್ವಹಿಸಿದೆ. ಆದರೆ ಕನ್ನಡವನ್ನು ಕೇವಲ ಪಡೆಯುವ ಭಾಷೆಯಾಗಿ ನೋಡುತ್ತ ಬಂದಿದ್ದೇವೆಯೇ ಹೊರತು ನೀಡುವ ಭಾಷೆಯಾಗಿ ನೋಡಲಿಲ್ಲ.

ಕನ್ನಡದ ವಿವೇಕವನ್ನಷ್ಟೇ ನಮ್ಮಿಂದ ದೂರ ಮಾಡಿಲ್ಲ. ಆ ವಿವೇಕದ ಪ್ರತಿನಿಧಿಗಳನ್ನೂ ನಮ್ಮಿಂದ ದೂರ ಮಾಡಿಡಲಾಗಿದೆ. ಕಾವ್ಯ ಮೀಮಾಂಸೆಯ ವಿಷಯಕ್ಕೆ ಬಂದಾಗ ದೂರದ ಕಾಶ್ಮೀರದವರಾದ ಆನಂದವರ್ಧನ, ಅಭಿನವಗುಪ್ತ, ಭಾಮಹ, ಕುಂತಕ, ವಾಮನ, ಕ್ಷೇಮೇಂದ್ರ, ಮಮ್ಮಟ, ರುಯ್ಯಕ– ಇವರೆಲ್ಲ ನಮಗೆ ಹತ್ತಿರದವರಾಗುತ್ತಾರೆಯೇ ಹೊರತು ಕರ್ನಾಟಕದವರೇ ಆದ ನಾಗಾರ್ಜುನನಾಗಲೀ, ಅಲ್ಲಮನಾಗಲೀ, ಮತ್ಸೇಂದ್ರನಾಥನಾಗಲೀ, ಹರಿಹರನಾಗಲೀ ಕಾಣಿಸುವುದೇ ಇಲ್ಲ. ಇನ್ನು ಪಂಪ ಮತ್ತು ಇತರ ಜೈನ ಕವಿಗಳನ್ನು ರಸ, ಧ್ವನಿ, ಔಚಿತ್ಯಗಳ ಶ್ರೇಷ್ಟ ಮಾದರಿಗಳನ್ನಾಗಿ ಓದಿದ್ದಾರೆಯೇ ಹೊರತು, ಜೈನ ಕಾವ್ಯಮೀಮಾಂಸೆಯ ತಾತ್ವಿಕ ಆಶಯಗಳನ್ನು ಮುಂದಿಡಲು ಬಳಕೆಯಾಗಿಲ್ಲ. ತೀನಂಶ್ರೀ ಅವರು ತಮ್ಮ ಪ್ರಮಾಣಪತ್ರದಲ್ಲಿ ಮುಂದಿಡುವಂತೆ ಮೀಮಾಂಸಾಪ್ರಸ್ಥಾನವನ್ನು ತಕ್ಕಮಟ್ಟಿಗೆ ವಿಸ್ತಾರವಾಗಿ ಪ್ರಸ್ತಾಪಿಸುವ ಕೃತಿಯೊಂದು ಕನ್ನಡದಲ್ಲಿ ಇಲ್ಲವೆಂದ ಮಾತ್ರಕ್ಕೆ ಕನ್ನಡಕ್ಕೆ ಅದರದ್ದೇ ಆದ ಜೀವನ/ಕಾವ್ಯ ಮೀಮಾಂಸೆಯೇ ಇಲ್ಲವೆನ್ನಲಾಗದು. ಇಂಗ್ಲೆಂಡ್ ದೇಶಕ್ಕೆ ಒಂದು ಲಿಖಿತ ಸಂವಿಧಾನವಿಲ್ಲವೆಂದ ಮಾತ್ರಕ್ಕೆ ಆ ದೇಶಕ್ಕೆ ಸಂವಿಧಾನವೇ ಇಲ್ಲವೆನ್ನಲು ಸಾಧ್ಯವಿಲ್ಲ. ಈ ಮೀಮಾಂಸೆ ಅಕ್ಷರದ ಆಕೃತಿಗಳಲ್ಲಷ್ಟೇ ನಂಬಿಕೆ ಇಟ್ಟುದಲ್ಲ. ಅದಕ್ಕೆ 'ತೊಡೆಯುಲಾಗದ ಲಿಪಿಯು ಬರೆಯುಲಾಗದ ಅರಿವಿದೆ. ಆ


ಅರಿವಿನ ಬೆಳಕಿನಲ್ಲಿ ಈ ನೆಲದ ಪರಂಪರೆಗಳಿಂದ ಪ್ರಣೀತವಾದ ಜೀವನಮೀಮಾಂಸೆ, ಕಾವ್ಯಮೀಮಾಂಸೆಗಳೊಡನೆ ದೊಡ್ಡ ಪ್ರಮಾಣದ ಅನುಸಂಧಾನಗಳು ಇನ್ನು ಮುಂದೆ ಸಾಧ್ಯವಾಗಬೇಕು.

ಕನ್ನಡವೆಂಬ ದಕ್ಷಿಣದ ಮೇಲೆ ಉತ್ತರದ ಸವಾರಿ ಇಂದು ನಿನ್ನೆಯದಲ್ಲ. ಹಾಗೆಯೇ ಅದರ ಬಗೆಯೂ ಬಹುತೆರ, ಪರಿಣಾಮವೂ ಬಹುರೂಪಿ. ಉತ್ತರದ ಮೂಲಕ ಭಾರತವನ್ನು ನೋಡುವ, ಕಾಣಿಸಿಕೊಡುವ ಪ್ರಯತ್ನಗಳು ಸ್ಥಳೀಯ ಜೀವನ ಮೀಮಾಂಸೆಯನ್ನು, ಕಾವ್ಯ ಮೀಮಾಂಸಾ ಪ್ರಸ್ಥಾನಗಳನ್ನು, ಕಾವ್ಯ ಪರಂಪರೆಗಳನ್ನು ಅಡಗಿಸಿಬಿಟ್ಟಿರುವುದನ್ನು ಕಾಣಬಹುದು.. ನಾವು ನಮ್ಮ ಕತೆಗಳನ್ನು ನಮ್ಮದು ಅಂತ ಓದೋದನ್ನೂ ಮರೆಯಿಸುವ ಕೆಲಸ ಮಾಡಿವೆ. ಹೀಗಾಗಿ ಕೇಳಿಸಿಕೊಂಡ ಕಾವ್ಯಗಳನ್ನು ಮರೆತು ಓದೋದಕ್ಕೆ ಕೊಟ್ಟವುಗಳನ್ನು ಹಿಡಿದು ಕೂತುಬಿಟ್ಟಿದ್ದೇವೆ. ಉತ್ತರ ಭಾರತ ಕೇಂದ್ರಿತ ರಾಮಾಯಣ ಮಹಾಭಾರತಗಳು ಪಂಪನಿಂದ ಹಿಡಿದು ಕುಮಾರವ್ಯಾಸ, ಕುವೆಂಪುವರೆಗೆ ಸ್ಥಳೀಕರಣ ಪ್ರಕ್ರಿಯೆಗೆ ಒಳಗಾಗಿದ್ದರೂ, ಕಥನಾಂತರಗೊಂಡಿದ್ದರೂ ಆ ಕತೆಗಳು ಕನ್ನಡದ ಮಣ್ಣಿನ ಕತೆಗಳೇ? ಕನ್ನಡದ ಜನಸಮೂಹ ನಿಜವಾಗಿ ಬದುಕಿದ ಕಾವ್ಯಗಳೇ? ಈಗಲಾದರೂ ನಾವು ಈ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಿದೆ. ಹೀಗೆ ಕನ್ನಡದ ಬದುಕಿನ ಕಾವ್ಯಗಳು ಯಾವುವು ಎಂಬ ಈ ಪ್ರಶ್ನೆಗೆ ಉತ್ತರ ಪಡೆಯಲು ನಾವು ಆಶ್ರಯಿಸಬೇಕಾಗಿರುವುದು ನೇರವಾಗಿ ಜನಸಮೂಹದ ಜೀವನ ವಿಧಾನವೇ ಹೊರತು ವಿಶ್ವವಿದ್ಯಾಲಯಗಳನ್ನಲ್ಲ, ಗಮಕಿಗಳನ್ನೂ ಅಲ್ಲ, ಅಕ್ಷರ ಮಾಧ್ಯಮಮವನ್ನೂ ಅಲ್ಲ. ನನಗೆ ತೋಚಿದ ಹಾಗೆ ಕನ್ನಡದ ಬದುಕನ್ನು ಸರಿಯಾಗಿ ನೋಡಿದರೆ ಮಂಟೇಸ್ವಾಮಿ ಕಾವ್ಯ, ಮಲೆಮಾದೇಶ್ವರ ಕಾವ್ಯಗಳನ್ನು ಬೆಂಗಳೂರು ಗ್ರಾಮೀಣ, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳು ಬದುಕುತ್ತಿದ್ದರೆ, ಜುಂಜಪ್ಪನ ಕಾವ್ಯ, ಮೈಲಾರಲಿಂಗನ ಕಾವ್ಯ, ಚಿತ್ರಲಿಂಗನ ಕಾವ್ಯ, ಹಾಲುವುತಪುರಾಣ, ವೀರಭದ್ರಪುರಾಣಗಳನ್ನು, ತುಮಕೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಹಾವೇರಿ, ಕೂಡ್ಲಿಗಿ, ಬಳ್ಳಾರಿ, ಮುಂತಾದ ಜಿಲ್ಲೆಗಳ ಜನ ಬದುಕುತ್ತಿದ್ದಾರೆ. ಚಿದಾನಂದಾವಧೂತನ ಶಾಕ್ತಪಂಥದ ದೇವಿಮಹಾತ್ಮೆ ಈವರೆಗೆ ಕರ್ನಾಟಕದ ಅತಿ ಹೆಚ್ಚು ಜನರಿಂದ ಓದಿಸಿಕೊಂಡಿರುವ ಮತ್ತು ಓದಿಸಿಕೊಳ್ಳುತ್ತಿರುವ ಕಾವ್ಯ. ಹೆಣ್ಣಿನ ಮೂಲಕವೇ ಲೋಕಸಮಸ್ತವನ್ನೂ ಕಾಪಾಡಬಯಸುವ, ನೋಡಬಯಸುವ, ಪುರುಷ ಸರ್ವಾಧಿಕಾರವನ್ನು ನಿರಾಕರಿಸುವ ಈ ಷಟ್ಪದಿ ಕಾವ್ಯ ಕನ್ನಡದಲ್ಲಿ ಅತ್ಯಂತ ಹೆಚ್ಚುಬಾರಿ ಪುನರ್ಮುದ್ರಣಗಳನ್ನು ಕಂಡಿರುವ ಕಾವ್ಯ. ಇನ್ನು ಕನ್ನಡದ ಕಾವ್ಯಗಳಾದ ಮಂಟೇಸ್ವಾಮಿ ಕಾವ್ಯ, ಮಲೆ ಮಾದೇಶ್ವರನ ಕಾವ್ಯ, ಜುಂಜಪ್ಪನ ಕಾವ್ಯ, ಮೈಲಾರಲಿಂಗನ ಕಾವ್ಯ ಮುಂತಾದವುಗಳಿಗೆ 'ಜನಪದ ಕಾವ್ಯ'ಗಳೆಂಬ ಹಣೆಪಟ್ಟಿ ಹಚ್ಚಿ ಅವು ಪ್ರಧಾನ ಮಾರ್ಗ ಕಾವ್ಯಗಳಲ್ಲವೆಂಬ ಮತ್ತು ಉತ್ತರದ ರಾಮಾಯಣ ಮಹಾಭಾರತ ಕಾವ್ಯಗಳೇ ಮಾರ್ಗ ಕಾವ್ಯಗಳೆಂಬ 'ಉತ್ಪಾದಿತ ಒಪ್ಪಿಗೆ'ಯೊಂದನ್ನು ಸಿದ್ಧಪಡಿಸಿ ಚಾಲ್ತಿಯಲ್ಲಿಡಲಾಗಿದೆ. ಇಂದಿಗೂ ಕನ್ನಡನಾಡನ್ನು ವ್ಯಾಪಕವಾಗಿ ಪ್ರಭಾವಿಸಿರುವ ಕವಿಗಳೆಂದರೆ ನಿಜಗುಣ

ಶಿವಯೋಗಿ, ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ. ಇವರ ತತ್ವಪದಗಳನ್ನು ಕರ್ನಾಟಕದ ಉದ್ದಗಲಕ್ಕೂ ಹಾಡಿ ಜೀವಿಸುತ್ತಾರೆ. ಇವೆಲ್ಲ ಅಚಾನಕ್ಕಾಗಿ ನಡೆದಿರುವ ಸಂಗತಿಗಳಲ್ಲ. ಇಲ್ಲಿಯ ಎಲ್ಲ ಆಯ್ಕೆ ಮತ್ತು ನಿರಾಕರಣೆಗಳ ಹಿಂದೆ ಬಲವಾದ ಸಾಂಸ್ಕೃತಿಕ ರಾಜಕಾರಣವಿದೆ. ಹಾಗಾಗಿ ಸಂಸ್ಕೃತ ಕಾವ್ಯ ಮೀಮಾಂಸೆಯ ಅನ್ವಯ ಮತ್ತು ಕನ್ನಡ ಕಾವ್ಯ ಮೀಮಾಂಸೆಯ ಬಗೆಗಿನ ನಿರ್ಲಕ್ಷವು ಈ ರಾಜಕಾರಣದ ಭಾಗವಾಗಿದೆ.

### ಕನ್ನಡ ಮೀಮಾಂಸೆಯ ಶೋಧದ ಚಾರಿತ್ರಿಕ ಬೆಳವಣಿಗೆ

ಹೊಸ ಪರಿಕಲ್ಪನೆಗಳನ್ನು ಅನ್ವಯಿಸಿಕೊಳ್ಳಬೇಕಾದ ಒತ್ತಡಕ್ಕೆ ಇನ್ನೊಂದು ಪ್ರಮುಖ ಕಾರಣವೂ ಇದೆ. ಅದೇನೆಂದರೆ ಭಾರತೀಯ ಶ್ರಮಣಧಾರೆಗಳು ಒದಗಿಸಿಕೊಟ್ಟಿರುವ ಕಾವ್ಯ ಕಲಾ ಮೀಮಾಂಸೆಯ ಪರಿಕಲ್ಪನೆಗಳನ್ನು ಆಚೆಗಿಟ್ಟು ಭಾರತೀಯ



ಮೀಮಾಂಸೆಯೊಂದನ್ನೆ ಅಧಿಕೃತಗೊಳಿಸಿಕೊಳ್ಳುವ ನಿರಂತರ ಇಚ್ಛಾಪೂರ್ವಕ ಪ್ರಯತ್ನವೊಂದು ನಿರ್ದಿಷ್ಟ ಸಾಂಸ್ಕೃತಿಕ ರಾಜಕಾರಣದ ಭಾಗವಾಗಿ ಭಾರತದಲ್ಲಿ ನಿರಂತರವಾಗಿ ಚಾಲ್ತಿಯಲ್ಲಿದೆ. ಭಾರತೀಯ ಶ್ರಮಣಧಾರೆಗಳು ಒದಗಿಸಿಕೊಟ್ಟ ಸಾಂಸ್ಕೃತಿಕ ಎಚ್ಚರ ಮತ್ತು ದಾರ್ಶನಿಕ ಎಚ್ಚರವು ಲೋಕ ಸಾಮರಸ್ಯವನ್ನು ಪೋಷಿಸುವ ಸರಿಯಾದ ದೃಷ್ಟಿಕೋನವನ್ನು ಒದಗಿಸುತ್ತಲೇ ಬಂದಿದೆ. ಇಂದಿಗೂ ಈ ಪ್ರಸ್ಥಾನಗಳು

ಮುಂದಿಟ್ಟ ಕಾವ್ಯ ಮತ್ತು ಕಲಾಮಾದರಿಗಳು ಹಾಗೂ ಮೀಮಾಂಸಾ ಪರಿಕಲ್ಪನೆಗಳು ಮಿಥ್ಯಾದೃಷ್ಟಿಯ ನಿವಾರಣೆಗೆ ಶ್ರಮಿಸುತ್ತಲೇ ಇವೆ. ನಾವು ಈಗಲಾದರೂ ಅವುಗಳನ್ನು ಒದಗಿಸಿಕೊಳ್ಳಬೇಕಾದ ಅಗತ್ಯವನ್ನು ಕಂಡುಕೊಳ್ಳಬೇಕಾಗಿದೆ. ಸುಮಾರು ಅರ್ಧಶತಮಾನದಿಂದ ನಮ್ಮ ಶಿಕ್ಷಣ, ಕಲೆ ಮತ್ತು ಕಾವ್ಯದ ಅಕೆಡೆಮಿಕ್ ಕ್ಷೇತ್ರಗಳು ಕುರುಡು ನಿಷ್ಠೆಯಿಂದ ಭಾರತೀಯ ಕಾವ್ಯ ಮೀಮಾಂಸೆಯನ್ನು ಏಕೈಕವೆಂದು ಅಧಿಕೃತಗೊಳಿಸುವ ಕೆಲಸವನ್ನು ಮಾಡುತ್ತಾ ಬಂದಿವೆ. ಸದ್ಯದ ಅಗತ್ಯವೆಂದರೆ ನಮ್ಮ ನಡುವೆ ಇರುವ ಮತ್ತು ಸಮೂಹ ಒಪ್ಪಿ ಸ್ವೀಕರಿಸಿರುವ ಇತರ ಮೀಮಾಂಸಾ ಪ್ರಸ್ಥಾನಗಳನ್ನು ಒದಗಿಸಿಕೊಳ್ಳುವುದು. ಮತ್ತು ಅವುಗಳ ಮೂಲಕ ನಮ್ಮ ಅಭಿವ್ಯಕ್ತಿಯನ್ನು ವ್ಯಾಖ್ಯಾನಿಸಿಕೊಳ್ಳುವುದು.

## ಶ್ರಮಣ ಪರಂಪರೆಯ ಸಂಬಂಧದ ಎಳೆ

ಬುದ್ಧಪೂರ್ವ ಯುಗದ ಚಾರ್ವಾಕರಿಂದ ಹಿಡಿದು ಶರೀಫನವರೆಗೂ ಗುರುತಿಸಲು ಸಾಧ್ಯವಾಗುವ ವಿಶಿಷ್ಟವಾದ ಪಾರಂಪರಿಕ ಸಾತತ್ಯವೊಂದನ್ನು ಭಾರತೀಯ ದರ್ಶನಗಳ ಇತಿಹಾಸದಲ್ಲಿ ಗುರುತಿಸಬಹುದು. ಶ್ರಮಣ ಪರಂಪರೆಯೆಂದು ವಿಶಾಲಾರ್ಥದಲ್ಲಿ ಕರೆಯಬಹುದಾದ ಇವರಲ್ಲಿ ಪ್ರಾಚೀನ ಪಂಥಗಳಾದ ಆಜೀವಿಕರು, ಚಾರ್ವಾಕರು, ಜೈನರು, ಬೌದ್ಧರು, ನಾಥಪಂಥೀಯರು, ನಾನಾ ರೀತಿಯ ಸಿದ್ಧರು, ನಂತರದ ವಚನಕಾರರು ತೀರಾ ಇತ್ತೀಚಿನ ತತ್ವಪದಕಾರರು ಸೇರುತ್ತಾರೆ. ಕನ್ನಡದ ಬದುಕಿನಲ್ಲಿ ಈ ಪಂಥಗಳು ನಡೆಸಿದ ದೀರ್ಘಕಾಲದ ಯಾನದ ಫಲವಿದೆ. ಇಷ್ಟು ದೀರ್ಘಕಾಲದ ಚಲನೆಯಲ್ಲಿ ಅವುಗಳ ನಡುವೆ ನಡೆದ ಮುಖಾಮುಖಿಯ ಕಾರಣದಿಂದಾಗಿ ಅನೇಕ ರೂಪಾಂತರಗಳು ಸಂಭವಿಸಿವೆ. ಕನ್ನಡದ ಅಸ್ಮಿತೆಯನ್ನು ಈ ಆಕರಗಳು ರೂಪಿಸಿವೆ. ಹಾಗಾಗಿ ಕನ್ನಡ ಕಾವ್ಯ ಮೀಮಾಂಸೆಯ ಪರಿಕಲ್ಪನೆಗಳನ್ನು ಈ ತಾತ್ವಿಕ ಆಕರಗಳ ಮೂಲಕ ರೂಪಿಸಿಕೊಳ್ಳುವುದರಿಂದ ನೇರವಾಗಿ ಕನ್ನಡದ ಬದುಕಿನಿಂದಲೇ ಅವುಗಳನ್ನು ಹೆಕ್ಕಿಕೊಂಡಂತಾಗುತ್ತದೆ.

ಈ ಪರಂಪರೆಯು ಒಂದು ಪಟ್ಟಿನ ವಿವರಣೆಗೆ ಸಿಗುವುದಿಲ್ಲ. ಕೆಲವು ಸಾಮಾನ್ಯ ಲಕ್ಷಣಗಳನ್ನಷ್ಟೇ ಹೇಳಲು ಸಾಧ್ಯ. ಇಂಗ್ಲಿಷ್‌ನಲ್ಲಿ ಶ್ರಮಣರಿಗೆ "ವಾಂಡರರ್ಸ್"9 ಎಂಬ ಪದ ಬಳಸಿದ್ದಾರೆ. ಶ್ರಮಣರನ್ನು ಸೂಚಿಸಲು ಈ ಪದ ಏನೇನೂ ಸಾಲದು. ಕನ್ನಡದಲ್ಲಿ ಅವಧೂತರು, ಜಂಗಮರು ಹತ್ತಿರದ ಪದಗಳು. ಈ ಎರಡೂ ಪದಗಳಿಗೆ ಬೇರೆ ವಿಸ್ತರಣೆಗಳೂ ಇವೆ. ಭಾರತದ ಉದ್ದಗಲಕ್ಕೂ ವ್ಯಾಪಿಸಿರುವ ಈ ಪರಂಪರೆಯಲ್ಲಿ ಚೌರಾಸೀಸಿದ್ಧರೂ ಸೇರುತ್ತಾರೆ. ಶ್ರಮಣ ಪರಂಪರೆಯ ಕೆಲವು ಲಕ್ಷಣಗಳನ್ನು ಸ್ಥೂಲವಾಗಿ ಪಟ್ಟಿ ಮಾಡಬಹುದು. ಹೀಗೆ ಪಟ್ಟಿಮಾಡುವ ವೇಳೆ ಶ್ರಮಣರು ಅಂದರೆ ಏನೇನಲ್ಲ ಎನ್ನುವ ವಿವರಣೆ ಒಂದು ಬಗೆಯಾದರೆ ಅವರು ಏನು ಎನ್ನುವ ವಿವರಣೆ ಇನ್ನೊಂದು ಬಗೆ. ಅವರು ಏನೇನಲ್ಲ ಎನ್ನುವಾಗ, ಶ್ರಮಣರು


ವೇದ ಪ್ರಮಾಣವನ್ನು ಒಪ್ಪದವರು; ಲೋಕ ಜೀವನದ ಮಾಧ್ಯಮದಲ್ಲಿ ಆತ್ಯಂತಿಕ ಸತ್ಯವನ್ನು ಅರಿಯಲಾಗದು ಎಂದ ಬ್ರಾಹ್ಮಣ ಅಧಿಕಾರವನ್ನು ಮಾನ್ಯ ಮಾಡದವರು; ಪೂರ್ವೋಕ್ತ ನಿರ್ಧಾರಗಳಾಗಲೀ, ಪೂರ್ವಸೂರಿಗಳಾಗಲೀ ಪ್ರಶ್ನಾತೀತರೆಂದು ಒಪ್ಪದವರು; ಇತರರು ಮೋಕ್ಷಕ್ಕೆ ಅರ್ಹರಲ್ಲ ತಾವು ಮಾತ್ರ ಅರ್ಹರೆಂಬ ಬ್ರಾಹ್ಮಣ ವಾದವನ್ನು ಒಪ್ಪದವರು; ಬ್ರಾಹ್ಮಣರ ಕರ್ಮಠ ಸಾಂಪ್ರದಾಯಿಕ ಆಚರಣೆಗಳನ್ನು ಗೇಲಿ ಮಾಡುವವರು. ವರ್ಣಾಶ್ರಮ ವ್ಯವಸ್ಥೆ ಶೋಷಣೆಗಾಗಿಯೇ ನಿರ್ಮಿಸಿಕೊಂಡ ಸಾಮಾಜಿಕ ಅನಿಷ್ಟವೆಂದು ಸಾರಿದವರು. ಇದು ನೇತ್ಯಾತ್ಮಕ ವಿವರಣೆಯಾದರೆ, ಅದರ ಇತ್ಯಾತ್ಮಕತೆಯನ್ನು ಹೀಗೆ ಗುರುತಿಸಬಹುದು.

ಶ್ರಮಣರು ಶ್ರಮ ಮೂಲದವರು. ಪ್ರಾಮಾಣಿಕ ಶೋಧನೆಯ ಮೂಲಕ ಲೋಕವಿವರಣೆಯನ್ನು ನೀಡಲು ಪ್ರಯತ್ನಿಸಿದವರು. ನಿಸರ್ಗ ನಿಯಮವನ್ನು ಪ್ರಯತ್ನಪೂರ್ವಕ ಅರಿತುಕೊಳ್ಳಬಹುದೆಂದು ನಂಬಿದವರು. ತಾವು ಪ್ರಯತ್ನಪೂರ್ವಕ ಅರಿತುಕೊಂಡ ನಿಸರ್ಗ ನಿಯಮಗಳನ್ನು ಇಂಥದ್ದೇ ಪ್ರಯತ್ನಗಳ ಮೂಲಕ ಯಾರಾದರೂ ಅರಿತುಕೊಳ್ಳಲು ಸಾಧ್ಯವಿರುವುದರಿಂದಾಗಿ ಅವುಗಳನ್ನು ಒಪ್ಪಬಹುದೆಂದು ಭಾವಿಸಿದವರು. ಅವರ ತಾತ್ವಿಕತೆಗಳಲ್ಲಿ ಅನೇಕ ರೀತಿಯ ಲೋಕ ವಿವರಣೆಗಳಿವೆ. ಒಂದು ಸಾಮಾನ್ಯ ಲಕ್ಷಣವೆಂದರೆ ದೇವರ ನಿಯಂತ್ರಣಕ್ಕಾಗಲೀ ದೈವಸೃಷ್ಟಿಗಾಗಲೀ ಈ ವಿವರಣೆಗಳಲ್ಲಿ ಜಾಗವಿಲ್ಲ. ದೇವತೆಗಳೇನಾದರೂ ಇರುವುದಾದರೆ ಅವರೂ ಮನುಷ್ಯರಂತೆ ಜೀವಿ ಮಾತ್ರವೇ ಆಗಿರುತ್ತಾರೆ. ಶ್ರಮಣ ಪರಂಪರೆಯ ಈ ಮಹಾನ್ ಧಾರೆಯಲ್ಲಿ ಅನಾತ್ಮವಾದೀ ಬೌದ್ಧ ದರ್ಶನವೂ, ಅಲ್ಲಮ ದರ್ಶನವೂ ನಿಸ್ಸಂಶಯವಾಗಿ ಗುರುತಿಸಿಕೊಂಡಿವೆ.

ಶ್ರಮಣ ಪರಂಪರೆಗಳು ಆತ್ಮವಾದೀ ಪರಂಪರೆಗಳ ಎದುರು ನಿಂತುದಕ್ಕೆ ಅನೇಕ ಕಾರಣಗಳಿವೆ. ಆತ್ಮದ ಪರಿಕಲ್ಪನೆ ಹೆಚ್ಚು ತೀವ್ರವಾದಂತೆ, ಅದಕ್ಕೆ ಹೊಂದಿಕೊಂಡ ಹಾಗೆ ಕೆಲವು ಬಗೆಯ ನೈತಿಕ–ಸಾಮಾಜಿಕ ನಿಲುವುಗಳು ರೂಪುಗೊಂಡವು. ಆತ್ಮ ಅವಿನಾಶಿಯಾದ, ಅನಾದಿಯಾದ, ಅನಂತತತ್ವದ ಅಭಿವ್ಯಕ್ತಿಯಾಗಿ ರೂಪುಗೊಂಡಿತು. ವರ್ಣಾಶ್ರಮ ಧರ್ಮದ ಸಾಮಾಜಿಕ ಸಿದ್ಧಾಂತವೊಂದು ಇದನ್ನಾಧರಿಸಿ ಕೆಲವೇ ನಿರ್ದಿಷ್ಟ ಜನಸಮೂಹಕ್ಕೆ ಎಲ್ಲ ಬಗೆಯ ಅಧಿಕಾರವನ್ನು ದಕ್ಕಿಸಿಕೊಡುವ ಉದ್ಯೋಗದಲ್ಲಿ ತೊಡಗಿತು. ವರ್ಣಾಶ್ರಮ ಧರ್ಮವೆನ್ನುವುದು ಆತ್ಯಂತಿಕ ಸತ್ಯವೆನ್ನುವ ರೀತಿಯಲ್ಲಿ ಆತ್ಮವಾದಿಗಳಿಂದ ಪ್ರತಿಪಾದಿತವಾಯಿತು. ಇದರ ನೆಲೆಗಟ್ಟಿನ ಮೇಲೆಯೇ ಸಾಂಪ್ರದಾಯಿಕ ಆಚರಣೆಗಳು, ನೀತಿಗಳು ಹುಟ್ಟಿದುದರಿಂದ ಆತ್ಮವಾದೀ ದರ್ಶನಗಳ ಸಾಮಾಜಿಕ ನೀತಿಗಳು ಕ್ರೂರವಾಗುತ್ತಾ ಹೋದವು. ಇದಕ್ಕೆ ಪ್ರತಿಯಾಗಿ ಬಹು ಸಂಖ್ಯಾತ ಜನಸಮೂಹವನ್ನು ಧಾರ್ಮಿಕ ಕ್ರೌರ್ಯದಿಂದ ಬಿಡುಗಡೆಗೊಳಿಸಿ ಲೋಕದ ಬದುಕನ್ನು ಸಹ್ಯಗೊಳಿಸುವ ಪ್ರಯತ್ನಗಳನ್ನು ಶ್ರಮಣ ಪರಂಪರೆಗಳು ಮಾಡುತ್ತಾ ಬಂದಿವೆ. ಚಾರ್ವಾಕ, ಮಖ್ಖಲಿಗೋಶಾಲರಿಂದ ಹಿಡಿದು ಶರೀಫನವರೆಗೆ ಅವರ ಪ್ರಥಮ ಆದ್ಯತೆ ಲೋಕಜೀವಿಗಳ ಬಿಡುಗಡೆಯೇ ಆಗಿದೆ. ಕನ್ನಡಕಾವ್ಯ ಮೀಮಾಂಸೆಯ

ಮುಖ್ಯಭೂಮಿಕೆಯೇ ಜೀವದಯೆ ಮತ್ತು ಕರುಣಾಮೈತ್ರಿಯನ್ನಾದರಿಸಿದ್ದು. ಈ ತಾತ್ವಿಕತೆಯುನ್ನಾಧರಿಸಿದ ಕನ್ನಡ ಕಾವ್ಯ ಮೀವಾಂಸೆಯುನ್ನು ನಾವೀಗ ಕಂಡುಕೊಳ್ಳಬೇಕಾಗಿದೆ.

ಇದಿಷ್ಟು ಪೂರ್ವಪೀಠಿಕೆಯೊಂದಿಗೆ, ಕನ್ನಡ ಕಾವ್ಯಮೀಮಾಂಸೆಯ ಪ್ರಮುಖ ಪರಿಕಲ್ಪನೆಗಳನ್ನು ಗುರುತಿಸಿಕೊಳ್ಳುವ ಪ್ರಯತ್ನವನ್ನು ಮಾಡಬಹುದು. ಇದೊಂದು ಸಂಕೀರ್ಣವಾದ ಹುಡುಕಾಟ. ಶ್ರಮಣಧಾರೆಗಳನ್ನಾಧರಿಸಿದ ತಾತ್ವಿಕತೆಗೆ ಒಂದು ಮುಕ್ತ ಗುಣವಿರುವುದರಿಂದಾಗಿ ಮತ್ತು ಚಲನಶೀಲತೆಯನ್ನು ಅದು ನಿರಂತರ ಕಾಪಾಡಿಕೊಳ್ಳುವುದರಿಂದಾಗಿ, ಇಂತಹ ಮೀಮಾಂಸಾ ಪ್ರಯತ್ನಗಳಿಗೂ ಅಂತಹ ಮುಕ್ತ ಅಂತ್ಯವಿರಲೇಬೇಕಾಗುತ್ತದೆ. ಇದು ಹೇಳಿಮುಗಿಸಿರುವ ಸಂಗತಿಯಲ್ಲವೆಂಬ ಎಚ್ಚರದೊಂದಿಗೇ ಈ ಪ್ರಯತ್ನ ಸಾಗುತ್ತದೆ. ಜೊತೆಗೆ ಇಲ್ಲಿ ನಡೆದಿರುವ ದೀರ್ಘಕಾಲೀನ ತಾತ್ವಿಕ ಸಂಘರ್ಷ ತುಂಬಾ ಸಂಕೀರ್ಣ ಮತ್ತು ಸೂಕ್ಷ್ಮ ಸ್ತರದಲ್ಲಿ ನಡೆದಿದೆಯಾದ್ದರಿಂದ ಅದನ್ನು ಸರಳೀಕರಿಸಿ ನುಡಿಯಲಾಗದು ಮತ್ತು ಪ್ರತಿ ಸಂಘರ್ಷವೂ ಮಾರಣಾಂತಿಕ ಪರಿಣಾಮಗಳನ್ನೇ ಉಂಟುಮಾಡಿರುವುದರಿಂದ, ಈ ಸಂಗತಿಗಳ ಬಗ್ಗೆ ಮೇಲ್ಪದರದಲ್ಲಿ ಮಾತನಾಡಲಾಗದು. ಶ್ರಮಣಧಾರೆಗಳು



ಮುಂದಿಟ್ಟ ನಿಲುವುಗಳಲ್ಲಿ ಗಂಭೀರವಾದ ಭಿನ್ನತೆಗಳಿದ್ದರೂ ಅನೇಕ ಸಾಮಾನ್ಯ ಸಂಗತಿಗಳ ಬಗೆಗೆ ವ್ಯಕ್ತಪಡಿಸಿರುವ ನಿಲುವುಗಳೂ ಮುಖ್ಯವೆನ್ನಿಸುತ್ತವೆ. ಈ ಧಾರೆಗಳು ಮುಂದಿಟ್ಟ ಕಾವ್ಯಮೀಮಾಂಸೆಯ ಪ್ರಮುಖ ನಿಲುವುಗಳನ್ನು ಹೀಗೆಂದು ಗುರುತಿಸಬಹುದು:

1. **ಪ್ರಕ್ರಿಯಾ ಮೀಮಾಂಸೆಯನ್ನಾಧರಿಸಿದ ಲೋಕವಿವರಣೆ**

**ಅ) ಆದಿ ಅಂತ್ಯಗಳಿಲ್ಲದ ಲೋಕಪ್ರವಾಹ**

**ಆ) ಏಕಮೂಲವಾದದ ನಿರಾಕರಣೆ**


**ಇ) ಸಿದ್ಧ ಸತ್ಯದ ನಿರಾಕರಣೆ – ಸಂಬಂಧಾಧಾರಿತ ಜಗತ್ತು**

**ಈ) ಅನಾತ್ಮವಾದಿ ನಿಲುವು**

2. **ದ್ವೈತಾದ್ವೈತ ನಿರಾಕರಣೆ (ಭಿನ್ನಾಭಿನ್ನ ನಿರಾಕರಣೆ)**
3. **ಪ್ರಮಾಣ ನಿರಾಕರಣೆ**
4. **ಕಾಲ ದೇಶ ನಿರಾಕರಣೆ**
5. **ದೇಹ ಮೀಮಾಂಸೆ**
6. **ನಡೆ–ನುಡಿಯೊಂದಾದ ಕ್ರಿಯಾದ್ವೈತ (ಜ್ಞಾನ ಮೀಮಾಂಸೆಯ ಭಿನ್ನ ಮಾಧ್ಯಮಗಳು)**
7. **ಆಹ್ವಾನ–ವಿಸರ್ಜನೆಯ ಸಹಜಯಾನ**
8. **ದುಃಖದ ಅನುಸಂಧಾನ**

ಇವುಗಳನ್ನು ಕನ್ನಡ ಕಾವ್ಯ ಮೀಮಾಂಸೆಯ ಪ್ರಾಥಮಿಕ ಪರಿಕಲ್ಪನೆಗಳೆಂದುಕೊಳ್ಳಲು ಈವರೆಗಿನ ಕನ್ನಡ ಕಾವ್ಯವೇ ಒತ್ತಾಯಿಸುತ್ತದೆ. ಈ ನಿಲುವುಗಳಿಗೆ ದೀರ್ಘವಾದ ವಿವರಣೆಗಳ ಅಗತ್ಯವಿದೆ. ಈ ಎಲ್ಲ ಪರಿಕಲ್ಪನೆಗಳನ್ನು ಎಲ್ಲ ಶ್ರಮಣ ದರ್ಶನಗಳೂ ಮಾನ್ಯ ಮಾಡುತ್ತವೆ ಎಂದಾಗಲೀ, ಈ ಸ್ವೀಕರಣೆ–ನಿರಾಕರಣೆಗಳು ಖಚಿತವಾಗಿ ನಿರ್ಧರಿತವಾಗಿರುವ ಸಂಗತಿಗಳೆಂದಾಗಲೀ ಹೇಳಲು ಸಾಧ್ಯವಾಗದಿದ್ದರೂ, ಇವು ಶ್ರಮಣಧಾರೆಗಳು ಮುಂದಿಟ್ಟ ಕಾವ್ಯ ಮತ್ತು ಜೀವನ ಮೀಮಾಂಸೆಯ ಪ್ರಮುಖ ನಿಲುವುಗಳೆಂದು ಭಾವಿಸಲು ಸಾಧ್ಯವಿದೆ. ಇವುಗಳ ಒಂದು ಸ್ಥೂಲ ವಿವರಣೆಯನ್ನು ನೀಡಬಹುದು.

ಲೋಕಸತ್ತೆಯನ್ನು ವಿವರಿಸುವ ಎರಡು ಮಾದರಿಗಳಿವೆ. ಒಂದು ಈ ಲೋಕಸಮಸ್ತವೂ ಈಗಾಗಲೇ ಆಗಿ ಇದೆ ಎಂದು ವಿವರಿಸುವುದು; ಇನ್ನೊಂದು ಲೋಕಸಮಸ್ತವೂ ಆಗುತ್ತಲೇ ಇರುವ ಪ್ರಕ್ರಿಯೆ ಎಂದು ವಿವರಿಸುವುದು. ಭಾರತೀಯ ಕಾವ್ಯಮೀಮಾಂಸೆ, ಪ್ಲೇಟೋ–ಅರಿಸ್ಟಾಟಲ್ ಪ್ರಣೀತ ಕಾವ್ಯ ಮೀಮಾಂಸೆಗಳು ಲೋಕವನ್ನು ಆಗಿ



ಇರುವುದೆಂದು ವಿವರಿಸಿದರೆ ಜೈನ, ಬೌದ್ಧ ದರ್ಶನಗಳು ಮತ್ತು ಕೆಲವು ಶ್ರಮಣಧಾರೆಗಳು ಹಾಗೂ ಗ್ರೀಕರಲ್ಲಿ ಹೆರಾಕ್ಲೀಟಸ್ ಲೋಕವನ್ನು ಸದಾ ಆಗುತ್ತಲೇ ಇರುವ ಪ್ರಕ್ರಿಯೆ ಎಂದು ವಿವರಿಸುತ್ತಾರೆ. ಭಾರತೀಯ ಕಾವ್ಯ ಮೀಮಾಂಸೆಯು ಸಮಸ್ತ ಕಾವ್ಯ ಕಲೆಯ ಸೃಷ್ಟಿಯು ಈಗಾಗಲೇ ಇರುವ ಮೂಲದ ಅನುಕರಣೆಯೆಂದೂ, ಅದು ಹೇಗೇ ಇದ್ದರೂ ಮೂಲದ ಶಂಖನಾದಕಿಂತ ಕಿಂಚಿದೂನವೆಂದೂ ಭಾವಿಸುತ್ತದೆ. ಭಾರತೀಯ ಕಾವ್ಯ ಮೀಮಾಂಸೆಯ ನಿರ್ಣಾಯಕ ಅಂಶವೆಂದರೆ ಅದರ ಏಕಮೂಲವಾದ ಅಥವಾ ಅದ್ವೈತವಾದ. ಲೋಕಸಮಸ್ತಕ್ಕೂ ಕಾರಣವಾಗಿರುವ ಆ ಆದಿಸ್ಪಂದವನ್ನು ಆಧರಿಸಿಯೇ ಅದರ ಪ್ರಯಾಣವನ್ನು ಪ್ರಾರಂಭಿಸಿ ಮತ್ತೆ ಅಲ್ಲಿಯೇ ಮುಗಿಸುತ್ತದೆ. ಈ ಅದ್ವೈತದ ಬ್ರಹ್ಮಬಂಧದಿಂದ ಭಾರತದ ಮನಸ್ಸನ್ನು ಇಡಿಯಾಗಿ ಬಂಧಿಸಲಾಗಿದೆ. ಈ ಬ್ರಹ್ಮಬಂಧದಿಂದ ಮೊದಲಿಗೆ ಬಿಡುಗಡೆ ನೀಡಿದವರು ಜೈನರು. ಜೈನರ ಅನೇಕಾಂತವಾದಿ ನಿಲುವಿನ ಕಾವ್ಯಮೀಮಾಂಸೆ ಲೋಕಾನುಸಂಧಾನದ ಅನಂತಸಾಧ್ಯತೆಗಳನ್ನು ತೆರೆಯಿತು. ಜೈನರಿಗೆ ಆದಿಯೂ ಇಲ್ಲ; ಆದಿಕಾವ್ಯವೂ ಇಲ್ಲ. ಹಾಗಾಗಿ ಬ್ರಹ್ಮವಾದಿಗಳಲ್ಲದ, ಅನಾತ್ಮವಾದಿಗಳೂ ಅನೇಕಾಂತವಾದಿಗಳೂ ಆದ ಜೈನರಿಗೆ ಭಾರತೀಯ ಕಾವ್ಯಮೀಮಾಂಸೆಯನ್ನು ಹೇಗೆ ಹೊಂದಿಸಲು ಸಾಧ್ಯ? ಈ ಆದಿ ಆಧಾರಗಳನ್ನು ನಾಥಪಂಥವು “ಸಿಷ್ಟಿ ಉತಪತಿ ಬೇಲೀ ಪ್ರಕಾಸ್ ಮೂಲ ನ ಥೀ ಚಡೀ ಆಕಾಸ್” (ಈ ಸೃಷ್ಟಿಯು ಪ್ರಕಾಶದ ಬಳ್ಳಿಯೊಂದರ ರೀತಿಯಲ್ಲಿ ಉಂಟಾದುದು ಇದಕ್ಕೆ ಮೂಲವೆಂಬುದು ಇಲ್ಲ) ಎಂದರೆ, ಅಲ್ಲಮ: ಆದಿ ಆಧಾರವಿಲ್ಲದಂದು. ಹಮ್ಮು ಬಿಮ್ಮುಗಳಿಲ್ಲದಂದು, ಸಚರಾಚರವೆಲ್ಲ ರಚನೆಗೆ ಬಾರದಂದು ಗುಹೇಶ್ವರಾ ನಿನ್ನ ಶರಣನುದಯಿಸಿದನಂದು... ಎನ್ನುತ್ತಾನೆ. ಮಂಟೇಸ್ವಾಮಿಯ ಲೋಕಸೃಷ್ಟಿಯ ಪುರಾಣವು ಅದನ್ನು ವಿವರಿಸುವ ಪರಿ ಬೇರೆಯೇ ಇದೆ. ಲೋಕಕ್ಕೆ ಆದಿಯೊಂದರ ಶೋಧನೆಯೇ

ಅತಾರ್ಕಿಕ ಎಂಬ ನಿಲುವನ್ನು ಬೌದ್ಧ ಮಧ್ಯಮಮಾರ್ಗಿಗಳು ತಾಳುತ್ತಾರೆ. ಅದನ್ನು ಬೌದ್ಧ ಮಧ್ಯಮಮಾರ್ಗಿ ನಾಗಾರ್ಜುನ ವಿಸ್ತಾರವಾದ ತಾರ್ಕಿಕ ವಿವರಣೆಯೊಂದಿಗೆ ಮುಂದಿಟ್ಟಿದ್ದಾನೆ. ಮುಂದಿನ ಪುಟಗಳಲ್ಲಿ ವಿಸ್ತಾರವಾಗಿ ಈ ಅಂಶವನ್ನು ಚರ್ಚಿಸಲಾಗಿದೆ.

ಜೈನರ ಅನೇಕಾಂತವಾದ ಕನ್ನಡದ ಕಾವ್ಯ ಮೀಮಾಂಸೆಯ ಪ್ರಧಾನ ನಿಲುವುಗಳಲ್ಲಿ ಒಂದು. ಅದು ವಸ್ತುನಿಷ್ಠತೆಯಿಂದ ವ್ಯಕ್ತಿನಿಷ್ಠತೆಯೆಡೆಗಿನ ಮೊದಲ ಪ್ರಯಾಣ. 'ಇಲ್ಲಿ ಪೂರ್ಣಸತ್ಯವೆನ್ನುವುದು ಇಲ್ಲ; ಎಲ್ಲವೂ ಆಂಶಿಕವಾಗಿ ಮಾತ್ರ ಸತ್ಯ' ಎನ್ನುವ ನಿಲುವು ಎಲ್ಲವೂ ಸಿದ್ಧಗೊಂಡು ಇದೆ ಮತ್ತು ಎಲ್ಲದರ ಹಿಂದೆ ಒಂದೇ ಇದೆ ಎನ್ನುವ ಏಕಮೂಲವಾದವನ್ನು ನಿರಾಕರಿಸುತ್ತದೆ. ಲೋಕವನ್ನು ಏಕವಾಗಿ ಗ್ರಹಿಸಲು ಸಾಧ್ಯವಿಲ್ಲವೆಂಬ ನಿಲುವು ಅನೇಕ ಪರಿಣಾಮಗಳನ್ನುಂಟು ಮಾಡುತ್ತದೆ. ಮೊದಲಿಗೆ ಸತ್ಯವೆನ್ನುವುದು ಸ್ವಭಾವತ: ತೀರ ಅನಿರ್ದಿಷ್ಟವಾದದ್ದು ಎಂಬ ಸಂಗತಿಯನ್ನು ಅದು ಮುಂದಿಡುತ್ತದೆ. ಅನೇಕ ದಿಕ್ಕುಗಳಿಂದ ಒಂದು ಸಂಗತಿಯನ್ನು ನೋಡಿದಾಗ ಕಂಡ ನೋಟವು ಪೂರ್ಣ ಸತ್ಯವಲ್ಲ; ಹಾಗೆಯೇ ಅದು ಸುಳ್ಳೂ ಅಲ್ಲ. ಇದರ ಅರ್ಥ, ವಿಶ್ವವನ್ನು ಅನೇಕ ದೃಷ್ಟಿಗಳಿಂದ ನೋಡಬಹುದು ಮತ್ತು ಪ್ರತಿಯೊಂದು ದೃಷ್ಟಿಯೂ ಪ್ರತ್ಯೇಕವಾದ ಪರಿಣಾಮಕ್ಕೆ ಒಯ್ಯುತ್ತದೆ ಎಂದಾಗುತ್ತದೆ. ಇದನ್ನು ಗಮನಿಸಿದಾಗ ಜೈನರ ಒತ್ತು ಪ್ರತ್ಯಯ ಅಥವಾ 'ಪರಿಸ್ಥಿತಿ'ಯನ್ನು ಬದಲಿಸಿ ಪರಿಣಾಮದಲ್ಲಿ ಭಿನ್ನತೆಯನ್ನು ಸಾಧಿಸುವುದರ ಕಡೆಗೆ ಇದೆ ಎಂಬುದು ಅರಿವಿಗೆ ಬರುತ್ತದೆ. ಅವರ ಪ್ರಕಾರ 'ಕಾರಣ' ನಿಶ್ಚಿತವಾದುದು. ಒಂದು ವಸ್ತುವನ್ನು ಕುರಿತು ಹೇಳುವಾಗ ಅದು ದೇಶ, ಕಾಲ, ಸ್ಥಿತಿ ಇವುಗಳಿಗೆ ಸಂಬಂಧಪಟ್ಟಂತೆ ಏನಾಗಿದೆ ಎಂಬುದನ್ನು ನಿರೂಪಿಸಬೇಕು ಎಂದು ಜೈನತಾತ್ವಿಕತೆಯು ಒತ್ತಿಹೇಳುತ್ತದೆ. ಅದು ವಸ್ತುವೊಂದು ಹೇಗೆ ಇದೆ ಎಂಬುದನ್ನು ನಿರಾಕರಿಸಿ ಹೇಗೆ ಕಾಣಿಸುತ್ತದೆ ಎಂಬುದನ್ನು ಮುಂದಿಟ್ಟಿತು. ಅನೇಕಾಂತವಾದವು ಏಕಮೂಲವನ್ನು ನಿರಾಕರಿಸಿತು. ಈ ಮೂಲವಾದದ ನಿರಾಕರಣೆ ನಮ್ಮ ಕಾವ್ಯ ಮೀಮಾಂಸೆಯ ದಿಕ್ಕನ್ನೇ ಬದಲಿಸಿಬಿಡುತ್ತದೆ. ಯಾವ ಕಾವ್ಯಕ್ಕೂ ಮೂಲವೆನ್ನುವುದು ಇರುವುದಿಲ್ಲ ಎಂದಾಗ ನಾವು ಸಹಜವಾಗಿ ಗಲಿಬಿಲಿಗೊಳ್ಳುತ್ತೇವೆ. ಈ ಪ್ರತ್ಯಕ್ಷಪ್ರಮಾಣವನ್ನು ಒಪ್ಪಿಬಿಡುವ ವಿಕಲ್ಪಕ್ಕೆ ನಾವು ಒಳಗಾಗಿರುವುದರಿಂದ ನಮಗೆ ಈ ಆತಂಕವುಂಟಾಗುತ್ತದೆ. ಕೃತಿಯೊಂದು ಅನುಸಂಧಾನದಲ್ಲಿ ಉಂಟಾಗಬೇಕಾದದ್ದು ಮತ್ತು 'ಒಂದು ಕೃತಿ' ಎನ್ನುವುದು ಸಾಧ್ಯವಿಲ್ಲದ್ದು ಎನ್ನುವ ನಿಲುವು ಅದ್ವೈತ ಮತ್ತು ದ್ವೈತದ ಸಾಂಖ್ಯಿಕ ಉಪಾಧಿಯಿಂದ ಒಮ್ಮೆಲೇ ಬಿಡುಗಡೆ ನೀಡುವುದರ ಜೊತೆಗೆ ಲೋಕಾನುಸಂಧಾನದ ಸರಿಯಾದ ದೃಷ್ಟಿಕೋನವನ್ನು ಒದಗಿಸುತ್ತದೆ. ಇದೇ ನಿಲುವನ್ನು ಅಲ್ಲಮಪ್ರಭು "ಪದವನರ್ಪಿಸಬಹುದಲ್ಲದೆ ಪದಾರ್ಥವನರ್ಪಿಸಲಾಗದು, ಓಗರವನರ್ಪಿಸ–ಬಹುದಲ್ಲದೆ ಪ್ರಸಾದವನರ್ಪಿಸಲಾಗದು, ನಿಮ್ಮ ಶರಣರು ಹಿಂದ ನೋಡಿ ಮುಂದನರ್ಪಿಸುವರು" ಎನ್ನುವುದರ ಮೂಲಕ ಮುಂದಿಡುತ್ತಾನೆ.

ಭಾರತೀಯ ಶ್ರಮಣ ಧಾರೆಗಳ ಪ್ರಮುಖ ನಿಲುವಾದ ದೇಹಮೀಮಾಂಸೆ ಮುನ್ನೆಲೆಗೆ ಬಂದು ಚರ್ಚಿತವಾದದ್ದು ಮೊದಲಿಗೆ ಜೈನರಲ್ಲೇ ಇರಬೇಕು. ಮೀಮಾಂಸೆಯ ದೃಷ್ಟಿಯಿಂದಷ್ಟೇ ಅಲ್ಲ, ಜೀವನದೃಷ್ಟಿಯಿಂದಲೂ ಇದೊಂದು ಪ್ರಮುಖ ಹೆಜ್ಜೆ. ಹುಟ್ಟಿದ ತಕ್ಷಣವೇ ಕತ್ತರಿಸಿದ ಕರುಳಬಳ್ಳಿಯನ್ನು ಕೊರಳಿಗೆ ಸುತ್ತಿ ಬ್ರಹ್ಮಕ್ಕೆ ನೇತುಹಾಕಿಬಿಡುವ ಭಾರತೀಯ ಮನಸ್ಸನ್ನು ಈ ಬ್ರಹ್ಮಬಂಧದಿಂದ ಬಿಡುಗಡೆಗೊಳಿಸುವ ಪ್ರಯತ್ನಗಳಿಗೆ ನಿರೀಕ್ಷಿತ ಯಶಸ್ಸಿನ್ನೂ ದೊರಕಿಲ್ಲ. ಅಂತಹ ಮೊದಲ ಪ್ರಯತ್ನ ಆರಂಭವಾದದ್ದು ಜೈನರಿಂದಲೇ. ಭಾರತೀಯ ಮನಸ್ಸನ್ನು ಆಕ್ರಮಿಸಿ ನಿರ್ದೇಶಿಸುತ್ತಿರುವ ಕಾಲ್ಪನಿಕವಾದ 'ಆತ್ಮತತ್ವ' ಮತ್ತು 'ಬ್ರಹ್ಮತತ್ವ'ಗಳನ್ನು ನಿರಾಕರಿಸಿ ವಾಸ್ತವನೆಲೆಯ ದೇಹಮೀಮಾಂಸೆಯನ್ನು ಜೈನರು ಮುಂದಿಟ್ಟರು. ಭಾರತೀಯ ಮನಸ್ಸನ್ನು ಆವರಿಸಿರುವ ಬ್ರಹ್ಮಬಂಧದಿಂದ ಬಿಡುಗಡೆಯ ಮಾರ್ಗವನ್ನು ಮೊದಲು ತೋರಿಸಿಕೊಟ್ಟವರು.

ದ್ವೈತಾದ್ವೈತವನ್ನಾಧರಿಸಿದ ಭಾರತೀಯ ಮೀಮಾಂಸಾ ಪ್ರಸ್ಥಾನಗಳು, ಕಾವ್ಯಮೀಮಾಂಸೆಯಾಗಲೀ, ಸೌಂದರ್ಯಮೀಮಾಂಸೆಯಾಗಲೀ– ನೇರವಾಗಿ ಸಿದ್ಧ ಸತ್ಯದ ಅನುಸಂಧಾನಕ್ಕೆ ತೊಡಗುತ್ತವೆ. ಅವರು ಸತ್ಯವನ್ನು ಕಟ್ಟಬೇಕಾಗಿಲ್ಲ, ಅವರಿಗೆ ಸತ್ಯ ಸಿದ್ಧವಿದೆ. ಅವರು ಎಲ್ಲವನ್ನೂ ವಾಸ್ತವ ಸಂಗತಿಗಳೆಂದೇ ತಿಳಿದು ಪ್ರಾರಂಭಿಸುತ್ತಾರೆ. ಸೃಷ್ಟಿ, ಮನುಷ್ಯ, ಭಾಷೆ ಇತ್ಯಾದಿಗಳೆಲ್ಲ ವಾಸ್ತವ ಎಂಬುದರಿಂದಲೇ ಪ್ರಾರಂಭಿಸಿ ಕಡೆಗೆ ಇವೆಲ್ಲ ಸ್ವಯಂಕೃತ ಎಂದೋ ಪರಕೃತ ಎಂದೋ ತೀರ್ಮಾನಿಸುತ್ತವೆ. ಕಾವ್ಯ, ಕಲೆ ಇತ್ಯಾದಿಗಳು ಈ ಅನುಸಂಧಾನದ ಹಾದಿಗಳಾಗಿದ್ದು, ಅವರವರು ತಲುಪಬೇಕಾದ ಗಂತವ್ಯಕ್ಕೆ ಅವರನ್ನು ಮುಟ್ಟಿಸಿ ಆನಂದವನ್ನೋ ಮುಕ್ತಿಯನ್ನೋ ಅಥವಾ ಎರಡನ್ನೂ ನೀಡಿ ವಿರಮಿಸುತ್ತವೆ. ಶಿಲ್ಪಿಯೊಬ್ಬ ತಾನು ಕಡೆಯಬೇಕಾಗಿರುವ ಶಿಲ್ಪವನ್ನು ಹೊಸದಾಗಿ ಸೃಜಿಸಬೇಕಾಗಿಲ್ಲ. ಅದು ಈಗಾಗಲೇ ಇದೆ. ಅದು ಇರುವ ಶಿಲೆಯಲ್ಲಿ ವ್ಯರ್ಥಭಾಗವನ್ನು ತೆಗೆದುಹಾಕಿದರೆ ಸಾಕು. ಅದು ಅನಾವರಣವಾಗುತ್ತದೆ. ಎಲ್ಲವೂ ಸಿದ್ಧವಾಗಿವೆ. ತೆರೆ ಸರಿಸುವುದಷ್ಟೇ ಕವಿ ಕಲಾವಿದರ ಕೆಲಸ. ಮೀಮಾಂಸೆಯ ಈ ಪ್ರಮುಖ ತಾತ್ವಿಕ ನಿಲುವುಗಳು ಮಧ್ಯಯುಗೀನ ಕನ್ನಡ ಕವಿಗಳನ್ನು ಎದುರಾಗಿವೆ. ಈ ತಾತ್ವಿಕ ಸಂಘರ್ಷವನ್ನು ಕನ್ನಡದಲ್ಲಿ ಶ್ರಮಣಧಾರೆಯ ಕವಿಗಳು ಗಂಭೀರವಾಗಿ ಅನುಸಂಧಾನ ಮಾಡಿದ್ದಾರೆ.

ಕನ್ನಡ ಕಾವ್ಯ ಮೀಮಾಂಸೆಯ ಶೋಧನೆಗೆ ಅಲ್ಲಮಪ್ರಭುವಿನ ತಾತ್ವಿಕತೆ ಒಂದು ಪ್ರಮುಖ ಆಕರವೆಂದು ಭಾವಿಸಲಾಗಿದೆ. ಆದರೆ ಅಲ್ಲಮನ ವಚನಗಳಲ್ಲಿನ ಕಾವ್ಯತತ್ವ ಶೋಧನೆ ಅನೇಕ ತೊಡಕುಗಳನ್ನು ಎದುರಿಸಬೇಕಾಗುತ್ತದೆ. ಅವನ ಮೇಲೆ ಅನೇಕ ಪಂಥಗಳ ತಾತ್ವಿಕ ಪ್ರಭಾವ ಇದೆ. ಪ್ರಧಾನ ಶ್ರಮಣಧಾರೆಗಳಾದ ಬೌದ್ಧ, ಜೈನ, ಚಾರ್ವಾಕ, ಸಿದ್ಧ, ನಾಥ, ಆಜೀವಿಕ ಮುಂತಾದ ಪರಂಪರೆಗಳು ಪ್ರಭಾವ ಬೀರಿವೆ. ಶ್ರಮಣ ಪರಂಪರೆಗಳ ಎಲ್ಲ ಪ್ರಮುಖ ಆಶಯಗಳೂ ಅಲ್ಲಮನಲ್ಲಿ ಪುನರುಕ್ತವಾಗುತ್ತಲೇ ಇರುತ್ತವೆ. ಅವನು ವೇದ ವಿರೋಧಿ, ಶಾಸ್ತ್ರವಿರೋಧಿ, ಪುರಾಣ

ವಿರೋಧಿ, ತರ್ಕವಿರೋಧಿ ಮತ್ತು ಭಕ್ತಿವಿರೋಧಿ ಕೂಡಾ. ಅವನಿಗೆ ಗುರುಹಿರಿಯರ ಹಂಗಿಲ್ಲ; ಮೂಲಮಾತೃಕೆಗಳ ಹಂಗಿಲ್ಲ, ಭಾಷೆಯ ಹಂಗಿಲ್ಲ, ಅನ್ಯಾರ್ಥಶಾಸ್ತ್ರಗಳ ಹಂಗಿಲ್ಲ; ಚರಿತ್ರೆಯ ಹಂಗಿಲ್ಲ. ಆದರೆ ಅಲ್ಲಮ ಕನ್ನಡದ ಮೀಮಾಂಸಾ ಚರಿತ್ರೆಯ ನಟ್ಟ ನಡುವೆ ಇದ್ದಾನೆ. ಅಲ್ಲಮನಂತಹ ದೃಷ್ಟಿಮುಕ್ತ ಅನುಭಾವಿಯ ಮೂಲಮಾತೃಕೆಗಳೆಂದು ನಿರ್ದಿಷ್ಟ ತಾತ್ವಿಕತೆಯನ್ನು ಅಥವಾ ಚಿಂತನಾ ಪ್ರಸ್ಥಾನಗಳನ್ನು ಬೆರಳಿಟ್ಟು ತೋರುವುದು ಸುಲಭವಲ್ಲ. ಸಾಮಾನ್ಯವಾಗಿ ಭಾರತೀಯ ತತ್ವಪರಂಪರೆಗಳನ್ನು ಅವಲೋಕಿಸುವಾಗ ಪರಂಪರೆಗಳ ನಡುವೆ ಎದ್ದು ಕಾಣುವ ಸಮಾನ ಅಂಶಗಳಿಂದಾಗಲೀ, ವಿರೋಧಿ ಅಂಶಗಳಿಂದಾಗಲೀ ಅಂತಹ ಪರಂಪರೆಗಳು ಸಮಾನವೆಂದೋ ವಿರೋಧಿಗಳೆಂದೋ ತೀರ್ಮಾನಕ್ಕೆ ಬರಲಾಗದು. ಏಕೆಂದರೆ ಭಾರತೀಯ ತತ್ವಪರಂಪರೆಯಲ್ಲಿ ನಡೆದಿರುವ ತಾತ್ವಿಕ ಸೆಣಸಾಟ ಹಾಗೆ ಮೇಲ್ಪದರದ್ದಲ್ಲ. ಅವು ಅತ್ಯಂತ ಆಳವಾದವು, ಬಹಳ ಸಾರಿ ಮಾರಣಾಂತಿಕವಾದವು. ಹೀಗಿದ್ದೂ ಅಲ್ಲಮನ ತಾತ್ವಿಕತೆಗೆ ಚಾರಿತ್ರಿಕ ದೃಷ್ಟಿಯಿಂದ ಮೂಲಮಾತೃಕೆಗಳೆಂದು ಎರಡು ಚಿಂತನ ಪ್ರಸ್ಥಾನಗಳನ್ನು ಸೂಚಿಸಬಹುದು. ಡಿ.ಆರ್. ನಾಗರಾಜ್ ಕೂಡ ಎರಡು ಪ್ರಸ್ಥಾನಗಳನ್ನು ಸೂಚಿಸಿ ಒಂದರ ಕಡೆಗೆ ಹೆಚ್ಚು ವಾಲುತ್ತಾರೆ. ಅವುಗಳೆಂದರೆ ಒಂದು: ಶೈವಾಗಮಗಳ ಪ್ರಧಾನ ತಾತ್ವಿಕತೆಯಾದ ಕಾಶ್ಮೀರ ಶಿವಾದ್ವೈತ ಅಥವಾ ಕಾಶ್ಮೀರ ಪ್ರತ್ಯಭಿಜ್ಞೆ; ಇನ್ನೊಂದು ನಾಗಾರ್ಜುನನ ಮಾಧ್ಯಮಕ ತತ್ವ ಅಥವಾ ಶೂನ್ಯವಾದ ಅಥವಾ ಪ್ರತೀತ್ಯ ಸಮುತ್ಪಾದ ತತ್ವ. ಡಿ.ಆರ್. ನಾಗರಾಜ್ ಅವರಿಗೆ ಒಲವಿದ್ದುದು ಪ್ರತ್ಯಭಿಜ್ಞೆಯ ಕಡೆಗೆ ಎಂಬುದು ಅವರ 'ಅಲ್ಲಮಪ್ರಭು ಮತ್ತು ಶೈವಪ್ರತಿಭೆ' ಯಲ್ಲಿ ಗೊತ್ತಾಗುತ್ತದೆ. ಆದರೆ ಅಲ್ಲಮನ ಪ್ರಧಾನ ಭೂಮಿಕೆ ನಾಗಾರ್ಜುನನ ಮಾಧ್ಯಮಿಕ ಪಥವೇ ಎಂದು ಬೇರೊಂದೆಡೆ ಸೂಚನೆಯನ್ನಷ್ಟೇ ನೀಡಿದ್ದಾರೆ. ಒಂದಂತೂ ನಿಶ್ಚಿತ. ರಸ–ಧ್ವನಿ, ಔಚಿತ್ಯ–ಆನಂದಗಳನ್ನೇ ಆತ್ಯಂತಿಕವಾದ ಪರಿಕಲ್ಪನೆಗಳೆಂದುಕೊಂಡ 'ಭಾರತೀಯ ಕಾವ್ಯ ಮೀಮಾಂಸೆಗೆ' ಅಲ್ಲಮನ ವಚನಗಳ ಅನುಸಂಧಾನ ಸಾಧ್ಯವಿಲ್ಲ. ಅಷ್ಟೇ ಅಲ್ಲ, ಯಾವ ವಚನಕಾರನ ಯಾವ ವಚನವೂ ರಸ–ಧ್ವನಿ–ಆನಂದಗಳ ಅಭಿವ್ಯಕ್ತಿಯಾಗಿರಲಿಕ್ಕೆ ಸಾಧ್ಯವಿಲ್ಲ.

ಮೀಮಾಂಸೆಗಳಲ್ಲಿ 'ಇರುವಿಕೆ' ಮತ್ತು 'ಆಗುವಿಕೆ'ಯ ಭಿನ್ನ ನಿರೂಪಣಾ ಕ್ರಮಗಳುಂಟು. ಇವು ಕೇವಲ ವಿವರಿಸಿಕೊಳ್ಳುವ ಕ್ರಮಗಳಲ್ಲ. ಅಧಿಕಾರದ ಸ್ಥಾಪನೆ ಮತ್ತು ನಿರಾಕರಣದ ಉದ್ಯೋಗಗಳೂ ಆಗಿವೆ. ಹೀಗಾಗಿ ಮೀಮಾಂಸೆ ಮೂಲತಃ ಸಾಂಸ್ಕೃತಿಕ ರಾಜಕಾರಣದ ಆಯುಧ. ಅದು ಆಳುವ ಮತ್ತು ಬಾಳುವ ಪ್ರಶ್ನೆಯನ್ನೊಳಗೊಂಡ ಅಧಿಪತ್ಯ ಮತ್ತು ಅಧಿಕಾರ ನಿರಸನದ ರಾಜಕೀಯ ಉದ್ಯೋಗ. ಆದರೆ ಮೀಮಾಂಸೆಯ ಮಾತು ಬಂದಾಗಲೆಲ್ಲಾ ಕನ್ನಡದ್ದೆನ್ನುವ ಮೀಮಾಂಸೆ ಉಂಟೇ? ಅದನ್ನು ಹೇಗೆ ಕಟ್ಟಿಕೊಳ್ಳುವುದು? ಅದರ ಪರಿಕಲ್ಪನೆಗಳು ಯಾವುವು? ಅಲ್ಲಿ ಕಾವ್ಯವನ್ನು ವಿವರಿಸಿಕೊಳ್ಳುವ ಬಗೆ ಹೇಗೆ? ಈ ಪ್ರಶ್ನೆಗಳ ಮೂಲಕ ಕನ್ನಡದ್ದಾದ ಮೀಮಾಂಸೆಯೊಂದರ ಹುಡುಕಾಟವೇ ಅಪ್ರಸ್ತುತವೆಂಬ ಅಪಹಾಸ್ಯವೂ ಮತ್ತೆ ಮತ್ತೆ ಎದುರಾಗುತ್ತದೆ. ಪರಿಭಾಷೆಯ ಸಮುಚ್ಚಯದ ಸಮಕ್ಷಮದಲ್ಲಿ ತನ್ನನ್ನು

ನಿರ್ವಹಿಸಿಕೊಳ್ಳಬೇಕಾದ ಮೀಮಾಂಸಾ ಜಗತ್ತಿಗೆ ತನ್ನದೇ ಪರಿಕಲ್ಪನೆಗಳ ಅಗತ್ಯವೂ ಇದೆ. ಕನ್ನಡಮೀಮಾಂಸೆಯನ್ನು ಅವೇ ಪರಿಭಾಷೆಗಳಿಂದ ಕಟ್ಟಿಕೊಳ್ಳುವುದಾದಲ್ಲಿ ಅದು ಪ್ರತ್ಯೇಕ ಮೀಮಾಂಸೆ ಆಗದು. ಎದುರಾಳಿ ಪರಿಕಲ್ಪನೆಯಾಗುವಲ್ಲಿ ಅವಳಿ ವಿರೋಧಕ್ಕಷ್ಟೇ ಸೀಮಿತವಾಗುತ್ತದೆ. ಆದರೆ ಆಗುವಿಕೆಯ ಪಂಥದ ಕನ್ನಡಮೀಮಾಂಸೆಗೆ ಈ ಮಿತಿಯನ್ನು ದಾಟಿಕೊಳ್ಳುವ ಚೈತನ್ಯವಿದೆ. ಭಿನ್ನ ಪರಿಭಾಷೆಗಳೂ ಇವೆ. ಹೀಗೆ ಒದಗಿಬರುವ ಪರಿಭಾಷೆಗಳೆಲ್ಲವೂ ನಿಸರ್ಗವಿವೇಕದ ಜಗತ್ತಿಗೂ ಸೇರಿವೆ. ಅವು ರಸ, ಧ್ವನಿ, ಅಲಂಕಾರ ಎಂಬ ಪಾರಂಪರಿಕ ಪರಿಕಲ್ಪನೆಗಳಲ್ಲ. ಬದಲಾಗಿ ರೂಪನಿರಾಕರಣೆ, ಪ್ರಮಾಣನಿರಾಕರಣೆ, ಸ್ವಭಾವರಾಹಿತ್ಯ, ಪ್ರತೀತ್ಯಸಮುತ್ಪಾದ, ಭಿನ್ನಾಭಿನ್ನನಿರಾಕರಣೆ, ಧ್ವೈತಾದ್ವೈತನಿರಾಕರಣೆ, ನಿರನ್ವಯೋತ್ಪತ್ತಿವಿನಾಶ, ಆಹ್ವಾನ–ವಿಸರ್ಜನವೇ ಮುಂತಾದ ಚಲನಶೀಲ ಪರಿಕಲ್ಪನೆಗಳು. ಮುಖ್ಯವಾಗಿ ಜಗತ್ತನ್ನು ಸಂಬಂಧದಲ್ಲಿ ಆಗುಗೊಳ್ಳುತ್ತಲೇ ಇರುವ ರಚನೆಯಾಗಿ, ವಿವರಿಸಿಕೊಳ್ಳುವ ಪ್ರಕ್ರಿಯಾ ಮೀಮಾಂಸಯಿದು. ಇಲ್ಲಿ ಆದಿಕಾರಣ ಅಂತ್ಯ ಬಿಂದುಗಳೆರಡೂ ಒಪ್ಪಿತವಲ್ಲ, ಪದ ಮತ್ತು ಪದಾರ್ಥಗಳನ್ನು ಬಂಧಿಸಿಡಲಾಗದೆಂದೇ ನಂಬುವ ಈ ಮಾರ್ಗಕ್ಕೆ ಅರ್ಥವು ಸಾಪೇಕ್ಷವಲ್ಲದೆ, ಸಿದ್ಧವಲ್ಲ.

ಪ್ರಸ್ತುತ ಅಧ್ಯಯನವು ಕನ್ನಡ ಕಾವ್ಯ ಮೀಮಾಂಸೆಯ ಶೋಧನೆಗೆ ಹೊರಟ ಯಾನದ ಮೊದಲ ಹೆಜ್ಜೆಯಾಗಿದೆ.

■





# ಹಕ್ಕಿಗಳು

ಹಿಂದಿ ಮೂಲ : ನಿರ್ಮಲ್ ವರ್ಮಾ
ಕನ್ನಡಕ್ಕೆ : ಡಾ.ಬಸು ಬೇವಿನಗಿಡದ

ರಾತ್ರಿ ಹೊತ್ತು ಹಾಸ್ಟೆಲ್ ಕಾರಿಡಾರಿನಲ್ಲಿ ನಡೆಯುತ್ತಿದ್ದ ಲತಿಕಾ ಒಮ್ಮೆಲೆ ನಿಂತಳು. ಗೋಡೆಗೆ ಆತು ನಿಂತು ಒಂದು ಕ್ಷಣ ಮನದ ಉದ್ವೇಗವನ್ನಾರಿಸಿಕೊಂಡು ಕೈಯಲ್ಲಿದ್ದ ಚಿಮಣಿಯ ಬತ್ತಿಯನ್ನು ತುಸು ಏರಿಸಿದಳು. ಬೆಳಕು ಜಾಸ್ತಿಯಾಗಿ ಮೆಟ್ಟಿಲ ಮೇಲೆ ಅವಳ ರೂಪರಹಿತ ನೆರಳು ಹೊಯ್ದಾಡಿತು.  ಏಳನೆ ನಂಬರಿನ ಕೋಣೆಯಿಂದ ಹುಡುಗಿಯರ ಹರಟೆ, ನಗು, ಚಿಲಿಪಿಲಿ ಸದ್ದು ಸ್ಪಷ್ಟವಾಗಿ ಕೇಳುತ್ತಿದೆ. ಲತಿಕಾ ಬಾಗಿಲು ಬಡಿದಳು, ಒಳಗಿನ ಶಬ್ದ ಒಮ್ಮೆಗೆ ನಿಂತಿತು.

‘ಯಾರದು?’

ಒಳಗಿನಿಂದ ಪ್ರಶ್ನೆ ತೂರಿಬಂದರೂ ಲತಿಕಾ ಏನೂ ಹೇಳದೆ ನಿಂತಿದ್ದಳು, ಕೆಲವು ಕ್ಷಣ ಅವರೊಳಗೆ ಪಿಸುಮಾತು, ಗದ್ದಲ ನಡೆದು ಬೋಲ್ಟ್ ತೆಗೆಯುವ ಸಪ್ಪಳ ಕೇಳಿಸಿತು. ಲತಿಕಾ ಒಳಗೆ ಹೆಜ್ಜೆಯಿಟ್ಟು ನೋಡುತ್ತಾಳೆ, ರೂಮು ಕತ್ತಲಾಗಿದೆ. ಮಿಣಿಮಿಣಿಗುಟ್ಟುತ್ತ ಒನೆದಾಡುತ್ತಿರುವ ತನ್ನ ಚಿಮಣಿಯ ಬೆಳಕಿನಲ್ಲಿ ಹುಡುಗಿಯರ ಮುಖಗಳು ಸಿನಿಮಾ ಪರದೆಯ

ಮೇಲೆ ಸಮೀಪ ಬಂದು ಅಲುಗಾಡದೆ ನಿಂತಂತಹ ನಿಕಟ ಚಿತ್ರಗಳಾದವು.

'ಯಾಕೆ ಕತ್ತಲಲ್ಲಿ ಕುಳಿತಿದ್ದೀರಿ?' ಲತಿಕಾಳ ಮಾತಿನಲ್ಲಿ ಚಾಕುವಿನ ಹರಿತವಿತ್ತು.

'ದೀಪದಲ್ಲಿನ ಎಣ್ಣೆ ಖಾಲಿಯಾಗಿದೆ ಮೇಡಮ್' ಉತ್ತರಿಸಿದ್ದು ಸುಧಾ. ಅದು ಸುಧಾಳ ರೂಮ್ ಆಗಿದ್ದರಿಂದ ಅವಳೆ ಹೇಳಬೇಕಾದದ್ದು ಅನಿವಾರ್ಯವಾಗಿತ್ತು. ಎಲ್ಲಾ ಸೂಟಿಯ ದಿನಗಳಲ್ಲಿ ಹಾಗೂ ಪ್ರತಿದಿನ ಊಟ ಆದ ಮೇಲೆ ಗೆಳತಿಯರೆಲ್ಲ ಸುಧಾಳ ರೂಮಿನಲ್ಲಿ ಕುಳಿತು ಹರಟುವುದು ಸಾಮಾನ್ಯವಾಗಿತ್ತು. ರಾತ್ರಿ ಬಹುಹೊತ್ತಿನವರೆಗೂ ಅವಳ ಕೋಣೆಯಲ್ಲಿ ಗೌಜು–ಗದ್ದಲ ಕೇಳಿಬರುತ್ತಿತ್ತು. ಸುಧಾಳೆ ಈ ಹಾಸ್ಟೆಲ್ಲಿನ ಜನಪ್ರಿಯ ಹುಡುಗಿಯಾಗಿದ್ದಳು. 'ಕರೀಮುದ್ದೀನ್‌ಗೆ ಹೇಳಿ ಚಿಮಣಿ ಎಣ್ಣೆ ತರಿಸಿಕೊಳ್ಳಲು ನೆನಪಾಗಲಿಲ್ಲವೇನು?'

'ಅವನಿಗೆ ಸಾಕಷ್ಟು ಸಲ ಹೇಳಿದೆ ಮೇಡಮ್, ಆದರೆ ಅವನಿಗೆಲ್ಲಿ ನೆನಪಿರುತ್ತದೆ?'

ಸುಧಾಳ ಆ ಮಾತಿಗೆ ಕೋಣೆಯ ಒಂದು ಮೂಲೆಯಿಂದ ಮತ್ತೊಂದು ಮೂಲೆಯತನಕ ನಗುವಿನ ಅಲೆ ಎದ್ದಿತು. ಲತಿಕಾ ಒಳಗೆ ಹೆಜ್ಜೆಯಿಟ್ಟಾಗಿನಿಂದ ಆ ಕೋಣೆಯೊಳಗೆ ತುಂಬಿಕೊಂಡಿದ್ದ, ಹುಡುಗಿಯರ ಉಸಿರು ಕಟ್ಟಿಸುವಂತಿದ್ದ ಶಿಸ್ತು ಮಂಗಮಾಯವಾಯಿತು. ಹಾಸ್ಟೆಲಿನ ಸೇವಕನಾಗಿದ್ದ ಕರೀಮುದ್ದೀನ್ ತನ್ನ ಆಲಸ್ಯತನ ಹಾಗೂ ಕೆಲಸ ತಪ್ಪಿಸಿಕೊಳ್ಳುವ ಜಾಯಮಾನದಿಂದ ಹೆಸರುವಾಸಿಯಾಗಿದ್ದ. ಪೀಳಿಗೆಯಿಂದ ಪೀಳಿಗೆಗೆ ಅವನ ಸುತ್ತಲಿನ ಕಥೆಗಳು ಹರಿದು ಬಂದಿದ್ದವು. ಲತಿಕಾ ಒಮ್ಮೆಲೆ ಏನನ್ನೊ ನೆನಪು ಮಾಡಿಕೊಂಡವಳಂತೆ ತನ್ನ ಕೈಯಲ್ಲಿಯ ದೀಪವನ್ನು ಎತ್ತರಿಸಿ ಅವರನ್ನು ದಿಟ್ಟಿಸಿದರು. ಅವರೆಲ್ಲ ವರ್ತುಲಾಕಾರದಲ್ಲಿ ಒಬ್ಬರ ತೊಡೆಗೆ ಒಬ್ಬರು ಹತ್ತಿಕೊಂಡು ಇಡಿಕಿರಿದು ಕುಳಿತಿದ್ದು ಕಾಣಿಸಿತು. ಎಲ್ಲ ತನಗೆ ಗೊತ್ತಿರುವ ಮುಖಗಳೆ. ಆದರೂ ಮಂಕಾಗಿರುವ ಚಿಮಣಿಯ ಬೆಳಕಿನಲ್ಲಿ ಅವರಲ್ಲಿ ಏನೋ ಬದಲಾವಣೆಯಾದಂತೆ ತೋರಿತು. ಇದೆ ಮೊದಲ ಬಾರಿ ತಾನವರನ್ನು ನೋಡುತ್ತಿರುವ ಹಾಗೆನಿಸಿತು.

'ಜ್ಯೂಲಿ, ನಿನಗೆ ಇಷ್ಟು ರಾತ್ರಿಯಲ್ಲಿ ಈ ಬ್ಲಾಕಿನಲ್ಲೇನು ಕೆಲಸ?' ಬೆಳಕು ಚಿಕ್ಕದಾಗಿ ಅವಳ ಮುಖದ ಮೇಲೆ ಬಿದ್ದಿತು. ಕಿಟಕಿಯ ಕಡೆಗೆ ಪಲ್ಲಂಗದ ಅಂಚಿನಲ್ಲಿ ಕುಳಿತಿದ್ದ ಜ್ಯೂಲಿ ತಲೆತಗ್ಗಿಸಿದಳು.

'ರಾತ್ರಿ ರಜಿಸ್ಟರ್‌ನಲ್ಲಿ ಸಹಿ ಮಾಡಿದೆಯೇನು?'

'ಹೂಂ, ಮೇಡಂ.'

'ಅಂದರೆ?.... ಅಲ್ಲಿ ಸಹಿ ಮಾಡಿದ ಮೇಲೂ ಈ ಬ್ಲಾಕಿನೊಳಗೆ ಬಂದು...' ಲತಿಕಾಳ ಮಾತಿನಲ್ಲಿ ಮೊನಚಿತ್ತು, ತಬ್ಬಿಬ್ಬಾದ ಜ್ಯೂಲಿ ಕಿಡಕಿಯ ಹೊರಗೆ ನೋಡತೊಡಗಿದಳು.

ತಾನು ಈ ಕಾಲೇಜಿಗೆ ಬಂದಾಗಿನಿಂದಲೂ ನೋಡುತ್ತಿದ್ದೇನೆ. ಎಷ್ಟು ಬೈಯ್ದರೂ, ಎಷ್ಟು ಬುದ್ದಿ ಹೇಳಿದರೂ ರಾತ್ರಿಯ ವೇಳಾಪಟ್ಟಿಯನ್ನು ಈ ಹುಡುಗಿಯರು ಪಾಲಿಸುತ್ತಿಲ್ಲ!

'ಮೇಡಮ್, ನಾಳೆಯಿಂದ ರಜೆ ಶುರುವಾಗುತ್ತೆ. ಅದಕ್ಕೆ ಈ ರಾತ್ರಿ ಎಲ್ಲರೂ ಸೇರಿ...' ಸುಧಾಳೆ ಮಾತು ಶುರು ಮಾಡಿ ಮತ್ತೆ ತನ್ನ ಮಾತನ್ನು ಅರ್ಧಕ್ಕೆ ನಿಲ್ಲಿಸಿ ಹೇಮಂತಿ ಕಡೆಗೆ ನೋಡಿ ನಗುತ್ತ ಅಂದಳು: 'ಮೇಡಮ್, ಹೇಮಂತಿ ನಮ್ಮ ಸಲುವಾಗಿ ಹಾಡು ಹಾಡುತ್ತಿದ್ದಾಳೆ, ನೀವೂ ಸ್ವಲ್ಪ ಹೊತ್ತು ಕೂತು ಕೇಳಿ ಮೇಡಮ್.'

ಒಂದು ಕ್ಷಣ ಮುಜುಗರಕ್ಕೊಳಗಾದ ಲತಿಕಾ ತನ್ನಷ್ಟಕ್ಕೆ ಯೋಚಿಸಿದಳು. 'ನಾನೊಬ್ಬಳು ಹರ್ಷ–ಹಂತಕಿಯಾಗಿರುವೆನೆ? ವಿದ್ಯಾರ್ಥಿಗಳ ಸಂತೋಷವನ್ನು ಕೊಲ್ಲುತ್ತಿದ್ದೇನೆಯೆ? ಎಷ್ಟೊ ವರ್ಷಗಳಿಂದ ತಾನು ಈ ಗಿರಿಧಾಮದಲ್ಲಿ ವಾಸಿಸುತ್ತಿದ್ದೇನೆ, ಆದರೂ ಸುತ್ತುಗಟ್ಟಿ ಹೇಗೊ ಹೇಗೊ ಮುಗಿದುಹೋಗುವ ಕಾಲೇಜು ದಿನಗಳು ಮತ್ತು ಬೇಸಿಗೆ ಹಾಗೂ ಚಳಿಗಾಲದ ರಜೆಯ ದಿನಗಳ ನಡುವಿನ ಆ ಕಾಲದ ಕ್ಷಣವನ್ನು



ಗುರುತಿಸಲು ತಾನು ಸೋತು ಹೋಗುತ್ತಿದ್ದೇನೆಯೆ? ಯಾವುದೋ ಪಾಪ ಪ್ರಜ್ಞೆ ಕಾಡಿದಂತಾಗಿ ಕಳ್ಳನಂತೆ ರೂಮಿನಿಂದ ಹೊರಗೆ ಕಾಲಿಡತೊಡಗಿದಳು. ಬಿಗಿದುಕೊಂಡಿದ್ದ ಮುಖದ ನರಗಳು ಸರಳವಾದವು. ಒತ್ತಾಯಪೂರ್ವಕ ನಗೆ ತಂದುಕೊಂಡು 'ಯಾಕೆ ನನ್ನ ಜೊತೆ ಹಿಮಪಾತ ನೋಡಲು ನೀವು ಯಾರೂ ಇರುವದಿಲ್ಲವೇನು?'

ಬರ್ಫ್ ಗುಡ್ಡೆ ಗುಡ್ಡೆಯಾಗಿ ಬೀಳುವುದು ಎಷ್ಟೊಂದು ಸುಂದರವಾಗಿರುತ್ತದೆ ! ಹುಡುಗಿಯರ ದೃಷ್ಟಿಯೆಲ್ಲ ವಾರ್ಡನ್‌ಳ ಮೇಲೆಯೆ ಕೇಂದ್ರಿಕೃತವಾಗಿತ್ತು. ಅವರಲ್ಲೊಬ್ಬಾಕೆ ಕೇಳಿದಳು–'ಯಾಕೆ ಮೇಡಮ್, ಸೂಟಿಗೆ ನೀವು ಊರಿಗೆ ಹೋಗುವದಿಲ್ಲವೇನು?'

'ಇನ್ನೂ ನಿರ್ಧಾರ ಮಾಡಿಲ್ಲ, ಆದರೆ ಬರ್ಫ್ ಬೀಳುವುದನ್ನು ನೋಡುವದೆಂದರೆ ನನಗೆ ತುಂಬಾ ಇಷ್ಟ!'

ಈ ಮಾತನ್ನು ತಾನು ಹೋದ ವರ್ಷವೂ ಆಚೆ ವರ್ಷವೂ ಬಹುಶಃ ಎಷ್ಟೋ ವರ್ಷಗಳಿಂದಲೂ ಹೇಳಿರಬಹುದುದೆಂದು ಲತಿಕಾಳಿಗೆ ಅನಿಸಿತು. ತನ್ನ ಮಾತನ್ನು ನಂಬದವರಂತೆ ತನ್ನನ್ನೆ ಅವರು ಪರೀಕ್ಷೆಗೊಳಪಡಿಸುತ್ತಿದ್ದಾರೆಂದು ಭಾಸವಾಯಿತು. ತಲೆ ಸುತ್ತಿದಂತಾಯಿತು. ಯಾವುದೊ ಮೂಲೆಯಿಂದ ಕಡುಗಪ್ಪ ಮೋಡಗಳ ಗುಂಪು ಎದ್ದು ತನ್ನನ್ನಾವರಿಸಿದಂತಾಯಿತು. ತುಸು ನಕ್ಕು ಹೊರಡುವ ಮುನ್ನ ಜ್ಯೂಲಿಗೆ ಅಂದಳು 'ಜ್ಯೂಲಿ, ನೀನು ನಿನ್ನ ಬ್ಲಾಕಿಗೆ ಹೋಗುವುದಕ್ಕೆ ಮೊದಲು ನನಗೆ ಭೆಟ್ಟಿಯಾಗು, ನಿನ್ನ ಹತ್ತಿರ ಸ್ವಲ್ಪ ಮಾತನಾಡಬೇಕಿದೆ'

'ಗುಡ್‌ನೈಟ್ ಮೇಡಮ್, ಗುಡ್‌ನೈಟ್... ಗುಡ್‌ನೈಟ್...' ಲತಿಕಾ ತನ್ನ ಹಿಂದೆಯೆ ಬಾಗಿಲು ಹಾಕಿಕೊಂಡಳು.

ಕಾರಿಡಾರಿನಿಂದ ಕೆಳಗೆ ಮೆಟ್ಟಿಲು ಇಳಿಯುವುದು ಬಿಟ್ಟು ಲತಿಕಾ ಮೆಟ್ಟಿಲಿನ ಕಂಬಿಗೆ ಒರಗಿ ನಿಂತಳು, ದೀಪದ ಬತ್ತಿಯನ್ನು ಒತ್ತಿ ಹಿಡಿದು ಆರಿಸಿ, ಅಲ್ಲಿಯೆ ಮೂಲೆಯಲ್ಲಿಟ್ಟಳು. ಹೊರಗಡೆ ದಟ್ಟ ಮಂಜು ಮುಸುಕಿತ್ತು. ಪೈನ್ ಮರಗಳ ಮರ್ಮರ ಶಬ್ದ ಒಮ್ಮೆ ಮೃದುವಾಗಿ ಮತ್ತೊಮ್ಮೆ ಹರಿತವಾಗಿ ನಾಳೆಯಿಂದ ಆರಂಭವಾಗಲಿರುವ ರಜೆಯ ದಿನಗಳ ಕಷ್ಟ–ಸುಖಗಳ ಜೊತೆ ಕೂಡಿಕೊಂಡು ಅವಳ ಮನಸ್ಸನ್ನು ದಿಕ್ಕುಗೆಡಿಸಿತ್ತು. ಒಂದು ಕ್ಷಣ ಕಣ್ಣು ಮುಚ್ಚಿದಳು, ತನ್ನ ಕಾಲುಗಳು ತನ್ನ ದೇಹಕ್ಕೆ ಬಿದರಿನ ಊರುಗಂಬಗಳಾದಂತೆ ಅನಿಸಿತು. ಒಳಗಿನ ಕೀಲು, ಸಂಧಿಗಳು ಬಿಚ್ಚಿಕೊಳ್ಳುತ್ತಿವೆ. ತನ್ನ ತಲೆಯಷ್ಟೆ ಅಲ್ಲ, ಹೊರಗಿನ ಇಡೀ ಮಂಜು ಕವಿದ ವಾತಾವರಣವೇ ತಿರುಗುತ್ತಿದೆ ಎಂದು ಭಾಸವಾಯಿತು.

ಕೆಳಗಿನಿಂದ ಮೆಟ್ಟಿಲೇರುತ್ತ ಬಂದ ಧ್ವನಿಗಳು ಲತಿಕಾಳನ್ನು ಅವಳ ಭ್ರಾಂತಿಯಿಂದ ಹೊರಗೆ ತಂದವು. ಲಗುಬಗನೆ ತನ್ನ ಹೆಗಲ ಮೇಲಿನ ಶಾಲನ್ನು ಸರಿಪಡಿಸಿಕೊಂಡು ದೀಪವನ್ನು ಕೈಗೆತ್ತಿಕೊಂಡಳು. ಇಂಗ್ಲೀಷ್ ಹಾಡೊಂದನ್ನು ಗುಣುಗುಣಿಸುತ್ತ ಡಾ.

ಮುಖರ್ಜಿ ಮೇಲ್ಗಡೆ ಬರುತ್ತಿದ್ದ. ಆತನೊಡನೆ ಹ್ಯೂಬರ್ಟನೂ ಇದ್ದ. ಕತ್ತಲಿದ್ದುದರಿಂದ ಅವರು ಸಾವಕಾಶವಾಗಿ ಮೆಟ್ಟಿಲೇರುತ್ತಿದ್ದರು. ಹ್ಯೂಬರ್ಟ್ ತನ್ನ ಕೋಲನ್ನು ಕಷ್ಟಪಟ್ಟು ಇಡುತ್ತ ಬರುತ್ತಿದ್ದ. ಅವರಿಗೆ ಬೆಳಕಾಗಲೆಂದು ಲತಿಕಾ ಕೆಲವು ಹೆಜ್ಜೆ ಕೆಳಗೆ ಇಳಿದಳು, 'ನಮಸ್ಕಾರ ಡಾಕ್ಟರ್, ನಮಸ್ಕಾರ್ ಹ್ಯೂಬರ್ಟ್! 'ನಮಸ್ಕಾರ.' ಹ್ಯೂಬರ್ಟ್‌ನಲ್ಲಿ ಧನ್ಯತೆಯ ಭಾವವಿತ್ತು. ನಡೆಯುವುದು ಆತನಿಗೆ ಯಾವಾಗಲೂ ಕಷ್ಟವೆ, ಮೆಟ್ಟಿಲೇರುವುದು ಎಂದರೆ ಇನ್ನೂ ಕಷ್ಟ. ಈಗ ಆತ ಏದುಸಿರುಬಿಡುತ್ತ ಗೋಡೆಗೆ ಆತು ನಿಂತ. ಸುಸ್ತಾಗಿದ್ದ ಆತನ ಮುಖಭಾವ ತಾಮ್ರದ ಕೆಂಪುಬಣ್ಣಕ್ಕೆ ತಿರುಗಿದ್ದು ದೀಪದ ಬೆಳಕಿನಲ್ಲಿ ಎದ್ದು ಕಾಣುತ್ತಿತ್ತು.

'ನೀನೊಬ್ಬಳೆ ಇಷ್ಟೊತ್ತಿನಲ್ಲಿ ಏನು ಮಾಡ್ತಿದೀ' ಡಾಕ್ಟರ್ ಏದುಸಿರಿನಲ್ಲಿಯೆ ಕೇಳಿದ.

'ಏನಿಲ್ಲ ಡಾಕ್ಟರ್, ಹುಡುಗಿಯರಿಗೆ ಈಗ ಸ್ವಲ್ಪ ಗದರಿ ಬಂದೆ, ಅಲ್ಲ, ಹ್ಯೂಬರ್ಟ್ ಇಲ್ಲೀತನಕ ಪಾದ ಬೆಳೆಸಿದ್ದು ತಿಳಿಯಲಿಲ್ಲ.'

ಹ್ಯೂಬರ್ಟ್ ನಗುತ್ತ ತನ್ನ ಕೋಲಿನಿಂದ ಮುಖರ್ಜಿಯ ತೋಳಿಗೆ ತಿವಿದು 'ಇವನನ್ನೆ ಕೇಳು, ಯಾಕೆ ಕರ್‍ಕೊಂಡು ಬಂದನಂತ.'

'ಲತಿಕಾ, ನಿನ್ನನ್ನು ಆಹ್ವಾನಿಸಲು ಈಗ ರೂಮಿಗೆ ಬರುವವರಿದ್ದೆವು, ಅಷ್ಟರಲ್ಲಿ ನೀನೇ ಭೆಟ್ಟಿಯಾದೆ. ಈ ರಾತ್ರಿ ನನ್ನ ರೂಮಿನಲ್ಲಿ ಒಂದು ಚಿಕ್ಕ ಸಂಗೀತ ಕಚೇರಿಯಿದೆ, ಹ್ಯೂಬರ್ಟ್‌ನು ಚಾಪಿನ್ ಮತ್ತು ಚಾಕೊವಸ್ಕಿ ನುಡಿಸುವವನಿದ್ದಾನೆ. ನಂತರ ಸಣ್ಣ ಪಾರ್ಟಿ, ಕ್ರೀಮ್ ಜೊತೆಗಿನ ಬಿಸಿ ಬಿಸಿ ಕಾಫಿ, ಆ ಮೇಲೆ ಸಮಯ ಸಿಕ್ಕರೆ ಈ ವರ್ಷ ನಾವು ಮಾಡಿದ ಪಾಪಗಳನ್ನು ಹೇಳಿ ಕ್ಷಮೆ ಕೇಳಿಕೊಳ್ಳುವುದು' ಹಾಗೆ ಹೇಳುತ್ತಿರುವಾಗ ಡಾ. ಮುಖರ್ಜಿಯ ಮುಖದಲ್ಲಿ ಸಣ್ಣ ನಗೆಯೊಂದು ಕಂಡೂ ಕಾಣದಂತೆ ಸುಳಿದು ಹೋಯಿತು.

'ಸಂತೋಷ, ಅದರೆ ನನಗೆ ಬರಲು ಆಗದು ಡಾಕ್ಟರ್. ಯಾಕೋ ಮೈಯಲ್ಲಿ ಆರಾಮವಿಲ್ಲ'


'ಆರಾಮವಿಲ್ಲದ ಕಾರಣಕ್ಕಾಗಿಯಾದರೂ ನೀನು ನನ್ನ ಹತ್ತಿರ ತೋರಿಸಲು ಬರಲೇಬೇಕಲ್ಲ' ಎಂದು ಡಾಕ್ಟರ್ ಅವಳ ಕೈ ಹಿಡಿದು ತನ್ನ ರೂಮಿನ ಕಡೆಗೆ ನಡೆದ. ಮುಖರ್ಜಿ ವಾಸವಾಗಿರುವ ಕೋಣೆ ಹಾಸ್ಟೆಲ್ಲಿನ ಮತ್ತೊಂದು ಮೂಲೆಗೆ ಹೊಂದಿಕೊಂಡು ಮಾಳಿಗೆಗೆ ಚಾಚಿತ್ತು. ಚಪ್ಪಟೆ ಮೂಗು, ಸದಾ ಚೈತನ್ಯಸೂಸುವ ಕಣ್ಣುಗಳಿಂದ ಆತ ಅರೆ ಬರ್ಮಿಯನ್ ಆಗಿದ್ದುದು ತಿಳಿದುಬರುತ್ತಿತ್ತು. ಜಪಾನ ದೇಶವು ಬರ್ಮಾದ ಮೇಲೆ ದಾಳಿ ಮಾಡಿದಾಗ ಮುಖರ್ಜಿ ಈ ಗುಡ್ಡಗಾಡಿನ ಪ್ರದೇಶದಲ್ಲಿ ಆಶ್ರಯ ಪಡೆದಿದ್ದನೆಂದು ಕಾಣುತ್ತದೆ. ತನ್ನ ಖಾಸಗಿ ದವಾಖಾನೆಯ ಜೊತೆಗೆ ಈ ಕಾನ್ವೆಂಟ್ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಆರೋಗ್ಯಶಾಸ್ತ್ರ ಹಾಗೂ ಶರೀರವಿಜ್ಞಾನಗಳನ್ನು ಬೋಧಿಸುತ್ತಿದ್ದುದರಿಂದ ಹಾಸ್ಟೆಲಿನಲ್ಲಿಯೇ ಮನೆ ಕೊಡಲಾಗಿತ್ತು. ಬರ್ಮಾದಿಂದ ತಿರುಗಿ ಬರುವಾಗ ದಾರಿಯಲ್ಲಿ ಅವನ ಹೆಂಡತಿ ಸತ್ತಳೆಂದು ಜನ

ಹೇಳುತ್ತಿದ್ದರು. ಆದರೆ ಅದು ಸತ್ಯವೊ ಸುಳ್ಳೊ ಎಂಬುದು ತಿಳಿಯಲಾರದಾಗಿತ್ತು. ಯಾಕೆಂದರೆ ಡಾಕ್ಟರ್ ತನ್ನ ಹೆಂಡತಿಯ ಕುರಿತು ಎಂದೂ ಮಾತನಾಡಿರಲಿಲ್ಲ.

ಆಗೀಗ ಮಾತನಾಡುತ್ತ, 'ನಾನು ಸಾಯುವದರೊಳಗಾಗಿ ಬರ್ಮಾಕ್ಕೆ ಒಂದು ಸಲುವಾದರೂ ಹೋಗಿಬರುತ್ತೇನೆ' ಎಂದು ಹೇಳಿದ್ದು ಅವಳ ನೆನಪಿಗೆ ಬಂದಿತು. ಬರ್ಮಾ ದೇಶದ ನೆನಪು ತೆಗೆದಾಗಲೆಲ್ಲ ಅವನ ಕಣ್ಣುಗಳು ಮಂಜಾಗುತ್ತಿದ್ದವು. ಲತಿಕಾ ಅನೇಕ ಸಲ ಅವನ ಇತಿಹಾಸ ಕುರಿತು ಮಾತನಾಡಬೇಕೆಂದರೂ ಕೂಡ ಮಾತನಾಡಿರಲಾಗಿರಲಿಲ್ಲ. ತನ್ನ ಪೂರ್ವವನ್ನು ಕೆದಕುವುದು, ಈಗಿಲ್ಲದ ಸಂಗತಿಯನ್ನು ಶೋಧಿಸುವುದು ಆತನ ಮನೋಧರ್ಮಕ್ಕೆ ಹಿಡಿಸುತ್ತಿರಲಿಲ್ಲವೆಂದು ತೋರುತ್ತದೆ. ಹಳೆಯ ನೆನಪು ಕಾಡಿದಾಗ ಖಿನ್ನನಾಗಿರುವ ಮುಖರ್ಜಿ ಮತ್ತೆ ಮರುಘಳಿಗೆ ಅದನ್ನು ದೂರ ಮಾಡಿ ಜೋರಾಗಿ ನಗುವನು. ಆದರೆ ಆ ನಗುವಿನಲ್ಲಿ ಮಾತ್ರ ಎಂದಿನ ಜೀವಕಳೆಯಿರುತ್ತಿರಲಿಲ್ಲ.

ಮನೆ ಮತ್ತು ಮಾತೃಭೂಮಿಯ ಸೆಳೆತವನ್ನು ಹೋಗಲಾಡಿಸುವ ಮದ್ದು ಪ್ರಾಯಶಃ ಯಾವ ಡಾಕ್ಟರ್ ಹತ್ತಿರವೂ ಇಲ್ಲ. ಆರ್.ಸಿ.ಸಿ. ಮಾಳಿಗೆಯ ವಿಶಾಲವಾದ ಬಯಲಿನಲ್ಲಿ ಟೇಬಲ್ ಖುರ್ಚಿಗಳನ್ನು ಇಡಲಾಯಿತು. ಮುಖರ್ಜಿ ತನ್ನ ರೂಮಿನಲ್ಲಿ ಕಾಫಿ ತಯಾರಿಸಲಿಕ್ಕೆ ಪರ್ಕೋಲೇಟರ್‌ನಲ್ಲಿ ನೀರು ಸುರುವುತ್ತಿದ್ದ. ನಂತರ ಲಾಟೀನನ್ನು ಬೆಳಗಿಸುತ್ತ 'ಇನ್ನು ಎರಡು–ಮೂರು ವರ್ಷಗಳಲ್ಲಿ ಇಲ್ಲಿಗೆ ಕರೆಂಟ್ ಬರುತ್ತದೆಯೆನ್ನುತ್ತಾರೆ' ಎಂದ.

'ಆ ಮಾತು ಕೇಳಲಿಕ್ಕೆ ಶುರುವಾಗಿ ವರ್ಷಗಳೆ ಸರಿದವು. ಬ್ರಿಟಿಷರು ಕೂಡ ಇಲ್ಲಿ ಕರೆಂಟ್ ಉತ್ಪಾದಿಸುವ ಯೋಜನೆ ಹಾಕಿದ್ದರೆಂದು ಕಾಣುತ್ತದೆ. ಆದರೆ ಏನಾಯ್ತೊ



ಗೊತ್ತಿಲ್ಲ' ಎಂದಳು ಲತಿಕಾ.

ಆಕೆ ತನ್ನ ರೂಮಿನಿಂದ ಎರಡು ಮೇಣದ ಬತ್ತಿ ತಂದು ಟೇಬಲ್ಲಿನ ಎರಡೂ ತುದಿಗೆ ಹಚ್ಚಿಟ್ಟಳು. ಮಾಳಿಗೆಯನ್ನು ತುಂಬಿಕೊಂಡಿದ್ದ ಕತ್ತಲು ಮೇಣಬತ್ತಿಯ ಮಂದ ಬೆಳಕಿನಲ್ಲಿ ಸೊರಗಿ ಸ್ವಲ್ಪ ದೂರ ಕುಳಿತಿತು. ನೀರವವಾದ ಮೌನದಲ್ಲಿ ಬೇಗನೆ ಯಾರೂ ಮಾತು ಪ್ರಾರಂಭಿಸಲಿಲ್ಲ, ಸುತ್ತಲಿನ ಪೈನ್ ಮರಗಳ ನಿಟ್ಟುಸಿರು ಗಾಳಿಯಲ್ಲಿ ಸುಯ್ಯುಗುಡುತ್ತ ಬಂದು ಗುಡ್ಡ –ಬೆಟ್ಟಗಳ ಪ್ರಪಾತಕ್ಕೆ ತಲುಪಿ ಪ್ರತಿಧ್ವನಿಯಾಗುತ್ತಿತ್ತು.

ಮುಖರ್ಜಿಯೆ ಮಾತು ಆರಂಭಿಸಿದ–'ಈ ಸಲ ಹಿಮ ಬೀಳುವುದು ಬೇಗನೆ ಆರಂಭವಾಗಬಹುದು, ನೋಡು ಆಗಲೆ ಎಷ್ಟು ಥಂಡಿ ಅನಿಸುತ್ತದೆ'. ಅವನ ಕೈಯಲ್ಲಿನ ಸಿಗರೇಟ್ ಕೆಂಪು ಬಿಂದುವಿನಂತೆ ಹೊಳೆಯುತ್ತಿತ್ತು.

'ಹುಡುಗಿಯರು ರಜೆಗೆ ಅಂತ ಮನೆಗೆ ಮರಳುವಾಗ ಫಾದರ್ ಎಲ್ಮಂಡ್ ಅವರ ಧರ್ಮೋಪದೇಶದ ಅವಶ್ಯಕತೆ ಯಾಕೊ ನನಗಂತೂ ಗೊತ್ತಾಗುತ್ತಿಲ್ಲ, ಪ್ರಿನ್ಸಿಪಾಲ್ ಮಿಸ್ ವುಡ್‌ಳ ನಾಟಕೀಯತೆ ಜಾಸ್ತಿಯಾಯ್ತು' ಎಂದು ಹ್ಯೂಬರ್ಟ್ ಹೇಳಿದ.

'ಕಳೆದ ಐದು ವರ್ಷಗಳಿಂದ ನಾನು ಅವನ ಭಾಷಣ ಕೇಳುತ್ತಿದ್ದೇನೆ. ಅದರಲ್ಲಿ ಒಂದೇ ಒಂದು ಶಬ್ದವೂ ಬದಲಿಯಾಗಿಲ್ಲ' ಡಾಕ್ಟರ್‌ರಿಗೆ ಫಾದರ್ ಎಲ್ಮಂಡ್ ಎಂದರೆ ಸ್ವಲ್ಪವೂ ಆಗುತ್ತಿರಲಿಲ್ಲ.

ಪ್ರತಿವರ್ಷ ಬೇಸಿಗೆ ಮತ್ತು ಚಳಿಗಾಲದ ಸೂಟಿ ಬಿಡುವ ಮುನ್ನ ಚರ್ಚಿನ ಈ ಧರ್ಮೋಪದೇಶ ಕೇಳುವುದು ಮಕ್ಕಳಿಗೆ, ಶಿಕ್ಷಕರಿಗೆ ಅನಿವಾರ್ಯವಾಗಿತ್ತು. ಚರ್ಚಿನ ಪ್ರಾರ್ಥನಾಮಂದಿರದ ಉಪದೇಶದ ನಂತರ ಮಧ್ಯಾಹ್ನ ಎಲ್ಲರೂ ಪಿಕ್‌ನಿಕ್‌ಗೆ ಅಂತ ಹೋಗುತ್ತಿದ್ದರು.

ಲತಿಕಾ ಮುಂದಕ್ಕೆ ಸರಿದು ಕಪ್‌ಗಳಿಗೆ ಕಾಫಿ ಸುರುವಿ ಕೊಟ್ಟಳು. ತಾನು ಮೊದಲು ಈ ಶಾಲೆಗೆ ಬಂದಾಗಿನ ದಿನಗಳನ್ನು ಆಕೆ ನೆನಪಿಸಿಕೊಂಡಳು. ಪ್ರಥಮ ವರ್ಷ ಆಕೆ ಪಿಕ್‌ನಿಕ್ ನಂತರ ಡಾಕ್ಟರ್ ಜೊತೆಗೆ ಕ್ಲಬ್‌ಗೆ ಹೋಗಿದ್ದಳು. ಡಾಕ್ಟರರ ಜೊತೆಗೆ ಬಾರ್‌ಗೆ ಮತ್ತು ಆ ಹೊಟೇಲಿನಲ್ಲಿಯ ಡಾನ್ಸ್‌ರೂಮಿಗೆ ಪ್ರವೇಶ ಮಾಡಿದ್ದಳು, ನೃತ್ಯಶಾಲೆ ಕುಮಾಂವ್ ರೆಜಿಮೆಂಟಿನ ಹಲವು ಮಿಲಿಟರಿ ಅಧಿಕಾರಿಗಳಿಂದ ತುಂಬಿತ್ತು. ಸ್ವಲ್ಪ ಹೊತ್ತು ಬಿಲಿಯರ್ಡ್ಸ್ ಆಟವನ್ನು ನೋಡಿದ ನಂತರ ಅಲ್ಲಿಯ ಗ್ರಂಥಾಲಯ ಕಡೆಗೆ ದೃಷ್ಟಿ ಹರಿಸಿದ್ದಳು. ಅಷ್ಟರಲ್ಲಿ ಮುಖರ್ಜಿ ಹಿಂದಿನಿಂದ ಬಂದು 'ಲತಿಕಾ, ಇವರು ಗಿರೀಶ್ ನೇಗಿ ಅಂತ...' ಅವನು ಇನ್ನು ಏನೋ ಹೇಳುವವನಿದ್ದ, ಆದರೆ ಅಷ್ಟರಲ್ಲಿ ಬಿಲಿಯರ್ಡ್ಸ್ ರೂಮಿನಿಂದ ಬಂದ ಗೆಲುವಿನ ಸದ್ದು, ಕೇಕೆ, ನಗು, ಹರಟೆ ಇವುಗಳ ಮಧ್ಯೆ ಮುಂದಿನ ಮಾತು ಹೇಳಲಿಲ್ಲ. ಯಾವುದೋ ಪುಸ್ತಕ ಹಿಡಿದಿದ್ದ ಗಿರೀಶ್ ಕಿಡಕಿಯ ಹೊರಗೆ ನೋಡುತ್ತಿದ್ದವನು ಡಾಕ್ಟರ್ ಕಡೆಗೆ ತಿರುಗಿ 'ಹಲೋ, ಡಾಕ್ಟರ್' ಎಂದ. ಅವನು ತಿರುಗಿದ ಆ ಕ್ಷಣದಲ್ಲಿ ಲತಿಕಾಳ ಕೈ



ಕಂಪಿಸಿತಾದರೂ ಯಾಕೆ? ಗುಟುಕರಿಸುತ್ತಿದ್ದ ಬಿಸಿ ಬಿಸಿ ಕಾಫಿ ಸ್ವಲ್ಪ ಸೀರೆಯ ಮೇಲೆ ಬಿದ್ದು ಕಲೆಯಾಯಿತು. ಅವಳ ಮುಖ ಕಳೆಗುಂದಿದ್ದು ಆ ಕತ್ತಲಿನಲ್ಲಿ ಯಾರಿಗೂ ಕಾಣಿಸಲಿಲ್ಲ.

ಜೋರಾದ ಗಾಳಿಗೆ ಮೇಣಬತ್ತಿಯ ದೀಪ ಹೊಯ್ದಾಡುತ್ತಿತ್ತು. ಕಾಥೋಡಾರ್ಮ್ ರಸ್ತೆಯಲ್ಲಿ ಸಾಗುತ್ತಿದ್ದ ಉತ್ತರ ಪ್ರದೇಶ ರೋಡವೇಜ್ ಸಂಸ್ಥೆಯ ಕೊನೆಯ ಬಸ್ಸು ತನ್ನ ನೆರಳುಗಳನ್ನು ಏರಿಳಿತಿನ ದಾರಿಯಲ್ಲಿ ಮನೆಗೆ ಹಚ್ಚುತ್ತಿತ್ತು. ಕೆಲ ಸಮಯದ ನಂತರ ಅದೂ ಮರೆಯಾಯಿತು.

'ಲತಿಕಾ, ರಜೆಯಲ್ಲಿ ಇಲ್ಲಿಯೇ ಇರುತ್ತಿಯೇನು?' ಡಾಕ್ಟರ್ ಕೇಳಿದ.

ಆ ಪ್ರಶ್ನೆ ಹೊರಗಿನ ವಾತಾವರಣದ ಮಂಜಿನಲ್ಲಿ ತುಸುಹೊತ್ತು ನಿಂತಂತಾಯಿತು. ಹ್ಯೂಬರ್ಟ್ ನುಡಿಸುತ್ತಿದ್ದ ಪಿಟೀಲಿನ ನಾದ ಶಾಂತ ನದಿಯ ಮೇಲಿನ ಗಾಳಿಯ ತೆರೆಯಂತೆ ಕತ್ತಲಲ್ಲಿ ಹರಿದು ಬಂದು ಕಾಣದಂತಿರುವ ಯಾವುದೋ ತೀರ ಮುಟ್ಟುತ್ತಿತ್ತು. ಎಲ್ಲಿಂದಲೊ ಬಂದ ಪಕ್ಷಿಗಳು ಹಿಮಪರ್ವತಗಳ ತುದಿಯ ಮೇಲೆ ಕುಳಿತು ಗೊತ್ತಿರದ ನಾಡಿಗೆ ಹೊರಟಿರುವಂತಹ ಭಾವನೆ ಲತಿಕಾಳಲ್ಲಿ ತುಂಬಿಕೊಂಡಿತು. ಅಂಕುಡೊಂಕಾಗಿ ಚಲಿಸುತ್ತ ಎಡಕ್ಕೂ ಬಲಕ್ಕೂ ತಿರಗುತ್ತ ಹಕ್ಕಿಗಳು ಪರ್ವತಗಳ ಒಂಟಿತನದಿಂದ ದೂರ ದೂರಕ್ಕೆ ಚಲಿಸುವದನ್ನು ಲತಿಕಾ ಇತ್ತೀಚೆಗೆ ಕಿಟಕಿಯಲ್ಲಿ ನೋಡಿಯೆ ನೋಡುತ್ತಿದ್ದಳು.

ಲತಿಕಾ ಕೂತಲ್ಲಿಯೆ ತೂಕಡಿಸುತ್ತಿದ್ದಳು, ಡಾ. ಮುಖರ್ಜಿಯ ಕೈಯಲ್ಲಿಯ ಸಿಗರೇಟು ಕತ್ತಲಲ್ಲಿ ಮೌನವಾಗಿ ಉರಿಯುತ್ತಿತ್ತು. ಅವಳಿಗೆ ವಯಸ್ಸಾಗುತ್ತ ಬಂತೇನೋ ಎಂಬ ವಿಚಾರ ಒಂದು ಸಲ ಅವರ ಮನಸ್ಸಿನಲ್ಲಿ ಹಾದು ಹೋಯಿತು. ಲತಿಕಾ ಕಣ್ಣು ಮುಚ್ಚಿಕೊಂಡಿರುವಂತೆಯೆ ಯಾವ್ಯಾವುದೊ ಚಿತ್ರಗಳನ್ನು ತನ್ನಿದಿರು ಕಾಣತೊಡಗಿದ್ದಳು. ಶಾಲೆಯ

ಪ್ರಿನ್ಸಿಪಾಲಳಾಗಿದ್ದ ಹಲ್ಲಿಲ್ಲದ, ಗಲ್ಲ ಒಳಗೆ ಬಿದ್ದ ಮುದುಕಿ ಮಿಸ್ ವುಡ್‌ಳ ಚಿತ್ರ ಕಂಡೊಡನೆ ಲತಿಕಾ ಒಂದು ಕ್ಷಣ ಹೆದರಿದಳು. ಸ್ವಲ್ಪ ಕೆರಳಿಸಿದರೂ ಸಾಕು ಸಿಟ್ಟಿನಿಂದ ಕುದಿಯುವ, ಶಾಲೆಯಲ್ಲಿ ಎಲ್ಲರ ಮೇಲೆ ಸಿಕ್ಕಾಪಟ್ಟೆ ಚೀರಾಡುವ, ಕಣ್ಣು ಗುಳಿಬಿದ್ದಿರುವ ಪ್ರಿನ್ಸಿಪಾಲಳಂತೆ ತಾನಾಗುವೆನೋ ಎಂಬ ಹೋಲಿಕೆಗೆ ಆಕೆಯ ಮೈಯಲ್ಲಿ ಚೇಳು ಹರಿದಂತಾಯಿತು. ಏನೋ ಹೊಲಸು ಮುಟ್ಟಿದಂತೆ ಸರಕ್ಕನೆ ಆ ಯೋಚನೆಯಿಂದ ಹಿಂದೆ ಸರಿದಳು. ಕೆಲವು ತಿಂಗಳುಗಳ ಹಿಂದೆ ಹ್ಯೂಬರ್ಟ್ ಕೊಟ್ಟಿದ್ದ ಪ್ರೇಮಪತ್ರ ಕೂಡ ನೆನಪಾಯಿತು. ಆತನ ಹುಚ್ಚುತನಕ್ಕೆ ನಗು ಬಂದಿತ್ತು. ತುಂಬ ಭಾವುಕವಾದ, ತನ್ನ ಅನುಕಂಪ ಬಯಸುವ ಪತ್ರ ಅದು. ಏನೇನೊ ಬರೆದಿದ್ದ, ತನಗಂತೂ ಅರ್ಥವಾಗುತ್ತಿಲ್ಲ, ದೇವರಿಗೆ ತಿಳಿಯುತ್ತದೆಯೋ ಇಲ್ಲವೊ ಗೊತ್ತಿಲ್ಲ, ಹ್ಯೂಬರ್ಟ್‌ನ ಹುಡುಗಾಟ ತಮಾಷೆ ಎನಿಸಿದರೂ ಒಂದು ರೀತಿಯ ಅವ್ಯಕ್ತ ಆನಂದವೂ ಆಕೆಯ ಮನಸ್ಸಿನಲ್ಲಿತ್ತು. ಗಂಡಸರನ್ನು ಸೆಳೆಯಬಲ್ಲ ಆಕರ್ಷಣೆ ತನ್ನಲ್ಲಿ ಇನ್ನೂ ಕಡಿಮೆಯಾಗಿಲ್ಲವೆಂಬುದೆ ಅವಳ ಸಂತೋಷಕ್ಕೆ ಕಾರಣವಾಗಿತ್ತು. ಹ್ಯೂಬರ್ಟ್‌ನನ್ನು ಕರೆದು ತನ್ನ ಬಗ್ಗೆ ಅವನು ಹೊಂದಿದ ತಪ್ಪು ಅಭಿಪ್ರಾಯವನ್ನು, ಭ್ರಾಂತಿಯನ್ನು ದೂರ ಮಾಡಬಹುದಾಗಿದ್ದಿತು. ಆದರೆ ಯಾಕೊ ಅವಳು ಆ ಕೆಲಸಕ್ಕೆ ಮುಂದಾಗಲಿಲ್ಲ. ಅದು ವಿಷಯವನ್ನು ತನ್ನೊಳಗೆ ಮುಚ್ಚಿಕೊಳ್ಳುವ ಪರಿಯಿಂದಲೂ ಹ್ಯೂಬರ್ಟ್‌ನ ಭ್ರಾಂತಿ ಮತ್ತು ತನ್ನ ಸಂತೋಷಕ್ಕೆ ಇರುವ ಕೊಂಡಿಯಿಂದಲೂ ಆ ಪ್ರಕರಣವನ್ನು ದಿನೆ ದಿನೆ ಮುಂದೂಡುತ್ತಿದ್ದಳು.

ಆ ಕೊಂಡಿ ಬರಿ ಹ್ಯೂಬರ್ಟ್‌ನೆ ಯಾಕಾಗಿರಬೇಕು? ಬೇರೆಯವರು ಯಾಕಾಗಿರಬಾರದು? ಮೊದಲು ತನ್ನನ್ನು ಸುಡುತ್ತಿದ್ದ ಪ್ರೇಮದ ಉರಿ ಈಗೆಲ್ಲಿದೆ? ಅದು ತನ್ನ ನೆರಳಿನಂತೆ ಬಿಟ್ಟು ಬಿಡದೆ ಎಲ್ಲಿಯಾದರೂ ದೂರ ಹೋಗದೆ ಕಾಡಿಸುತ್ತಿದೆ. ಮಂಜಿನ ದಟ್ಟ ಮೋಡ ಮತ್ತೆ ತನ್ನನ್ನು ಆವರಿಸಿದಂತಾಯಿತು. ಕೂತಿದ್ದ ಕಾಲುಗಳಲ್ಲಿ ನಿಶ್ಯಕ್ತಿ ಕಾಣಿಸಿಕೊಂಡು ನಿರ್ಜಿವವಾಗತೊಡಗಿದವು. ಇದ್ದಕ್ಕಿಂದ್ದಂತೆ ಕಾಲಿನ ಸ್ನಾಯುಗಳು ಹಿಡಿದುಕೊಂಡಿವೆಯೇನೊ ಎಂಬಂತೆ ಖುರ್ಚಿಯಿಂದ ಮೇಲೆದ್ದ ಅವಳು 'ಡಾಕ್ಟರ್, ನನಗೆ ಯಾಕೋ ಸುಸ್ತಾಗಿದೆ...' ಎಂದು ಮುಂದೆ ಏನೂ ಹೇಳದೆ ತನ್ನ ರೂಮಿಗೆ ಹೊರಟು ಹೋದಳು.

ಕೆಲ ಹೊತ್ತು ತಾರಸಿಯಲ್ಲಿ ಜೀವದ ಸದ್ದು ಇರಲಿಲ್ಲ. ಮೇಣದ ಬತ್ತಿಗಳು ಇನ್ನೇನು ಆರುವುರಲ್ಲಿದ್ದವು. ಡಾ.ಮುಖರ್ಜಿ ಸಿಗರೇಟನ್ನು ಜೋರಾಗಿ ಸೇದುತ್ತ ಹೇಳಿದ 'ಎಲ್ಲ ಹೆಂಗಸರೂ ಒಂದೇ ತರಹ–ಅತಿಯಾದ ಭಾವುಕರು ಮತ್ತು ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದೆಂದು ತಿಳಿಯದವರು. ವಿವೇಚನೆಯಿಲ್ಲದವರು.'

ಪಿಯಾನೋ ನುಡಿಸುತ್ತಿದ್ದ ಹ್ಯೂಬರ್ಟ್‌ನ ಬೆರಳುಗಳು ಒಮ್ಮೆಲೆ ಮೊದಲಿನ ಉತ್ಸಾಹವನ್ನು ಕಳೆದುಕೊಂಡವು. ಅರೆ ಮನಸ್ಸಿನಿಂದ ನುಡಿಸಿದ ಸ್ವರದ ಪ್ರತಿಧ್ವನಿ ಅವರ ಸುತ್ತಲೂ ಎಷ್ಟೋ ಹೊತ್ತಿನವರೆಗೆ ಕಂಪಿಸುತ್ತಿತ್ತು.

'ಡಾಕ್ಟರ್, ಇತ್ತೀಚೆಗೆ ಲತಿಕಾ ಒಂದು ಥರ ವರ್ತಿಸುತ್ತಿದ್ದಾಳೆ, ಆಕೆ ಮೊದಲಿನ ಲತಿಕಾ ಅಲ್ಲಾ ಅನ್ನಿಸ್ತೆ, ನೀವೂ ಗಮನಿಸಿರಬೇಕು, ಅಲ್ಲ?' ಒಂದು ರೀತಿಯಲ್ಲಿ ಆಕೆಯನ್ನು ಉಪೇಕ್ಷೆ ಮಾಡುವವರಂತೆಯೆ ಹ್ಯೂಬರ್ಟ್ ಕೇಳಿದ. ಅವಳ ಸೌಂದರ್ಯ ತನ್ನನ್ನು ಕಾಡಿಸಿದೆಯೆಂಬ ಸುಳಿವು ದೊರಕಬಾರದೆಂದು ತನ್ನ ಮಾತುಗಳಲ್ಲಿ ಆದಷ್ಟು ಜಾಗ್ರತೆ ವಹಿಸುತ್ತಿದ್ದ. ಡಾಕ್ಟರ್ ಜೋರಾಗಿ ನಕ್ಕುಬಿಟ್ಟ. ಆ ನಗೆಯ ಮಾರ್ದನಿಯಲ್ಲಿ ಹ್ಯೂಬರ್ಟ್ ಕಟ್ಟಿಕೊಂಡಿದ್ದ ಲತಿಕಾಳ ಕನಸಿನ ಸೌಧ ಕುಸಿದು ಬಿತ್ತು.

'ಹ್ಯೂಬರ್ಟ್, ನಿನಗೆ ದೈವದಲ್ಲಿ ನಂಬಿಕೆ ಇದೆಯಾ?' ಡಾಕ್ಟರ್ ಪ್ರಶ್ನೆ ಹಾಕಿದ. ಡಾಕ್ಟರ್ ಯಾವಾಗಲೂ ಹೀಗೆಯೆ, ಎಲ್ಲಿಂದಲೋ ಶುರು ಮಾಡಿ ಎಲ್ಲಿಗೋ ಹೋಗಿ ಮುಟ್ಟಿಸುವಾತ, ಆತನ ಮಾತು ಯಾವಾಗಲೂ ತತ್ವಜ್ಞಾನದಿಂದಲೆ ಆರಂಭವಾಗುತ್ತವೆ. ತಾರಸಿಯ ಕಂಬಿಗೆ ಆತು ನಿಂತ ಮುಖರ್ಜಿಯ ಭಂಗಿ ದೊಡ್ಡ ತತ್ವಜ್ಞಾನಿಯ ತರಹವೆ ಇತ್ತು. ಮಂದವಾದ ಬೆಳದಿಂಗಳಿನಲ್ಲಿ ಪೈನ್ ಮರದ ನೆರಳು ಅಂಗಳದಲ್ಲಿ ಬಿದ್ದಿದ್ದು ಕಾಣಿಸುತ್ತಿತ್ತು. ಆಗೊಮ್ಮೆ ಈಗೊಮ್ಮೆ ದೀಪದ ಹುಳು ಹಾರಿ ಹೋಗಿ ತನ್ನ ಹಸಿರು ಬಣ್ಣ ಹೊಳೆಯಿಸುತ್ತಿತ್ತು.

ಒಂದು ವಾಕ್ಯ ಹೇಳಿ ನಿಂತಿದ್ದ ಡಾಕ್ಟರ್ ತನ್ನ ಮಾತು ಮುಂದುವರೆಸಿದ 'ಹುಟ್ಟುವುದು, ಸಾಯುವುದು, ಬಡಿದಾಡುವುದು, ಪ್ರೀತಿ–ಪ್ರೇಮ–ಇದೆಲ್ಲ ನನಗೆ ವಿಚಿತ್ರ ಅನಿಸುತ್ತೆ, ಮನುಷ್ಯರು ಯಾಕೆ ಬದುಕಬೇಕು ಅಂತ ಒಂದೊಂದು ಸಲ ಅಂದುಕೊಳ್ತೇನೆ. ಅವರಿಗೆ ಬೇರೆ ಯಾವ ಕೆಲಸವೂ ಇಲ್ಲೇನು? ನನ್ನನ್ನು ನೋಡು, ಹೆಸರು–ದಿಕ್ಕು ದೆಸೆ ಗೊತ್ತಿರದ ನಾನು ಸಾವಿರಾರು ಮೈಲುಗಳ ನಾಡಿನಿಂದ ಇಲ್ಲಿ ಬಂದು ಬಿದ್ದಿದ್ದೇನೆ, ಇಲ್ಲಿಯೆ ಸಾಯಬಹುದು. ಇಲ್ಲಿಯ ಜನರಿಗೆ ನಾನೊಬ್ಬ ಪರದೇಶಿ, ಬೇರೆ ದೇಶದಲ್ಲಿ ಒಬ್ಬ ಪರಕೀಯನಾಗಿ ಇರುವದರ ಅಪಾಯ ಎಷ್ಟು ದೊಡ್ಡದೆಂದು ನಿನಗೆ ಗೊತ್ತೇನು?...' ಹ್ಯೂಬರ್ಟ್‌ನಿಗೆ ಆಶ್ಚರ್ಯವೆನಿಸುತ್ತಿತ್ತು. ಇದೆ ಮೊದಲಬಾರಿ ಡಾಕ್ಟರ್ ತನ್ನ ಬಗ್ಗೆ ಹೇಳುತ್ತಿದ್ದಾನೆ. 'ನನಗೆ ಹಿಂದೆ ಮುಂದೆ ಯಾರೂ ಇಲ್ಲ. ಆ ಮಾತು ಬೇರೆ. ಅದಕ್ಕಾಗಿ ನಾನು ಯಾರದೇನು ಅಂತ ಬದುಕ್ತಾ ಇದ್ದೀನಿ. ಆದರೆ ಕೆಲವರ ಸಾವು ಕೂಡ ಕೊನೆಯವರೆಗೂ ಒಂದು ರಹಸ್ಯವಾಗೇ ಉಳಿದು ಬಿಡ್ತದೆ. ಅವರು ಬಹುಶಃ ಜೀವನದಿಂದ ಬಹಳಷ್ಟನ್ನು ನಿರೀಕ್ಷೆ ಮಾಡ್ತಾರೆ. ಅದು ಅವರ ತಪ್ಪಲ್ಲ. ಸಾವು ಎಂಬ ಸಂಗತಿಯ ಬಗ್ಗೆ ಅವರು ಎಂದೂ ಗಮನ ಹರಿಸಿರೋದಿಲ್ಲ'.

'ಡಾಕ್ಟರ್, ನೀನು ಯಾರ ಬಗ್ಗೆ ಮಾತನಾಡ್ತಾ ಇದೀಯ ಅಂತಾನೇ ತಿಳಿತಾ ಇಲ್ಲಾ?'

ಡಾಕ್ಟರ್ ಸಿಗರೇಟಿನ ಹೊಗೆ ಬಿಡುತ್ತ ತನ್ನ ದೃಷ್ಟಿಯನ್ನು ಆರುತ್ತಿರುವ ಮೇಣದ ಬತ್ತಿಯ ಬೆಳಕಿನ ಮೇಲೆ ಕೇಂದ್ರೀಕರಿಸಿ ಹೇಳಿದ.

'ನಿನಗೆ ಗೊತ್ತೇನು ಹ್ಯೂಬರ್ಟ್? ಲತಿಕಾ ಮೊದಲು ಮೇಲಿಂದ ಮೇಲೆ ಮಿಲಿಟರಿ

ಕ್ಲಬ್‌ಗೆ ಹೋಗುತ್ತಿದ್ದಳು. ಅಲ್ಲಿ ಅವಳಿಗೆ ಗಿರೀಶ್ ನೇಗಿ ಎಂಬ ಅಧಿಕಾರಿಯ ಪರಿಚಯವಾಯ್ತು. ಅವನು ಕಾಶ್ಮೀರಕ್ಕೆ ವರ್ಗವಾಗಿ ಹೋಗುವ ಹಿಂದಿನ ರಾತ್ರಿ ನನಗೆ ಎಲ್ಲವನ್ನೂ ಹೇಳಿದ. ಆದರೆ ಅವನು ಎಂದೆಂದೂ ತಿರುಗಿ ಬರುವದಿಲ್ಲವೆಂದು ಯಾರಿಗೆ ಗೊತ್ತಿತ್ತು? ನಾನು ಅವನು ಭೆಟ್ಟಿಯಾದದ್ದು ಲತಿಕಾಳಿಗೆ ಗೊತ್ತಿಲ್ಲ. ಹೋಗಲಿ ಬಿಡು. ಈಗ ಅದೆಲ್ಲ ಯಾಕೆ ಬೇಕು? ಗಿರೀಶ್ ನೇಗಿ ಅಂದು ಬದುಕಿರುವುದಕ್ಕೂ ಇಂದು ಸತ್ತಿರುವದಕ್ಕೂ ಏನು ವ್ಯತ್ಯಾಸ ಇದೆ? ಸತ್ತವನು ಸತ್ತಂತಿರಲಿ ಬಿಡು...' ಡಾಕ್ಟರ್‌ರ ಮುಖ ಬಾಡಿತ್ತು. ಶುಷ್ಕವಾದ ನಗೆಯಲ್ಲಿ ಭಾವಶೂನ್ಯತೆಯಿತ್ತು.

'ಯಾರು ಈ ಗಿರೀಶ್ ನೇಗಿ?'

'ಕುಮಾಂವ್ ರೆಜಿಮೆಂಟಿನಲ್ಲಿ ಆತ ಒಬ್ಬ ಕ್ಯಾಪ್ಟನ್ ಆಗಿದ್ದ'

'ಹಾಗಿದ್ದರೆ, ಲತಿಕಾ...' ಹ್ಯೂಬರ್ಟ್ ಏನೋ ಹೇಳಲು ಹೋಗಿ ಸುಮ್ಮನಾದ ತಾನು ಅವಳಿಗೆ ತನ್ನ ಪ್ರೇಮವನ್ನು ನಿವೇದಿಸಿ ಪತ್ರ ಬರೆದದ್ದು ನೆನಪಾಯಿತು. ಅದು ಈಗ ಎಷ್ಟೊಂದು ಅರ್ಥಹೀನ ಮತ್ತು ವಿಲಕ್ಷಣವೆಂದು ಗೊತ್ತಾಯಿತು. ತಾನು ಬರೆದ ಪ್ರತಿಯೊಂದು ಶಬ್ದ ತನ್ನ ಹೃದಯವನ್ನೆ ಕಿತ್ತು ತಿನ್ನುತ್ತಿದೆಯೆಂದೆನಿಸಿತು. ಪಿಯಾನೊ ಮೇಲೆ ತಲೆಯಿಟ್ಟು ಸ್ತಿಮಿತಕ್ಕೆ ಬಂದ. ಲತಿಕಾ ಇದನ್ನು ತನಗೆ ಯಾಕೆ ಹೇಳಲಿಲ್ಲ? ಅದನ್ನು ಹೇಳದಷ್ಟು ತಾನು ಸಣ್ಣವನಾಗಿಬಿಟ್ಟೆನೆ?

'ಪಾಪ ಲತಿಕಾ ಇನ್ನೂ ಚಿಕ್ಕ ಹುಡುಗಿ. ಅವನೊಡನೆ ಆಕೆ ಯಾಕೆ ಸಾಯಬೇಕು?' ಡಾಕ್ಟರ್ ಒಂದು ಕ್ಷಣ ನಿಂತು 'ನಿನಗೆ ದೈವದಲ್ಲಿ ನಂಬಿಕೆ ಇದೆಯಾ ಹ್ಯೂಬರ್ಟ್' ಎಂದು ಪ್ರಶ್ನಿಸಿದ.

ಜೋರಾಗಿ ಬೀಸಿದ ಗಾಳಿಗೆ ಮೇಣಬತ್ತಿ ಒಮ್ಮೆಲೆ ಪ್ರಜ್ವಲಿಸಿ ನಂದಿಹೋಯಿತು. ಕತ್ತಲಲ್ಲಿ ಯಾರು ಯಾರಿಗೂ ಕಾಣದಂತಿದ್ದರೂ ಅವರಿಬ್ಬರು ಎದುರು ಬದುರು ಕುಳಿತಿದ್ದರು. ಶಾಲೆಯ ಹತ್ತಿರವೆ ಹರಿಯುತ್ತಿರುವ ಹಳ್ಳದ ಜುಳು–ಜುಳು ನಾದ ಸ್ಪಷ್ಟವಾಗಿ ಕೇಳುತ್ತಿತ್ತು. ಕುಮಾಂವ್ ಸೇನಾದಳದಲ್ಲಿ ಕಹಳೆಯೂದಿದ ಸದ್ದು ತೇಲಿಬಂತು. ಹ್ಯೂಬರ್ಟ್ ಧಡಕ್ಕನೆ ಎದ್ದು 'ಹೊತ್ತಾಯ್ತು ಡಾಕ್ಟರ್, ನಾನು ಬರ್ತೇನೆ ಗುಡ್‌ನೈಟ್' ಎಂದು ನಡೆದುಬಿಟ್ಟ.

'ಆಯ್ತು, ನೀನು ನಡೆ, ನಾನು ಈ ಸಿಗರೇಟು ಮುಗಿಸಿಯೇ ಮಲಗೋದು' ಎಂದು ಡಾ. ಮುಖರ್ಜಿ ದೀರ್ಘ ಉಸಿರು ತೆಗೆದುಕೊಂಡ.

ಮರುದಿನ ಮುಂಜಾನೆ ಮುಗಿಲು ಸಂಪೂರ್ಣವಾಗಿ ಮೋಡಗಳಿಂದ ಮುಚ್ಚಿಕೊಂಡಿತ್ತು. ಲತಿಕಾ ತನ್ನ ರೂಮಿನ ಕಿಟಕಿಯನ್ನು ತೆರೆಯುವುದನ್ನೆ ಕಾಯುತ್ತ ರಾತ್ರಿಯ ಚಳಿಯಲ್ಲಿ ನಡುಗುತ್ತಿದ್ದ ದಟ್ಟ ಮಂಜಿನ ಗುಡ್ಡೆಯೊಂದು ಅವಳ ಮನೆಯ ಒಳಗೆ ಬಿದ್ದಿತು. ಶಾಲೆಗೆ ಅನತಿದೂರದಲ್ಲಿದ್ದ ಪ್ರಾರ್ಥನಾಮಂದಿರ ಮಂಜಿನಿಂದ

ಆವೃತವಾಗಿ ಬರಿ ಚರ್ಚಿನ ಕ್ರಾಸ್ ಕಾಣುತ್ತಿತ್ತು. ಕಿಡಕಿಯಲ್ಲಿ ನೋಡುತ್ತಿದ್ದವಳು ಕರೀಮುದ್ದೀನ್ ಚಹಾ ತಂದುದಕ್ಕೆ ಅವನೆಡೆಗೆ ದೃಷ್ಟಿ ಬದಲಾಯಿಸಿದಳು. ಸೈನಿಕನಾಗಿ ನಿವೃತ್ತನಾಗಿದ್ದ ಕರೀಮುದ್ದೀನ್ ಅದೆ ಶಿಸ್ತಿನಲ್ಲಿ ಚಹಾ ಕಪ್ಪನ್ನು ಟೇಬಲ್ ಮೇಲಿಟ್ಟು ಮಿಲಿಟರಿ ಸಾವಧಾನ್ ರೀತಿಯಲ್ಲಿ ನಿಂತುಕೊಂಡ. ತಾನು ಎದ್ದಾಗಿನಿಂದ ಇನ್ನೂ ಹಾಸಿಗೆಯಲ್ಲಿ ಬಿದ್ದುಕೊಂಡಿರುವ ಆಲಸ್ಯತನಕ್ಕೆ ಪೇಚಿಗೆ ಒಳಗಾದಂತೆ ಲತಿಕಾ 'ಎಷ್ಟೊಂದು ಥಂಡಿ ಅಲ್ಲಾ? ಹಾಸಿಗೆ ಬಿಟ್ಟು ಏಳಲಿಕ್ಕೆ ಮನಸ್ಸಾಗೋದಿಲ್ಲ ನೋಡು, ಕರೀಮುದ್ದೀನ್.'

'ಆದ್ರೂ ಮೇಡಮ್ ಇದೇನು ದೊಡ್ಡ ಥಂಡಿ ಅಲ್ಲ, ಕ್ರಿಸ್‌ಮಸ್ ಬರಬೇಕು, ಆವಾಗ ನೋಡಬೇಕು ಹಲ್ಲುಗಳು ಚಳಿ ಜೊತೆಗೆ ಕಿಚಕಿಚ ಅಂತ ಮಾತಾಡ್ತಾ ಇರ್ತಾವೆ.' ಬರುವ ಚಳಿಗಾಲದ ದಿನಗಳನ್ನು ಈಗಲೇ ಅನುಭವಿಸುವವನಂತೆ ಮುದುಡಿ ನಿಂತ. ತಲೆ ಬೋಳಾಗಿದ್ದರಿಂದ ಕಿವಿಯ ಸುತ್ತಲಿರುವ ತುಸು ಕೂದಲಿಗೆ ಬಣ್ಣ ಹಚ್ಚಿದ್ದ ಅದು ತಂಬಾಕಿನ ಕಂದು ಬಣ್ಣಕ್ಕೆ ತಿರುಗಿತ್ತು. ಕರೀಮುದ್ದೀನ್ ಯಾವಾಗ ಮಾತಾಡಿದರೂ ಸಹಜವಾಗಿ ಮಾತಾಡುತ್ತಿದ್ದ. 'ಮೇಡಮ್ ಒಂದು ಸಲ ಎಷ್ಟು ಬರ್ಫ್ ಬಿದ್ದಿತ್ತು ಗೊತ್ತಾ? ಈ ಇಡೀ ಪ್ರದೇಶದ ರಸ್ತೆ ಮುಚ್ಚಿಬಿಟ್ಟಿತ್ತು, ಗಿಡ–ಗಂಟೆ ಕೂಡ ಮುದ್ದೆಯಾಗಿ ಕೂತಿದ್ದವು' ಎಂದು ಕೋಳಿಯಂತೆ ಕುಳಿತು ತೋರಿಸಿದ.

'ಯಾವಾಗ ಅದು?'

'ಯಾವ ವರ್ಷ ಅಂದ್ರೆ ನಾನು ಲೆಕ್ಕ ಮಾಡಿ ಹೇಳಬೇಕು, ಆದರೆ ನನಗೆ ನೆನಪಿರೋ ಪ್ರಕಾರ ಆವಾಗ ಇನ್ನೂ ಬ್ರಿಟಿಷರು ಇದ್ದರು. ಕೇವಲ ಎರಡು ತಾಸಿನಲ್ಲಿ ಇಡೀ ಬರ್ಫನ್ನು ತೆಗೆದು ಹಾದಿ ಮಾಡಿದರು ಅವರು. ಕೇವಲ ಒಂದು ಸೀಟಿ ಹಾಕಿದರೆ ಸಾಕು ಆಗಿಂದಾಗ ಕುದುರೆ ಹತ್ತಿ ಐವತ್ತು ಸೈನಿಕರು ಬಂದು ಬಿಡ್ತಿದ್ದರು. ಆದರೆ ಆ ಕಾಲ ಹೋಯ್ತು' ಬ್ರಿಟೀಷರು ಆಳುತ್ತಿದ್ದ ದಿನಗಳೆ ಸ್ವರ್ಗದ ದಿನಗಳು ಎಂದು ಕರೀಮುದ್ದೀನ್ ಹೇಳುವುದು ಇದೆ ಮೊದಲ ಸಲವೇನಲ್ಲ.

'ಮೇಡಮ್, ಈ ವರ್ಷವೂ ನೀವು ಸೂಟಿಯಲ್ಲಿ ಇಲ್ಲಿಯೇ ಇರುತ್ತೀರೇನು?'

'ಹೌದು, ಹಂಗೆ ಅನಿಸ್ತಿದೆ ಕರೀಮುದ್ದೀನ್, ನಿನಗೆ ಮತ್ತೆ ತೊಂದರೆ ಕೊಡ್ತೀರ್‍ತೀನಿ.'

'ಛೇ, ಛೇ, ಅದಕ್ಯಾಕೆ ತೊಂದರೆ ಅನ್ಕೋತ್ತೀರಿ ಮೇಡಮ್, ನೀವು ಇಲ್ಲಿರೋದು ನನಗೂ ಖುಶಿ, ಇರಲಿಲ್ಲಾಂದ್ರೆ ಬಿಡಾಡಿ ನಾಯಿಗಳಿಗೆ ಇದು ಸ್ವರ್ಗ ಆಗಿಬಿಡುತ್ತೆ.'

'ಆಮೇಲೆ ಕರೀಮುದ್ದೀನ್, ಮೇಸ್ತ್ರಿಗೆ ಹೇಳಿ ತಾರಸಿಯ ಬಿರುಕು ಮತ್ತು ಸಂದಿಗಳನ್ನು ಮುಚ್ಚಿಸಬೇಕು, ಹೋದ ವರ್ಷ ಹಿಮಗಡ್ಡೆ ಮತ್ತು ನೀರು ನಿಂತು ಎಷ್ಟೊಂದು ತೊಂದರೆ ಆಗಿತ್ತು.'

ಚಹಾ ಟ್ರೇಯನ್ನು ಎತ್ತಿಕೊಳ್ಳುತ್ತ ಕರೀಮುದ್ದೀನ್ ಹೇಳಿದ: 'ಹ್ಯೂಬರ್ಟ್ ಸಾಹೇಬರು

ಹುಡುಗಿಯರು ಹೋಗುವ ಬಸ್ಸಿನಲ್ಲಿ ನಾಳೆ ಊರಿಗೆ ಹೋಗಬಹುದೆಂದು ಕಾಣ್ತದೆ, ನಿನ್ನೆ ರಾತ್ರಿ ಅವರಿಗೆ ಆರಾಮವಿರಲಿಲ್ಲ, ಎದೆ ನೋವು ಅಂತ ಮಧ್ಯರಾತ್ರಿ ಬಂದು ನನ್ನನ್ನು ಎಬ್ಬಿಸಿದರು. ಚಳಿಗಾಲ ಅಂದ್ರೆ ಅವರಿಗೆ ಆಗಿ ಬರೋದಿಲ್ಲ.'

ಕರೀಮುದ್ದೀನ್ ಹೊರಟು ಹೋದ ಮೇಲೆ ಲತಿಕಾ ತನ್ನಷ್ಟಕ್ಕೆ ಯೋಚಿಸಿದಳು. ಹ್ಯೂಬರ್ಟ್‌ನ ಆರೋಗ್ಯ ವಿಚಾರಿಸಿ ಬರಬೇಕೇನೊ ಎಂದುಕೊಂಡಳು. ಆದರೆ ಯಾಕೋ ಹೆಜ್ಜೆಗಳು ಮುಂದೆ ಹೋಗಲಿಲ್ಲ. ಆತ ತನ್ನ ಎದುರು ದೈನ್ಯತೆಯಿಂದ ಅಡ್ಡಾಡುವಾಗ ಅಸಹಾಯಕತೆಯಿಂದ ತನ್ನನ್ನು ತೆಗಳುತ್ತಿದ್ದಾನೇನೋ ಎಂದೆನಿಸುವುದು. ಆತನ ಭ್ರಮೆಯನ್ನು ಹೋಗಲಾಡಿಸಬೇಕೋ, ತನ್ನ ನಿಲುವನ್ನು ಸಮರ್ಥಿಸಿಕೊಳ್ಳಬೇಕೋ ತಿಳಿಯುವದಿಲ್ಲ. ಜೇಡರ ಬಲೆಯಿಂದ ಬಿಡಿಸಿಕೊಂಡಷ್ಟು ಕಗ್ಗಂಟಾಗುತ್ತದೆ.

ಸಣ್ಣಗೆ ಮಳೆ ಹನಿಯತೊಡಗಿತು. ತಗಡು ಮಾಳಿಗೆಯ ಪಟಪಟ ಶಬ್ದದಿಂದ ಸ್ವಲ್ಪ ಕಿರಿಕಿರಿಯಾದಂತೆನಿಸಿ ಎದ್ದಳು. ಹಾಸಿಗೆಯನ್ನು ಓರಣವಾಗಿಸಿ ಕನ್ನಡಿಯ ಮುಂದೆ ಜಡೆ ಬಿಚ್ಚಿ ಕೂತಳು. ಕೆಲವು ಕ್ಷಣ ಬಾಚಣಿಕಿಯು ಕೂದಲಲ್ಲಿ ಮತ್ತು ಅವಳು ಕನ್ನಡಿಯಲ್ಲಿ ಕಳೆದು ಹೋದರು. ಕನ್ನಡಿ ನೋಡುತ್ತಿದ್ದರೂ ಅವಳ ದೃಷ್ಟಿ ಎಲ್ಲಿಯೋ ಇತ್ತು. ಒಣಗಿದ ಉರವಲು ಕಟ್ಟಿಗೆಯನ್ನು ತಂದಿಡಲು ಕರೀಮುದ್ದೀನ್‌ಗೆ ಹೇಳಬೇಕಾಗಿತ್ತು. ಹೋದ ವರ್ಷ ಹಸಿಕಟ್ಟಿಗೆಯಿಂದ ಎಷ್ಟೊಂದು ಪಡಿಪಾಟಲು ಅನುಭವಿಸಬೇಕಾಯಿತು.

ತನ್ನ ರೂಮಿನ ಚಳಿ ಮತ್ತು ತಂಪು ತಡೆಯಲಾರದೆ ಗುಟ್ಟಾಗಿ ಪ್ರಿನ್ಸಿಪಾಲ್ ವುಡ್‌ಳ ರೂಮಿಗೆ ಹೋಗಬೇಕಾಯಿತು. ಅವಳ ಕೋಣೆ ಎಷ್ಟೊಂದು ಚೆನ್ನಾಗಿದೆ. ಅಲ್ಲಿ ಚಳಿಗಾಲಲ್ಲಿ ಬೆಂಕಿಯ ಮುಂದೆ ಕೂಡಬೇಕಾಗಿಲ್ಲ. ಮೆತ್ತನೆಯ ಸೋಫಾದ ಮೇಲೆ ಮಲಗುತ್ತಿದ್ದಂತೆಯೆ ನಿದ್ದೆ ಬರುತ್ತದೆ. ಸೂಟಿಯ ದಿನಗಳಲ್ಲಿ ಅವಳ ಮನೆ ಖಾಲಿ ಬಿದ್ದಿರುತ್ತದೆ. ತನಗೆ ಕೊಟ್ಟು ಹೋಗುವ ಸೌಜನ್ಯವಿಲ್ಲ. ಕೀಲಿ ಬಡಿದು ಹೋಗುತ್ತಾಳೆ. ಹೋದ ವರ್ಷ ಬಚ್ಚಲು ಕೋಣೆಯ ಒಳಗಿನ ಬೋಲ್ಟ್ ಹಾಕಲು ಆಕೆ ಮರೆತಿದ್ದರಿಂದ ತಾನು ಒಳಗೆ ನುಸುಳಿಕೊಂಡೆ.

ಮೊದಲನೆ ವರ್ಷ ತಾನು ಒಬ್ಬಳೆ ಈ ಹಾಸ್ಟೆಲ್ಲಿನಲ್ಲಿದ್ದಾಗ ಎಷ್ಟೊಂದು ಭಯವಾಗಿತ್ತು. ನಿರ್ಜನ ಪ್ರದೇಶ ದೆವ್ವಗಳ ಮನೆಯಂತೆ ಭಣಗುಡುತ್ತಿತ್ತು. ಹೆದರಿಕೆ ಹೆಚ್ಚಾದಾಗ ಕರೀಮುದ್ದೀನ್‌ನನ್ನು ಕರೆದು ಅದು ಇದು ಮಾತಾಡುತ್ತಿದ್ದಳು. ಅವಳು ತೂಕಡಿಸತೊಡಗಿದಾಗ ದೀಪವಾರಿಸಿ ಅವನು ಹೊರಟು ಹೋಗುತ್ತಿದ್ದ. ಕೆಲವು ಸಲ ಆರಾಮವಿಲ್ಲವೆಂದು ಡಾಕ್ಟರ್‌ಗೆ ಹೇಳಿ ಕಳುಹಿಸಿ ಬಾಜೂ ರೂಮಿನಲ್ಲಿ ಅವನು ಮಲಗಿದಾಗ ಧೈರ್ಯದಿಂದ ನಿದ್ದೆ ಮಾಡುತ್ತಿದ್ದಳು.

ನೆನಪನ್ನು ಕತ್ತರಿಸಿ ಹಣಿಗೆಗೆ ಹತ್ತಿದ್ದ ಕೂದಲನ್ನು ಸುರುಳಿ ಮಾಡಿ ಹೊರಗೆ ಒಗೆಯಲು ಕಿಟಕಿಯ ಬಳಿ ಬಂದಳು. ಮಳೆ ಜೋರಾಗಿತ್ತು. ಮಾಳಿಗೆಯಿಂದ ಅಂಗಳಕ್ಕೆ ದೊಡ್ಡ ಹರಿಯಾಗಿ ನೀರು ಬೀಳುತ್ತಿತ್ತು. ದಟ್ಟ ಮೋಡಗಳಲ್ಲಿ ಹಸುರಿನ

ಗುಡ್ಡಗಳು ಒಮ್ಮೆ ಕಾಣಿಸಿಕೊಳ್ಳುತ್ತ ಮತ್ತೊಮ್ಮೆ ಮುಚ್ಚಿಕೊಳ್ಳುತ್ತ ಸಾಗಿದ್ದವು. ತಾನು ರೈಲಿನಲ್ಲಿ ಕುಳಿತಾಗ ಕಾಣುವಂತೆ ಅವು ಕಣ್ಣು ಮುಚ್ಚಾಲೆಯಾಡುತ್ತಿದ್ದವು. ಕಿಡಕಿಯ ಹೊರಗೆ ಗೋಣು ಹಾಕಿ ಆಕಾಶದತ್ತ ಕಣ್ಣು ಮಿಟುಕಿಸಿದಳು, ತಣ್ಣನೆ ಗಾಳಿ ಅವಳಿಗೆ ಮುತ್ತು ಕೊಟ್ಟಿತು. ಮಾಡಬೇಕಾದ ಕೆಲಸಗಳು ನೆನಪಾದಂತೆ ಆಲಸ್ಯತನ ಹೆಚ್ಚಾಗುತ್ತಿತ್ತು. ಹುಡುಗಿಯರಿಗೆ ಬಸ್ಸಿನ ಟಿಕೇಟ್ ತೆಗೆಸಲಿಕ್ಕೆ ಸಿಪಾಯಿಯನ್ನು ಬಸ್‌ಸ್ಟಾಂಡ್‌ಗೆ ಕಳುಹಿಸಬೇಕಿದೆ, ಅವರು ಬಿಟ್ಟು ಹೋಗುವ ಸಾಮಾನುಗಳ ಲಗೇಜ್‌ನ್ನು ಗೋಡೌನಿನಲ್ಲಿ ಸುರಕ್ಷಿತವಾಗಿ ತೆಗೆದಿರಿಸಬೇಕು, ಕೆಲವು ವಿದ್ಯಾರ್ಥಿನಿಯರಿಗೆ ಸಾಮಾನು ಪ್ಯಾಕ್ ಮಾಡಲಿಕ್ಕೆ ಸಹಾಯ ಕೂಡ ಮಾಡಬೇಕು, ಅವಳಿಗೇನೂ ಬೇಸರವಿಲ್ಲ. ಕೊನೆಗೆ ಎಲ್ಲ ಸರಿಯಾಗುತ್ತದೆ. ಮೊದಲಿಗೆ ಗಡಿಬಿಡಿ ಎನಿಸಿದರೂ ಕೊನೆಗೆ ಸಮಾಧಾನ ತರುತ್ತದೆ.

ಯಾವಾಗ ಹುಡುಗಿಯರನ್ನು ಹತ್ತಿಸಿಕೊಂಡ ಕೊನೆಯ ಬಸ್ಸು ಈ ಹಾಸ್ಟೆಲನ್ನು ಬಿಟ್ಟು ಹೋಗುತ್ತದೆಯೋ ಆಗ ಮಾತ್ರ ಲತಿಕಾ ಖಾಲಿ ಕೋಣೆಗಳ ಒಳಹೊಕ್ಕು ಬರುತ್ತಾಳೆ. ಆ ಮೂಲೆಯಿಂದ ಈ ಮೂಲೆಗೆ ನಡೆಯುತ್ತಾಳೆ. ಕಾರಿಡಾರಿನಲ್ಲಿ ಸುಮ್ಮನೆ ಅಲೆಯುತ್ತಾಳೆ. ಏನು ಮಾಡಬೇಕೆಂದು ತಿಳಿಯದೆ ಪರಿತಪಿಸುತ್ತಾಳೆ. ಮನಸ್ಸು ಸ್ತಿಮಿತಕ್ಕೆ ಬರದೆ ಎಲ್ಲೆಲ್ಲಿಯೋ ಹೋಗಿ ಬರುತ್ತದೆ. ಎಲ್ಲರೂ ಸುಖಾಸುಮ್ಮನೆ ಅದೆ ಪ್ರಶ್ನೆಯನ್ನು ಮತ್ತೆ ಮತ್ತೆ ಕೇಳುತ್ತಾರೆ.

'ಯಾಕೆ ಲತಿಕಾ ಸೂಟಿಗೆ ಊರಿಗೆ ಹೋಗುವದಿಲ್ಲವೇನು?'

ಆಕೆ ಏನು ಹೇಳಬೇಕು?



ಪ್ರಾರ್ಥನಾ ಮಂದಿರದ ಗಂಟೆಯ ಶಬ್ದಕ್ಕೆ ತನ್ನ ಯೋಚನೆಯಿಂದ ಹೊರಗೆ ಬಂದ ಲತಿಕಾ ಸೀರೆ ಕಳೆದಿಟ್ಟು, ಹೆಗಲ ಮೇಲೆ ಟಾವೆಲ್ ಹಾಕಿಕೊಂಡು ಲಂಗದ ಮೇಲೆ ಬಚ್ಚಲುಮನೆಗೆ ನಡೆದಳು.

ಲೆಫ್ಟ್-ರೈಟ್-ಲೆಫ್ಟ್ ಲೆಫ್ಟ್

ಕುಮಾಂವ್ ಸೈನಿಕ ತುಕಡಿಯ ಸಿಪಾಯಿಗಳು ನಡೆಸುವ ಪಥ ಸಂಚಲನ ಸೈನ್ಯ ಬೀಡುಬಿಟ್ಟ ರಸ್ತೆಯ ಮೇಲೆ ಸಾಗಿತ್ತು. ಅವರ ಒರಟಾದ ಹಾಗೂ ಕಠೋರವಾದ

ಧಡ್ ಎನ್ನುವ ಬೂಟಿನ ಹೆಜ್ಜೆಯ ಸಪ್ಪಳ ಗೋಡೆಗೆ ಬಡಿದು ಎಷ್ಟೋ ಹೊತ್ತಿನತನಕ ಅದು ಒಳಗಿನ ಪ್ರಾರ್ಥನಾ ಮಂದಿರದಲ್ಲಿಯೂ ಅನುರಣಿಸುತ್ತಿತ್ತು.

'ಯಾರು ತಾಳ್ಮೆಯಿಂದಿರುತ್ತಾರೋ, ಯಾರು ಸಾಧು ಸ್ವಭಾವದವರಾಗಿರುತ್ತಾರೋ ಅವರೆ ದೇವರ ಕೃಪೆಗೆ ಪಾತ್ರರಾಗುತ್ತಾರೆ'–ಕೇಳಲು ಕಿರಿಕಿರಿಯಾದಂತಹ ಫಾದರ್ ಎಲ್ಮಂಡ್‌ನ ಧರ್ಮೋಪದೇಶ ನಡೆದಿತ್ತು. ಏಸುಕ್ರಿಸ್ತನ ಪ್ರತಿಮೆಯನ್ನು ಬೆಳಗಿದ್ದ ದೀವಟಿಗೆಯ ಬೆಳಕು ಮುಂದೆ ಕುಳಿತ ಹುಡುಗಿಯರ ಮುಖದ ಮೇಲೆ ಬಿದ್ದಿತ್ತು. ಹಿಂದಿನ ಸಾಲುಗಳಲ್ಲಿ ಕತ್ತಲೆ ತುಂಬಿತ್ತು. ಗೋಣು ಕೆಳಗೆ ಹಾಕಿ ಕುಳಿತ ಹುಡುಗಿಯರು ತಮ್ಮಷ್ಟಕ್ಕೆ ತಾವೆ ಮಾತಾಡಿಕೊಳ್ಳುತ್ತಿದ್ದರು. ಪ್ರಿನ್ಸಿಪಾಲ್ ವುಡ್ ಆಗಲೆ ತನ್ನ ಭಾಷಣ ಮುಗಿಸಿ ಪಾದ್ರಿಯ ಹಿಂದೆ ಕುಳಿತು ಅವನಿಗೆ ಪ್ರೇರಣೆ ಕೊಡುತ್ತಿದ್ದಾಳೆನ್ನುವ ರೀತಿಯಲ್ಲಿ ತನ್ನಷ್ಟಕ್ಕೆ ತಾನೆ ಏನೇನೋ ವಟಗುಡುತ್ತ ಕೂತಿದ್ದಳು.

'ಆಮೇನ್!' ಫಾದರ್ ಎಲ್ಮಂಡ್ ಬೈಬಲ್‌ನ್ನು ಮೇಜಿನ ಮೇಲಿಟ್ಟು ಪ್ರಾರ್ಥನಾ ಪದ್ಯದ ಪುಸ್ತಕ ಕೈಗೆತ್ತಿಕೊಂಡರು. ಶಾಂತವಾಗಿದ್ದ ವಾತಾವರಣ ತುಸು ಕದಡಿದಂತಾಯಿತು. ಪ್ರಾರ್ಥನೆಗೆ ಎಲ್ಲರೂ ಎದ್ದು ನಿಂತರು. ಹುಡುಗಿಯರು ಈ ಸಂದರ್ಭವನ್ನು ಸುಮ್ಮನೆ ಬಿಟ್ಟಾರೆಯೇ? ಎದ್ದು ನಿಲ್ಲುವಾಗ ಬೆಂಚುಗಳನ್ನು ಬೇಕೆಂತಲೆ ಹಿಂದೆ ಮುಂದೆ ಸರಿಸಿದರು. ನೆಲ ಉಜ್ಜಿದ ಕರ್ಕಶ ಶಬ್ದಕ್ಕೆ ಮೂಲೆಯ ಮತ್ತೊಂದೆಡೆಯಿಂದ ನಗುವಿನ ಅಲೆ ಎದ್ದಿತು. ಹೆಡ್‌ಮಿಸ್ಟ್ರೆಸ್ ಹುಬ್ಬುಗಂಟಿಕ್ಕಿದಳು, ಕೆಲ ಸಮಯದ ನಂತದ ಮತ್ತೆ ಎಲ್ಲೆಡೆ ಮೌನ ಆವರಿಸಿತು. ಕಳೆಗುಂದಿದ ಮನುಷ್ಯರ ನೆರಳುಗಳಿಗೆ ಪಾದ್ರಿ ಪಾಠ ಮಾಡುತ್ತಿದ್ದ ! 'ಜೀಸಸ್ ಹೇಳಿದ್ದಾನೆ–ನಾನು ಈ ಜಗತ್ತಿನ ಬೆಳಕು, ನನ್ನನ್ನು ಹಿಂಬಾಲಿಸುವವನಿಗೆ ಯಾವಾಗಲೂ ಬೆಳಕು ಇರುತ್ತದೆಯೆ ಹೊರತು ಬೇರೆ ಯಾವ ಸಂಗತಿಯಿಂದಲೂ ಇಲ್ಲ. ಅಂಥವನ ಬಳಿ ಕತ್ತಲು ಸುಳಿಯಲಾರದು.'

ಈ ಬಗೆಯ ಅರ್ಥಹೀನ ಸಾಂಸ್ಕೃತಿಕ ಕಾರ್ಯಕ್ರಮ ಡಾ.ಮುಖರ್ಜಿಗೆ ಎಳ್ಳಷ್ಟು ಹಿಡಿಸುತ್ತಿರಲಿಲ್ಲ. ಫಾದರ್‌ನ ಭಾಷಣವಂತೂ ಬೇಸರವೆಂದರೆ ಬೇಸರ. ಅದನ್ನು ಕೇಳಿ ಮನಸ್ಸಿಗೆ ಸ್ವಲ್ಪ ಕಿರಿಕಿರಿ ಅನ್ನಿಸಿದ್ದು ಸಹವಾಗಿತ್ತು. 'ಈ ಸಂಗತಿಗಳೆಲ್ಲ ಎಂದು ಮುಗಿಯುತ್ತವೆ' ಲತಿಕಾಳನ್ನು ಕೂಗಿ ಈ ಮಾತನ್ನು ಎಷ್ಟು ಜೋರಾಗಿ ಹೇಳಿದನೆಂದರೆ ಅಕ್ಕಪಕ್ಕದವರೆಲ್ಲ ಇವರಿಬ್ಬರನ್ನೆ ನೋಡತೊಡಗಿದರು. ಪ್ರಾರ್ಥನೆಯಾಗುವಾಗ ಡಾಕ್ಟರ್ ಮುಖದಲ್ಲಿ ವ್ಯಂಗ್ಯದ ನಗು ತೇಲುತ್ತಿತ್ತು. ಒತ್ತಾಯದ ಮೌನಕ್ಕೆ ಶರಣಾಗಿದ್ದಾಗಲೂ ಒಂದೊಂದೆ ಮೀಸೆಯ ಕೂದಲನ್ನು ಯಾರಿಗೂ ಗೊತ್ತಿಲ್ಲದಂತೆ ಕೀಳುವದರಲ್ಲಿ ಆತ ಮಗ್ನನಾಗಿದ್ದ.

ಫಾದರ್ ಎಲ್ಮಂಡನ ಪೋಷಾಕು ಲತಿಕಾಳಲ್ಲಿ ಒಂದು ಬಗೆಯ ತಮಾಷೆಯನ್ನು ಹುಟ್ಟಿಸಲು ಕಾರಣವಾಗಿತ್ತು. ಅವಳು ಚಿಕ್ಕವಳಿದ್ದಾಗ ಪಾದ್ರಿಗಳು ತಮ್ಮ ಈ ಉದ್ದ ನಿಲುವಂಗಿಯ ಒಳಗೆ ಒಳಉಡುಪು ಏನನ್ನಾದರೂ ಧರಿಸಿರುತ್ತಾರೋ ಇಲ್ಲವೋ

ಎಂದು ಕೂತೂಹಲ ತಾಳಿದ್ದಳು. ಅಕಸ್ಮಾತ್ ಆ ನಿಲುವಂಗಿ ಮೇಲೆ ಹಾರಿದರೆ...! ಎಂಬ ಭಾವನೆಯಿಂದ ತನ್ನಷ್ಟಕ್ಕೆ ತಾನು ನಗುತ್ತಿದ್ದ ಸಂದರ್ಭಗಳನ್ನು ಈಗ ನೆನಪಿಸಿಕೊಂಡಳು.

ಲೆಫ್ಟ್-ರೈಟ್-ಲೆಫ್ಟ್... ಸೈನಿಕ ಪಥ ಸಂಚಲನದ ಸದ್ದು ಕರಿಮೆಯಾಗುತ್ತ ಬಂದಿತ್ತು. ಅದರ ಪ್ರತಿಧ್ವನಿ ಮಾತ್ರ ಈ ವಾತಾವರಣದಲ್ಲಿ ಇಲ್ಲಿಯೆ ತನ್ನನ್ನು ತಟ್ಟುತ್ತಿರುವ ಅನುಭವವಾಯಿತು.

'ಪ್ರಾರ್ಥನಾ ಪದ್ಯ ನಂ.117...' ಫಾದರ್ ಹೇಳಿದರು. ಅವರು ತಮ್ಮ ಪುಸ್ತಕ ತೆಗೆದು ಹಿಡಿದರು. ಪ್ರತಿಯೊಂದು ಹುಡುಗಿ ಪುಟಗಳನ್ನು ತಿರುವತೊಡಗಿದಳು. ಪುಸ್ತಕ ತೆರೆಯುವ ಮರ್ಮರ ಸದ್ದು ಒಂದು ಮೂಲೆಯಿಂದ ಮತ್ತೊಂದು ಮೂಲೆಯ ತನಕ ಕೇಳಿ ಬರುತ್ತಿತ್ತು.

ಮುಂದೆ ಕೂತಿದ್ದ ಹ್ಯೂಬರ್ಟ್ ಪಿಯಾನೋ ನುಡಿಸಲು ಎದ್ದ. ಅವನೆ ಸಂಗೀತ ಶಿಕ್ಷಕನಾಗಿದ್ದುದರಿಂದ ಶಾಲೆಯ ಹಾಡಿನ ತಂಡದೊಂದಿಗೆ ಸೇರಿ ಹಾಡುವುದು ಅಗತ್ಯವಾಗಿತ್ತು. ಆತ ತನ್ನ ಕರವಸ್ತ್ರವನ್ನು ಜೋರಾಗಿ ಕೊಡವಿದ. ತನ್ನ ಮನಸ್ಸಿನ ಹೆದರಿಕೆಯನ್ನು ಹೋಗಲಾಡಿಸಲು ಆತ ಈ ರೀತಿ ಆಗಾಗ ಮಾಡುವುದು ಸಹಜವಾಗಿತ್ತು. ಒಮ್ಮೆ ಇಡಿ ಪ್ರಾರ್ಥನೆಯ ಕೋಣೆಯ ತುಂಬ ಕಳ್ಳ ಬೆಕ್ಕಿನಂತೆ ದೃಷ್ಟಿ ಹರಿಸಿ ಪ್ರಾರ್ಥನಾ ಪದ್ಯವನ್ನು ನಡುಗುವ ಕೈಗಳಿಂದ ಬಿಡಿಸಿಟ್ಟ.

ಒಂದು... ಎರಡು... ಮೂರು...

'ಲೀಡ್ ಕೈಂಡ್ಲಿ ಲೈಟ್...'

ಅನುಮಾನ ಪಡುತ್ತಲೆ ಹ್ಯೂಬರ್ಟ್ ಪಿಯಾನೋ ಮೇಲೆ ಕೈಯಿಟ್ಟ. ಅವನ ಉದ್ದ ಬೆರಳುಗಳು ಆಡಿಸಿದಂತೆ ನಾದ ಆಟವಾಡಿತು. ಲತಿಕಾ ಹೇರ್‌ಬ್ಯಾಂಡ್ ಕಿತ್ತು ಹೋಗಿ ಕುತ್ತಿಗೆಯ ಹತ್ತಿರ ನಿಂತಿತ್ತು. ಪ್ರಿನ್ಸಿಪಾಲ್ ಮಿಸ್ ವುಡ್‌ಳ ಕಣ್ಣಿಗೆ ಬೀಳದಂತೆ ಅದನ್ನು ಸರಿಪಡಿಸಿಕೊಂಡಳು. ಇಂದು ಮುಂಜಾನೆಯೆ ಹ್ಯೂಬರ್ಟ್‌ಗೆ ಭೆಟ್ಟಿಯಾಗಿ ಪ್ರಾರ್ಥನೆಗೆ ಬರಬೇಡ, ವಿಶ್ರಾಂತಿ ತೆಗೆದುಕೋ ಎಂದು ಹೇಳಿದ್ದು ನೆನಪಾಯಿತು.

ಹ್ಯೂಬರ್ಟ್ ದೊಡ್ಡ ಹಟಮಾರಿ ತನ್ನ ಮಾತನ್ನೆ ನಡೆಸುವವ ಎಂದು ಸುಮ್ಮನಾದಳು. ಕರೀಮುದ್ದೀನ್ ಇವತ್ತು ಮುಂಜಾನೆ ಹೇಳಿದ್ದನಷ್ಟೆ- ರಾತ್ರಿಯೆಲ್ಲ ಕೆಮ್ಮಿದ್ದ, ಊರಿಗೆ ಹೋಗುತ್ತೆನೆಂದು ಹೇಳಿದ್ದ, ತನ್ನ ಕತ್ತು ಬಾಗಿಸಿ ಹ್ಯೂಬರ್ಟ್‌ನ ಸುಸ್ತಾದ ಮುಖ ಕಾಣುತದೇನೋ ಎಂದು ದೃಷ್ಟಿ ಹರಿಸಿದಳು. ಆದರೆ ಪಿಯಾನೋ ಮೇಲೆ ಬಗ್ಗಿದ್ದ ಅವನ ತಲೆ ಮಾತ್ರ ಕಾಣಿಸಿತು. 'ಲೀಡ್ ಕೈಂಡ್ಲಿ ಲೈಟ್' ಹಾಡಿನ ಸ್ವರಗಳು ತಾರಕವನ್ನು ಮುಟ್ಟಿವೆ, ಮುಗಿಲು ಮುಟ್ಟಿದ ಸಾಮೂಹಿಕ ಧ್ವನಿ ಇಳಿಯುತ್ತಿತ್ತು. ಮಳೆಯಲ್ಲಿ ತೊಯ್ದ ಬೆಳಕು ಚರ್ಚಿನ ಕಿಡಕಿಯ ಗ್ಲಾಸುಗಳ ಮೂಲಕ ಫಳಫಳನೆ ಹೊಳೆಯುತ್ತಿತ್ತು. ಒಂದು ಬೆಳಕಿನ ಕಿರಣ ಕ್ರಿಸ್ತನ ಪ್ರತಿಮೆಗೆ ವಾರೆಯಾಗಿ

ಬಿದ್ದುಕೊಂಡಿತ್ತು. ಮೇಣಬತ್ತಿಯ ಹೊಗೆಯ ಬೆಳಕಿನಲ್ಲಿ ಮೂಡಿದ್ದ ನೀಲಿ ಬಣ್ಣದ ಗೆರೆ ಕಣ್ಣ ಮುಂದೆ ತೇಲುತ್ತಿತ್ತು. ಪಿಯಾನೋ ಕ್ಷಣ ನಿಂತ ಸಮಯದಲ್ಲಿ ಲತಿಕಾ ಎಲ್ಲಿಯದೋ ಎಲೆಗಳ ಮರ್ಮರ ಸದ್ದನ್ನು ಆಲಿಸುತ್ತಾಳೆ. ಒಂದು ಕ್ಷಣ ಆಕೆ ಎಲ್ಲವನ್ನೂ ಮರೆಯುತ್ತಾಳೆ. ಆಕೆಯ ಕಣ್ಣಿಗೆ ಬಟ್ಟೆ ಕಟ್ಟಿ ಯಾರೋ ಇಲ್ಲಿ ತಂದು ಬಿಟ್ಟಿದ್ದಾರೆ. ಈ ಚರ್ಚ್, ಮೋಂಬತ್ತಿಯ ಬೆಳಗು, ಡಾಕ್ಟರ್‌ರ ಉಪಸ್ಥಿತಿ, ಪಿಯಾನೋ ಸದ್ದು ಇವೆಲ್ಲ ಶೂನ್ಯವೆನಿಸಿದವು. ಪಿಯಾನೋ ನಾದವು ಹೊರಗಿನ ಮಂಜು ಕವಿದ ವಾತಾವರಣದ ಭಾಗವಾಗಿ ಬಿಟ್ಟಿತು. ಈ ಸಂಗತಿಗಳನ್ನು ದಾಟಿದ ಹುಚ್ಚು ನೆನಪೊಂದು ತನ್ನ ಎಂದಿನ ಗೀಳಿನೊಂದಿಗೆ ಮತ್ತು ವಿಲಕ್ಷಣತೆಯೊಂದಿಗೆ ಮುಂದೆ ಬಂದು ನಿಂತಿತು. ಕೈಗೂಡದ ಕನಸು ತೆರೆದುಕೊಂಡಿತು. ಕಾಡಿನಲ್ಲಿ ಹಿತವಾಗಿ ಬೀಸುತ್ತಿರುವ ಗಾಳಿಗೆ ಚಿಕ್ಕ ಚಿಕ್ಕ ಹೂ ಬಿಡುವ ವಿಲ್ಲೋ ಗಿಡಗಳು ಬಾಗುತ್ತಿವೆ. ಪೈನ್ ಮರದ ಎಲೆಗಳ ಮರ್ಮರ ಸದ್ದು ಕಾಲಿಗೆ ಹಿತವೆನಿಸುತ್ತಿದೆ. ಗಿರೀಶ್ ತನ್ನ ಕೈಯಲ್ಲಿ ಮಿಲಿಟರಿ ಹ್ಯಾಟನ್ನು ಹಿಡಿದುಕೊಂಡು ನಿಂತಿದ್ದಾನೆ. ಬಲಿಷ್ಠ ತೋಳು, ಹರವಾದ ಎದೆ, ತಾನು ಅವನಿಗೆ ಚಾರ್ಲ್ಸ್ ಬೋಯರ್ ಎಂದು ಹೆಸರು ಕೊಟ್ಟಿದ್ದೆ. ಅವನಿಗೆ ಅದು ವಿಲಕ್ಷಣವೆನಿಸಿ ನಕ್ಕಿದ್ದ.

'ನಿನ್ನನ್ನು ಮಿಲಿಟರಿಗೆ ಆಯ್ಕೆ ಮಾಡಿದವರು ಯಾರು? ದೊಡ್ಡ ಅಧಿಕಾರಿ ಎಂದು ಹೇಳುತ್ತಿ, ನೋಡು ಸ್ವಲ್ಪ ಮುಟ್ಟಿದರೆ ಸಾಕು ಹುಡುಗಿಯಂತೆ ಕೆನ್ನೆ ಕೆಂಪೇರುತ್ತವೆ' ಇದನ್ನವಳು ಅವನಿಗೆ ಹೇಳಬೇಕಿತ್ತು.

ಎಂದಾದರೊಂದು ದಿನ ಅವನಿಗೆ ಹೇಳಬೇಕೆಂದು ಆ ಮಾತನ್ನು ತನ್ನ ಹೃದಯದಲ್ಲಿಟ್ಟುಕೊಂಡಿದ್ದಳು. ಆದರೆ ಎಂದಾದರೂ ಎನ್ನುವ ದಿನ ಬರಲೇ ಇಲ್ಲ.

'ಕೆಂಪು ಗುಲಾಬಿ!'


'ತಂದಿದ್ದೇನೆ.'

'ಖರೇ ಹೇಳು ತಂದಿದ್ದೀಯೋ? ಇಲ್ಲವೋ?'

ಗಿರೀಶ್ ಸುಮ್ಮನೆ ನಗುತ್ತಾನೆ.

'ಸುಳ್ಳುಗಾರ, ಮೋಸಗಾರ !'

ಯುದ್ಧದ ಸಂಕೇತಗಳನ್ನು ಹೊತ್ತಿದ್ದ ಖಾಕಿ ಡ್ರೆಸ್ಸಿನ ಕಿಸೆಯೊಳಗಿಂದ ಒಂದು ಬತ್ತಿ ಹೋದ ಕೆಂಪು ಗುಲಾಬಿ ಕಾಣಿಸಿತು.



ಅದು ಬಾಡಿಹೋಗಿದೆ.

ಇನ್ನೂ ಅರಳಿಯೇ ಇಲ್ಲ

(ಇದಾವ ಪ್ರೀತಿಯ ರೀತಿ!)

ಗಿರೀಶ್ ಅವಳ ಕೂದಲ ರಾಶಿಯಲ್ಲಿ ಅದನ್ನು ಮುಡಿಸಲು ಪ್ರಯತ್ನಿಸಿ ಸೋಲುತ್ತಾನೆ. ಕೊನೆಗೆ ಕ್ಲಿಪ್ಪಿನ ಕೆಳಗೆ ಸಿಕ್ಕಿಸಿದ.

'ಹಾಂ! ನೋಡು!'

ಅವಳು ಅವನೆಡೆಗೆ ತಿರುಗಿದಳು, ಅಷ್ಟರಲ್ಲಿ ಗಿರೀಶ್ ತನ್ನ ಮಿಲಿಟರಿ ಹ್ಯಾಟ್‌ನ್ನು ಅವಳ ತಲೆಗೆ ಗಕ್ಕನೆ ಸಿಕ್ಕಿಸಿದ. ಲತಿಕಾ ಅವನೆದರು ಪರವಶಗೊಂಡು ನಿಂತಳು. ಅವಳ ತಲೆಯ ಮೇಲೆ ಹ್ಯಾಟು ಹಣೆಯ ಮೇಲೆ ಚಿಕ್ಕ ಕೆಂಪು ಬಿಂದಿ, ಅದರ ಮೇಲೆ ಆಕರ್ಷಕವಾಗಿ ಹಾರಾಡುತ್ತಿರುವ ಕೂದಲು ಅವಳ ಹಣೆಗೆ ತನ್ನ ತುಟಿಗಳನ್ನು ಒತ್ತಿದ. ಎರಡೂ ಕೈಗಳಿಂದ ಅವಳನ್ನು ಬಿಗಿದಪ್ಪಿದ.

'ಲತಿಕಾ, ಮನುಷ್ಯರನ್ನು ತಿನ್ನುವ ಹುಲಿಗಳಿರುತ್ತವಲ್ಲ! ಅದೇ ತರಹ ನೀನು ಗಂಡಸರನ್ನು ತಿನ್ನುವ ಮಾಯೆ! ಕುಮಾಂವ್ ಪ್ರದೇಶದ ಹಂತಕಿ ನೀನು!' ಲತಿಕಾ ಅವನ ಮಾತಿಗೆ ಜೋರಾಗಿ ನಗತೊಡಗಿದಳು.

'ಲತಿಕಾ, ಕೇಳಿಲ್ಲಿ' ಅವನು ದೂರ ಹೋದಂತೆ ಏನೂ ಕೇಳಿಸುವದಿಲ್ಲ.

'ಏನು? ಕೊನೆಯ ಭೇಟಿ! ಉಹುಂ, ಹಾಂ! ಏನೂ ಕೇಳಲೊಲ್ಲದು, ಜೋರಾಗಿ ಹೇಳು.'

'ಕೆಲವೇ ದಿನ, ಬೇಗ ಬಂದು ಬಿಡುತ್ತೇನೆ.'

'ಏನು? ಏನೂ ಕೇಳಿಸುವದಿಲ್ಲ, ಇನ್ನಷ್ಟು ಜೋರಾಗಿ ಹೇಳು!'

ಇಲ್ಲ, ಲತಿಕಾಳಿಗೆ ಏನೂ ಕೇಳಿಸಲೊಲ್ಲದು. ಅವನು ಹೇಳುತ್ತಿರುವುದು, ಅವನು ಹೇಳದೆ ಇರುವುದು, ಎಂದೆಂದೂ ಹೇಳದೆ ಇರುವುದು ಅವಳಿಗೆ ಕೇಳಲಾಗಲಿಲ್ಲ.

ಕರುಣಾಳು ಬಾ ಬೆಳಕೆ...

ವಿದ್ಯಾರ್ಥಿನಿಯರ ಸ್ವರಗಳು ಪಿಯಾನೋ ಸ್ವರದಲ್ಲಿ ಕೂಡಿಕೊಂಡು ತನ್ನನ್ನು ತೂಗಿದಂತಾಗುತ್ತಿದೆ. ಹ್ಯೂಬರ್ಟ್ ಒಂದು ಕ್ಷಣ ಅವಳತ್ತ ನೋಡಿದ. ಮೂರ್ತಿಯಂತೆ ಸ್ತಬ್ಧಳಾಗಿ ನಿಂತಿದ್ದಾಳೆ. ಇದು ಅವಳು ತನಗೆ ತೋರುವ ಉತ್ತರವೆ? ದೀರ್ಘ ಉಸಿರೆಳೆದುಕೊಂಡ. ಆ ದೀರ್ಘ ಉಸಿರಿನಿಂದಲೆ ಬಳಲಿಕೆಯ ಸುಳಿಯೊಂದು ಅವನನ್ನು ಸುತ್ತಿದಂತಾಯಿತು.

'ಲತಿಕಾ ನೋಡಲ್ಲಿ, ಪ್ರಿನ್ಸಿಪಾಲ್ ನಿದ್ದೆ ಮಾಡ್ತಿದಾಳೆ' ಡಾಕ್ಟರ್ ಲತಿಕಾಳ ಕಿವಿಯಲ್ಲಿ ಹೇಳಿದ. ಪ್ರಾರ್ಥನೆ ಮಾಡುವ ನೆಪದಲ್ಲಿ ಆಕೆ ಯಾವಾಗಲೂ ನಿದ್ದೆ ಮಾಡುತ್ತಾಳೆಂದು

ಮುಖರ್ಜಿ ಪದೇ ಪದೇ ಹೇಳುತ್ತಿದ್ದ. ಪ್ರಾರ್ಥನೆಯನ್ನು ಮುಗಿಸಿದ ಫಾದರ್ ಪ್ರಿನ್ಸಿಪಾಲ್‌ಳ ಕಿವಿಯಲ್ಲಿ ಏನೋ ಉಸುರಿದ. ಪ್ರಾರ್ಥನೆ ಸುಗಮವಾಗಿ ಮುಗಿದಿದ್ದಕ್ಕೆ ಹ್ಯೂಬರ್ಟ್‌ನೂ ನಿರಾಳನಾಗಿದ್ದ. ವುಡ್ ಮೇಡಮ್ ಕೊನೆಯ ಮಾತು ಹೇಳುತ್ತ ಮಳೆಯಿಂದಾಗಿ ಪಿಕ್‌ನಿಕ್ ರದ್ದಾಗಿದೆಯೆಂದು, ಹುಡುಗಿಯರು ಊಟದ ಡಬ್ಬಿಯನ್ನು ಹಾಸ್ಟೆಲ್ಲಿನ ಮೆಸ್‌ನಲ್ಲಿಯೆ ಪಡೆಯಬೇಕೆಂದು, ಚರ್ಚಿನ ಹತ್ತಿರವಿರುವ ಮಿಡೋಸ್‌ನಲ್ಲಿ ಎಲ್ಲರಿಗೂ ಚಹಾ ವ್ಯವಸ್ಥೆ ಮಾಡಿರುವುದಾಗಿ ತಿಳಿಸಿದಳು.

ಬೆಟ್ಟಗಳಿಂದಾವೃತವಾದ ಈ ಪ್ರದೇಶದಲ್ಲಿ ಮಳೆ ಯಾವಾಗ ಬರುತ್ತದೆ, ಯಾವಾಗ ಹೋಗುತ್ತದೆ ಎಂದು ಹೇಳುವುದೆ ಕಷ್ಟ. ಕೆಲವು ಕ್ಷಣಗಳ ಹಿಂದೆ ತೊಯ್ದು ತುಪ್ಪಡಿಯಾಗಿ ಗಡಗಡ ನಡಗುತ್ತಿದ್ದ ಅದು ಈಗ ಶುಭ್ರ ನೀಲಿಯಾಕಾಶದ ಸೂರ್ಯನ ಬಿಸಿಲಿನಲ್ಲಿ ಹೊಳೆಯುತ್ತಿತ್ತು. ಚರ್ಚನ್ನು ದಾಟಿ ಬಂದ ಲತಿಕಾಳಿಗೆ ಅವಳಿಗೆ ಪ್ರಿಯವಾಗಿದ್ದ ವಿಲ್ಲೋ ಮರಗಳು ಮುತ್ತಿನ ಹನಿಗಳನ್ನುದರಿಸಿದವು. ಜಗಲಿಯಲ್ಲಿ, ದಾರಿಯಲ್ಲಿ ಎಲ್ಲಿ ಬೇಕೆಂದರಲ್ಲಿ ಹುಡುಗಿಯರು ಜಮಾಯಿಸಿದ್ದರು. ಹಾಸ್ಟೆಲಿನ ಉಪಹಾರಕ್ಕೆ ಇನ್ನೂ ಸಮಯವಿದ್ದುದರಿಂದ ಹಾಸ್ಟೆಲ್‌ಗೆ ಮರಳುವ ಅಗತ್ಯವಿರಲಿಲ್ಲ. ಕಟ್ಟಿ ಹಾಕಿದ್ದ ಶಿಸ್ತಿನ ಸರಪಣಿಯನ್ನು ಬಿಚ್ಚಿದುದರಿಂದ ಎಲ್ಲೆಲ್ಲೂ ಹುಡುಗಿಯರ ಮಾತು, ಕಲರವ, ಕೂಗಾಟ ಕೇಳಿಬರುತ್ತಿತ್ತು. ಪ್ರಿನ್ಸಿಪಾಲ್ ವುಡ್ ಈ ಗದ್ದಲದಿಂದ ರೋಸಿ ಹೋದರೂ ಫಾದರ್ ಇದ್ದುದರಿಂದ ಗದರದೆ ಸುಮ್ಮನಾದಳು. 'ನಾಳೆ ಎಲ್ಲ ಹುಡುಗಿಯರು ಹೊರಟು ಹೋಗುತ್ತಾರೆ. ಶಾಲೆ–ಹಾಸ್ಟೆಲ್ಲು ಎಲ್ಲ ಖಾಲಿ ಖಾಲಿ' ಎಂದು ಫಾದರ್‌ನ ಮುಖ ನೋಡಿದಳು. ಚುರುಕು ಬಿಸಿಲಿಗೆ ಫಾದರ್ ಎಲ್ಮಂಡ್‌ರ ಮುಖ ಮತ್ತಷ್ಟು ಕೆಂಪಾಗಿತ್ತು. ಕಾರಿಡಾರಿನಲ್ಲಿ ನಡೆದು ಬರುತ್ತ ಫಾದರ್ ಎಂದರು– 'ಸೂಟಿಯಲ್ಲಿ ಹಾಸ್ಟೆಲಿನಲ್ಲಿ ಯಾರಾದರೂ ಇರ್ತಾರೇನು?.' ಡಾ. ಮುಖರ್ಜಿ... ಅವರ ಮಾತಿನಲ್ಲಿ ತುಸು ಕೊಂಕಿತ್ತು.

ಫಾದರ್ ಮಾತಿನಿಂದ ವುಡ್‌ಳಿಗೆ ಆಶ್ಚರ್ಯವಾಯಿತು. 'ಚಳಿಗಾಲ ಇರಲಿ, ಬೇಸಿಗೆ ಬರಲಿ, ವರ್ಷಪೂರ್ತಿ ಡಾಕ್ಟರ್ ಇಲ್ಲಿಯೆ ಇರುವುದು.' ಡಾಕ್ಟರ್ ಬಗ್ಗೆ ಮಾತು ಹೊರಳಿದ್ದು ಮಹತ್ವದ್ದು ಅನ್ನಿಸಲಿಲ್ಲ.

'ಯಾಕೆ ಡಾಕ್ಟರ್ ಸೂಟಿಗೆ ಹೊರಗೆ ಹೋಗುವುದಿಲ್ಲ!' ಫಾದರ್‌ನ ಪ್ರಶ್ನೆಗೆ ವುಡ್ ನಗುತ್ತ ಅಂದಳು:

'ಒಂದೆರಡು ತಿಂಗಳಲ್ಲಿ ಬರ್ಮಾಗೆ ಹೋಗಿ ಬರುವುದು ಹೇಗೆ ಸಾಧ್ಯ?'

'ವುಡ್, ಇನ್ನೊಂದು ಮಾತು, ಲತಿಕಾ ಒಬ್ಬಳೆ ಹಾಸ್ಟೆಲ್ಲಿನಲ್ಲಿ ಇರುವುದು ನನಗೆ ಯಾಕೋ ಸರಿ ಅನಿಸೋದಿಲ್ಲ'

'ಆದರೆ ಫಾದರ್, ಯಾವುದೇ ಶಿಕ್ಷಕರು ತಮ್ಮ ಸ್ವಂತ ಖರ್ಚಿನಲ್ಲಿ ರಜೆಯಲ್ಲಿ ಇರಬಹುದೆಂದು ಶಾಲೆಯ ಕಾಯಿದೆಯಲ್ಲಿಯೆ ಇದೆ'

'ವುಡ್, ನಾನು ಕಾಯ್ದೆ ಬಗ್ಗೆ ಮಾತಾಡುತ್ತಿಲ್ಲ. ಲತಿಕಾ ಒಬ್ಬಳೆ ಇರುವುದು, ಮೇಲಾಗಿ ಈ ಡಾಕ್ಟರ್ ಅಷ್ಟೇನೂ ಒಳ್ಳೆಯವನಲ್ಲ'

'ಫಾದರ್, ಅದಕ್ಕ್ಯಾಕ ಚಿಂತಿಸಬೇಕು? ಆ ರೀತಿ ಯೋಚನೆ ತಪ್ಪು ಅನ್ಸುತ್ತೆ. ಲತಿಕಾ ಸಣ್ಣ ಹುಡುಗಿಯಲ್ಲ'

ಲತಿಕಾ ಬಗ್ಗೆಯಾಗಲಿ ಅಥವಾ ಯಾರ ಬಗ್ಗೆಯಾಗಲಿ ಫಾದರ್ ಮನಸ್ಸಿನಲ್ಲಿ ಇಂತಹ ಕೆಟ್ಟ ಆಲೋಚನೆಯಿದೆಯೆಂದು ಪ್ರಿನ್ಸಿಪಾಲ್‌ಳಿಗೆ ತಿಳಿದಿರಲಿಲ್ಲ.

ಪ್ರಿನ್ಸಿಪಾಲ್ ವುಡ್‌ಳ ಗಡಸು ಮಾತಿನಿಂದ ಫಾದರ್ ಒಂದು ಕ್ಷಣ ಅವಾಕ್ಕಾದರು, 'ಛೇ, ಛೇ, ನನ್ನ ಮಾತಿನ ಅರ್ಥ ಅದಲ್ಲ. ನಾನು ಯಾಕೆ ಹೇಳಿದೆನೆಂದರೆ ಹಿಂದೆ ಮಿಲಿಟರಿ ಅಧಿಕಾರಿ ಮತ್ತು ಲತಿಕಾ ಸಂಬಂಧದ ಗುಲ್ಲು ಎದ್ದಿತ್ತಲ್ಲ, ಅಂತಹ ಸಂದರ್ಭದಲ್ಲಿ ಒಂದು ಶಾಲೆಗೆ ಕೆಟ್ಟ ಹೆಸರು ಬರೋದು ತಡ ಆಗೋದಿಲ್ಲ.'

'ಆ ಪ್ರಕರಣ ನನಗೆ ಗೊತ್ತು ಫಾದರ್, ಗಿರೀಶ್ ಒಳ್ಳೆಯವನಿದ್ದ. ಪಾಪ ಅಕಾಲಿಕ ಸಾವು! ಅವನ ಆತ್ಮಕ್ಕೆ ಯಾವತ್ತೂ ಶಾಂತಿ ಇರಲಿ' ಕ್ರಾಸ್ ಸಂಕೇತದ ಮೂಲಕ ಪ್ರಾರ್ಥಿಸಿದಳು. ಈಗಂತೂ ಫಾದರ್‌ಗೆ ಸಿಟ್ಟು ಬರತೊಡಗಿತು. ದೊಡ್ಡ ಮೂರ್ಖಳಂತೆ ಮಾತಾಡುತ್ತಿದ್ದಾಳೆ. ತಾನೊಂದು ಹೇಳಿದರೆ ಅವಳೊಂದು ಹೇಳುತ್ತಾಳೆ. ಲತಿಕಾಳ ಪರವಹಿಸಿ ನಿಲ್ಲುತ್ತಾಳೆ. ಡಾಕ್ಟರ್ ಬಗ್ಗೆ ಏನೊ ಹೇಳಲು ಹೋದರೆ ವಿಷಯವನ್ನು ಹಗುರವಾಗಿಸುತ್ತಾಳೆ. ಸುಮ್ಮನಿರುವುದೆ ಲೇಸೆಂದು 'ವುಡ್ ಮಳೆ ಬರಲಿಲ್ಲ ನೋಡು, ಪಿಕ್‌ನಿಕ್ ರದ್ದು ಮಾಡಬಾರದಿತ್ತು' ಎಂದ. ವುಡ್ ಏನೂ ಹೇಳಲಿಲ್ಲ.

ಹ್ಯೂಬರ್ಟ್ ಚರ್ಚಿನಿಂದ ಹೊರಗೆ ಬಂದಾಗ ಪ್ರಕಾಶಮಾನವಾದ ಸೂರ್ಯನೆದುರು ಒಮ್ಮೆಲೆ ಕಣ್ಣು ಕುಕ್ಕಿದಂತಾಯಿತು. ಒಂದು ಹಿಡಿ ಕುದಿಯುವ, ಕ್ಷೋಭೆಗೊಂಡ ಪ್ರಜ್ವಲಿಸುವ ಬೆಳಕನ್ನು ಅವನ ಕಣ್ಣಿಗೆ ತೂರಿದಂತಾಯಿತು. ನಾದದ ಅಲೆಗಳು ಇನ್ನೂ ಅವನ ತಲೆಯಲ್ಲಿ ಗಿರಗುಟ್ಟುತ್ತಿದ್ದವು. ಪಿಯಾನೋ ನುಡಿಸುವಾಗ ಯಾವಾಗಲೂ ಅವನು ಉದ್ವೇಗಕ್ಕೊಳಗಾಗುತ್ತಿದ್ದ. ಎದೆಬಡಿತ ಜಾಸ್ತಿಯಾಗುತ್ತಿತ್ತು. ಒಂದು ಸ್ವರದಿಂದ ಮತ್ತೊಂದು ಸ್ವರಕ್ಕೆ ದಾಟುವಾಗ ಒಂದು ಕಂದಕವನ್ನು ದಾಟಿದ ಅನುಭವ ಅವನಿಗಾಗುತ್ತಿತ್ತು. ಮಹಾಮೌನ ತುಂಬಿರುವ ಅವ್ಯಕ್ತ ಕಂದರಗಳನ್ನು ದಾಟುತ್ತ, ಅಗಾಧ ಆಕಾಶವನ್ನು ಉಳಿಹೊಡೆದು ದಾರಿ ಮಾಡಿಕೊಳ್ಳುತ್ತ, ಸುತ್ತಗಟ್ಟಿರುವ ಮಂಜನ್ನು ಸರಿಸುತ್ತ ಕಳೆದುಹೋಗುತ್ತಿದ್ದ ಶಬ್ದಗಳಿಗೆ ಸ್ವಲ್ಪ ಅರ್ಥ ತುಂಬಲು ಪ್ರಯತ್ನಿಸಿದ್ದ. ಅವರೋಹಣದ ಪ್ರತಿ ನಿಲುಗಡೆಯೂ ಸಾವಿನ ಒಂದು ಹೆಜ್ಜೆಯಾಗಿ ದಟ್ಟಕಾಡಿನ ಮರ್ಮರಗುಟ್ಟುತ್ತಿರುವ ಗಿಡಗಂಟೆಗಳ ನೆರಳುಗಳಲ್ಲಿ ಗೊತ್ತಿದ್ದ ಕಾಲುದಾರಿಯನ್ನು ತಪ್ಪಿಸಿಕೊಂಡಂತಾಗಿ, ಸಾಯುತ್ತಿರುವ ಸ್ವರದ ಕುರುಹನ್ನು ಹುಟ್ಟುತ್ತಿರುವ ಲಯಕ್ಕೆ ವರ್ಗಾಯಿಸಿದಂತಾಗಿ, ಸತ್ತರೂ ನಾಶವಾಗದೆ ಇರುವ ಮರಣದಲ್ಲಿಯೆ ಬದುಕಿದಂತಾದ ಅನುಭವದಲ್ಲಿ ಹ್ಯೂಬರ್ಟ್ ಕಳೆದು ಹೋಗಿದ್ದ.



'ಡಾಕ್ಟರ್, ಸಾವು ಕೂಡ ಹೀಗೆ ಬರುತ್ತದೆಯೆ?' ಡಾಕ್ಟರ್‌ನನ್ನು ಅವನು ಕೇಳಬೇಕೆಂದುಕೊಂಡ. ತನ್ನ ಪ್ರಶ್ನೆಗೆ ಅವನು ಬರಿ ನಗಬಹುದು. ಕೆಲವು ದಿನಗಳಿಂದ ತನ್ನಿಂದ ಏನನ್ನೋ ಆತ ಮುಚ್ಚಿಡುತ್ತಿದ್ದಾನೆ. ತನ್ನ ಬಗ್ಗೆ ಕನಿಕರ ತೋರಿಸುತ್ತಿದ್ದಾನೆ, ಇವತ್ತು ಬಂದು ಸಂಗೀತ ಕಚೇರಿ ನೀಡಬೇಡವೆಂದು ಹೇಳಿದ, ಯಾಕೆಂದು ಕೇಳಿದರೆ ಏನೋ ಕಾರಣ ಹೇಳುತ್ತಾನೆ. ವಿಷಯವನ್ನು ತೇಲಿಸುತ್ತಾನೆ. ತನ್ನಿಂದ ಮುಚ್ಚಿಡುವ ಸಂಗತಿಯಾದರೂ ಏನಿದೆ? ಇದರಿಂದ ತನ್ನ ಮನಸ್ಸು ಮತ್ತಷ್ಟು ಸಂಶಯಗ್ರಸ್ತವಾಗಿದೆಯೆಂದು ಅನಿಸಿತು ಹ್ಯೂಬರ್ಟ್‌ಗೆ.

ಹುಡುಗಿಯರು ರಸ್ತೆಯಲ್ಲಿ ಜಿಗಿಯುತ್ತ ಬರುತ್ತಿದ್ದರು. ನೀಲಿ ಫ್ರಾಕು, ಬಿಳಿ ಬೆಲ್ಟ್, ವಿಧವಿಧವಾದ ರಿಬ್ಬನ್ ಬಿಸಿಲಿಗೆ ಥಳಥಳ ಹೊಳೆಯುತ್ತಿದ್ದವು. ಸೀನಿಯರ್ ಕೇಂಬ್ರಿಡ್ಜ್ ಕ್ಲಾಸಿನ ಕೆಲವು ಹುಡುಗಿಯರು ಚರ್ಚ್ ಉದ್ಯಾನದಲ್ಲಿದ್ದ ಗುಲಾಬಿ ಹೂವುಗಳನ್ನು ಕಿತ್ತು ತಮ್ಮ ಮುಡಿಗೇರಿಸಿಕೊಂಡರು. ಕಂಟೋನ್‌ಮೆಂಟ್ ಪ್ರದೇಶದ ಹಲವು ಸೈನಿಕರು ಬೆಳೆದು ನಿಂತ ಹುಡುಗಿಯರನ್ನು ಕಂಡು ಏನೇನೋ ಅಶ್ಲೀಲ ಮಾತು ಹೇಳತೊಡಗಿದ್ದರು. ಯಾರಿಗೂ ಕಾಣದಂತೆ ಬಗ್ಗಿ ಸೀಟಿ ಹೊಡೆಯುತ್ತಿದ್ದರು. ಸನ್ನೆ ಮಾಡುತ್ತಿದ್ದರು.

'ಹಲೋ, ಹ್ಯೂಬರ್ಟ್'

ಒಮ್ಮಿಂದೊಮ್ಮೆಲೆ ಕೇಳಿಬಂದ ಧ್ವನಿಗೆ ಹ್ಯೂಬರ್ಟ್ ಚಕಿತನಾದ. ನೋಡಿದರೆ ಬಗಲಲ್ಲಿ ಒಂದು ದಪ್ಪ ರಜಿಸ್ಟರ್ ಹಿಡಿದುಕೊಂಡು ಲತಿಕಾ ತನ್ನೆದುರು ನಿಂತಿದ್ದಾಳೆ.

'ಏನು ಲತಿಕಾ ನೀನು ಇನ್ನು ಇಲ್ಲಿಯೆ ಇದ್ದೀ?' ಹ್ಯೂಬರ್ಟ್ ಅವಳಲ್ಲಿ ದೃಷ್ಟಿ ನೆಟ್ಟ. ಉದ್ದ ತೋಳಿನ ಕೆನೆ ಬಣ್ಣದ ಉಣ್ಣೆಯ ಜಾಕೇಟ್ ತೊಟ್ಟಿದ್ದಳು. ಕುಮಾಂವ್

ಪ್ರದೇಶದ ಹುಡುಗಿಯರಂತೆ ಅವಳ ಕತ್ತು ದುಂಡನೆ ಸುಂದರವಾಗಿತ್ತು. ಗೋಧಿ ಬಣ್ಣದ ಅವಳು ಬಿಸಿಲಿಗೆ ಗುಲಾಬಿ ವರ್ಣಕ್ಕೆ ತಿರುಗಿದ್ದಳು.

'ಏನಿಲ್ಲ, ಎಷ್ಟು ಹುಡುಗಿಯರು ಊರಿಗೆ ಹೋಗ್ತಾರೆ ಅಂತ ಹೆಸರು ಬರ್‍ಕೊಳ್ಳತಾ ಇದ್ದೆ... ನಾನು ಇಲ್ಲೆ ಇರಬೇಕಲ್ಲ, ನೀನು ಕೂಡ ನಾಳೆ ಹೋಗ್ತಿಯಂತೆ.'

'ಹಾಗೆ ಅನ್ಕೊಂಡಿದ್ದೇನೆ. ಇಲ್ಲಿ ಇದ್ದು ಏನು ಮಾಡುವದಿದೆ ಹೇಳು? ಶಾಲೆಯ ಕಡೆ ಹೊರಟೀದಿಯಲ್ಲ?'

'ಹೌದು, ಬಾ.'

ಹುಡುಗಿಯರು ಗುಂಪು ಗುಂಪಾಗಿ ಜಲ್ಲಿ ಕಲ್ಲುಗಳ ಇಡೀ ಕಚ್ಚಾರಸ್ತೆಯುದ್ದಕ್ಕೂ ನಡೆಯುತ್ತಿದ್ದುದರಿಂದ ಪೋಲೋ ಮೈದಾನ ಬಳಸಿಹೋಗುವ ಕಾಲುದಾರಿಯನ್ನು ಇವರಿಬ್ಬರೂ ಹಿಡಿದರು.

ಗಾಳಿ ಹೋರಾಗಿ ಬೀಸುತ್ತಿದ್ದುದರಿಂದ ಫುಟ್‌ಪಾತಿನ ಮೇಲೆ ಪೈನ್ ಮರದ ಎಲೆಗಳು ರಾಶಿ ರಾಶಿಯಾಗಿ ಬೀಳುತ್ತಿದ್ದವು ಮತ್ತು ಗಾಳಿಗೆ ಒಮ್ಮೆಲೆ ಹಾರುತ್ತಿದ್ದವು. ಎಲೆಗಳ ಗುಂಪು ಇದ್ದ ಕಡೆ ಹ್ಯೂಬರ್ಟ್ ತನ್ನ ಕೋಲಿನಿಂದ ದಾರಿ ಮಾಡಿಕೊಳ್ಳುತ್ತ ನಡೆದಿದ್ದ. ಲತಿಕಾ ಹಿಂದೆ ನಿಂತು ಪ್ರತಿ ಸಲ ಅವನು ಹಾದಿ ಸುಗಮವಾಗಿಸಿಕೊಳ್ಳುವುದನ್ನು ಕುತೂಹಲದಿಂದ ನೋಡುತ್ತಿದ್ದಳು. ಅಲಮೋರಾ ಗುಡ್ಡದ ಕಡೆಯಿಂದ ಚಿಕ್ಕ ಚಿಕ್ಕ ಮೋಡಗಳು ಸೂರ್ಯನಿಗೆ ರೇಶಿಮೆಯ ಕರವಸ್ತ್ರವನ್ನು ಅಡ್ಡ ಹಿಡಿದಂತೆ ತುಸು ನಿಂತು ಮತ್ತೆ ಗಾಳಿಗೆ ಚದುರಿದವು. ಈ ಆಟದಲ್ಲಿ ಬೆಳಕು ಒಮ್ಮೆ ಮಂದವಾಗುತ್ತ ಮತ್ತೊಮ್ಮೆ ಗ್ಯಾಸಿಗೆ ಹಾಕಿದ ಬಲೆಯಂತೆ ಬೆಳಕಿನ ಹೊದಿಕೆ ಹಾಸಿದಂತೆ ಇಡೀ ಪಟ್ಟಣವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿತ್ತು.

ಲತಿಕಾ ಒಮ್ಮಿಂದೊಮ್ಮೆಲೆ ಹ್ಯೂಬರ್ಟ್‌ನನ್ನು ದಾಟಿ ಮುಂದೆ ನಡೆದಳು. ಆತ ಏದುಸಿರು ಬಿಡುತ್ತ ಅವಳನ್ನು ಹಿಂಬಾಲಿಸಿದ. ಸ್ಮಶಾನ ಪ್ರದೇಶವನ್ನು ದಾಟಿದ ಮೇಲೆ ಲತಿಕಾ ಅವನಿಗಾಗಿ ನಿಂತಳು. ಸೂಟಿಯ ದಿನಗಳಲ್ಲಿ ಏಕಾಂತವನ್ನು ದೂಡುವದಕ್ಕಾಗಿ ಆಕೆ ಕೆಲವು ಸಲ ಈ ಸ್ಮಶಾನಕ್ಕೆ ಬಂದುದನ್ನು ನೆನಪಿಸಿಕೊಂಡಳು. ಪೈನ್ ಮರಗಳಿಂದ ಹಿಮ ಹತ್ತಿಯ ತುಂಡುಗಳಂತೆ ಸಮಾಧಿಗಳ ಮೇಲೆ ಬೀಳುತ್ತಿತ್ತು. ಗುಡ್ಡದ ಮೇಲೆ ನಿಂತು ಹಿಮದಲ್ಲಿ ಮುಚ್ಚಿಹೋಗಿರುವ ರಸ್ತೆ ಮತ್ತು ಅದು ಸಾಗಿದಂತೆ ಸಿಗುವ ಫಾದರ್ ಎಲ್ಮಂಡ್‌ರ ಮನೆ, ಮಿಲಿಟರಿ ಆಸ್ಪತ್ರೆ, ಅಂಚೆ ಕಛೇರಿ, ಚರ್ಚಿನ ಮೆಟ್ಟಿಲು ಮುಂತಾದವುಗಳನ್ನು ಪತ್ತೆ ಹಚ್ಚುವುದು ಆಕೆಗೆ ಖುಶಿ ಕೊಡುವ ಹವ್ಯಾಸವಾಗಿತ್ತು. ಪದಬಂಧ ಬಿಡಿಸಿದಂತೆ, ಚಕ್ರಬಂಧ ಭೇದಿಸಿದಂತೆ, ಒಗಟು ಒಡೆದಂತೆ ಇದು ಅವಳಿಗೆ ಸಂತೋಷ ತರುತ್ತಿತ್ತು.

'ಅಬ್ಬಾ ಲತಿಕಾ, ನೀನು ಎಷ್ಟೊಂದು ವೇಗವಾಗಿ ನಡೀತಿ !' ಹ್ಯೂಬರ್ಟ್‌ನಿಗೆ ಸಾಕು ಸಾಕಾಗಿತ್ತು. ದಣಿವಿನಿಂದ ಅವನ ಮುಖ ಬಾಡಿತ್ತು. ಹಣೆಯ ಮೇಲೆ ಬೆವರ

ಹನಿಗಳು ಮೂಡಿದ್ದವು.

'ನಿನ್ನೆ ರಾತ್ರಿ ನಿನಗೆ ಆರಾಮ ಇರಲಿಲ್ಲವಂತೆ ! ಲತಿಕಾ ಕೇಳಿದಳು.

'ಅದು ನಿನಗೆ ಹೇಗೆ ಹೊತ್ತಾಯ್ತು? ನಾನು ಆ ಥರ ಕಾಣಿಸ್ತಿದ್ದೇನು?' ಅವನಿಗೆ ಸಂಶಯ ಮೂಡಿತು.

'ಹಾಗೇನಿಲ್ಲ, ಕರೀಮುದ್ದೀನ್ ಅಕಸ್ಮಾತ್ ಭೆಟ್ಟಿಯಾದಾಗ ಹೇಳಿದ' ಲತಿಕಾ ತುಸು ತಬ್ಬಿಬ್ಬಾದಳು.

'ಹೆದರುವಂಥದ್ದೇನಿಲ್ಲ, ಹಳೆಯ ನೋವು, ಬಂದಿತ್ತಷ್ಟೆ. ಈಗ ಆಲ್‌ರೈಟ್' ಎಂದು ಎದೆಯುಬ್ಬಿಸಿ ಜೋರಾಗಿ ಹೆಜ್ಜೆ ಹಾಕಿದ.

'ಡಾ. ಮುಖರ್ಜಿ ಬಂದು ಭೆಟ್ಟಿಯಾದನೇನು?'

'ಹೂಂ, ಇವತ್ತು ಮುಂಜಾನೆ ಬಂದಿದ್ದ, ಅವನಿಗೆ ತಲೆ ಕೆಟ್ಟಿದೆ, ನಾನು ಆರು ತಿಂಗಳು ವಿಶ್ರಾಂತಿ ತಗೋಬೇಕಂತೆ, ಏನೂ ತೊಂದರೆಯಿಲ್ಲ ಅಂತಾನೆ. ರೆಸ್ಟ್ ಮಾತ್ರ ತಗೋ ಅಂತಾನೆ, ಏನು ಹಾಗೆಂದರೆ?'

ಹ್ಯೂಬರ್ಟ್‌ನ ಧ್ವನಿಯಲ್ಲಿ ಅಡಗಿದ್ದ ಹೆದರಿಕೆ ಲತಿಕಾಳಿಗೆ ಅರ್ಥವಾಯಿತು. 'ನೀನು ಸುಮ್ಮಸುಮ್ಮನೆ ಚಿಂತೆ ಮಾಡ್ತೀಯ, ಹ್ಯೂಬರ್ಟ್. ಕಾಲ ಬದಲಾಗಿದೆ. ಮೊದಲಿನಂತಿಲ್ಲ, ಆರೋಗ್ಯವಂತ ಮನುಷ್ಯರು ಕೂಡ ಒಮ್ಮಿಂದೊಮ್ಮೆಲೆ ಕಾಯಿಲೆ ಬೀಳಬಹುದು.'

ಅವಳ ಮಾತಿನಿಂದ ಹ್ಯೂಬರ್ಟ್‌ನಿಗೆ ಸ್ವಲ್ಪ ನೆಮ್ಮದಿಯೆನಿಸಿತು. ಅವಳ ಮುಖವನ್ನೇ ದಿಟ್ಟಿಸಿದ, ತನ್ನನ್ನು ಸಂತೈಸುವ ಸಲುವಾಗಿ ಹಾಗೆ ಹೇಳುತ್ತಿಲ್ಲವೆಂದು ಖಾತ್ರಿ ಪಡಿಸಿಕೊಂಡ. 'ನೀನು ಹೇಳಿದ್ದು ಖರೆ. ಲತಿಕಾ, ಡಾಕ್ಟರ್‌ನ ಮಾತು ಕೇಳಿ ನನಗಂತೂ ಬಹಳಷ್ಟು ಹೆದರಿಕೆಯಾಗಿತ್ತು. ಆರು ತಿಂಗಳು ರಜೆ ತಗೊಂಡು ಸುಮ್ಮನೆ ಮಲಗುವದೆಂದರೆ ನರಕ. ಶಾಲೆಯೆಂದ್ರೆ ಮಕ್ಕಳು ಇರ್ತಾರೆ. ಹೊತ್ತು ಹೋಗೋದೆ ತಿಳಿಯೋದಿಲ್ಲ, ನಿಜ ಹೇಳಬೇಕಂದ್ರೆ ಈ ಎರಡು ತಿಂಗಳು ದಿಲ್ಲಿಯಲ್ಲಿ ಕಳೆಯೋದು ಅಂದ್ರೆ ಸಾಕಪ್ಪಾ ಸಾಕು ಅನ್ನಿಸಿ ಬಿಡುತ್ತೆ.' 'ಹ್ಯೂಬರ್ಟ್ ನೀನು ದಿಲ್ಲಿಗೆ ಹೊರಡುವುದು ನಾಳೇನಾ?' ಎಂದು ಅಂದವಳು ಮುಂದೆ ಮಾತಾಡದೆ ಗಕ್ಕನೆ ನಿಂತು ಬಿಟ್ಟಳು. ಎದುರಿಗೆ ಪೋಲೋ ಮೈದಾನವಿತ್ತು. ಕಂಟೋನ್‌ಮೆಂಟ್‌ಗೆ ಹೊರಟಿರುವ ಮಿಲಿಟರಿ ಟ್ರಕ್ಕುಗಳು ಆಚೆ ಬದಿ ನಿಂತಿದ್ದವು. ಒಂದು ಕ್ಷಣ ಅವಳ ಕಣ್ಣುಗಳು ತುಂಬಿದಂತಾದವು. ಮರೆತುಹೋಗಿದ್ದ ಕನಸೊಂದು ಅವಳಿಗರಿವಿಲ್ಲದೆ ಆ ಕಣ್ಣಲ್ಲಿ ನಿಂತಂತೆ ಹ್ಯೂಬರ್ಟ್‌ಗೆ ಭಾಸವಾಯಿತು.

ಸಾವರಿಸಿಕೊಂಡ ಆಕೆ 'ಹಾಗಾದರೆ ನೀನು ನಾಳೆ ದಿಲ್ಲಿಗೆ ಹೋಗುತ್ತಿದ್ದೀಯ?' ಎಂದಳು. ಈ ಸಲ ಅವಳ ಮಾತಿನಲ್ಲಿ ಪ್ರಶ್ನೆಯಿರದೆ ಕುತೂಹಲವಿರದೆ, ತಾನು

ಬೇರೆ, ಹ್ಯೂಬರ್ಟ್ ಬೇರೆ ಎನ್ನುವ ಪ್ರಜ್ಞೆ ಮನೆ ಮಾಡಿತ್ತು.

'ಹ್ಯೂಬರ್ಟ್, ನಿನಗೆ ಗೊತ್ತೇನು? ಬಹಳ ವರ್ಷಗಳ ಹಿಂದೆ ನಾನೂ ದಿಲ್ಲಿಗೆ ಹೋಗಿದ್ದೆ, ಅಲ್ಲಿ ನನ್ನ ಚಿಕ್ಕಮ್ಮ ಇದ್ದಳು, ನಾನು ಆಗ ಚಿಕ್ಕ ಹುಡುಗಿ, ದಿಲ್ಲಿಯಲ್ಲಿ ಅದು ಇದು ಅಂತ ಸುತ್ತಿದ್ದ ನೆನಪು. ಎಲ್ಲ ನೆನಪಿಲ್ಲ, ಆದರೆ ಕುತುಬ್‌ಮೀನಾರ ಹತ್ತಿದ ನೆನಪನ್ನು ಮರೆಯೋಕಾಗಲ್ಲ. ಕಟ್ಟ ಕಡೆಯ ಮಹಡಿಯಿಂದ ಕೆಳಗೆ ನೋಡಿದ್ದು–ಅಬ್ಬಾ ! ಈಗಲೂ ಮೈ ಜಂ ಅನ್ನುತ್ತೆ. ಕೆಳಗಿನ ಜನ ಆಟದ ಗೊಂಬೆಗಳ ಹಾಗೆ ಕಾಣಿತ್ತಿದ್ದರು. ನಾವು ಅವರ ತಲೆ ಮೇಲೆ ಶೇಂಗಾ ಒಗೆದವು. ಆದರೆ ಅವರು ಯಾರೊಬ್ಬರೂ ನಮ್ಮ ಕಡೆ ತಿರುಗಿ ನೋಡಲಿಲ್ಲವಂತ ಬೇಸರ ಆಗಿತ್ತು. ನನ್ನ ಅಮ್ಮ ಬೈಯ್ದಳು. ಅಲ್ಲಿಂದ ಕೆಳಗೆ ನೋಡಿದಾಗ ಹೆದರಿಕೆ ಅನಿಸಿತ್ತು. ಈಗಿನ ದಿಲ್ಲಿಗೂ ಆಗಿನ ದಿಲ್ಲಿಗೂ ಹೊಂದಿಸಲೆಬಾರದು, ಅಲ್ವಾ?'

ಮಾತಾಡುತ್ತ ಮುಂದೆ ಸಾಗಿದರು. ಗಾಳಿಯ ಅಬ್ಬರ ಕಡಿಮೆಯಾಗಿತ್ತು. ಓಡುತ್ತಿದ್ದ ಮೋಡಗಳು ಸಾವಕಾಶವಾಗಿ ಸರಿಯತೊಡಗಿದ್ದವು. ಅವುಗಳ ನೆರಳು ನಂದಾದೇವಿ ಹಾಗೂ ಪಂಛುಲಿ ಬೆಟ್ಟಗಳ ಮೇಲೆ ಬಿದ್ದಿರುವುದು ಕಾಣಿಸುತ್ತಿತ್ತು. ಶಾಲೆ ಹತ್ತಿರ ಬರುತ್ತಿದ್ದಂತೆ ಪೈನ್ ಮರಗಳು ಮರೆಯಾಗತೊಡಗಿದ್ದವು. ಅಪ್ರಿಕಾಟ್ ಗಿಡಗಳ ಸುತ್ತ ಕೆಂಪು ಬರುಟ್ ಹೂವುಗಳು ಸೂರ್ಯನ ಬಿಸಿಲಿಗೆ ನಗುತ್ತಿದ್ದವು. ನಡೆಯುತ್ತ ಇಡೀ ಪೋಲೋ ಬಯಲನ್ನು ದಾಟಿ ಬಂದಿದ್ದರು.

'ಲತಿಕಾ, ಈ ರಜೆಯಲ್ಲಿ ನೀನು ಎಲ್ಲಿಯಾದ್ರೂ ಹೋಗಿ ಬರೋದು ಉತ್ತಮ ಅನಿಸುತ್ತೆ, ಚಳಿಗಾಲ ಅಂದ್ರೆ ಈ ಸ್ಥಳದಲ್ಲಿ ಯಾರಿರ್ತಾರೆ ಹೇಳು?'



‘ಹಾಗೇನಿಲ್ಲ ಹ್ಯೂಬರ್ಟ್, ಮೊದಲನೆ ಸಲ ಹಾಗನಿಸಿತ್ತು. ಆದರೆ ಈಗ ರೂಢಿಯಾಗಿಬಿಟ್ಟಿದೆ. ಕ್ರಿಸ್‌ಮಸ್ ಹೊತ್ತಿಗೆ ಕ್ಲಬ್‌ನಲ್ಲಿ ನೃತ್ಯ, ಅದು–ಇದು ಕಾರ್ಯಕ್ರಮ ಇರುತ್ತೆ. ಹೊಸವರ್ಷಕ್ಕೆ ಮಿಲಿಟರಿ ಪ್ರದೇಶದ ಪರೇಡ್ ಬಯಲಿನಲ್ಲಿ ಹಬ್ಬ ಇದ್ದ ಹಾಗೆ ಅನಿಸುತ್ತದೆ. ಸ್ಕೇಟಿಂಗ್, ಮಿಲಿಟರಿ ಬ್ಯಾಂಡ್, ಬಣ್ಣ ಬಣ್ಣದ ಬಲೂನು, ಫ್ಯಾನ್ಸಿ ಡ್ರೆಸ್ ಮುಂತಾದವು ಇರ್ತಾವೆ. ನಂತರ ಕೆಲದಿನ ಕಳೆದ ಮೇಲೆ ಚಳಿಗಾಲದ ಆಟಗಳ ನೆಪದಲ್ಲಿ ಇಂಗ್ಲಿಷ್ ಪ್ರವಾಸಿಗಳು ಬರಲು ಸುರು ಮಾಡೋದ್ರಿಂದ ಹೊತ್ತು ಹೋಗೋದು ತಿಳಿಯೋದಿಲ್ಲ. ಮುಂದಿನ ವರ್ಷ ಬರ್ತೇವೆ ಅಂತ ನನ್ನ ಹೊಸ ಸ್ನೇಹಿತರು ಹೇಳ್ತಾರೆ. ಬರುವದಿಲ್ಲವೆಂದು ನನಗೆ ಗೊತ್ತು. ಅವರಿಗೂ ಗೊತ್ತು. ಇದರಿಂದ ಗೆಳೆತನಕ್ಕೇನು ಸಂಚಕಾರವಿಲ್ಲ. ಮುಂದೆ ಹಿಮ ಕರಗಲು ಶುರುವಾಗುತ್ತದೆ. ಅಷ್ಟೊತ್ತಿಗೆ ನೀವೆಲ್ಲ ಬರಲು ಪ್ರಾರಂಭಿಸ್ತೀರಿ. ನೋಡು, ಸೂಟಿ ಹೇಗೆ ಶುರುವಾತು, ಹೇಗೆ ಮುಗೀತು ಅನ್ನೋದು ಗೊತ್ತಾಗೋದಿಲ್ಲ.’

ಹ್ಯೂಬರ್ಟ್ ಗಾಬರಿಯಿಂದ ತನ್ನತ್ತ ನೋಡುತ್ತಿರುವುದನ್ನು ಲತಿಕಾ ಗಮನಿಸಿದಳು, ಇಷ್ಟೊತ್ತು ತಾನು ಹುಚ್ಚರ ರೀತಿಯಲ್ಲಿ ಅಸಂಬದ್ಧವಾಗಿ ಏನೇನೋ ಬಡಬಡಿಸಿದ್ದು ಗೊತ್ತಾಗಿ ಅವಳಿಗೆ ಒಂದು ತರದ ಮುಜುಗರವುಂಟಾಯಿತು. ‘ಹ್ಯೂಬರ್ಟ್, ಕ್ಷಮಿಸಿಬಿಡು, ಏನೇನೊ ಮಾತಾಡಿದೆ, ಗೊತ್ತಾಗಲಿಲ್ಲ. ಒಂದೊಂದು ಸಲ ನಾನು ಹೀಗೆಯೆ ಬಾಲಿಶವಾಗಿ ಮಾತಾಡಿಬಿಡ್ತೇನೆ.’

‘ಲತಿಕಾ...’ ಹ್ಯೂಬರ್ಟ್ ಸಣ್ಣದಾದ ಧ್ವನಿಯಲ್ಲಿ ಶುರು ಮಾಡಿದವನು ನಿಂತ. ನಡೆಯುವುದನ್ನೂ ನಿಲ್ಲಿಸಿದ. ಅವನ ಧ್ವನಿಯ ಭಾರಕ್ಕೆ ಅವಳಿಗೆ ಅಚ್ಚರಿಯಾಗಿತ್ತು.

‘ಏನು ಹ್ಯೂಬರ್ಟ್’

‘ಆ ಪತ್ರ... ನನಗೆ ಆ ರೀತಿ ಬರೆದದ್ದಕ್ಕೆ ನಾಚಿಕೆಯಾಗ್ತಿದೆ. ಅವಮಾನ ಆಗ್ತಿದೆ. ದಯವಿಟ್ಟು ಅದನ್ನು ಕೊಟ್ಟು ಬಿಡು. ಆ ರೀತಿ ನಾನು ಬರೆದಿಲ್ಲ ಅಂತ ಅಂದ್ಕೊ’

ಲತಿಕಾಗೆ ಒಮ್ಮೆಲೆ ಏನೂ ತಿಳಿಯಲಿಲ್ಲ, ಭಯ, ಗಾಬರಿಯಿಂದ ಸ್ತಂಭಿಭೂತಳಾಗಿ ಅವನನ್ನೆ ನೋಡುತ್ತಿದ್ದಳು.

ಅವನು ಸಾವಕಾಶವಾಗಿ ಅವಳ ಭುಜದ ಮೇಲೆ ಕೈಯಿಟ್ಟು ಅಂದ. ‘ನಿನ್ನೆ ರಾತ್ರಿ ಡಾಕ್ಟರ್ ನನಗೆ ಎಲ್ಲವನ್ನೂ ಹೇಳಿದ. ನನಗೆ ಇದು ಮೊದಲೆ ಗೊತ್ತಿದ್ದರೆ... ನಾನು...’ ಹ್ಯೂಬರ್ಟ್ ತೊದಲಿದ.

‘ಹ್ಯೂಬರ್ಟ್...’ ಅವಳಿಗೂ ಮಾತು ಹೊರಡಲಿಲ್ಲ. ಮುಖ ನಿಸ್ತೇಜಗೊಂಡಿತ್ತು.

ಸ್ವಲ್ಪ ಹೊತ್ತು ಅವರು ಶಾಲೆಯ ಗೇಟಿನ ಹತ್ತಿರ ಏನೂ ಮಾತಾಡದೆ ಸುಮ್ಮನೆ ನಿಂತಿದ್ದರು.

ಶಿಕ್ಷಕರಿಗಿಂತ ಮೊದಲೆ ವಿದ್ಯಾರ್ಥಿನಿಯರು ಮೆಡೋಸ್ ಹೆಸರಿನ ಹುಲುಸಾಗಿ

ಹುಲ್ಲು ಬೆಳೆದಿದ್ದ ಪಾರ್ಕ್‌ನ್ನು ಮುಟ್ಟಿದ್ದರು. ಮೇಕೆಗಳು ಅಡ್ಡಾಡಿದ ಹಾದಿಯಿಂದ, ಎಲೆ-ಕೆಸರು-ಕಡ್ಡಿಗಳಿಂದ, ಸಣ್ಣ-ದೊಡ್ಡ ಗಿಡಗಳಿಂದ ಅದು ತುಂಬಿತ್ತು. ಎರಡೂ ಕಡೆಗೆ ಗುಡ್ಡಗಳಿದ್ದುದರಿಂದ ಆ ಬೆಟ್ಟಗಳ ತೊಟ್ಟಿಲಾಗಿತ್ತು. ವಿಹಾರಕ್ಕೆಂದು ಬಂದವರು ಅದನ್ನು ಹಾಳು ಮಾಡಿದ ರೀತಿ ನೋಡಿದ ತಕ್ಷಣ ಗೊತ್ತಾಗುತ್ತಿತ್ತು. ಒಲೆಗೆ ಅಂತ ಸುಟ್ಟ ಕಲ್ಲುಗಳು, ಅರೆಬರೆ ಸುಟ್ಟ ಗಿಡಗಳು, ಜನ ಕುಳಿತು ಬಿಟ್ಟುಹೋದ ದಿನಪತ್ರಿಕೆಗಳ ಹಾಳೆಗಳು, ಎಲ್ಲ ಕಡೆಗೂ ಬಿದ್ದು ಕಣ್ಣಿಗೆ ಕಿರಿಕಿರಿ ಉಂಟು ಮಾಡುತ್ತಿದ್ದವು. ಪಾರ್ಕಿನ ನಡುವೆ ಅಂಕುಡೊಂಕಾಗಿ ಹಾದುಹೋಗಿದ್ದ ಸಣ್ಣ ತೊರೆಯೊಂದು ಮಧ್ಯಾಹ್ನ ಬಿಸಿಲಿನಲ್ಲಿ ದೂರದಿಂದ ನೋಡಿದರೆ ಹಾಲು ಬಣ್ಣದ ರಿಬ್ಬನ್ ಪಟ್ಟಿಯೊಂದು ಬಿದ್ದಂತೆ ಕಾಣಿಸುತ್ತಿತ್ತು. ಬಿದಿರಿನಿಂದ ಸೇತುವೆಯೊಂದನ್ನು ಹಳ್ಳಕ್ಕೆ ಅಡ್ಡಲಾಗಿ ನಿರ್ಮಿಸಿದ್ದರು. ಹುಡುಗಿಯರು ಆಗಲೆ ಆ ಸೇತುವೆಯ ಮೇಲೆ ಸ್ಥಿರವಾಗಿ ನಿಲ್ಲಲು ಸಾಧ್ಯವಾಗದೆ ತಪ್ಪು ತಪ್ಪು ಹೆಜ್ಜೆ ಹಾಕುತ್ತಿದ್ದರು. ಗಾಳಿ ಬೀಸಿದ ಕಡೆಗೆ ವಾಲುತ್ತಿದ್ದರು.

'ಡಾಕ್ಟರ್, ನಾನು ನೋಡಿಲ್ಲದಿದ್ದರೆ ಇಡೀ ಅರಣ್ಯಕ್ಕೆ ನೀನು ಬೆಂಕಿ ಹಚ್ಚುತ್ತಿದ್ದೆ' ಎಂದು ಪ್ರಿನ್ಸಿಪಾಲ್ ವುಡ್ ಆತ ಸಿಗರೇಟು ಹಚ್ಚಿ ಒಗೆದಿದ್ದ ಕಡ್ಡಿಯನ್ನು ಆರಿಸಿದಳು. ತೊರೆಯಿಂದ ಸ್ವಲ್ಪ ದೂರದಲ್ಲಿಯೆ ಪೈನ್ ಮರದ ನೆರಳಿನಲ್ಲಿ ಅವನು ಕುಳಿತಿದ್ದ. ಮೇಯಲಿಕ್ಕೆಂದು ಆಡುಗಳು ಬಂದು ಹೋಗುವ ಕಾಲುದಾರಿ ಕೆಳಗಿನ ಹಳ್ಳಿಗಳಿಗೆ ಹಾದಿ ಮಾಡಿತ್ತು. ಇನ್ನೊಂದು ಮೇಕೆದಾರಿ ಕೆಳಗಡೆಯ ಗ್ರಾಮವೊಂದಕ್ಕೆ ಕರೆದೊಯ್ಯುತ್ತಿತ್ತು. ಆ ಊರಿನ ಜನ ಗುಡ್ಡದ ಮೇಲೆ ಸ್ವಲ್ಪ ಭೂಮಿಯನ್ನು ಸಾಗುವಳಿ ಮಾಡಿ ಬೀಟ್‌ರೂಟ್ ಬೆಳೆದಿದ್ದರು. ಮಧ್ಯಾಹ್ನದ ನೀರವ ವಾತಾವರಣದಲ್ಲಿ ಆಡು-ಮೇಕೆ-ದನ-ಕರು-ಬೆಕ್ಕು ಮುಂತಾದ ಪ್ರಾಣಿಗಳು ಮೇಯುತ್ತಲೆ ಅವು ಮಾಡುತ್ತಿರುವ ಶಬ್ದಗಳು ಹಿತವಾಗಿ ಬೀಸುತ್ತಿದ್ದ ಗಾಳಿಯೊಡನೆ ಬೆರೆತುಕೊಂಡಿದ್ದವು.

ಡಾಕ್ಟರ್ ಮೆತ್ತನೆಯ ಹುಲ್ಲ ಮೇಲೆ ಕಾಲು ಚಾಚಿ ಕುಳಿತ. 'ಪ್ರಿನ್ಸಿಪಾಲ್ ಮೇಡಮ್ ಅವರೆ, ಎಂದಾದರೂ ನೀವು ಕಾಡಿನ ಬೆಂಕಿಯನ್ನು ನೋಡಿದ್ದಿರಾ? ಅದು ಸಾವಕಾಶ ಹಬ್ಬುತ್ತ ಇಡೀ ಕಾಡನ್ನು ತಬ್ಬಿಕೊಳ್ಳುತ್ತದೆ. ಅದು ಒಂದು ತರಹ ನಿಶೆ ಏರಿದ ಹಾಗೆ, ಎಲ್ಲ ದಿಕ್ಕುಗಳಿಂದ ಸುತ್ತುವರೆಯುತ್ತದೆ.'

'ಡಾಕ್ಟರ್, ನೀನು ಎಂದಾದರೂ ನೋಡಿದ್ದೀಯ? ನನಗಂತೂ ಅಂತಹವನ್ನು ನೋಡಲು ತುಂಬಾ ಹೆದರಿಕೆ.'

'ಕಾಡುಗಳು ಸುಟ್ಟು ಹೋಗುವುದನ್ನು ನಾನು ನೋಡಿಲ್ಲ-ಆದರೆ ನಗರಗಳು ಸುಟ್ಟು ಹೋಗುವುದನ್ನು ನೋಡಿದ್ದೇನೆ' ಮುಗಿಲು ನೋಡುತ್ತ ಡಾಕ್ಟರ್ ಮಾತು ಮುಂದುವರೆಸಿದ. 'ಒಂದು ನಗರ ಸುಟ್ಟ ಮೇಲೆ ಮತ್ತೊಂದು ನಗರ, ಮನೆಗಳು ಇಸ್ಪೀಟಿನ ಎಲೆಗಳಂತೆ ಬಿದ್ದವು.'

'ಅದನ್ನೆಲ್ಲಿ ನೋಡಿರುವಿ ಡಾಕ್ಟರ್?'



'ಯುದ್ಧವಾದಾಗ, ನಾನು ಹುಟ್ಟಿ ಬೆಳೆದ ನಗರವೆ ಸುಟ್ಟು ಬೂದಿಯಾಗುವುದನ್ನು ನಾನು ನೋಡಿದೆ. ರಂಗೂನ್‌ಗೆ ಬೆಂಕಿ ಹತ್ತಿರುವುದನ್ನು ಕಣ್ಣಾರೆ ನೋಡಿದೆ. ಅದು ಒಂದೇ ಸಮನೆ ಉರಿಯುತ್ತಿತ್ತು.'

ಪ್ರಿನ್ಸಿಪಾಲ್ ವುಡ್‌ಗೆ ಆಘಾತವಾದಂತಾದರೂ ಅವಳ ಕುತೂಹಲ ಕಡಿಮೆಯಾಗಲಿಲ್ಲ. 'ನಿಮ್ಮ ಮನೆಯು ಸಹ ಸುಟ್ಟು ಹೋಯಿತೇನು?'

ಡಾಕ್ಟರ್ ಒಂದು ನಿಮಿಷ ಮೌನವಹಿಸಿದ. ಆಮೇಲೆ ಅಂದ 'ನಾವು ಮನೆ ಬಿಟ್ಟು ಓಡಿ ಬಂದಿದ್ದೆವು, ಏನಾಯ್ತೊ ಗೊತ್ತಾಗಲಿಲ್ಲ.'

'ಆಮೇಲೆ ನಿನಗೆ ರಂಗೂನಿಗೆ ತಿರುಗಿ ಹೋಗಬೇಕೆಂದು ಎಂದೂ ಅನಿಸಲಿಲ್ಲವೇ?'

ಡಾಕ್ಟರ್ ಆಕಳಿಸಿ ಪಕ್ಕಕ್ಕೆ ತಿರುಗಿದ, ಮುಖ ಕೆಳಗೆ ಹಾಕಿದ. ಕಣ್ಣು ಮುಚ್ಚಿದ್ದವು. ಒಂದಷ್ಟು ಕೂದಲು ಹಣೆಯ ಮೇಲೆ ಬಿದ್ದವು.

'ನನಗೆ ಅನಿಸುವುದರಿಂದ ಏನಾಗುತ್ತದೆ ಮೇಡಮ್? ನಾನು ಬರ್ಮಾದಲ್ಲಿದ್ದಾಗ ಇಲ್ಲಿಗೆ ಬರುತ್ತೇನೆಂದು ಕನಸು ಕಂಡಿದ್ದೆನೆ? ನನ್ನ ಜೀವನದ ಕೊನೆಯ ವರ್ಷಗಳನ್ನು ಇಲ್ಲಿ ಕಳೆಯುತ್ತೇನೆಂದು ಯೋಚಿಸಿದ್ದೆನೆ?'

'ಡಾಕ್ಟರ್, ನೀನು ಏನೇ ಹೇಳು, ತನ್ನ ಸ್ವಂತ ದೇಶದಲ್ಲಿ ಇದ್ದ ತೃಪ್ತಿ ಬೇರೆ ಕಡೆಗೆ ಸಿಗಲಾರದು. ಎಷ್ಟೋ ವರ್ಷ ಇದ್ದರೂ ಕೂಡ ಹೊರಗಿನವರಾಗಿ ಇರಬೇಕಾಗುತ್ತದೆ.'

ಡಾಕ್ಟರ್ ಸಿಗರೇಟ್ ಎಳೆದು ಗಾಳಿಯಲ್ಲಿ ಹೊಗೆ ಬಿಟ್ಟ.

'ಹಾಗೆಂದರೆ, ಈಗ ನಾನು ನನ್ನ ದೇಶಕ್ಕೆ ಹೋದರೂ ಸೈತ ಪರಕೀಯನೆ ಆಗುತ್ತೇನೆ. ದೇಶ ಬಿಟ್ಟು ಎಷ್ಟೋ ವರ್ಷವಾಯಿತು. ಈಗ ನನ್ನ ಗುರುತು ಯಾರಿಗಿರುತ್ತದೆ?

ಯಾರು ನನ್ನನ್ನು ಕರೆದು ಮಾತನಾಡಿಸುತ್ತಾರೆ? ಈ ಇಳಿವಯಸ್ಸಿನಲ್ಲಿ ಹೊಸ ಜೀವನವನ್ನು ನಾನು ಹೇಗೆ ಆರಂಭ ಮಾಡಬೇಕು.'

'ಈ ಗುಡ್ಡಗಾಡಿನ ಸಸ್ಯಗಳಂತೆ ಯಾಕೆ ಒಂದೆ ರೀತಿಯ ಜೀವನ ನಡೆಸುತ್ತ ದಿನಗಳೆಯುತ್ತೀಯ? ಭಾರತದಲ್ಲಿಯೆ ಇರಬೇಕಾಗಿದ್ದರೆ ದೊಡ್ಡ ನಗರಕ್ಕೆ ಹೋಗಿ ದವಾಖಾನೆ ಹಾಕಿದರೆ ಬೇಕಾದಂತಹ ಜೀವನ ನಡೆಸಬಹುದು.'

'ಯಾವ ನಗರಕ್ಕೆ ಹೋಗಬೇಕು? ಮಿಸ್ ವುಡ್, ನನಗೆ ಎಲ್ಲಿದ್ದರೂ ನನ್ನ ಪೇಷಂಟ್ಸ್ ಬಂದೆ ಬರುತ್ತಾರೆ. ನಾನು ಇಲ್ಲಿ ಕೇವಲ ಕೆಲವು ದಿನಗಳಿಗಾಗಿ ಬಂದೆ, ಆದರೆ ನೋಡು ಇಷ್ಟು ವರ್ಷ ಇದ್ದೇನೆ. ನನಗೆ ಯಾವಾಗ ಬೇಸರ ಅನ್ನಿಸುತ್ತದೆಯೋ ಆವಾಗ ಬೇರೆ ಕಡೆ ಹೊರಡುತ್ತೇನೆ. ತನ್ನ ದೇಶವೆ ಆಗಲಿ, ಅನ್ಯ ದೇಶವೆ ಆಗಲಿ ಬೇರುಗಳನ್ನು ಬಿಟ್ಟು ಬದುಕದವನು ನೆನಪುಗಳನ್ನು ಬಿಡಲು ಸಾಧ್ಯವಿಲ್ಲ. ನನ್ನ ಬಗ್ಗೆ ನನಗೆ ಯಾವುದೆ ಭ್ರಾಂತಿಯಿಲ್ಲ, ಇಷ್ಟಕ್ಕೆ ನನಗೆ ತೃಪ್ತಿಯಿದೆ.' ಡಾಕ್ಟರ್ ಹೇಳಿದ್ದನ್ನು ಪ್ರಿನ್ಸಿಪಾಲ್ ಕಿವಿಯಲ್ಲಿ ಹಾಕಿಕೊಳ್ಳಲಿಲ್ಲ. ಅವನು ತನ್ನ ಮಾತನ್ನೆ ನಡೆಸುವವನು, ವಿಲಕ್ಷಣ ಸ್ವಭಾವದವನು, ಉಪೇಕ್ಷೆ ಮಾಡುವ ಗುಣದವನೆಂದು ಅವಳಿಗೆ ಗೊತ್ತಿತ್ತು. ಡಾಕ್ಟರ್ ಮಾತ್ರ ಯಾವಾಗಲೂ ನಂಬಿಗಸ್ಥ ವ್ಯಕ್ತಿಯೆಂದು ಮೊದಲಿನಿಂದಲೂ ಅವಳ ಅನಿಸಿಕೆಯಾಗಿತ್ತು. ತಿಳಿದೋ, ತಿಳಿಯದೆಯೋ ಒಂದು ಸಲವೂ ಸಂಶಯಾಸ್ಪದ ರೀತಿಯಲ್ಲಿ ಅವನು ನಡೆದುಕೊಂಡಿರಲಿಲ್ಲ. ಆಕೆ ದೀರ್ಘ ನಿಟ್ಟುಸಿರುಗೈದಳು. ಆಕಸ್ಮಾತ್ ಅವನು ಆಲಸಿ ಹಾಗೂ ಉಪೇಕ್ಷೆ ಮಾಡದ ವ್ಯಕ್ತಿಯಾಗಿರದಿದ್ದರೆ ಇಷ್ಟೊತ್ತಿಗೆ ಪ್ರಸಿದ್ಧ ಡಾಕ್ಟರ್‌ನಾಗಿ ಖ್ಯಾತಿಗಳಿಸುತ್ತಿದ್ದನೇನೋ ಎಂದುಕೊಂಡಳು.

ತನ್ನ ಬ್ಯಾಗಿನೊಳಗಿಂದ ಉಣ್ಣೆಯ ಉಂಡೆ ಮತ್ತು ಹೆಣಿಗೆಯ ಸೂಜಿಯನ್ನು ಹೊರತೆಗೆದಿಟ್ಟಳು. ನಂತರ ಅಗಲ ತಳದ ಡಬ್ಬಿಯನ್ನು ಎತ್ತಿಕೊಂಡು ಅದನ್ನು ಮೀಟಿ ತೆಗೆದಳು, ಈರುಳ್ಳಿ ಸೇರಿಸಿ ಮೆದುವಾದ ಬ್ರೆಡ್ಡಿನಲ್ಲಿ ಸುರುಳಿಸುತ್ತಿರುವ ಹ್ಯಾಂಬರ್ಗರ್ ಮತ್ತು ಮೊಟ್ಟೆಯ ಸ್ಯಾಂಡ್‌ವಿಚ್‌ಗಳು ಡಬ್ಬಿಯಲ್ಲಿ ಒತ್ತಿ ಕುಳಿತಿದ್ದವು. ಥರ್ಮಾಸ್‌ನಿಂದ ಕಾಫಿ ಸುರುವಿಕೊಂಡು 'ಡಾಕ್ಟರ್, ಬೇಗ ಕುಡಿಯಿರಿ, ಕಾಫಿ ತಣ್ಣಗಾಗಿದೆ' ಎಂದಳು.

ಡಾಕ್ಟರ್ ಮಾತ್ರ ಕಾಲುಗಳನ್ನು ಮತ್ತಷ್ಟು ಉದ್ದಕ್ಕೆ ಚಾಚಿದ, ಏನೇನೊ ಬಡಬಡಿಸುತ್ತಿದ್ದ. ಮೊಣಕೈ ಮೇಲೆ ತಲೆಯಿಟ್ಟಿದ್ದ. ಪ್ರಿನ್ಸಿಪಾಲ್ ಹತ್ತಿರ ಸರಿದು ನೋಡಿದಳು. ಅವನು ಗೊರಕೆ ಹೊಡೆಯುತ್ತಿದ್ದ. ಸಿಗರೇಟು ಸೇದುವವನಂತೆ ಮೇಲ್ತುಟಿ ಮುಂದೆ ಬಂದಿತ್ತು. ಬೆರಳಲ್ಲಿದ್ದ ಸಿಗರೇಟು ಮೇಲೆ ಕೆಳಗಾಗಿ ತೂಗಾಡುತ್ತಿತ್ತು.

ಮಕ್ಕಳೆಲ್ಲ ಆಟವಾಡುತ್ತಿದ್ದರು, 'ಮೇರಿ ನಿನಗೇನು ಬೇಕು' ಎಂದು ಎರಡನೆ ಇಯತ್ತೆಯ ಹುಡುಗಿಯರು ಮೇರಿಗೆ ಗಂಟು ಬಿದ್ದಾಗ ಚೈತನ್ಯದ ಚೀಲುಮೆಯಾಗಿದ್ದ ಮೇರಿ ಓಡುತ್ತ, ಗಾಳಿಯಲ್ಲಿ ಕೈ ಬೀಸುತ್ತ 'ನನಗೆ ನೀಲಿ ಬೇಕು ನೀಲಿ' ಎಂದಳು, ಗುಂಪು

ಒಡೆದು ನೀಲಿ ಬಣ್ಣದ ವಸ್ತುವನ್ನು ಮುಟ್ಟಲು ಹುಡುಗಿಯರೆಲ್ಲ ಚೀರುತ್ತ, ಹಾಡುತ್ತ ಓಡೋಡಿದರು.

ಊಟ ಮುಗಿದಿತ್ತು, ಪಾರ್ಕಿನಲ್ಲಿ ವಿದ್ಯಾರ್ಥಿನಿಯರು ಅಲ್ಲಷ್ಟು, ಇಲ್ಲಷ್ಟು ಎಂದು ಹಂಚಿ ಹೋಗಿದ್ದರು. ದೊಡ್ಡ ವಿದ್ಯಾರ್ಥಿನಿಯರು ಮರ ಹತ್ತಿ ಸಣ್ಣ ಸಣ್ಣ ಕೊಂಬೆಗಳನ್ನು ಮುರಿದು ಚಹಾ ಕಾಯಿಸಲಿಕ್ಕೆ ಕಟ್ಟಿಗೆ ಕೂಡಿ ಹಾಕುತ್ತಿದ್ದರು. ಮಧ್ಯಾಹ್ನದ ಬಿಸಿಲಿಗೆ ಉದ್ಯಾನವನವು ಕೂಡ ತೂಕಡಿಸುತ್ತಿರುವಂತೆ ತೋರುತ್ತಿತ್ತು. ಆಗೀಗ ಬೀಸುವ ಗಾಳಿ, ಮರದೆಲೆಗಳ ಸದ್ದು ಕೇಳುತ್ತಿತ್ತು. ಗಿಡದಿಂದ ಹಾರಿದ ಪಕ್ಷಿಯೊಂದು ಕೆಳಗೆ ಹರಿಯುತ್ತಿದ್ದ ತೊರೆಯಲ್ಲಿ ಮುಳುಗಿ ನಂತರ ಎದ್ದು ಗೊತ್ತು ಗುರಿಯಿಲ್ಲದೆ ಅಲ್ಲಿಯೆ ಸ್ವಲ್ಪ ಹಾರಾಡಿತು. ಆಮೇಲೆ ಅಲ್ಲಿಯೆ ಕಂಟಿಯೊಳಗೆ ಅವಿತಿತು. ಕಾಡು ಮೌನವಾಗಿದೆಯೆಂತೆನಿಸಿದರೂ ಅದರ ಧ್ವನಿ ಮಾತ್ರ ನಮಗೆ ಕೇಳುತ್ತಲೆ ಇರುತ್ತದೆ. ಗಾಢನಿದ್ದೆಯಲ್ಲಿದ್ದರೂ ಕನಸುಗಳು ಮನಸ್ಸನ್ನು ಎಚ್ಚರವಾಗಿಟ್ಟಿರುವಂತೆ ಕಾಡಿನ ಇಂಚರ ಮತ್ತು ಅದರ ವೈವಿಧ್ಯತೆಯ ಸೊಲ್ಲು ಪ್ರಶಾಂತತೆಯ ತೆಳು ಪರದೆಯನ್ನು ಆಗಿಂದಾಗ ಸರಿಸುತ್ತಲೆ ಇರುತ್ತವೆ. ಸಾಗಿ ಬರುವ ಅಲೆಗಳಂತೆ ಬಂದು ಗಾಳಿಯಲ್ಲಿ ರೆಕ್ಕೆ ಬಡಿಯುತ್ತವೆ. ಕಾಡಿನ ಇನಿದನಿ ಅಗೋಚರವಾಗಿದ್ದುಕೊಂಡು ತನ್ನ ಇರವನ್ನು ತೋರಿಸುತ್ತಿರುತ್ತದೆ.

ಜ್ಯೂಲಿಯ ಮೋಟು ಕೂದಲಲ್ಲಿ ಕೈಯಾಡಿಸುತ್ತ ಲತಿಕಾ ಕೇಳಿದಳು, 'ಜ್ಯೂಲಿ, ನಾನು ನಿನ್ನೆ ಭೆಟ್ಟಿಯಾಗು ಎಂದಿದ್ದೆ.'

'ಮೇಡಮ್, ನಾನು ನಿಮ್ಮ ರೂಮಿಗೆ ಬಂದಿದ್ದೆ, ಆದರೆ ನೀವಿರಲಿಲ್ಲ'

ಡಾಕ್ಟರ್ ಹಾಗೂ ಹ್ಯೂಬರ್ಟ್ ಜೊತೆ ತಾನು ಇದ್ದದ್ದು ನೆನಪಾಯ್ತು.

'ಅಲ್ಲ, ಜ್ಯೂಲಿ, ನಾನು ನಿನ್ನನ್ನು ಏನೋ ಕೇಳಬೇಕಿತ್ತು' ಜ್ಯೂಲಿಯ ಕಣ್ಣಲ್ಲಿ ತಾನೆ ಅಪರಾಧಿ ಎನಿಸುವೆನೊ ಏನೋ ಎನ್ನುವ ಭಾವ ಲತಿಕಾಳಲ್ಲಿತ್ತು. ಜ್ಯೂಲಿ ಮಾತ್ರ ಕುತೂಹಲದಿಂದ ತನ್ನ ಮೇಡಮ್‌ನನ್ನು ದಿಟ್ಟಿಸಿದಳು.

'ಜ್ಯೂಲಿ ನೀನು ಸುಳ್ಳು ಹೇಳುವುದಿಲ್ಲ ಅಂದ್ಕೊಂಡೇನೆ, ನಿನಗೆ ಯಾರಾದರೂ ಮಿಲಿಟರಿ ಅಧಿಕಾರಿಗಳ ಪರಿಚಯ ಇದೆಯಾ?'

ಜ್ಯೂಲಿಯ ಕಣ್ಣುಗಳಲ್ಲಿ ಈಗ ಕೌತುಕದ ಬದಲು ಹೆದರಿಕೆ ಮನೆ ಮಾಡಿತು. ನೀಲಿ ಬಣ್ಣದ ಕವರೊಂದನ್ನು ಲತಿಕಾ ಜ್ಯೂಲಿಯ ಮುಖಕ್ಕೆಸೆದಳು. ಪತ್ರ ಹಿಡಿಯಲು ಚಾಚಿದ್ದ ಅವಳ ಕೈ ನಡಗುತ್ತಿತ್ತು. ಅದರ ಮೇಲೆ ಅವಳ ಹೆಸರು ಹಾಸ್ಟೆಲ್ ವಿಳಾಸವಿತ್ತು.

'ಇದು ನಮ್ಮ ಅಣ್ಣನ ಪತ್ರ ಮೇಡಮ್, ಅವನು ಝಾನ್ಸಿಯಲ್ಲಿ ಇದಾನೆ,' ಅವಳು ಪತ್ರವನ್ನು ಸ್ಕರ್ಟಿನ ಕಿಸೆಯಲ್ಲಿಡಲು ನೋಡಿದಳು.

'ಜ್ಯೂಲಿ, ಆ ಪತ್ರ ಕೊಡು ಇಲ್ಲಿ' ಲತಿಕಾ ಕೀರಲು ಧ್ವನಿಯಲ್ಲಿ ಚೀರಿದಳು. ಜ್ಯೂಲಿಗೆ ಬೇರೆ ದಾರಿಯಿರಲಿಲ್ಲ.

'ಏನು, ನಿಮ್ಮ ಅಣ್ಣ ಝಾನ್ಸಿ ಊರಲ್ಲಿ ಇರ್ತಾನೆಯೇ?' ಅವಳ ಮಾತಿನಲ್ಲಿ ವ್ಯಂಗ್ಯವಿತ್ತು. 'ಇದೇನು ನೋಡು !' ಪತ್ರ ಬಂದಿದ್ದ ಕುಮಾಂವ್ ಮಿಲಿಟರಿ ಪ್ರದೇಶದ ಸೀಲು ಜ್ಯೂಲಿಯನ್ನು ಅಣಕಿಸುತ್ತಿತ್ತು. ಅದನ್ನು ನೋಡಿ ಅವಳ ಮುಖ ಬಣ್ಣಗೆಟ್ಟಿತು.

'ಯಾರಿವನು?'

ಯಾವುನೋ ಒಬ್ಬ ಮಿಲಿಟರಿ ಅಧಿಕಾರಿಯ ಜೊತೆ ಜ್ಯೂಲಿ ಕಾಣಿಸಿಕೊಂಡ ಗುಸುಗುಸು ಸುದ್ದಿ ಲತಿಕಾಳನ್ನು ತಲುಪಿತ್ತಾದರೂ ಅದನ್ನು ಅವಳು ನಂಬಿರಲಿಲ್ಲ. ಅಂತಹ ಗಾಳಿಸುದ್ದಿಗಳಿಗೆ ಆಕೆ ಬೆಲೆ ಕೊಡುತ್ತಿರಲಿಲ್ಲ, ಆದರೆ ಈಗ ಜ್ಯೂಲಿಯ ಹೆಸರಿಗೆ ಪತ್ರ !

'ಜ್ಯೂಲಿ, ಪ್ರೀತಿ–ಪ್ರೇಮದ ಬಗ್ಗೆ ತಿಳಕೊಳ್ಳಲು ನೀನಿನ್ನು ಬಹಳಷ್ಟು ಚಿಕ್ಕವಳು, ಇಂಥದ್ದೆಲ್ಲ ನಿನಗೆ ಯಾಕೆ ಬೇಕು?'

ಮಾತಾಡಬೇಕೆಂದರೆ ಜ್ಯೂಲಿಯ ತುಟಿಗಳು ನಡಗುತ್ತಿದ್ದವು. ಆಕೆಯ ಕಣ್ಣುಗಳು ಮಾತ್ರ ಲತಿಕಾ ಮೇಡಮ್ಮಳ ಕಾರುಣ್ಯ ಬೇಡುತ್ತಿದ್ದವು.

'ಆಯ್ತು, ನೀನೀಗ ಹೋಗು, ಸೂಟಿ ಮುಗಿದ ಮೇಲೆ ಮಾತಾಡ್ತೇನೆ'

ಜ್ಯೂಲಿ ಆಸೆಬರುಕ ದೃಷ್ಟಿಯಿಂದ ಆ ಪತ್ರದ ಕಡೆ ನೋಡಿದಳು. ಏನೋ ಹೇಳಬೇಕೆಂದವಳು ಮತ್ತೆ ಸುಮ್ಮನಾಗಿ ಅಲ್ಲಿಂದ ಕದಲಿದಳು. ತನ್ನ ವಿದ್ಯಾರ್ಥಿನಿ ಮರೆಯಾಗಿ ಹೋಗುವವರೆಗೂ ನೋಡುತ್ತ ನಿಂತಿದ್ದ ಲತಿಕಾ ತನ್ನಲ್ಲಿ ಉಂಟಾಗಿರುವ ಸಿಟ್ಟಿನ ಸ್ವಭಾವಕ್ಕೆ ಆಶ್ಚರ್ಯ ಪಟ್ಟುಕೊಂಡಳು. ತನ್ನ ಜೀವನದ ನಿರಾಶೆಯನ್ನು ಈ ರೀತಿ ವ್ಯಕ್ತಪಡಿಸುತ್ತಿರುವೆನೆ? ತಾನೊಬ್ಬಳು ವೃದ್ಧ ಕನ್ಯೆಯಾಗಿ ಮಾರ್ಪಟ್ಟಿರುವೆನೆ?

ಬಹುಶಃ ಇದು ಜ್ಯೂಲಿಯ ಬದುಕಿನಲ್ಲಿ ಎದುರಾಗಿರುವ ಪ್ರಥಮ ಪ್ರೇಮ ಸೆಳೆತವಿರಬೇಕು. ಪ್ರೇಮದ ಭಾವನೆಗಳೆ ಹಾಗೆ. ಪ್ರತಿಯೊಂದು ಹುಡುಗಿಯೂ ಅವುಗಳನ್ನು ತನ್ನ ಹೃದಯದಲ್ಲಿ ಇಟ್ಟುಕೊಂಡು ಕಾವಲು ಕಾಯುತ್ತಾಳೆ. ಅದು ವರ್ಣಿಸಲಸದಳವಾದ ಹಿಗ್ಗು ಹಾಗೂ ಅದರೊಡನೆ ಬೆರೆತಿರುವ ನೋವು. ಅಯ್ಯೋ, ಪ್ರೀತಿಯನ್ನು ಹೇಗೆ ವ್ಯಾಖ್ಯಾನಿಸುವುದು? ಪ್ರೇಮ ಎನ್ನುವದೊಂದು ಸಮುದ್ರದ ದೊಡ್ಡ ಅಲೆ. ನಮ್ಮ ಸಂತೋಷವನ್ನು ಕ್ಷಣಾರ್ಧದಲ್ಲಿ ಮುಳುಗಿಸಿ ಬಿಡುತ್ತದೆ. ಲತಿಕಾ ತನ್ನ ಹಿಂದಿನ ಪ್ರೇಮ ಕಡಲಿನಲ್ಲಿ ಮುಳುಗಿದಳು.

ಅಂತಹ ನೋವಿನ ಮುಳ್ಳುಗಳನ್ನು ತುಳಿದೆ ತಾನು ಬಂದೆ. ಪೈನ್ ಮರಗಳಡಿಯಲ್ಲಿ ತಾನು ಮೌನವಾಗಿ ನಿಂತಿದ್ದೆ. ಗಿರೀಶ್ ಕೇಳಿದ್ದ 'ಯಾಕೆ ಸುಮ್ಮನಿರುವೆ?' ತಾನು ಸುಮ್ಮನಿರಲಿಲ್ಲ. ಹೃದಯದಲ್ಲಿ ದೊಡ್ಡ ಕೋಲಾಹಲವಿತ್ತು. ಆ ಕ್ಷಣ–ಅದನ್ನು

ಮರೆಯಲು ಸಾಧ್ಯವಿಲ್ಲ. ಭಯ ಮತ್ತು ಕುತೂಹಲಗಳು ಬೆರೆತ ಆ ಘಳಿಗೆ. ತನ್ನನ್ನು ಪರವಶಗೊಳಿಸಿದ, ತನಗೆ ಹುಚ್ಚು ಹಿಡಿಸಿದ ಆ ಕ್ಷಣ, ಗಿರೀಶ್‌ನ ಕಡೆ ನೋಡಿದರೆ ಅವನೂ ಪುಕ್ಕಲುಹತ್ತಿಯಾಗಿದ್ದ. ಇದೆ ಪೈನ್‌ಮರದ ಮೇಲೆ ತನ್ನ ಹೇರ್‌ಪಿನ್‌ನಿಂದ ಅವನ ಹೆಸರು ಕೆತ್ತಿದ್ದಳು. ಮರದ ತೊಗಟೆ ದಪ್ಪಗಿದ್ದುದರಿಂದ ಪಿನ್‌ನಿಂದ ಸುಲಿದು ಸುಲಿದು ಸಾಕಾಗಿತ್ತು. ಗಿರೀಶನು ಅವಳ ಹೆಸರನ್ನು ತನ್ನ ಹೆಸರಿನ ಕೆಳಗೆ ಕೊರೆದ. ಒಂದು ಅಕ್ಷರ ಓರೆಯಾದಾಗ ಅವಳು ಬಿದ್ದು ಬಿದ್ದು ನಕ್ಕಳು. ಅದರಿಂದ ಅವನ ನಡಗುವ ಕೈ ಮತ್ತಷ್ಟು ಗಡಗಡವೆಂದಿತು.



ಅವಳು ಚಿಕ್ಕ ಹುಡುಗಿಯಾಗಿದ್ದಾಗ ಆಟದ ಗೊಂಬೆಯನ್ನು ಎಲ್ಲಿಯೊ ಇಟ್ಟು ಮರೆತುಬಿಡುತ್ತಿದ್ದಳು. ಆಮೇಲೆ ಹುಡುಕಿದಾಗ ಸಿಗುತ್ತಿತ್ತು. ಒಮ್ಮೊಮ್ಮೆ ಅವಳಿಗೆ ಶೋಧಿಸುವುದು ಇನ್ನೂ ಮುಂದುವರಿಯಬೇಕಾಗಿತ್ತೆಂದರೆ, ಅದು ಇದ್ದ ಜಾಗವನ್ನು ಬಿಟ್ಟು ಬೇರೆ ಸಂದು-ಗೊಂದುಗಳನ್ನು ತಡವುತ್ತಿದ್ದಳು. ಗೊಂಬೆ ಕಳೆದುಹೋಗುವ ಕಾರಣವಿರುತ್ತಿರಲಿಲ್ಲ. ಹುಡುಕುವದು ಬೇಸರವಾದಾಗ ಅದನ್ನು ಇಟ್ಟ ಜಾಗಕ್ಕೆ ಹೋಗಿ ತೆಗೆದುಕೊಳ್ಳುತ್ತಿದ್ದಳು. ಅಂಥ ಕಲ್ಪನೆ-ನಟನೆಗಳನ್ನು ಈಗ ಮಾಡಲು ಸಾಧ್ಯವಿಲ್ಲವೆ? ಈಗ ಗೊತ್ತಿರುವ ಆಟವೆಂದರೆ ಕಳೆದುಹೋದವನನ್ನು ಇದ್ದವನಂತೆ ನೆನಪಿಸಿಕೊಳ್ಳುವದಾಗಿದೆ. ದಿನಗಳು-ವರ್ಷಗಳು ಉರುಳಿಯೇ ಉರುಳುತ್ತವೆ.

ಆದರೆ ಅವನ ಸ್ಮರಣೆಯಿಂದ ಹೊರಬರಲಾಗುತ್ತಿಲ್ಲ.

ಹಳೆಯ ಫೋಟೊ ಮೇಲಿರುವ ಧೂಳನ್ನು ತಾನು ಒರೆಸುತ್ತ ಕೂತಿದ್ದೇನೆ. ಆಘಾತ, ನೋವು, ಕಹಿ ಮೊದಲಿನಂತಿರದಿದ್ದರೂ ನೆನಪು ಮಾತ್ರ ಇದ್ದೇ ಇದೆ. ಅದು ಹಿಂದೆ ಅಸ್ತಿತ್ವದಲ್ಲಿತ್ತೆಂಬುದರ ಕಾರಣಕ್ಕಾಗಿಯಾದರೂ ಆ ನೆನಪನ್ನು ತನ್ನ ಜೊತೆಗೆ ಕರೆದೊಯ್ಯುತ್ತಿದ್ದಾಳೆ. ಮಾಯವಾಗುತ್ತಿರುವ ಗಾಯವನ್ನು ತನ್ನ ಉಗುರಿನಿಂದ ತಾನೆ ಗೀರಿ ಗಾಯ ಯಾವತ್ತೂ ಇರುವಂತೆ ನೋಡಿಕೊಂಡಿದ್ದಾಳೆ. ಪೈನ್ ಮರದ ಮೇಲಿನ ನಿಸ್ಸಹಾಯಕ, ಮೂಕ ಮತ್ತು ಮಾಸಿದ ಅಕ್ಷರಗಳು ಆಕೆಯನ್ನು ಎವೆಯಿಕ್ಕದೆ ನೋಡಿದವು.

ಪಿಕ್‌ನಿಕ್ ಇನ್ನೂ ಮುಂದುವರೆಯಬಹುದಾಗಿತ್ತು, ಆದರೆ ಮೋಡ ಆಗಸದಲ್ಲಿ ತುಂಬಿಕೊಳ್ಳುತ್ತಿದ್ದಂತೆ ಹುಡುಗಿಯರು ಪ್ರಿನ್ಸಿಪಾಲ್ ಹತ್ತಿರ ಬರತೊಡಗಿದರು. ಕಾಡಿನ ವೈವಿಧ್ಯತೆಯನ್ನು ಅವರು ತಮ್ಮ ಜೊತೆಗೆ ಸಿಕ್ಕಿಸಿಕೊಂಡಿದ್ದರು. ಕೆಲವರು ತಮ್ಮ ಕೂದಲಲ್ಲಿ ಪಕ್ಷಿಯ ಗರಿಯನ್ನು ಸಿಗಿಸಿಕೊಂಡಿದ್ದರೆ, ಕೆಲವರು ವಿಧವಿಧದ ಹೂಗೊಂಚಲು ಕೊಯ್ದು ತಂದಿದ್ದರು. ಸೀನಿಯರ್ ಹುಡುಗಿಯರು ಹಳ್ಳದ ಮೀನುಗಳನ್ನು ಹಿಡಿಯುವ ಸಾಹಸ ಮಾಡಿ ಕೆಲವನ್ನು ತಮ್ಮ ಕರ್ಚೀಫ್‌ನಲ್ಲಿ ಕಟ್ಟಿಕೊಂಡು ಬಂದಿದ್ದರು. ಹೆಡ್‌ಮಿಸ್‌ಗೆ ಗೊತ್ತಾಗದಂತೆ ತಮ್ಮ ಗೆಳತಿಯರಿಗೆ ತೋರಿಸುತ್ತಿದ್ದರು.

ಹಾಸ್ಟೆಲ್‌ಗೆ ಮರಳಲು ಪ್ರಿನ್ಸಿಪಾಲ್ ಕೆಲವು ಹುಡುಗಿಯರೊಂದಿಗೆ ಮುಂದೆ ಮುಂದೆ ನಡೆಯತೊಡಗಿದಳು. ಡಾಂಬರು ರಸ್ತೆ ಮುಟ್ಟಲಿಕ್ಕೆ ನಾಲ್ಕು ಫರ್ಲಾಂಗ್ ದಿಬ್ಬವನ್ನು ಏರಬೇಕಿತ್ತು. ಲತಿಕಾ ಕೂಡ ಏದುಸಿರು ಬಿಡತೊಡಗಿದಳು. ಡಾಕ್ಟರ್ ಹಿಂದುಳಿದ. ಅವಳ ಮುಂದೆ ಬಂದು ಕೈ ಜೋಡಿಸಿ ನಾಟಕೀಯವಾಗಿ 'ಯಾಕೆ ಲತಿಕಾ, ಇಷ್ಟ್ಯಾಕೆ ಸೋತವರಂತೆ ಕಾಣುತ್ತಿದ್ದೀಯ?' ಎಂದ.

ಅವನ ನಾಟಕಕ್ಕೆ ಅವಳ ಮುಖದಲ್ಲಿ ಸ್ವಲ್ಪ ನಗೆ ಮೂಡಿತು.

'ನೀರಡಿಕೆಯಿಂದ ಸಾಯುವಂತಾಗಿದೆ'

ಡಾಕ್ಟರ್ ಥರ್ಮಾಸ್ ತೆಗೆದುಕೊಟ್ಟ– 'ಅದರಲ್ಲಿ ಸ್ವಲ್ಪ ಕಾಫಿಯಿರಬೇಕು, ಕುಡಿ. ಸಮಾಧಾನ ಆಗ್ಬಹುದು.'

'ಡಾಕ್ಟರ್, ನೀವು ಪಿಕ್‌ನಿಕ್‌ನಲ್ಲಿ ಕಾಣಲೇ ಇಲ್ಲ, ಹುಡುಕಿ ಸಾಕಾಯ್ತು !'

'ಪ್ರಿನ್ಸಿಪಾಲ್ ವುಡ್ ಹತ್ತಿರ ಮಲಗಿಕೊಂಡಿದ್ದೆ, ಅಂದ್ರೆ ಅವಳನ್ನು ತಬ್ಬಿಕೊಂಡು ಅಲ್ಲ, ನಾನು ಮಲಗಿದ್ದ ಪಕ್ಕದ ಜಾಗದಲ್ಲಿ ಅವಳು ಕುಳಿತುಕೊಂಡಿದ್ದಳು, ಪಾಪ, ಅವಳು ನನ್ನನ್ನು ಎಷ್ಟೊಂದು ಪ್ರೀತಿ ಮಾಡ್ತಾ ಇದ್ದಳು. ಏನೇನೊ ತಿನ್ನಲಿಕ್ಕೆ ಕೊಟ್ಟಳು.'

'ಏನು ಹೇಳಿದಳು?' ಲತಿಕಾ ಕಾಫಿ ಗುಟುಕರಿಸುತ್ತ ಕೇಳಿದಳು.

'ಅವಳು ಏನೇನೋ ಹೇಳುವವಳಿದ್ದಳು, ಆದರೆ ನಂದು ಹಾಳಾದ್ದು ನಿದ್ದೆ, ಮಲಗಿಬಿಟ್ಟಿದ್ದೆ. ನನಗೆ ಅನ್ನಿಸ್ತಾ ಇದೆ, ಈ ನಿದ್ದೆಯ ಸಲುವಾಗಿ ಜೀವನದಲ್ಲಿ ಎಷ್ಟೋ ಪ್ರೇಮದ ಅವಕಾಶಗಳನ್ನು ಕಳಕೊಂಡು ಬಿಟ್ಟಿದ್ದೇನೆ.'

ಅವರು ಅದೇ ಧಾಟಿಯಲ್ಲಿ ನಡೆಯುತ್ತ ಬಂದರು. ದಾರಿ ಸಾಗಿದ್ದೆ ಗೊತ್ತಾಗಲಿಲ್ಲ. ಗಿಡ–ಮರ, ತಗ್ಗು–ದಿನ್ನೆ, ಡಾಂಬರ್ ರಸ್ತೆ ಎಲ್ಲ ಸಂಜೆಗತ್ತಲಲ್ಲಿ ಮುಳುಗುತ್ತಿದ್ದವು. ದೇವರ ಪ್ರಾರ್ಥನೆಗೆ ತಮ್ಮ ತಲೆ ತಗ್ಗಿಸುತ್ತೇವೆಯೇನೊ ಎನ್ನುವ ರೀತಿಯಲ್ಲಿ ಮಸುಕಾಗಿ ಅಸ್ಪಷ್ಟವಾಗುತ್ತಿದ್ದವು. ಗಿಡ–ಮರಗಳ ಮಧ್ಯೆ ದೂರದಲ್ಲಿ ಚರ್ಚಿನ ಕ್ರಾಸ್ ಚಿಹ್ನೆಯ ನೆರಳು ಮೂಡಿತ್ತು. ಪರ್ವತಗಳ ಇಳಿಜಾರಿನಲ್ಲಿ ಹೊಲಗದ್ದೆಗಳು ಯಾರನ್ನೊ ನೋಡಿ ಹೆದರಿ ನಿಂತ ಅಳಿಲುಗಳಂತೆ ತೋರಿಬಂದವು.

'ಡಾಕ್ಟರ್, ಪಿಕ್‌ನಿಕ್‌ಗೆ ಹ್ಯೂಬರ್ಟ್ ಬರಲೇ ಇಲ್ಲ ನೋಡು'

ಕೈಯಲ್ಲಿ ಬ್ಯಾಟರಿ ಹಿಡಿದು ಮುಂದೆ ಸಾಗುತ್ತಿದ್ದ ಮುಖರ್ಜಿ ಸ್ವಲ್ಪ ತಡೆದು ಅಂದ: 'ನಾನೆ ಬರಬೇಡ ಎಂದು ಹೇಳಿದ್ದೆ'

'ಯಾಕೆ?'

ಕಾಲ ಕೆಳಗೆ ನಲಗುತ್ತಿರುವ ಎಲೆಗಳ ಸಪ್ಪಳದಿಂದ ಅವನ ಧ್ವನಿ ಅಷ್ಟೊಂದು ಸ್ಪಷ್ಟವಾಗಿರಲಿಲ್ಲ, ನಡುನಡುವೆ ಕೆಮ್ಮುತ್ತಿದ್ದ.

'ಇತ್ತೀಚೆಗೆ ನಾನು ನೋಡ್ತಾ ಇದ್ದೀನಲ್ಲ, ಹ್ಯೂಬರ್ಟ್‌ನ ಎದೆನೋವು ಸಾದಾ ಅಲ್ಲ ಅಂತ ಅನಿಸ್ತದೆ.' ತನ್ನ ಮಾತು ಗಂಭೀರವಾಗದಿರಲೆಂದು ಅವನು ಸ್ವಲ್ಪ ನಕ್ಕ. ಲತಿಕಾ ಏನಾದರೂ ಮಾತಾಡಬಹುದೆಂದು ಅವನು ತುಸು ತಡೆದ. ಆದರೆ ಆಕೆ ಮಾತಿಲ್ಲದೆ ಅವನ ಹಿಂದೆ ಹೆಜ್ಜೆ ಹಾಕುತ್ತಿದ್ದಳು.

'ನಾನು ಅಂದುಕೊಂಡ ರೋಗ ಅವನಿಗಿರಬಹುದೆಂದು ನನಗೆ ಸೂಚನೆ ಬರ್‍ತಾಯಿದೆ. ಅವನ ಎದೆಯ ಎಕ್ಸರೇ ತೆಗೆಸಿದರೆ ಅದು ಗೊತ್ತಾಗಬಹುದು.'

'ಇದನ್ನು ಹ್ಯೂಬರ್ಟ್‌ನಿಗೆ ಹೇಳಿದ್ದೀಯ?'

'ಇಲ್ಲ, ಸಣ್ಣ ಸಣ್ಣ ವಿಷಯಕ್ಕೆ ಅವನು ಚಿಂತೆ ಮಾಡ್ತಾನೆ. ಇದನ್ನು ಹೇಳಿದರೆ... ಆ ಧೈರ್ಯ ನನಗಿಲ್ಲ'

ತನ್ನ ಹಿಂದೆ ಬರುತ್ತಿದ್ದ ಆಕೆಯ ಹೆಜ್ಜೆಯ ಸಪ್ಪಳ ಯಾಕೊ ನಿಂತಂತೆನಿಸಿತು. ಅವನು ತಿರುಗಿ ನೋಡಿದ. ಕತ್ತಲಲ್ಲಿ ರಸ್ತೆಯ ಮಧ್ಯೆನಿಂತ ನೆರಳಿನಂತೆ ಆಕೆ ಕಂಡಳು.

'ಡಾಕ್ಟರ್...' ಆಕೆಯ ದ್ವನಿ ಮಂಕಾಗಿತ್ತು.

'ಏನು ಲತಿಕಾ, ಯಾಕೆ ನಿಂತೆ...'

'ಅಲ್ಲ, ಹ್ಯೂಬರ್ಟ್‌ನಿಗೆ...'

ಡಾಕ್ಟರ್ ಆಕೆಯ ಮುಖದ ಮೇಲೆ ಬ್ಯಾಟರಿ ಹಿಡಿದ. ಅವಳ ಮುಖ ಕಳೆಗುಂದಿತ್ತು. ದಿಗಿಲುಗೊಂಡು ತತ್ತರಿಸಿದ್ದು ಕಾಣಿಸಿತು.

'ಯಾಕೆ ಲತಿಕಾ, ಅಷ್ಟ್ಯಾಕೆ ಹೆದರಿದಂತಿರುವೆ?'

'ಏನಿಲ್ಲ... ಏನಿಲ್ಲ... ಸುಮ್ಮನೆ ಏನೊ ನೆನಪಾಗಿತ್ತು.'

ಸಾವಕಾಶವಾಗಿ ಮುಂದೆ ನಡೆದರು. ಸ್ವಲ್ಪ ಹೊತ್ತು ನಡೆದ ಮೇಲೆ ಮುಗಿಲ ಮೇಲೆ ಅವರ ನೆತ್ತಿಗೆದುರಾಗಿ ಹಕ್ಕಿಗಳು ಹಾರುತ್ತಿದ್ದವು. ಪ್ರತಿ ವರ್ಷ ಚಳಿಗಾಲಕ್ಕೆ ಬಯಲು ಸೀಮೆಯ ಕಡೆಹಾರಿ ಹೋಗುವ ಅವು ಕೆಲವು ದಿನ ತಂಗಿ, ಹಿಮ ಬೀಳುವದಕ್ಕೆ ಕಾಯ್ದು, ನಂತರ ಗೊತ್ತಿರದ ದೂರ ದೂರದ ನಾಡಿಗೆ ಹೊರಟು ಬಿಡುತ್ತಿದ್ದವು. ತಾನು, ಡಾಕ್ಟರ್, ಹ್ಯೂಬರ್ಟ್ ಕೂಡ ಹೀಗೆಯೆ ಯಾವುದಕ್ಕೂ, ಯಾರಿಗಾಗಿಯೊ ಕಾಯುತ್ತಿದ್ದೇವೆಯೆ? ತಾವು ಹಾರಿಹೋಗಬೇಕಾದ ನಾಡು ಯಾವುದು? ತಮ್ಮ ಜೀವನದ ಲಕ್ಷ್ಯ ಏನು? ಕತ್ತಲಲ್ಲಿ ಏನೂ ಹೊಳೆಯಲೊಲ್ಲದು. ಸಂತೈಸುವ ಯಾವ ಧ್ವನಿಯೂ ಕೇಳಲೊಲ್ಲದು. ದೂರದ ಪಾರ್ಕಿನಲ್ಲಿ ಹರಿಯುವ ಆ ತೊರೆಯ ನಾದ, ಪೈನ್‌ಮರದ ಎಲೆಗಳ ಮರ್ಮರ–ಇವು ಮಾತ್ರ ತನ್ನ ಹೃದಯವನ್ನೆ ಕಿತ್ತು ತಿನ್ನುತ್ತಿವೆ. ಆದರೂ ಸಾವರಿಸಿಕೊಂಡು ಹೆಜ್ಜೆಯಿಟ್ಟಳು. ಡಾಕ್ಟರ್ ಸಿಳ್ಳಿನಲ್ಲಿ ಯಾವುದೋ ಹಾಡು ಗುಣಗುಣಿಸುತ್ತ ನಡೆದಿದ್ದ.

'ಲತಿಕಾ, ಲಗು ಲಗು ಹೆಜ್ಜೆಹಾಕು ಮಳೆ ಬರುವಂತಿದೆ.'

ಅವರು ಹಾಸ್ಟೆಲ್ ಮುಟ್ಟುವ ಹೊತ್ತಿಗೆ ಮಿಂಚು ಗುಡುಗು ಪ್ರಾರಂಭವಾಗಿತ್ತು. ಆದರೆ ಮಳೆ ರಭಸದಿಂದೇನು ಸುರಿಯಲಿಲ್ಲ. ಜೋರಾದ ಗಾಳಿಯ ಹೊಡೆತಕ್ಕೆ ಮಳೆಯ ಮೋಡಗಳು ಮುಂದೆ ಸರಿದವು. ಮುಂಜಾನೆ ಬೇಗ ಎದ್ದು ಬಸ್ಸು ಹಿಡಿಯಬೇಕಾಗಿದ್ದುದರಿಂದ ಹುಡುಗಿಯರು ಎಂದಿನಂತೆ ಹರಟೆಗೆ ಕೂಡದೆ ತಮ್ಮ ತಮ್ಮ ರೂಮಿಗೆ ಹೋಗಿ ಮಲಗಿದರು.

ಲತಿಕಾ ಊಟ ಮುಗಿಸಿ ತನ್ನ ರೂಮಿಗೆ ಬಂದಾಗ ಆಗಷ್ಟೆ ಮಿಲಿಟರಿ ಕ್ಯಾಂಪಿನಲ್ಲಿ ಕಹಳೆಯೂದಿದ ಸದ್ದು ಕೇಳಿತು. ಕರೀಮುದ್ದೀನ್ ಅವಳ ಕೋಣೆಯ ಗ್ಯಾಸ್ ಬೆಳಗಿ ದೀಪ ಹಚ್ಚಲು ಬಂದಿದ್ದ. ಆಯಾಸಗೊಂಡಿದ್ದ ಲತಿಕಾ ಹಾಸಿಗೆಯಲ್ಲಿ ಉರುಳಿದಳು.

'ಮೇಡಮ್, ಪಿಕ್‌ನಿಕ್ ಚೆನ್ನಾಗಿತ್ತಾ?'

'ಚಲೋ ಇತ್ತಪ್ಪ, ನೀನು ಬರಲೇ ಇಲ್ಲವಲ್ಲ, ಪಾಪ ಹುಡುಗಿಯರು ನಿನ್ನ ಎಷ್ಟೊಂದು ಕೇಳಿದರು ಗೊತ್ತಾ?' ಅವಳ ಕಣ್ಣುಗಳು ನಿದ್ದೆಗೆ ಎಳೆಯುತ್ತಿದ್ದವು.



‘ನಾನು ಬಂದಿದ್ದರೆ ಹ್ಯೂಬರ್ಟ್ ಸಾಹೇಬರದು ಫಜೀತಿಯಾಗತ್ತಿತ್ತು. ಇಡೀ ದಿನ ಅವರ ಆರೈಕೆ ಮಾಡಿದೆ. ಈಗ ನೋಡಿದರೆ ಆ ಮನುಷ್ಯ ಪತ್ತೆಯೆ ಇಲ್ಲ’ ಎಂದು ಗ್ಲಾಸನ್ನು ತಿಕ್ಕತೊಡಗಿದ.

ಲತಿಕಾಳ ನಿದ್ದೆ ಹಾರಿಹೋಯಿತು. ‘ಏನು? ಹ್ಯೂಬರ್ಟ್ ರೂಮಿನಲ್ಲಿ ಇಲ್ಲಾ!’

‘ಆರಾಮಿಲ್ಲ, ರೆಸ್ಟ್ ತಗೋ ಅಂದ್ರೂ ಹೊರಗೆ ಹೋಗಿದ್ದಾರೆ, ಎಲ್ಲಿಗೆ ಅಂತ ದೇವರಿಗೆ ಗೊತ್ತು’ ಕರೀಮುದ್ದೀನ ವಟಗುಟ್ಟುತ್ತ ಹೊರಟುಹೋದ.

ಲತಿಕಾ ದಣಿದಿದ್ದರಿಂದ ಹಾಸಿಗೆಯಿಂದ ಏಳಲು ಮನಸ್ಸು ಬಾರದೆ ಮಲಗಿದ್ದಂತೆಯೆ ಕೆಳಗೆ ಚಪ್ಪಲಿ ಕೊಡವಿ ಕಾಲು ಚಾಚಿದಳು. ಕಣ್ಣು ಮುಚ್ಚಿದರೂ ನಿದ್ದೆ ಬರಲಿಲ್ಲ. ಈ ರಾತ್ರಿಯಲ್ಲಿ ಹ್ಯೂಬರ್ಟ್ ಎಲ್ಲಿಗೆ ಹೋಗಿದ್ದಾನೆ? ಮನಸ್ಸು ಡೋಲಾಯಮಾನವಾಗಿತ್ತು. ಆದರೂ ಮಧ್ಯಾಹ್ನ ಇದ್ದಂತಹ ಚಿಂತೆಯಿಲ್ಲ, ಕುರುಡನೊಬ್ಬ ಹಗಲು ಹೊರಗೆ ಅಡ್ಡಾಗಿ ಕೊನೆಗೆ ಸುರಕ್ಷಿತವಾಗಿ ಗೂಡು ಸೇರಿದಾಗ ಪಡುವ ಖುಶಿಯಂತೆ ಈ ನಾಲ್ಕು ಗೋಡೆಯ ಮಧ್ಯೆ ಸಿಗುವ ಸ್ವಾತಂತ್ರ್ಯ, ಸುರಕ್ಷತೆಗಳು ಹೊರಗೆ ತನಗೆ ಸಿಗಲಾರವು ಎಂದೆನಿಸಿತು. ಹೊರಗೆ ಹಗಲು ತಾನು

ತನ್ನನ್ನು ಎಷ್ಟೊಂದು ಸಮರ್ಥಿಸಿಕೊಳ್ಳಬೇಕು, ಯಾವುದ್ಯಾವುದಕ್ಕೊ ಸಾಕ್ಷಿಯಾಗಬೇಕು, ತನ್ನ ಭಾವನೆಗಳ ಜೊತೆ ಯುದ್ಧ ಸಾರಬೇಕು. ಆದರೆ ಈ ಕೋಣೆಯಲ್ಲಿ, ಏಕಾಂತತೆಯಲ್ಲಿ ಯಾವುದೇ ಗೋಳಿಲ್ಲ. ಸಂಕಟ–ದುಃಖವಿಲ್ಲ. ಅಳುಕು–ಅತೃಪ್ತಿಯಿಲ್ಲ. ತನ್ನ ಅಸ್ತಿತ್ವಕ್ಕಾಗಿ ಯಾವ ಹೋರಾಟವನ್ನೂ ತಾನು ಮಾಡಬೇಕಾಗಿಲ್ಲ. ಯಾವುದು ತಾನಾಗಿರುವಳೊ ಅದು ನಿಸ್ಸಂಶಯವಾಗಿ ತಾನಾಗಿಯೆ ಇರುತ್ತಾಳೆ. ಈ ಕೋಣೆಯಲ್ಲಿ ಯಾವುದೋ ಮಾತು, ಯಾರದೊ ದೃಷ್ಟಿ ತನಗೆ ದುಃಖ ತರಲಾರದು.

ಆಕೆ ಗೋಡೆಗೆ ಮುಖ ಮಾಡಿ ಮಲಗಿದ್ದಳು. ಕಿಡಕಿ ಪರದೆಯ ನೆರಳು ದೀಪದ ಮಂದಬೆಳಕಿನಲ್ಲಿ ಆ ಕಡೆ ಈ ಕಡೆ ಸರಿದಾಡುತ್ತಿತ್ತು. ಕಣ್ಣು ಕುಕ್ಕಿದಂತೆ ಒಮ್ಮೊಮ್ಮೆ ಮಿಂಚು ಗ್ಲಾಸಿನೊಳಗಿಂದ ಬೆಳಕು ಚೆಲ್ಲುತ್ತಿತ್ತು. ಗಾಳಿಗೆ ಬಾಗಿಲು ಯಾರೋ ಬಡಿದಂತೆ ಸದ್ದು ಮಾಡುತ್ತಿತ್ತು. ಕಾರಿಡಾರಿನಲ್ಲಿ ಮಾತಾಡುತ್ತ, ದೊಡ್ಡದಾಗಿ ನಗುತ್ತ ನಿಂತಿರುವ ಹುಡುಗಿಯರ ಧ್ವನಿ ಕ್ರಮೇಣ ಕಡಿಮೆಯಾಯಿತು. ನಿದ್ದೆಯ ನಡುವೆಯೂ ಗ್ಯಾಸ್ ದೀಪದ 'ಶ್' ಎನ್ನುವ ಶಬ್ದ ಬಹಳ ಹೊತ್ತಿನ ತನಕ ಇತ್ತು. ಆಮೇಲೆ ಅದು ಕೂಡ ಕೋಣೆಯ ನೀರವತೆಯ ಭಾಗವಾಗಿ ಆಕೆಯನ್ನು ತೂಗುತ್ತಿತ್ತು.

ನಿದ್ದೆ ಹತ್ತಿದ ಸ್ವಲ್ಪ ಹೊತ್ತಿನ ನಂತರ ಮೆಟ್ಟಿಲ ಮೇಲಿಂದ ಯಾರೊ ತಗ್ಗಿದ ಧ್ವನಿನಿಯಲ್ಲಿ ಮಾತಾಡಿದಂತೆನಿಸಿತು. ಯಾರೋ ಒದರುತ್ತಿರುವಂತೆ, ಮತ್ಯಾರೊ ಸುಮ್ಮನಿರು ಎಂದು ಹೇಳುತ್ತಿರುವಂತೆ ಭಾಸವಾಯಿತು. ಡಾ. ಮುಖರ್ಜಿಯ ಧ್ವನಿ ಅವಳನ್ನು ಬಡಿದೆಬ್ಬಿಸಿತು– 'ಲತಿಕಾ, ಕೆಳಗೆ ಸ್ವಲ್ಪ ದೀಪ ತಗೊಂಡು ಬಾ.'

ಕಾರಿಡಾರಲ್ಲಿ ಕಗ್ಗತ್ತಲಿತ್ತು. ಲತಿಕಾ ಕೆಳಗೆ ಇಳಿದು ದೀಪ ಹಿಡಿದಳು. ಪಾವಟಿಗೆಗಳ ಕಟಾಂಜನದ ಮೇಲೆ ಹ್ಯೂಬರ್ಟ್ ತಲೆಯಿಟ್ಟು ನಿಂತಿದ್ದಾನೆ. ಡಾಕ್ಟರ್ ಅವನ ಭುಜವನ್ನು ಹಿಡಿದು ನಿಲ್ಲಿಸಿದ್ದ. ಇನ್ನೊಂದು ತೋಳು ಎತ್ತೆತ್ತಲೊ ತೂರುತ್ತಿದೆ.

'ಲತಿಕಾ, ಇನ್ನೂ ಸ್ವಲ್ಪ ಬೆಳಕು ಬಿಡು' ಡಾಕ್ಟರ್ ಹ್ಯೂಬರ್ಟ್‌ನನ್ನು ಜಗ್ಗಿ ಸರಿಯಾಗಿ ನಿಲ್ಲಿಸಿದ. ಹ್ಯೂಬರ್ಟ್ ತಲೆಯೆತ್ತಿ ನಿಂತ. ಅವನ ಬಾಯಿಯಿಂದ ಬಂದ ವಿಸ್ಕಿಯ ವಾಸನೆಗೆ ಲತಿಕಾಗೆ ಬವಳಿ ಬಂದಂತಾಯಿತು. ಅವನ ಕಣ್ಣು ಕೆಂಪಗಾಗಿ ನೋಡಲಿಕ್ಕೆ ಹೆದರಿಕೆಯಾಗುತ್ತಿತ್ತು. ಅಂಗಿಯ ಕಾಲರ್ ಮೇಲೆಕೆಳಗಾಗಿತ್ತು. ಕೊರಳ ಟೈ ಸಡಿಲಾಗಿ ಎತ್ತೆತ್ತೊ ಬಿದ್ದುಕೊಂಡಿತ್ತು. ಮುಖರ್ಜಿಯ ಬಲಿಷ್ಠ ತೋಳಿನ ಮೇಲೆ ತಲೆಯಾನಿಸಿ, ತೂಗುತ್ತ ಮೆಟ್ಟಲೇರುತ್ತಿದ್ದ ಹ್ಯೂಬರ್ಟ್ ತಿಳಿಯದಂತೆ ಏನೇನೊ ಮಾತನಾಡುತ್ತಿದ್ದ. 'ಈ ಸಿಟಿಯ ಹಿಂದುಗಡೆ ವಾಸವಾಗಿರುವಂಥ ಹೆಂಗಸು ನನ್ನನ್ನು ಪ್ರೀತಿ ಮಾಡ್ತಾಳೆ. ಡಾಕ್ಟರ್, ನನ್ನನ್ನ ಎಲ್ಲಿಗೆ ಕರ್‍ಕೊಂಡು ಹೋಗ್ತಾಯಿದ್ದೀಯ' ಎಂದು ಜೋರಾಗಿ ಕೂಗಿದ. ಅದು ಇಡೀ ಹಾಸ್ಟೆಲ್ಲಿನಲ್ಲಿ ಪ್ರತಿಧ್ವನಿಸಿತು. 'ಹ್ಯೂಬರ್ಟ್, ಸುಮ್ಮನೆ ನಡೆ' ಡಾಕ್ಟರ್ ಕೂಡ ಚೀರಿದ. ತನ್ನಲ್ಲಿ ಉಂಟಾದ ಸಿಟ್ಟಿಗೆ ಅವನೆ ಕೊನೆಗೆ ಸಾವರಿಸಿದ. 'ಹ್ಯೂಬರ್ಟ್, ಏನಿಲ್ಲ, ನಡೆ, ನೀನು ದಣಿದಿದ್ದೀಯ' ಎಂದು ಅವನನ್ನು ರೂಮಿಗೆ ತಂದು ಮುಟ್ಟಿಸಿದ.

ಹೆದರಿಕೊಂಡ ಮಗುವಿನಂತೆ ಹ್ಯೂಬರ್ಟ್ ಡಾಕ್ಟರ್‌ನಿಂದ ಸಾಂತ್ವನ ಬೇಡುವವನಂತೆ ಕಂಡ. ಅವನನ್ನು ಹಾಸಿಗೆಯ ಮೇಲೆ ಮಲಗಿಸಿದರು. ಬೂಟು, ಕಾಲುಚೀಲ, ಟೈಗಳನ್ನು ಒತ್ತಾಯದಿಂದ ತೆಗೆದರು. ಡಾಕ್ಟರ್ ಅವನ ಕುತ್ತಿಗೆಯ ಟೈ ಬಿಚ್ಚುವಾಗ ಮೊಣಕೈ ಮೇಲೆ ಭಾರ ಹಾಕಿ ಹ್ಯೂಬರ್ಟ್ ಎದ್ದು ಕುಳಿತ. ಡಾಕ್ಟರರ ಕೈ ಹಿಡಿದು ಜೋಲಾಡುತ್ತ 'ಡಾಕ್ಟರ್, ನೀನು ನಿಜ ಹೇಳು, ನಾನು ನಿಜವಾಗಿಯೂ ಸತ್ತು ಹೋಗುತ್ತೇನೆಯೆ?' ಎಂದ.

'ಹ್ಯೂಬರ್ಟ್, ಏನಿದೆಲ್ಲ ಹುಚ್ಚುತನದ ಮಾತು, ನಿನಗೇನೂ ಆಗಿಲ್ಲ, ಸುಮ್ಮನೆ ಮಲಗಿಕೋ' ಎಂದು ಅವನ ತಲೆಯನ್ನು ತಲೆದಿಂಬಿಗೆ ವಾಲಿಸಿದ.

'ಗುಡ್‌ನೈಟ್ ಹ್ಯೂಬರ್ಟ್'

'ಗುಡ್‌ನೈಟ್ ಹ್ಯೂಬರ್ಟ್' ನಡಗುವ ಧ್ವನಿಯಲ್ಲಿ ಲತಿಕಾ ಕೂಡ ಹ್ಯೂಬರ್ಟ್‌ನಿಗೆ ವಿದಾಯ ಹೇಳಿದಳು. ಆದರೆ ಅವನು ಹೆಚ್ಚಿಗೆ ಮಾತಾಡುವ ಸ್ಥಿತಿಯಲ್ಲಿ ಇರಲಿಲ್ಲ. ಆಗಲೆ ಮಲಗಿ ಬಿಟ್ಟಿದ್ದ.

ಡಾಕ್ಟರ್ ತಿರುಗಿ ಬರುವಾಗ ಕಾರಿಡಾರಿನ ಕಂಬಿಗೆ ತುಸು ಆತು ನಿಂತುಕೊಂಡು ದಣಿವಾರಿಸಿಕೊಂಡ. ನಿರಾಳವಾಗಿ ಹೊರಗಡೆ ಕಣ್ಣು ಹಾಯಿಸಿದ. ಗಾಳಿ ಜೋರಾಗಿ ಬೀಸುತ್ತಿದ್ದುದರಿಂದಲೊ ಏನೊ ಚಂದ್ರನ ಮೇಲಿನ ಮೋಡ ದೂರ ಸರಿದು ಬೆಳದಿಂಗಳು ಆಗಾಗ ಬೆಟ್ಟಗಳನ್ನು ಸವರಿ ಮರೆಯಾಗುತ್ತಿತ್ತು. ಲತಿಕಾ ಕೂಡ ಏನೋ ವಿಚಾರಿಸುತ್ತ ಮತ್ತೊಂದು ಬದಿ ನಿಂತಿದ್ದಳು.

'ಡಾಕ್ಟರ್, ಅವನು ಎಲ್ಲಿ ಸಿಕ್ಕ ನಿನಗೆ?'

ಡಾಕ್ಟರ್ ಸಿಗರೇಟು ಹಚ್ಚಿದ. ಹೊರಗಡೆ ಹೋಗಿ ಇನ್ನೂ ಇಬ್ಬರು ರೋಗಿಗಳನ್ನು ತಪಾಸಣೆ ಮಾಡಬೇಕಿತ್ತು. ಇಷ್ಟು ಹೊತ್ತಿನ ಮೇಲೆ ಬಿಟ್ಟು ಬಿಡುವುದೆ ಒಳ್ಳೆಯದೆಂದು ಅನುಮಾನಿಸುತ್ತಲಿದ್ದ.

'ಬಾರ್‌ನಲ್ಲಿ ಕುಳಿತು ಕುಡಿಯುತ್ತಲಿದ್ದ, ನಾನು ಹೋಗಿರದಿದ್ದರೆ ಇನ್ನು ಎಷ್ಟೊತ್ತು ಕುಳಿರುತ್ತಿದ್ದನೋ ಏನೋ?' ಕೆಳಗೆ ಕರೀಮುದ್ದೀನ್ ಹಳೆಯ ಹಾಡೊಂದನ್ನು ಗುಣುಗುಣಿಸುತ್ತಿದ್ದ.

ರಾತ್ರಿಯಲ್ಲಿ ಅವರು ಎಷ್ಟೊ ಹೊತ್ತು ಸುಮ್ಮನೆ ನಿಂತಿದ್ದರು. ಆಟದ ಬಯಲಿನಿಂದ ಕ್ರಿಕೆಟ್ ಹಕ್ಕಿಯ ಕರೆ ಆ ಮೌನವನ್ನು ಭೇದಿಸಿತು. ಡಾಂಬರ್ ರಸ್ತೆಯ ಅಂಚಿನಿಂದ ನಾಯಿಯೊಂದು ಬೊಗಳಿತು. ಈ ಕೂಗಾಟ, ಉಲಿಯುವಿಕೆಗಳು ಅಲ್ಲಿಯ ನೀರವತೆಯನ್ನು ಮತ್ತಷ್ಟು ಅಸಹನೀಯವಾಗಿಸಿದ್ದವು. ಏನೋ ಕೇಳಲೊ ಬೇಡವೊ ಎನ್ನುವಂತೆ ಇದುವರೆಗೂ ಒಳಗೆ ಅಗ್ನಿಪರ್ವತದಂತೆ ಕುದಿಯುತ್ತಿದ್ದ ಲತಿಕಾ ಕೊನೆಗೂ ಆ ರಾತ್ರಿಯ ಭೀಕರತೆಯನ್ನು ಮುರಿದಳು.

'ಡಾಕ್ಟರ್, ನಿನ್ನೆ ರಾತ್ರಿ ನೀನು ಹ್ಯೂಬರ್ಟ್‌ನಿಗೆ ನನ್ನ ಬಗ್ಗೆ ಏನಾದ್ರೂ ಹೇಳಿದೆಯಾ?'

'ಅಂಥಾದ್ದೇನಿಲ್ಲ, ಜನರಿಗೆ ಈಗಾಗಲೇ ಗೊತ್ತಿರುವಂಥಾದ್ದನ್ನು ಹೇಳಿದೆ. ಅವನಿಗೂ ಅದು ಗೊತ್ತಿರಬೇಕಾಗಿತ್ತು. ಆದರೆ ಗೊತ್ತಿರಲಿಲ್ಲ...' ಆಕೆಯೆಡೆಗೆ ನೋಡಿದ. ಅವಳು ಮೆಟ್ಟಿಲಿನ ಕಂಬಿಗೆ ಆತುಕೊಂಡು ನಿಂತಿದ್ದಳು.

'ಲತಿಕಾ ಕೇಳಿಲ್ಲಿ ನಮ್ಮಲ್ಲಿ ಪ್ರತಿಯೊಬ್ಬರಿಗೂ ಕೆಲವು ದೌರ್ಬಲ್ಯಗಳು ಇರ್ತವೆ. ಹಗ್ಗ, ಸರಪಣಿಗಳಿಗೆ ಇರುವ ಹಿಂತಿರಚಿನ ದೋಷಗಳೆ ಅವುಗಳಿಗೆ ಮುಳುವಾಗುವಂತೆ ನಮ್ಮ ಕೆಲವು ದೋಷಗಳೆ ನಮ್ಮ ಜೀವನಕ್ಕೆ ಮುಳುವಾಗಬಹುದು. ಕೆಲವರು ತಮ್ಮ ತೊಡಕುಗಳನ್ನು ಸರಿಪಡಿಸಿಕೊಳ್ಳುತ್ತಾರೆ ಮತ್ತೆ ಕೆಲವರು ಅವುಗಳನ್ನೆ ಜೀವನದುದ್ದಕ್ಕೂ ಅನುಭವಿಸುತ್ತ ಹೋಗುತ್ತಾರೆ'.

ಆಕೆ ಸುಮ್ಮನಿದ್ದಳು.

ಡಾಕ್ಟರ್ ಮತ್ತೆ ಅಂದ 'ಲತಿಕಾ, ನನ್ನ ಮಾತು ಕೇಳು, ನಮ್ಮ ಮನಸ್ಸಿಗೆ ಆಳ ಗಾಯ ಮಾಡಿರುವ ಘಟನೆ ಯಾ ನೆನಪನ್ನು ನಾವು ಮರೆಯುವದಿಲ್ಲವೆಂದರೆ ಅದು ನಮ್ಮ ತಪ್ಪು, ಜಿಗಣಿಯಂತೆ ಒಂದೆ ವಿಷಯಕ್ಕೆ ಅಂಟಿಕೊಂಡಿರುವುದು ಸರಿಯಲ್ಲ. ನಿನಗೆ ಗೊತ್ತಿದೆಯಲ್ಲ.... ನಾನು ಬರ್ಮಾದಿಂದ ಇಲ್ಲಿಗೆ ಬರುವಾಗ ನನ್ನ ಹೆಂಡತಿ ಆಗಷ್ಟೆ ಸತ್ತಿದ್ದಳು. ಆವಾಗ ನನಗೆ ಜೀವನ ಶೂನ್ಯ ಅನ್ನಿಸಿತ್ತು. ಆದರೆ ಈಗ ನೋಡು, ಇನ್ನೂ ನಾನು ಬದುಕಿದ್ದೇನೆ ತಾನೆ? ಜೀವನವನ್ನು ನಾವೆ ನಮ್ಮ ಕೈಯಾರೆ ಹಾಳು ಮಾಡಿಕೊಳ್ಳಬಾರದು. ಅಕಸ್ಮಾತ್ ನಾನು ಇನ್ನು ಸ್ವಲ್ಪ ಸಣ್ಣವನಿದ್ದಿದ್ದರೆ ಇನ್ನೊಂದು ಮದುವೆಯಾಗ್ತಿದ್ದೆ. ಇದರ ಅರ್ಥ ನನ್ನ ಹೆಂಡತಿಯನ್ನು ನಾನು ಹಿಂದೆ ಪ್ರೀತಿಸಲಿಲ್ಲ ಅಂತಲ್ಲ, ಈಗಲೂ ನಾನು ಆಕೆಯನ್ನು ಪ್ರೀತಿಸುತ್ತೇನೆ.'

'ಆದರೆ ಡಾಕ್ಟರ್, ನನಗೆ...' ಲತಿಕಾ ಪ್ರಯಾಸದಿಂದ ನುಡಿದಳು.

'ಹೇಳು'


'ನೀನು ಹೇಳುವುದು ಸರಿ, ಆದರೂ ಹಳೆಯ ನೆನಪೆ ನಮ್ಮನ್ನು ಬದುಕಿಗೆ ಪ್ರೇರೇಪಿಸ್ತಾ ಇರ್ತದೆ. ನಮಗೆ ಜೀವನ ಸಾಕು ಅಂದರೂ ಕೂಡ ಆ ರಭಸವೆ ಎಳೆದುಕೊಂಡು ಹೋಗ್ತಾ ಇರ್ತದೆ. ಹೀಗೆಲ್ಲ ಅನ್ನಿಸ್ತಾ ಇದೆ...' ಲತಿಕಾ ಇನ್ನೂ ಏನೊ ಹೇಳುವಂತೆ ಅಂದುಕೊಂಡರೂ ಮಾತು ಬರಲಿಲ್ಲ. ಅಥವಾ ತಾನು ಹೇಳಬೇಕಾದ ರೀತಿಯಲ್ಲಿ ಹೇಳುತ್ತಿಲ್ಲ ಅಂತಲೂ ಅನಿಸಿತು. ತನ್ನ ಮಾತು ಮತ್ತು ಭಾಷೆಗೆ ಏನೊ ಅಡ್ಡಿಯಾಗುತ್ತಿದೆ. ತಾನು ಕಳೆದುಕೊಂಡ ಸಂಗತಿ ಮತ್ತೆ ಎಂದೂ ಸಿಗಲಾರದ್ದೆಂದು ಆಕೆ ಅಂದುಕೊಂಡಳು, ಅದನ್ನು ವ್ಯಕ್ತ ಕೂಡ ಮಾಡಲಾರೆ ಎಂದುಕೊಂಡಳು.

'ಲತಿಕಾ, ನಿನ್ನ ಮಾತಿನ ಅರ್ಥವನ್ನು ಮತ್ತು ನಿನ್ನ ಪ್ರಶ್ನೆಗೆ ಉತ್ತರವನ್ನು ಫಾದರ್ ಎಲ್ಮಂಡ್ ಹೇಳಬೇಕಷ್ಟೆ!' ಎಂದು ಆತ ಹುಸಿನಗೆ ನಕ್ಕ. ಅವನು ಮಾಡಿದ ಪ್ರಯತ್ನಗಳು

ಫಲ ನೀಡದೆ ಹೋದ ಮತ್ತು ಅವನ ಮಾತಿಗೆ ಗೌರವ ಸಿಗದೆ ಹೋದ ನೋವು ಆ ನಗೆಯಲ್ಲಿ ಗೋಚರವಾಗುತ್ತಿತ್ತು. 'ಆಯ್ತು ಲತಿಕಾ, ಹೊತ್ತಾಯ್ತು, ನಾನಿನ್ನು ಬರ್ತೀನಿ' ಎಂದು ಸಿಗರೇಟಿಗೆ ಕಡ್ಡಿಗೀರುತ್ತ ಅವನು ಹೊರಟುಹೋದ.

ಡಾಕ್ಟರ್ ಹೊರಟು ಹೋದ ಮೇಲೆ ಲತಿಕಾ ಕಂಬಿಗೆ ಮತ್ತಷ್ಟು ಆತು ನಿಂತಳು. ಸುತ್ತಲಿನ ವಾತಾವರಣದ ಮಂಜು ಗಾಳಿಗೆ ತತ್ತರಿಸಿದಂತೆ ಭಾಸವಾಯಿತು. ಊರಿಗೆ ಹೊರಡುವ ಸಿದ್ಧತೆಯಲ್ಲಿ ತಮ್ಮ ಸಾಮಾನುಗಳನ್ನು ನಿನ್ನೆ ರಾತ್ರಿ ಪ್ಯಾಕ್ ಮಾಡಿ ಅಳಿದುಳಿದ ಹಳೆಯ ನ್ಯೂಸ್ ಪೇಪರ್, ನೋಟಬುಕ್ ಮುಂತಾದ ರದ್ದಿಯನ್ನು ಹುಡುಗಿಯರು ತಮ್ಮ ಕೋಣೆಯ ಮುಂದುಗಡೆ ಹಾಕಿದ್ದರು. ಅದೀಗ ಕಾರಿಡಾರಿನ ತುಂಬ ಅಸ್ತವ್ಯಸ್ತವಾಗಿ ಹರಡಿತ್ತು. ಲತಿಕಾ ಏನೂ ತೋಚದೆ ದೀಪ ಹಿಡಿದು ಮತ್ತೆ ತನ್ನ ರೂಮಿನ ಕಡೆ ಹೆಜ್ಜೆಯಿಟ್ಟಳು. ಹಾಗೆ ನಡೆಯುತ್ತಿರಬೇಕಾದರೆ ಜ್ಯೂಲಿಯ ಕೋಣೆಯ ಬಾಗಿಲ ಕಿಂಡಿಯಿಂದ ಬೆಳಕು ಹೊರ ಚೆಲ್ಲಿತ್ತು. ಒಂದು ಕ್ಷಣ ನಿಂತು ಬಾಗಿಲು ಬಡಿದಳು. ಯಾವ ಉತ್ತರವೂ ಬರಲಿಲ್ಲ, ಲತಿಕಾ ಬಾಗಿಲು ನೂಕಿದಾಗ ತೆರೆದುಕೊಂಡಿತು. ಸಾವಕಾಶ ಒಳಗೆ ಬಂದಳು. ಜ್ಯೂಲಿ ಗಾಢ ನಿದ್ದೆಯಲ್ಲಿದ್ದಳು. ದೀಪ ಆರಿಸುವುದನ್ನು ಮರೆತಿದ್ದಳೆಂದು ಕಾಣುತ್ತದೆ. ಲತಿಕಾ ತನ್ನ ಕಿಸೆಯೊಳಗಿದ್ದ ಆಕೆಯ ಪ್ರೇಮಪತ್ರವನ್ನು ಅವಳ ತಲೆದಿಂಬಿನಡಿಯಿಟ್ಟು ಹೊರಬಂದಳು.





# ವಡ್ಡಾರಾಧನೆ ಕಥೆಗಳ ಮತೀಯ ಸಾಂಸ್ಥಿಕತೆ, ಸಮಾಜ ಮತ್ತು ಅಧಿಕಾರ ಸಂಬಂಧಗಳು

**ಡಾ. ಜಯಪ್ರಕಾಶ್ ಶೆಟ್ಟಿ. ಹೆಚ್**

ಮಾನವಭಾಷೆ ದೈನಿಕ ಸಂವಹನದ ಜೊತೆಗೆ ಗತ ಹಾಗೂ ಕಲ್ಪಿತಗಳನ್ನು ಕಟ್ಟಿಕೊಡುವ ಕಥನಕ್ರಿಯೆಗೂ ಒಗ್ಗಿಕೊಂಡಿದೆ. ಪರಿಣಾಮವಾಗಿ ಅದರ ರೂಪಕಶಕ್ತಿ ಹೆಚ್ಚಿದೆ. ಭಾಷೆಯ ಈ ಸಾಮರ್ಥ್ಯವನ್ನು ಸಶಕ್ತವಾಗಿ ದುಡಿಸಿಕೊಂಡ ಸಮುದಾಯವು ತನ್ನ ಜೀವಂತಸಮಾಜದ ಕಥಾಜಗತ್ತನ್ನು ಜತನವಾಗಿ ಕಾದುಕೊಳ್ಳುತ್ತದೆ. ಪ್ರಾಯಶಃ ಕಥನವಿಲ್ಲದ ಭಾಷೆ ಜಗತ್ತಿನಲ್ಲಿಲ್ಲ. ಅಂತೆಯೇ ಕತೆಯೇ ಇಲ್ಲದ ಮಾನವಸಮಾಜ ನೆಲದ ಮೇಲಿರದು. ಪರಸ್ಪರ ಒಡನಾಡಿಗಳಾದ ಭಾಷೆ ಮತ್ತು ಕಥನಗಳಲ್ಲಿ ಸಮಾನಾಂಶವೂ ಇದೆ. ಅವೆರಡೂ ಹೇಳು–ಕೇಳುಗಳ ನಡುವಿನ ಸಂವಾದದಲ್ಲೇ ಮೈತಳೆಯುತ್ತವೆ. ಈ ತುದಿಗಳಿಲ್ಲದೆ ಕತೆಗಳೇ ಇಲ್ಲ. ಸಮುದಾಯವೊಂದರ ಅಮೂಲ್ಯ ಆಸ್ತಿಗಳಾದ ಭಾಷೆ ಮತ್ತು ಕತೆಗಳೆರಡರ ಉಳಿಕೆಗೆ 'ಕೇಳುವ ಕುತೂಹಲ ಮತ್ತು ಹೇಳುವ ಕಲೆಗಾರಿಕೆ'ಗಳೆರಡೂ ಬೇಕು. ಮಾನವಸಮಾಜದ ಸೃಜನಶೀಲತೆಯ ಈ ಮೂಲಸೆಲೆಗಳೇ

ಭಾಷೆ ಮತ್ತು ಭಾಷೆಯಲ್ಲೇ ಸಂಭವಿಸುವ ಕತೆಗಳ ಮೂಲಕಾರಣಗಳೂ ಆಗಿವೆ. ಆದರೆ 'ಹೇಳು-ಕೇಳು'ಗಳು ಕತೆಯೊಂದರ ಆಗುವಿಕೆಯ ಹಿಂದಿನ ಕೇವಲ ತುದಿಗಳಲ್ಲ. ಕತೆಯ ಜೀವಂತ ಅವಯವಗಳ ಪ್ರೇರಣೆಗಳು. ಅಂದರೆ ಕತೆಗಳ ಸ್ವರೂಪ, ವಿನ್ಯಾಸ, ಆಶಯಗಳು ಈ ತುದಿಗಳ ನಡುವಿನ ಸಂವಾದ ಪ್ರಕ್ರಿಯೆಯಲ್ಲೇ ರೂಪುಗೊಳ್ಳುತ್ತವೆ. ಹೀಗಾಗಿ ಕತೆ ಎಂದಾಗ ಅದರ ಹೇಳುಗರು ಯಾರು? ಅದು ಸಂಭವಿಸುತ್ತಿರುವ ಆವರಣ ಅಂದರೆ ನಿರೂಪಣಗೊಳ್ಳುತ್ತಿರುವ ಕಾಲ-ದೇಶ-ಸಮೂಹ ಯಾವುದು? ಯಾರು ಕತೆ ಹೇಳುತ್ತಿದ್ದಾರೆ? ಯಾಕಾಗಿ ಹೇಳುತ್ತಿದ್ದಾರೆ?- ಈ ಪ್ರಶ್ನೆಗಳು ಮುಖ್ಯವಾಗುತ್ತವೆ. ಯಾಕೆಂದರೆ ಕತೆಯೆಂಬುದು ತಾನು ಆಗುಗೊಳ್ಳುವ ಲೌಕಿಕ ವಾಸ್ತವದಿಂದ ಬೇರಾದ ವಿದ್ಯಮಾನವಲ್ಲ. ಕತೆ ಆಗುಗೊಳ್ಳುವ ಆವರಣದ ರಾಜಕೀಯ, ಮತೀಯ ಸಾಂಸ್ಥಿಕತೆ ಅಥವಾ ಅಂಚಿನ ಅವಸ್ಥೆಗಳಿಂದ ಹೊರಗಿಟ್ಟು ಅದಕ್ಕೆ ಅಸ್ತಿತ್ವ ಕಲ್ಪಿಸಲಾಗದು. ಹಾಗಾಗಿ ಕತೆ ಆಗುಗೊಳ್ಳುತ್ತಿರುವ ಭಾಷಾ ಆವರಣದ ಸಾಮಾಜಿಕ ವಾಸ್ತವದಲ್ಲಿ ಸಮುದಾಯಗಳ ನಡುವಣ ಕೊಡುಕೊಳುಗೆಗಳು ಮುಖ್ಯವಾಗುತ್ತವೆ. ಮತಸಂಬಂಧಿತ ಗತಿ, ಗದ್ದುಗೆಗಳು ಪ್ರತಿನಿಧಿಸುತ್ತಿರುವ ಲೌಕಿಕ ಅಧಿಕಾರ ಚಹರೆಯುಳ್ಳ ಯಾಜಮಾನ್ಯದ ಜೊತೆಗೆ ಕತೆ ನಡೆಸುವ ಸಂವಾದದ ಮಾದರಿಗಳು ಮುಖ್ಯವಾಗುತ್ತವೆ. ಅಂತೆಯೇ ಜಾತಿ, ಲಿಂಗದಂತಹ ಸಾಮಾಜಿಕ ಅಸಮಾನ ಸಂಬಂಧಗಳು ಹಾಗೂ ದೈಹಿಕ ಅಸಾಮರ್ಥ್ಯ, ಅಸಹಾಯಕ ಅಧೀನ ಪರಿಸ್ಥಿತಿಗಳು ಅಲ್ಲಿ ನಿರ್ವಹಣೆಗೊಂಡ ಮಾದರಿಗಳು ಮುಖ್ಯವಾಗುತ್ತದೆ. ಬಂಧನ ಮತ್ತು ಬಿಡುಗಡೆಗೆ ಸಂಬಂಧಿಸಿ ಕತೆಯ ತಾತ್ವಿಕಗ್ರಹಿಕೆ ಹಾಗೂ ಅದು ಒಪ್ಪುವ ಮತ್ತು ನಿರಾಕರಿಸುವ ಲೋಕಬದುಕಿನ ಮಾದರಿಯ ಕುರಿತ ಪ್ರಶ್ನೆಗಳು ಮುಖ್ಯವಾಗುತ್ತವೆ. ಕತೆಯ ಆಂತರಿಕ ದ್ರವ್ಯವನ್ನು ನಿರ್ಧರಿಸುವ ಇವುಗಳೊಂದಿಗೆ ಕತೆಯ ಗಾತ್ರ, ಕತೆಯೊಳಗಿನ ಉಪಕತೆಗಳ ನೆಯ್ಗೆ, ಕತೆಯ ಭಾಷಾಜಗತ್ತು, ಪದ್ಯ ಅಥವಾ ಗದ್ಯದಲ್ಲಿರುವ ಕಥನದ ನಡೆ ಮುಂತಾದ ರೂಪಸಂಬಂಧಿ ವಿವರಗಳೂ ಮುಖ್ಯವಾಗುತ್ತವೆ. ಜೊತೆಗೆ ಮೌಖಿಕಕತೆಯೊಂದರ ಕಥಿಸುವಿಕೆ ಮತ್ತು ಲಿಖಿತಕತೆಯೊಂದರ ಪಠ್ಯೀಕರಣದ ಕಾಲಸಂದರ್ಭ, ನಿರೂಪಣಾತಂತ್ರ ಇತ್ಯಾದಿಗಳು ಮುಖ್ಯವಾಗುತ್ತವೆ. ಹೀಗೆ ಯಾರು ಹೇಳುತ್ತಾರೆ? ಯಾವಾಗ, ಯಾರಿಗೆ, ಯಾಕಾಗಿ ಮತ್ತು ಹೇಗೆ ಹೇಳುತ್ತಾರೆ? ಎಂಬ ಮೂಲಪ್ರಶ್ನೆಗಳೊಂದಿಗೆ ಕತೆಯ ತಾತ್ವಿಕ ಆಕೃತಿ ಹಾಗೂ ಅದರ ಲೋಕಗ್ರಹಿಕೆಯ ಮೂಲದ್ರವ್ಯವನ್ನು ವಿವರಿಸಿಕೊಳ್ಳುವುದು ಕತೆಯೊಂದನ್ನು ಅರ್ಥೈಸುವ ಸಂದರ್ಭದ ಬಹುಮುಖ್ಯ ಅಗತ್ಯವೂ ಆಗಿದೆ.

ಕನ್ನಡದಲ್ಲಿ ಕತೆಗಳಿಗೆ ಬರವಿಲ್ಲ. ಇಲ್ಲಿ ದೀಪದ ಬುಡ್ಡಿಗಳೂ ಕತೆಹೇಳುತ್ತವೆ. ಮಂಚದ ಕಾಲುಗಳೂ ಕತೆ ಹೇಳುತ್ತವೆ. ಕಲ್ಲುಗಳೂ ಕತೆ ಹೇಳಬಲ್ಲವು. ಹಲ್ಲು ಕಳೆದುಕೊಂಡು ದಿನಗಳೆಣಿಸುವ ಅಜ್ಜಿಯಂದಿರಂತೂ ಕತೆ ಹೇಳುತ್ತಲೇ ಬದುಕಿದ್ದಾರೆ. ಆದರೆ ಕನ್ನಡದ ಕಥೆಗಳು ಈ ಮೌಖಿಕಪರಂಪರೆಗಷ್ಟೇ ಸೀಮಿತವಲ್ಲ. ಅಲ್ಲಿ ಲಿಖಿತಪರಂಪರೆಯ ಕಥನಗಳೂ ಸಾಕಷ್ಟಿವೆ. ಕನ್ನಡ ಕಥಾಜಗತ್ತಿನ ಪ್ರಾಚೀನ ದಾಖಲೆಯಂತೆ ಒದಗಿಬರುವ ವಡ್ಡಾರಾಧನೆ ಕತೆಗಳಿಗೆ ಈ ದೃಷ್ಟಿಯಿಂದ ಪ್ರಾತಿನಿಧಿಕ ಮಹತ್ವವಿದೆ. ಈ ಕತೆಗಳು,



'ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ವತ್ಸೆಯೆಂಬುದು ನಾಡು. ಅಲ್ಲಿ ಕೌಸಂಬಿ ಎಂಬುದು ಪೊೞಲ್...'ಎಂಬಂತೆ ಸೂತ್ರರೂಪದಲ್ಲಿ ಆರಂಭವಾಗುತ್ತವೆ. ಜೊತೆಗೆ ಕಾಲದೇಶಗಳ ನಿರ್ದಿಷ್ಟತೆಯನ್ನೂ ಉಲ್ಲಂಘಿಸುತ್ತವೆ. ಹೀಗೆ ರಚನಾವಿನ್ಯಾಸದಲ್ಲಿ ಜನಪದ ಕತೆಗಳೊಂದಿಗೆ ಸಾಮ್ಯತೆಯನ್ನು ತೋರುವ ಅವು ಆಶಯ ಮತ್ತು ತಾತ್ವಿಕತೆಯಲ್ಲಿ ಬೇರಾಗಿ ನಿಲ್ಲುತ್ತವೆ. ವಡ್ಡಾರಾಧನೆ ಕತೆಗಳ ಪಾತ್ರಜಗತ್ತಿನಲ್ಲಿ ಜನಪದ ಕತೆಗಳಂತೆ ರಾಜರಾಣಿಯರು, ರಾಜಕುಮಾರರಲ್ಲದ ನಾಯಕರಿಲ್ಲ. "'ಸಾಮಾನ್ಯ'ವ್ಯಕ್ತಿಗಳು ನಾಯಕರಾಗಿ ಇಲ್ಲದಿರುವುದೇ 'ವಡ್ಡಾರಾಧನೆ' ಕತೆಗಳ ಮೊದಲ ಕಷ್ಟ... ಕತೆಗಳು 'ಮಹಾಪುರುಷ'ರಾದ ರಾಜರು, ಮಂತ್ರಿಗಳಿಂದ ಶುರುವಾಗಿ, ಅರಮನೆಯ ಕೇಂದ್ರದಲ್ಲಿ ಸುತ್ತುತ್ತ, ಈ ಮಹಾಪುರುಷರ ಸನ್ಯಾಸ ಸಾವು ಮೋಕ್ಷದಲ್ಲಿ ಮುಗಿಯುತ್ತವೆ" (ಕತ್ತಿಯಂಚಿನ ದಾರಿ ಪು.173). ಹೀಗೆ ಲೋಕವನ್ನು ಮೀರುವ ಮಹಾಪುರುಷರ ಕಥನಗಳ ಮೂಲಕ ಅಲೌಕಿಕತೆಯನ್ನು ಪ್ರತಿಪಾದಿಸುತ್ತಿರುವ ಇವು ಆ ಅಲೌಕಿಕತೆಯ ಪ್ರತಿಪಾದನೆಯ ನಡುವೆಯೂ ಒಂದು ಲೌಕಿಕ ವಾಸ್ತವವನ್ನೇ ತಮ್ಮೊಳಗಿನ ಹೂರಣವಾಗಿ ಹೊಂದಿವೆ. ಲೋಕವನ್ನು ದಾಟುವುದನ್ನೇ ಹೇಳಿಯೂ, ಈ ಆಶಯಕ್ಕೆ ಪೂರಕವಲ್ಲದ ಲೌಕಿಕ ವಾಸ್ತವವನ್ನು ಅವು ಹೊಂದಿವೆ. ಅಂದರೆ ಧಾರ್ಮಿಕ ಆಶಯವಾಗಿ ಯಾವುದನ್ನು ಮೀರಲು ಹೇಳುತ್ತದೆಯೋ ಅದೇ ಲೌಕಿಕ ಜಗತ್ತು ಲೋಕ ಮೀರುವಲ್ಲಿ ದತ್ತವಾಗುವ ಸುಖವನ್ನು ವಿವರಿಸುವ ನೆಲೆಗಟ್ಟೂ ಆಗುತ್ತದೆ. ಮನುಷ್ಯಲೋಕದ ಅಧಿಕಾರ ರಚನೆಯ ಅಲೌಕಿಕ ಪ್ರತಿಬಿಂಬವಾಗಿಯೇ

ಇಲ್ಲಿನ ದೇವಲೋಕಗಳ ಕಲ್ಪನೆ ಇದೆ. ದೇವಲೋಕವೂ ಮಾನವಲೋಕದ ಅಧಿಕಾರ ರಚನೆಯ ಪ್ರತಿಕೃತಿಯಾಗಿಯೇ ಮೂಡಿಬರುತ್ತದೆ. ಜೈನರ ಮೋಕ್ಷಕಲ್ಪನೆಯು ಲೌಕಿಕ ಮತ್ತು ದೈವಿಕ ಎಂಬ ಲೋಕ ಹಾಗೂ ದೇವಲೋಕಗಳೆರಡನ್ನೂ ಮೀರಿದ ಕಲ್ಪನೆಯಾಗಿದ್ದರೂ, ಸ್ವರ್ಗಸುಖ ಅನುಭವಿಸುವ ದೇವನಾಗಿ ಹುಟ್ಟುವುದಕ್ಕೆ ಅಲ್ಲಿ ಅಧಿಕ ಒತ್ತಿದೆ. ಇನ್ನು ಕರ್ಮಕ್ಷಯ ಹೊಂದಿ ಲೋಕವನ್ನು ಮೀರಲೆಂದು ತಪಸ್ಸನ್ನಾಚರಿಸಲು ಹೊರಡುವ ರಾಜರೋ, ಶ್ರೇಷ್ಠಿಗಳೋ ತಮ್ಮ ವಂಶಪಾರಂಪರ್ಯದ ಅಧಿಕಾರವು ಹಾಗೆಯೇ ಮುಂದುವರಿಯಲು ಬೇಕಾದ ವ್ಯವಸ್ಥೆಯನ್ನು ಏರ್ಪಡಿಸಿಯೇ ಹೊರಡುವವರು. ಹೀಗೆ ಈ ಕತೆಗಳು ಲೌಕಿಕ ಅಧಿಕಾರ ರಚನೆಯನ್ನು ಯಥಾಸ್ಥಿತಿಯಲ್ಲಿ ಕಾಪಾಡಿಕೊಂಡು ಹೋಗುತ್ತವೆ. ಹಾಗಾಗಿ ಈ ಕತೆಗಳ ಆಂತರಿಕ ಜಗತ್ತು ಸಾಮಾನ್ಯವನ್ನು ಒಳಕೊಳ್ಳುವಂತಾಗಲೀ, ಅದಕ್ಕೆ ಮಹತ್ವಕೊಡುವಂತಾಗಲೀ ಇರಲು ಅವಕಾಶವಿಲ್ಲ. ಒಂದು ವೇಳೆ ಇಲ್ಲಿನ ಸ್ತ್ರೀಯರು ಮತ್ತು ಸಾಮಾನ್ಯರು ಮಹತ್ವ ಪಡೆದುಕೊಂಡಿದ್ದೇ ಆಗಿದ್ದಲ್ಲಿ ಮಹಾಪುರುಷರೆನಿಸುವ ನಾಯಕರುಗಳು ಬಿದ್ದೇ ಹೋಗುತ್ತಿದ್ದರು ಎನಿಸುತ್ತದೆ. ಅಷ್ಟೇ ಅಲ್ಲದೆ, ಇಲ್ಲಿ ಸಾಮಾನ್ಯರ ಪ್ರತಿನಿಧಿಗಳಂತಿರುವ ಸ್ತ್ರೀಯರಾಗಲೀ, ಜಾತಿನಿಷ್ಠರಾಗಲೀ ತಳಲೋಕದ ಜೊತೆಗೆ ಸಾವಯುವಸಂಬಂಧ ಹೊಂದಿದವರಲ್ಲ. ಅವರು ಜೈನಮತಾಚಾರದ ಪ್ರಚುರತೆಗೆ ಇಲ್ಲವೇ ಸಮಾಧಿಮರಣದ ಮಹಾಪುರುಷನ ಸ್ಥೈರಣೆಯ ಗರಿಷ್ಠತೆಯ ನಿರೂಪಣೆಗೆ ಮಾಧ್ಯಮವಾಗುವವರು. ಹಾಗಾಗಿ ಜನಪದ ಕತೆಗಳಂತೆ ಆರಂಭವಾಗುವ ವಡ್ಡಾರಾಧನೆಯ ಕತೆಗಳ ರಚನೆ ಜನಲೋಕವನ್ನು ಒಳಕೊಳ್ಳದ ಮಾದರಿಯಲ್ಲೇ ಇದೆ. ಜಾನಪದದಂತೆ ಅದು ಸಾಮಾನ್ಯವನ್ನು ಮುನ್ನೆಲೆಗೆ ತಂದದ್ದೇ ಆದಲ್ಲಿ ಅದು ಈಗ ಪ್ರತಿನಿಧಿಸುತ್ತಿರುವ ಅಧಿಕಾರದ ಅಸ್ತಿವಾರದ ಮೇಲೆಯೇ ನಿಂತಿರುವ ಅದರ ಕಥಾಸ್ವರೂಪವೇ ನಾಪತ್ತೆಯಾಗುತ್ತಿತ್ತು. ಈ ಕಾರಣಕ್ಕಾಗಿಯೇ ಅದು ತಳಲೋಕವನ್ನು ಹೊರಗಿಟ್ಟಿದೆ ಮತ್ತು ಲೌಕಿಕ ಅಧಿಕಾರದ ಜಗತ್ತನ್ನೇ ತನ್ನ ಭೂಮಿಕೆಯಾಗಿ ಬಳಸಿದೆ.

ಜನಪದ ಕತೆಗಳಂತೆ ಇವು ಕರ್ತೃಗಳಿಲ್ಲದ ಕತೆಗಳಲ್ಲ. ಹಾಗಿದ್ದರೆ ಈ ಕಥೆಗಳನ್ನು ಕನ್ನಡದಲ್ಲಿ ಯಾರು ಬರೆದರು? ಇದು ಪೂರ್ಣವಾಗಿ ಬಗೆಹರಿಯದ ಪ್ರಶ್ನೆ. ಕೃತಿಯ ಹೆಸರು ವಡ್ಡಾರಾಧನೆಯೇ? ಇದೂ ಖಚಿತವಿಲ್ಲ. ವಡ್ಡ ಎಂಬುದು ವೃದ್ಧ ಎಂಬುದರ ತದ್ಭವರೂಪವಲ್ಲ, ಅದು 'ದೊಡ್ಡದು' ಎಂಬ ಅರ್ಥಸೂಚಕವೆಂದೂ, ಕನ್ನಡದ ವಡ್ಡಾರಾಧನೆಯಲ್ಲಿ ಇರುವುದು ಹತ್ತೊಂಬತ್ತೇ ಕತೆಗಳಾದುದರಿಂದ ಇದೊಂದು ಅಪೂರ್ಣಕೃತಿ ಎಂದೂ ಹೇಳಲಾಗುತ್ತದೆ. ಇನ್ನು ಕೃತಿಕಾರನಿಗೆ ಸಂಬಂಧಿಸಿ ಕಥಾಕೋಶವನ್ನು ರಚಿಸಿದ ಶಿವಕೋಟಿಯೇ ಕನ್ನಡದ ವಡ್ಡಾರಾಧನೆಯನ್ನು ಬರೆದಿರಲಾರ ಎಂಬುದು ಅನೇಕರ ವಾದ. ಕನ್ನಡ ವಡ್ಡಾರಾಧನೆಯ ಕರ್ತೃಗಳಾಗಿ ಶಿವಕೋಟಿ, ಭ್ರಾಜಿಷ್ಣುವಿನ ಹೆಸರುಗಳು ಪ್ರಸ್ತಾಪದಲ್ಲಿವೆ. ಆದರೆ ಇವರುಗಳು ಯಾರೆಂಬ ಖಚಿತತೆಯಿಲ್ಲ. ಶಿವಕೋಟಿಯನ್ನೇ ವಡ್ಡಾರಾಧನೆಯ ಕರ್ತೃವಾಗಿ ಗುರುತಿಸಿಕೊಂಡು ಬರುವ ರೂಢಿ ಹಾಗೆಯೇ ಮುಂದುವರೆದಿದೆ. ಕವಿಯ ಹೆಸರು ಏನೇ ಆಗಿರಲಿ, ಆತ ಕನ್ನಡಪ್ರದೇಶದವನು ಎಂಬುದು ಅನೇಕರ ನಿಲುವು. ಇದಕ್ಕೆ ಪೂರಕವಾಗಿಯೇ


ವಡ್ಡಾರಾಧನೆ ಕವಿಯ ದೇಶಕಾಲದ ಕುರಿತ ಜಿಜ್ಞಾಸೆಯೂ ನಡೆದಿದೆ. ಕಾರ್ತಿಕಋಷಿ ಕಥೆಯ ಗಾಹೆಯಲ್ಲಿ 'ರೋಹೇದ'ವೆಂಬ ಉಲ್ಲೇಖವನ್ನು ಉಳಿಸಿಕೊಂಡು, ಕತೆಯಲ್ಲಿ 'ರೋಹೇದ'ದ ಜಾಗದಲ್ಲಿ 'ಕೋಗಳಿ' ಎಂದು ಬಳಸಿರುವ ಹಾಗೂ 'ಕೋಗಳಿ'ಯ ನಾಡನ್ನು ಶಿವನಾಟದ ಬಯಲೆಂಬಂತೆ ಚಿತ್ರಿಸಿರುವ ಅಂಶವನ್ನು ಈ ಹಿನ್ನೆಲೆಯಲ್ಲಿ ವಿಶೇಷವಾಗಿ ಗಮನಿಸಲಾಗಿದೆ. ಇದನ್ನು ಕೃತಿಕಾರನ ಕನ್ನಡತ್ವದ ಪುರಾವೆಯಾಗಿ, ದೇಶಸೂಚಕ ಆಕರವಾಗಿ ಓದಿಕೊಳ್ಳಲಾಗುತ್ತಿದೆ. ಕನ್ನಡ ವಡ್ಡಾರಾಧನೆಯನ್ನು ಕೋಗಳಿಯ ಹಿನ್ನೆಲೆಯಿಂದ ಬಂದ ಕವಿಯೇ ಬರೆದಿದ್ದಾನೆ ಎಂದೇ ಊಹಿಸಲಾಗುತ್ತದೆ. ಸದ್ಯಕ್ಕೆ ಆತ  ಶಿವಕೋಟಿಯೆಂದೂ, ಆತನ ಕಾಲ ಹೆಚ್ಚೂ ಕಡಿಮೆ 9ನೇ ಶತಮಾನದ ನಂತರಕ್ಕೆ ಸೇರಿದೆ ಎಂಬ ಅಭಿಪ್ರಾಯವಿದೆ.

## ಮತೀಯ ಚಹರೆಯ ಜೈನಕಥೆಗಳು

ವಡ್ಡಾರಾಧನೆಯ ಕತೆಗಳನ್ನು ಆರಾಧನಾ ಪರಂಪರೆಯ ಕತೆಗಳಾಗಿ ಜೈನಧಾರ್ಮಿಕ ಆವರಣದಲ್ಲೇ ಗುರುತಿಸಲಾಗುತ್ತದೆ. ಒಂದರ್ಥದಲ್ಲಿ ಅದು ತಪ್ಪಾದ ಕ್ರಮವೇನೂ ಅಲ್ಲ. ಯಾಕೆಂದರೆ ಈ ಕತೆಗಳನ್ನು ಆರಾಧನಾ ಪರಂಪರೆಯ ಕತೆಗಳೆಂದೇ ಘೋಷಿಸಿಲಾಗಿದೆ. ಭಗವತೀ ಆರಾಧನಾ, ಆರಾಧನಾ ಕರ್ನಾಟಿಕಾ ಎಂಬ ಹೆಸರುಗಳಲ್ಲಿಯೇ ಪರಿಚಿತವಾಗಿರುವ ಈ ಕಥಾಕೋಶದಲ್ಲಿ 19 ಕಥೆಗಳಿವೆ. ಆ ಕಥೆಗಳ ಆರಂಭದಲ್ಲಿಯೇ, "ದೇವೋಪಸರ್ಗ ಮನುಷ್ಯೋಪಸರ್ಗ ತಿರಿಕೋಪಸರ್ಗಂ ಅಚೇತನೋಪಸರ್ಗ ಎಂದಿಂತು ಚತುರ್ವಿಧಮಪ್ಪ ಉಪಸರ್ಗಮುಮಂ, ಪಸಿವು ನೀರಟ್ಕೆ ಮೊದಲಾಗೊಡೆಯ ಇಪ್ಪತ್ತೆರಡು ಪರೀಷಹಂಗಳುಮಂ ಸೈರಿಸಿ ಅಯ್ದುಮಿಂದ್ರಿಯಂಗಳಂ ಗೆಲ್ದು ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ದ್ವಾದಶವಿಧಮಪ್ಪ ತಪದೊಳ್ ಪ್ರಾಯೋಪಗಮನದಿಂ ಸಂನ್ಯಸನಂಗೆಯ್ದು ಕರ್ಮಕ್ಷಯಂಗೆಯ್ದು ಮೋಕ್ಷಕ್ಕೆವೋದ ಮತ್ತಂ ಸರ್ವಾರ್ಥ ಸಿದ್ಧಿಯೊಳ್ ಪುಟ್ಟಿದ ಮಹಾಪುರುಷರ್ಕಳ ಕಥೆಗಳ್"(ವಡ್ಡಾರಾಧನೆ, ಪು.55) ಎಂದೇ ಘೋಷಿಸಿಲಾಗಿದೆ. ಹಾಗಾಗಿ ಈ ಹತ್ತೊಂಬತ್ತೂ ಕತೆಗಳು ಜೈನ ಸಮಾಧಿಮರಣದ ಕತೆಗಳು. ಆ ಮೂಲಕ ಮೋಕ್ಷ ಇಲ್ಲವೇ ಮೋಕ್ಷದ ನೆರಮನೆಯಂತಿರುವ  ಸರ್ವಾರ್ಥಸಿದ್ಧಿ ಎಂಬ ಸ್ವರ್ಗಕ್ಕೆ ಹೋದವರ ಕತೆಗಳು. (ಸರ್ವಾರ್ಥಸಿದ್ಧಿಯು ಶ್ರೇಣೀಕೃತ ದೇವಲೋಕದಲ್ಲೇ ಅತೀ ಎತ್ತರದ ಹಂತ. ಇಲ್ಲಿ ಅಹಮಿಂದ್ರನಾಗಿ ಹುಟ್ಟುವುದು ದೇವತೆಗಳ ಶ್ರೇಣೀಕರಣದಲ್ಲಿ ಅತ್ಯಂತ ಎತ್ತರವನ್ನು ತಲುಪಿದ್ದರ ಕುರುಹು). ಈ ಹತ್ತೊಂಬತ್ತು ಕತೆಗಳಲ್ಲಿನ ನಾಯಕರುಗಳು ಹತ್ತೊಂಬತ್ತು ವಿಧಾನದ ಮರಣ ಹೊಂದುವ ಜೈನ ಮಹಾಪುರುಷರು. ವಿಧಾನದಲ್ಲಿ ವ್ಯತ್ಯಾಸದ ಜೊತೆಗೆ ಹತ್ತೊಂಬತ್ತು ಕತೆಗಳಲ್ಲಿ ಗಾತ್ರವ್ಯತ್ಯಾಸವೂ ಇದೆ. ಸುಕುಮಾರಸ್ವಾಮಿಯ ಒಂದೇ ಕಥೆ 24 ಪುಟಗಳಷ್ಟಿದ್ದರೆ, ಭದ್ರಬಾಹು ಭಟ್ಟಾರ, ಗುರುದತ್ತ ಭಟ್ಟಾರ, ಸುಕೌಶಲಸ್ವಾಮಿ, ಸನತ್ಕುಮಾರಸ್ವಾಮಿಯ ಕಥೆಗಳು 14–15 ಪುಟಗಳಷ್ಟಿವೆ. ಇನ್ನೆರಡು ಕಥೆಗಳು 9

ಪುಟಗಳಷ್ಟಿದ್ದರೆ, ಏಳು ಕಥೆಗಳು 3–4 ಪುಟಗಳಷ್ಟಿವೆ. ಮೂರು ಕಥೆಗಳು 2 ಪುಟಗಳಷ್ಟಿದ್ದು, ಎರಡುಕಥೆಗಳು ಕೇವಲ 1 ಪುಟದಷ್ಟಿವೆ. ವಡ್ಡಾರಾಧನೆ ಕಥೆಗಳ ಈ ಗಾತ್ರವೈವಿಧ್ಯವನ್ನು ಹಂಪನಾ ಅವರು  ನಿಶ್ಚಿತಸೂತ್ರಕ್ಕೆ ಬದ್ಧವಾಗದ ಕಥೆಗಾರನ ಸ್ವಾತಂತ್ರ್ಯವಾಗಿ ಗುರುತಿಸುತ್ತಾರೆ. ಹೀಗೆ ಈ ವೈವಿಧ್ಯವನ್ನು ಕೃತಿಯ ಒಟ್ಟು ರಚನೆಗೆ ಪೂರಕವಾಗಿ ಗುರುತಿಸುವ ಅವರು, "ಕಥೆ ದೊಡ್ಡದಾಗಿರಲಿ ಸಣ್ಣದಾಗಿರಲಿ, ಕಥಾನಾಯಕ ಯಾರೇ ಆಗಿರಲಿ, ಕಥೆಯ ಕಟ್ಟಡಕ್ಕೆ ಅಡಿಪಾಯ ಒಂದೇ; ಅಪಾರ ವೇದನೆಯನ್ನು ಸಹಿಸಿ ಉತ್ತಮ ಸದ್ಗತಿಯನ್ನು ಪಡೆಯುವುದು. ಆದರೆ ವೇದನೆಯ ತರಹ ಹತ್ತೊಂಬತ್ತು, ಮರಣದ ವಿಧಾನ ಹತ್ತೊಂಬತ್ತು; ಏಕತ್ವದ ಮೇಲೆ ನಿಂತಿರುವ ಬಹುತ್ವ"(ಸಮಗ್ರ ಕನ್ನಡಸಾಹಿತ್ಯಚರಿತ್ರೆ ಸಂ–2, ಪು. 53) ಎನ್ನುತ್ತಾರೆ. ಗಾತ್ರವೈವಿಧ್ಯದ ನಡುವೆಯೂ ಆತ್ಯಂತಿಕವಾಗಿ ಒಂದೇ ಆಶಯಕ್ಕಾಗಿ ದುಡಿಯುವ ಈ 19 ಕಥೆಗಳಲ್ಲಿ 'ಉಪಸರ್ಗ' ಮತ್ತು 'ಪರೀಷಹ'ಗಳೆಂಬ ತಡೆಗಳನ್ನು ಗೆದ್ದು ಸಮಾಧಿಮರಣದ ಮೂಲಕ ಮೋಕ್ಷ ಇಲ್ಲವೇ ದೇವಪದವಿ ಪಡೆದುದೇ ಇದೆ. ಮೋಕ್ಷಕ್ಕಿಂತಲೂ ಸರ್ವಾರ್ಥಸಿದ್ಧಿಯಲ್ಲಿ ಅಹಮಮಿಂದ್ರ ಇಲ್ಲವೇ ಸಯಸತ್ತದೇವನಾಗಿ ಹುಟ್ಟುವುದನ್ನೇ ಹೆಚ್ಚಾಗಿ ಕಥಿಸಿವೆ(ಆದರೆಈ ನಾಯಕಪ್ರಧಾನ ಕಥನದಲ್ಲಿ ಮಹಾಪುರುಷರಲ್ಲದೆ ಮಹಾನಾಯಕಿಯರಿಲ್ಲ!).


ಸಂಕೇತಗಳ ಸ್ಥಾಪನೆಯ ಉದ್ಯೋಗವು ಮತಪಂಥವೊಂದರ ಸಾಂಸ್ಥಿಕತೆಗೆ ವೇಗ ಒದಗಿಸುತ್ತವೆ. ಅದು ಮತವಿಚಾರದ ತಾತ್ವಿಕತೆಗೆ ಹೊರತಾದ ಆಚರಣಾತ್ಮಕ ಆಕೃತಿಗಳನ್ನು ನೆಲೆಯಾಗಿಸುತ್ತದೆ. ವಡ್ಡಾರಾಧನೆಯಲ್ಲಿ ಜೈನಮತದ ಈ ಆಚರಣಾತ್ಮಕ ಸಾಂಸ್ಥಿಕ



ಗುರುತುಗಳನ್ನು ಜನಪ್ರಿಯವಾಗಿಸುವ ಸ್ಪಷ್ಟಸೂಚನೆಗಳಿವೆ. ಆದರೆ ಹೀಗೆ ಪ್ರಚುರಪಡಿಸಲಾದ ಆಚರಣಾತ್ಮಕ ಸಂಕೇತಗಳನ್ನು ಜಿನಧರ್ಮದ ತಾತ್ವಿಕ ಆಕೃತಿಯ ಭಾಗವೆನ್ನಲಾಗದು. ಏಕೆಂದರೆ ಮೂಲತಃ ಜಗತ್ತಿಗೊಬ್ಬ ಕಾರಣಶಕ್ತಿಯಾದ ದೈವವನ್ನು ನಿರಾಕರಿಸುವ ಜೈನವು ನಾಸ್ತಿಕಧರ್ಮ. ಭವಚಕ್ರವನ್ನು ಮೀರುವ ಮೋಕ್ಷವನ್ನು ಪ್ರತಿಪಾದಿಸುವ ಧರ್ಮ. ಆದರೆ ವಡ್ಡಾರಾಧನೆಯಲ್ಲಿ ಅದು ಸುಖಭೋಗಗಳ ರಮ್ಯಕಲ್ಪನೆಯಾದ ಸರ್ವಾರ್ಥಸಿದ್ಧಿಯ ಕಡೆಗೇ ಹೆಚ್ಚು ಆಕರ್ಷಿತವಾಗಿದೆ. ಸ್ವರ್ಗಕಲ್ಪಗಳಲ್ಲಿ ಹುಟ್ಟುವುದನ್ನೇ ವಿಶೇಷವಾಗಿ ಕಥಿಸುವ ಈ ಕತೆಗಳಲ್ಲಿ ಮೋಕ್ಷಕ್ಕಿಂತ ದೇವನಾಗಿ ಹುಟ್ಟುವತ್ತಲೇ ಒಲವಿದೆ. ಈ ಹುಟ್ಟಿನ ಕಾರಣವಾಗಿ ಅದು ಜಿನಾಚಾರದ ಜೊತೆಗೆ ದೈವಪೂಜೆಯನ್ನು ತರುತ್ತದೆ. ಆ ಮೂಲಕ ಪೂಜಾಸಂಸ್ಕೃತಿಯ ಸಾಂಸ್ಥೀಕರಣದಲ್ಲಿ ತೊಡಗಿಕೊಳ್ಳುತ್ತದೆ. ಉದಾಹರಣೆಗೆ ಗುರುದತ್ತಭಟಾರರ ಕತೆಯಲ್ಲಿ ಪರಿಚರ ಮಹಾರಾಜನ ರಾಣಿಯರು ಜೈನವಿಧಿಯಂತೆ ಆಹಾರತ್ಯಜಿಸಿ, ಪಂಚನಮಸ್ಕಾರವನ್ನು ಉಚ್ಚರಿಸುತ್ತಾ ದೇವರನ್ನು ಧ್ಯಾನಿಸುತ್ತಾ ಸತ್ತು ದೇವತಾವಸ್ಥೆಯನ್ನು ಪಡೆಯುತ್ತಾರೆ. ಕಾರ್ತಿಕಋಷಿಯ ಕತೆಯಲ್ಲಿ ಅಗ್ನಿರಾಜನ 'ಕೊಡಗೂಸುಗಳ್ ಉಪವಾಸಂಗೆಯ್ದು ಬಸದಿಗರ್ಚನೆಯಂ ಕೊಂಡುಪೋಗಿ ದೇವರನರ್ಚಿಸಿ ನಂದೀಶ್ವರಂಗೆಯ್ದು' ಬರುತ್ತಾರೆ. ಅದಲ್ಲದೆ, 'ಕಾರ್ತಿಕಋಷಿಯರ್ ಮುಡುಪಿದಲ್ಲಿಯವರ ತಂಗೆಯಪ್ಪ ವೀರಶ್ರೀ ಬಸದಿಯಂ ಮಾಡಿದೊಡೆ ಅಂದಿಂದಿತ್ತ ಸ್ವಾಮಿಯೆಂಬ ತೀರ್ಥ'ವಾದ ವಿವರಗಳಿವೆ. ಕಾರ್ತಿಕಋಷಿ ಕತೆಯ 'ಸರ್ವೌಷಧಿ' ಎಂಬ ತೀರ್ಥ, ಸನತ್ಕುಮಾರಚಕ್ರವರ್ತಿ ಕತೆಯ ಮದ್ದಿನಬಾವಿಯನ್ನು ಒಳಗೊಂಡಂತೆ ಇಲ್ಲಿ ಬರುವ ತೀರ್ಥ ಹಾಗೂ ಸಿದ್ಧಾಯತನಗಳ ಸ್ಥಳಪುರಾಣಗಳುಳ್ಳ ದಿವ್ಯಪುರುಷರ ಕತೆಗಳು 'ಜೈನಸಾಂಸ್ಕೃತಿಕ ಭೂಗೋಳ'ವೊಂದನ್ನು ಪ್ರತಿಪಾದಿಸುತ್ತವೆ. ಇವೆಲ್ಲವೂ ನೆಲೆಗೊಂಡ ಪೂಜಾಸಂಸ್ಕೃತಿಯ ಭಾಗವಾಗಿಯೇ ಬರುತ್ತವೆ. ಅಲ್ಲದೆ ಜೈನ ಲೋಕದೃಷ್ಟಿಗೆ ಹೊಸಪರಿವರ್ತನೆಯೊಂದನ್ನೂ ಅವು ಉಂಟುಮಾಡುತ್ತವೆ. ಆದರೆ ಈ ಪರಿವರ್ತನೆಯಲ್ಲಿ ಅದಾಗಲೇ ಪ್ರಭಾವಿಯಾದ ಮತಶಕ್ತಿಗಳ ಸವಾಲುಗಳ ಮುಖಾಮುಖಿಗೆ ಮಾಡಿಕೊಂಡ ಹೊಸ ಸಿದ್ಧತೆ ಇರುವುದನ್ನೂ ನಾವು ಅಲ್ಲಗಳೆಯಲಾಗದು.

ಈ ಸೈರಣೆ ಮತ್ತು ಉಪಾಯವೆಂಬ ಮೂಲಮಂತ್ರಗಳಿಂದ ಕೂಡಿದ 'ಉಪಸರ್ಗಕೇವಲಿ'ಗಳ ಕತೆಗಳ ಜನ್ಮಾಂತರದ ಅಲೌಕಿಕ ಕಲ್ಪನೆ ಜನ್ಮಜನ್ಮಗಳೆಲ್ಲವನ್ನೂ ಹೆಣೆಯುತ್ತವೆ. ಇದು ರಾಜನೋ, ಬ್ರಾಹ್ಮಣನೋ ಆಗಿದ್ದವನು ತೀರಾ ಕೆಳಸ್ತರದಲ್ಲಿ ಹುಟ್ಟುವ, ಹೊಲತಿಯಾಗಿದ್ದವಳು ಪೂರ್ವಭವದಲ್ಲಿ ಬ್ರಾಹ್ಮಣನಾಗಿರುವ ಸಾಧ್ಯತೆಗಳನ್ನು ತೆರೆಯುತ್ತದೆ. ಇದರಿಂದ ಜೈನ ಶ್ರಾವಕಾಚಾರವನ್ನು ಪಡೆಯುವ ಅರ್ಹತೆಯು ಎಲ್ಲ ಸಮುದಾಯಕ್ಕೂ ವಿಸ್ತರಗೊಳ್ಳುತ್ತದೆ. ವಡ್ಡಾರಾಧನೆ ಕತೆಗಳು ಇಂತಹ ಆವರಣದಲ್ಲಿ ಜೈನಸಮಾಧಿಮರಣವನ್ನು ವೈಭವೀಕರಿಸಿವೆ. ಅಷ್ಟೇ ಅಲ್ಲ, ಈ ವೈಭವೀಕರಣದ ಹಾದಿಯಲ್ಲಿ ಫಲಸಂಕಥನದ ಗುಣವೂ ತುಂಬಿವೆ.– "ಜಿನಧರ್ಮಮಂ ಪಟಿದ ಪಾಪದ ಫಲದಿಂದಂ ಏೞುಂ ದಿವಸದಿಂದೊಳಗೆ

ಔದುಂಬರ ಕುಷ್ಠಮಾಗಿ ಪುಟಿತು ನಮೆದು" ಸಾಯುವ(ಸುಕುಮಾರಸ್ವಾಮಿಯ ಕಥೆ); "ಜಿನಧರ್ಮವಂ ಪಟಿದು ಉನ್ಮಾರ್ಗೋಪದೇಶದಿಂದಾರ್ತ ಧ್ಯಾನದೊಳ್ ಕೂಡಿ ಸತ್ತು ಮೊಗ್ಗಳಗಿರಿಯೆಂಬ ಪರ್ವತದೊಳ್ ಪೆಣ್ಬುಲಿಯಾಗಿ" ಹುಟ್ಟುವ (ಸುಕೌಶಳಸ್ವಾಮಿಯ ಕಥೆ); ಇದಕ್ಕೆ ವ್ಯತಿರಿಕ್ತವಾಗಿ 'ದುರ್ಗಂಧೆ, ದುರೂಪೆಯಾದ ಮಾದಿಗರವಳೂ ಜಿನಧರ್ಮದ ವ್ರತಗಳನ್ನು ಕೈಕೊಂಡು ನಾಗಶ್ರೀ ಎಂಬ ಬ್ರಾಹ್ಮಣನ ಮಗಳಾಗಿ ಹುಟ್ಟುವ(ಸುಕುಮಾರಸ್ವಾಮಿಯ ಕಥೆ); ತಪ ಮಹಾತ್ಮ್ಯವಿನ್ನೂ ಹಿರಿದಿದೆಯೆಂದು ನಂಬಿ ಉಪವಾಸವನ್ನೇ ಮುಂದುವರೆಸಿ ಸತ್ತ ನಂದಿಮಿತ್ರನೇ ಸಂಪ್ರತಿ ಚಂದ್ರಗುಪ್ತನೆಂಬ ಅರಸಾಗಿ ಹುಟ್ಟುವ (ಭದ್ರಬಾಹುಭಟ್ಟಾರರ ಕಥೆ) ವಿವರಗಳಲ್ಲಿ ಇದು ಸ್ಪಷ್ಟವಿದೆ. ಜೈನಮತದ ಹೆಚ್ಚುಗಾರಿಕೆ, ಅದನ್ನು ಹಳಿದವರ ಅಧೋಗತಿ ಮತ್ತು ಆಚರಿಸಿದವರ ಏರುಗತಿಗಳು ಹೀಗೆ ರೂಪಕಭಾಷೆಯಲ್ಲಿವೆ. ಈ ನಿರೂಪಣೆ ವೈದಿಕಮತದ ಹಿನ್ನೆಲೆಯುಳ್ಳ ದಾನಶಾಸನಗಳ ಶಾಪಾಶಯ–ಫಲಾಶಯದ ಮಾದರಿಯನ್ನೇ ನೆನಪಿಸುವಂತಿದೆ. ಯಾಕೆಂದರೆ ವೈದಿಕ ಮತಾವರಣದ ದಾನಶಾಸನಗಳ ಬ್ರಾಹ್ಮಣ್ಯಪೋಷಕ ಘೋಷವಾಕ್ಯಗಳು ಇದೇ ಮಾದರಿಯವು. ಅವುಗಳೂ ಬ್ರಹ್ಮಸ್ವವನ್ನು ಮುಟ್ಟುವುದು ವಿಷಕ್ಕಿಂತ ಅಪಾಯಕಾರಿ ಎನ್ನುತ್ತವೆ. ಅಲ್ಲಿರುವ ಮಾತನ್ನೇ ನೆನಪಿಸುವುದಾದರೆ, "ವಿಷಂ ನ ವಿಷಮಿತ್ಯಾಹು ಬ್ರಹ್ಮಸ್ವಂ(ದೇವಸ್ವಂ) ವಿಷಮುಚ್ಯತೇ, ವಿಷಂ ಏಕಾಕಿನಂ ಹಂತಿ ಬ್ರಹ್ಮಸ್ವಂ(ದೇವಸ್ವಂ) ಪುತ್ರಪೌತ್ರಕಂ" (ವಿಷವನ್ನು ವಿಷ ಎನ್ನುವುದಿಲ್ಲ. ಬ್ರಹ್ಮಸ್ವವನ್ನೇ ವಿಷವೆನ್ನುತ್ತಾರೆ; ವಿಷ ಒಬ್ಬರನ್ನಷ್ಟೇ ಕೊಲ್ಲುತ್ತದೆ, ಬ್ರಹ್ಮಸ್ವ(ದೇವಸ್ವ)ವು ವಂಶವನ್ನೇ ನಿರ್ನಾಮ ಮಾಡುತ್ತದೆ)."– ಈ ಮಾತು ದೇವಸ್ವ ಮತ್ತು ಬ್ರಹ್ಮಸ್ವಗಳು ಉಲ್ಲಂಘಿಸದೆ ಕಾಯಬೇಕಾದ ವಿಧಿಗಳೆಂಬಂತೆ ಘೋಷಿಸುತ್ತವೆ. ದೇಗುಲ ಮತ್ತು ಬ್ರಾಹ್ಮಣರಿಗೆ ಕೊಟ್ಟ ದಾನದ ಉಲ್ಲಂಘನೆ ನಿಷೇಧಿಸುವ ಇನ್ನೊಂದು ಶಾಪಾಶಯವಾಕ್ಯದಲ್ಲಿ ("ಸ್ವದತ್ತಾಂ ಪರದತ್ತಾಂ ವಾಯೋಹರೇತಿ ವಸುಂಧರಾಂ ಷಷ್ಟಿರ್ವರ್ಷಸಹಸ್ರಾಣಿ ವಿಷ್ಠಯಾಂ ಜಾಯತೇ ಕ್ರಿಮಿ:"), ದಾನವನ್ನು ಅಪಹರಿಸುವಾತ ಅರವತ್ತುಸಾವಿರ ವರ್ಷಗಳವರೆಗೆ ಮಲದಲ್ಲಿ ಕ್ರಿಮಿಯಾಗಿ ನಾರಕೀ ಅವಸ್ಥೆಯಲ್ಲಿ ಹುಟ್ಟುವ ನಿಗಧಿತ ಶಿಕ್ಷೆಯ ಘೋಷಣೆಯಿದೆ. ಇನ್ನು ಇದಕ್ಕೆ ವಿರುದ್ಧವಾದ ಫಲಾಶಯದ ಮಾತುಗಳೂ ಅಲ್ಲಿವೆ. ಅವು ದಾನಕೊಡುವ ಮತ್ತು ಪಾಲಿಸುವವರುಗಳಿಗೆ ದಕ್ಕುವ ಪದವಿಯನ್ನು ಪ್ರಸ್ತಾಪಿಸಿ, "ದಾನಾತ್ ಶ್ರೇಯೋ ಪಾಲನಾತ್, ದಾನಾತ್ ಸ್ವರ್ಗವಾಪ್ನೋತಿ ಪಾಲನಾತ್ ಅಚ್ಯುತಮ್ ಪದಮ್" ಎನ್ನುತ್ತವೆ. ಅಂದರೆ ದಾನ ಕೊಟ್ಟಾತ ಸ್ವರ್ಗವನ್ನು ಪಡೆದರೆ, ದಾನವನ್ನು ಕೆಡದಂತೆ ಪಾಲಿಸಿದಾತ ಅಚ್ಯುತಪದವಿಯನ್ನೇ ಪಡೆಯುತ್ತಾನಂತೆ! ಸೂಕ್ಷ್ಮವಾಗಿ ಗಮನಿಸಿದರೆ ಕಥಾ ಸಾಧನವನ್ನು ಅವಲಂಬಿಸಿ ವಡ್ಡಾರಾಧನೆಯೂ ಇದೇ ಪರಿಣಾಮ ಸಾಧಿಸಲು ಯತ್ನಿಸಿದೆ ಎಂಬುದು ತಿಳಿಯುತ್ತದೆ. ಮುಖ್ಯ ವ್ಯತ್ಯಾಸವೆಂದರೆ ದಾನಶಾಸನಗಳು ಬಿಡುಗಡೆಯಿಲ್ಲದ ದೀರ್ಘಕಾಲದ ಕನಿಷ್ಠ ಅವಸ್ಥೆಯ ಭಯವನ್ನು ಎದುರಿಗಿಡುತ್ತವೆ. ಆದರೆ ವಡ್ಡಾರಾಧನೆ ಕತೆಗಳಲ್ಲಿ ಜಿನಧರ್ಮನಿಂದಕರದು ನಾರಕಿಗಿಂತ ಕೊಂಚ ಮೇಲ್ಸ್ತರದ ತೀರ್ಯಗ್ ಅವಸ್ಥೆ. ಅದು ಜಿನಧರ್ಮವನ್ನು ಸ್ವೀಕರಿಸಿ ಆಚರಿಸಬಲ್ಲ ಕನಿಷ್ಠಪ್ರಜ್ಞೆಯ ಸ್ತರ. ವೈದಿಕಶಾಸನ ವಾಕ್ಯಗಳು ಶಿಕ್ಷಾ ಘೋಷಣೆಯ ಮೂಲಕ ಉಲ್ಲಂಘನೆಯನ್ನೇ ನಿಷೇಧಿಸುತ್ತವೆ.



ಪಾಪಾತ್ಮರಿಗೆ ಬಿಡುಗಡೆಯ ದಾರಿಯನ್ನೇ ಮುಚ್ಚುತ್ತವೆ. ಆದರೆ ವಡ್ಡಾರಾಧನೆಯ ಕತೆಗಳು ಈ ಅಪರಾಧವನ್ನು ಅರಿವಿನ ಮೂಲಕ ದಾಟುವುದನ್ನು ತೋರುತ್ತವೆ. ಆದರೆ ಆ ಅರಿವು ಮತ್ತು ದಾಟುವಿಕೆ ಜಿನಧರ್ಮದ ಒಳಹರಿವಿಗಾಗಿ ಸಂಭವಿಸುವ ಘಟನಾವಳಿಗಳ ಸರಣಿಯಾಗಿಯಷ್ಟೆ ಇವೆ. ಹೀಗೆ ಈ ಕತೆಗಳು ಜಿನಧರ್ಮ ನಿಂದೆಯನ್ನು ಪಾಪವೆಂದೂ, ಶ್ರಾವಕವ್ರತಾಚರಣೆಯೊಂದೇ ಪಾಪಿಯ ಉದ್ಧಾರಕ್ಕೆ ಇರುವ ಅಂತಿಮ ಅವಕಾಶವೆಂದೂ ಸಾರುತ್ತವೆ. ಜಿನಧರ್ಮವನ್ನು ಆತ್ಮೋತ್ಕರ್ಷದ ಅವಕಾಶವುಳ್ಳ ಶಕ್ತಧರ್ಮವೆಂದೇ ಪ್ರತಿಪಾದಿಸುತ್ತವೆ.

ಆದರೆ ವಡ್ಡಾರಾಧನೆ ಆದೇಶಿಸಿ ಬಗ್ಗಿಸುವ ಶಾಸನಮಾದರಿಯಲ್ಲ. ಕಥೆಹೇಳಿ ಒಪ್ಪಿಸುವ ನಿವೇದನಾಮಾದರಿ. ಮೂಲತಃ ಕತೆಯೆಂಬುದು ಅರ್ಥಮಾಡಿಸುವ, ಹೊಸಬಗೆಯಲ್ಲಿ ತಿಳಿವನ್ನು ಹೊಳೆಯಿಸುವ, ಒಲಿಸಿ ಒಪ್ಪಿಸಲು ಒದಗಿಬರುವ ರೂಪಕ ಸಾಧನ. ಅಸ್ತಿತ್ವ ಉಳಿಸಿಕೊಳ್ಳುವ ಒತ್ತಡವಿಲ್ಲದ ಧರ್ಮಗಳಿಗೆ ಒಲಿಸಿ ಒಪ್ಪಿಸಿಕೊಳ್ಳುವ ಅಗತ್ಯವಿರದು. ಅವು ಪ್ರಭುಸಂಹಿತದ ಧಾಟಿಯಲ್ಲಿ ಮಾತನಾಡುತ್ತವೆ. ಆದೇಶಿಸುತ್ತವೆ. ಉಲ್ಲಂಘಿಸಿದವರನ್ನು ಹೊರದಬ್ಬುತ್ತವೆ. ಶಾಸನಗಳ ಧ್ವನಿ ಈ ಬಗೆಯದು. ಆದರೆ ಯಾವ ಧರ್ಮಕ್ಕೆ ಹೊರಗಿನಿಂದ ಒಳತಂದುಕೊಳ್ಳುವ ಮೂಲಕ ವಿಸ್ತರಣೆಗೊಳ್ಳುವ ನಿರೀಕ್ಷೆ ಮತ್ತು ಪ್ರತಿಕೂಲ ಸನ್ನಿವೇಶದಲ್ಲಿ ಉಳಿದು ಬೆಳೆಯುವ ಅನಿವಾರ್ಯತೆಯ ಒತ್ತಡವಿರುತ್ತದೆಯೋ, ಅದಕ್ಕೆ ತಂತ್ರಗಳ ಅಗತ್ಯ ಬೀಳುತ್ತದೆ. ವಡ್ಡಾರಾಧನೆ ಕತೆಗಳು ಜೈನಧರ್ಮವು ಇಂತಹ ತಂತ್ರಗಾರಿಕೆಗೆ ಮೊರೆಹೋದುದರ ಕುರುಹು. ತನ್ನನ್ನು ಒಪ್ಪಿಸಲು ಮತ್ತು ತನ್ನತ್ತ ಒಲಿಸಿಕೊಳ್ಳಲೆಂದು ಹೆಣೆದ ಈ ಉಪಸರ್ಗಕೇವಲಿಗಳ ಕತೆಗಳು ಮುಖ್ಯವಾಗಿ ಲೋಕದ ಅನಿತ್ಯತೆಯನ್ನು ಮನವರಿಕೆ ಮಾಡುತ್ತವೆ. ಅದಕ್ಕೆಂದೇ ಅವು ಜೈನಕತೆಗಳ ಸಾಮಾನ್ಯಲಕ್ಷಣವಾದ ಮಹಾಕಣ್ಮರೆಯನ್ನು ಅವಲಂಬಿಸಿವೆ.

ಅನೇಕ ಕತೆಗಳಲ್ಲಿ ಕಣ್ಮರೆಯೇ ಅರಿವಿನ ಹೇತುವಾಗುತ್ತದೆ. ಇಲ್ಲಿ ಕಣ್ಣೆದುರಿಗಿದೆ ಎಂದುಕೊಂಡುದೇ ಇದ್ದಕ್ಕಿದ್ದಂತೆ ಕಣ್ಮರೆಯಾಗುವುದನ್ನು ಕಂಡು ನಾಯಕರು ಕಂಗಾಲಾಗುತ್ತಾರೆ. ಲೋಕವನ್ನು ದಾಟಿಕೊಳ್ಳುವ ಅರಿವಿಗೊಳಗಾಗುತ್ತಾರೆ (ಉದಾಹರಣೆಗೆ ಸನತ್ಕುಮಾರ, ಕಾರ್ತಿಕಋಷಿ ಇತ್ಯಾದಿ ಕತೆಗಳನ್ನು ಗಮನಿಸಿ). ಹೀಗೆ ಜೈನಪರಿಭಾಷೆ, ಜೈನತತ್ವ, ಉಪಸರ್ಗಕೇವಲಿಗಳಾದ ನಾಯಕರು, ಮಹಾಕಣ್ಮರೆಯ ಗುಣದೊಂದಿಗೆ ಜೈನಮತವಿಸ್ತರಣಾ ಆಶಯವೂ ಈ ಕತೆಗಳಿಗಿದೆ. ಇದಕ್ಕೆ ಪೂರಕವಾಗಿಯೇ ಇಲ್ಲಿನ ಮಹಾಪುರುಷರು ಈ ಜಗತ್ತಿನ ಮನುಷ್ಯಜನ್ಮಗಳ ಶ್ರೇಣೀಕರಣವನ್ನು ಕ್ರಮವಾಗಿ ಏರುತ್ತಾ ಕರ್ಮಕ್ಷಯ ಹೊಂದುತ್ತಾರೆ. ಅಷ್ಟೇ ಅಲ್ಲ, "ಈ ಮೀರುವಿಕೆಯ ಕೊನೆಯ ಹಂತದಲ್ಲಿ ಅವರು ಲೌಕಿಕ ಅಧಿಕಾರಜಗತ್ತಿನ ಅತ್ಯಂತ ಪ್ರಭಾವಿ ಹಾಗೂ ಶಕ್ತಿಶಾಲಿ ಮನುಷ್ಯರಾಗಿರುತ್ತಾರೆ. ಈ ಲೋಕದಲ್ಲಿ ಜೈನ ಶಮಣನು ತನ್ನ ಅಧಿಕಾರ ಸ್ಥಾಪಿಸುವುದು ಕಥೆಯ ಅಘೋಷಿತ ಉದ್ದೇಶ"(ಕನ್ನಡ ಅಧ್ಯಯನ,ಸಂಪುಟ–7,ಸಂಚಿಕೆ–1,2000,ಪು.2). ಹೀಗೆ ಜೈನಕಥಾ ಪರಂಪರೆಯ ಲಕ್ಷಣ, ಜೈನಶ್ರೇಷ್ಠತೆಯ ಪ್ರತಿಪಾದನೆ, ಜೈನಮತಾವರಣಕ್ಕೆ ಉಂಟಾಗುವ ಒಳಹರಿವನ್ನೇ (ಹೊರಹೋಗುವ ವಿವರಗಳಿಲ್ಲ) ಹೇಳುವ ಮೂಲಕ ಜೈನಮತೀಯ ಸಾಂಸ್ಥಿಕ ಆಶಯವನ್ನೇ ಪ್ರತಿಪಾದಿಸುವ ಜೈನಕತೆಗಳಾಗಿಯೇ ಈ ಕತೆಗಳು ಮೈತಳೆಯುತ್ತವೆ.


ಆದರೆ ವಡ್ಡಾರಾಧನೆಯನ್ನು ಜೈನಕತೆಗಳೆಂದು ವರ್ಗೀಕರಿಸಿದ ಮಾತ್ರಕ್ಕೆ ಅದರ ಪೂರ್ಣಪರಿಚಯ ಮುಗಿಯಿತೆಂದಲ್ಲ. ವಾಸ್ತವವಾಗಿ ಹೀಗೆ ವರ್ಗೀಕರಿಸುತ್ತಲೇ, ಜೈನ ಹಾಗೂ ಜೈನೇತರ ಜಗತ್ತಿನೊಂದಿಗಿನ ಅವುಗಳ ಅನುಸಂಧಾನದ ಚರ್ಚೆಗೆ ಚಾಲನೆ ದೊರೆಯುತ್ತದೆ. ವಡ್ಡಾರಾಧನೆ ಪ್ರತಿಪಾದಿಸುತ್ತಿರುವ ಜೈನ ಆವರಣ; ಆ ಜೈನ ಆವರಣವನ್ನು ಕಟ್ಟುತ್ತಿರುವುದರ ಹಿಂದಿನ ಅದರ ಒತ್ತಡಗಳು; ಅದು ಅನ್ಯವನ್ನು ಎದುರಾಗುತ್ತಿರುವ ಬಗೆ; ಜೈನ ಲೋಕೋತ್ತರತೆಯನ್ನು ಕಟ್ಟಿಕೊಳ್ಳಲು ಅದು ಬಳಸುತ್ತಿರುವ ಲೋಕಸಂದರ್ಭದ ಪಾತಳಿಗಳೆಲ್ಲವೂ ಚರ್ಚೆಯ ವಸ್ತುಗಳಾಗುತ್ತವೆ. ಪರಿಣಾಮವಾಗಿ ತಮ್ಮ ಸಮಕಾಲೀನ ಅನ್ಯಮತಪಂಥಗಳು ಈ ಕತೆಗಳು ಹೇಗೆ ಪರಿಭಾವಿಸಿವೆ? ಮತವಿಸ್ತರಣೆಯ ಆವರಣದ ನಿರ್ಮಾಣ ಪ್ರಕ್ರಿಯೆಯಲ್ಲಿ ಈ ಕತೆಗಳಿಗೆ ಸಾಮಾಜಿಕ ಎದುರಾಳಿ ಯಾವುದು? ಅವು ಯಾವುದನ್ನು ಪಳಗಿಸಲು ಯತ್ನಿಸಿವೆ? ಯಾವುದನ್ನು ಒಳಗೊಳ್ಳಲು ಬಯಸಿವೆ? ಯಾವುದನ್ನು ಕೀಳಾಗಿ ಪರಿಗಣಿಸುತ್ತಿವೆ? ಇಲ್ಲಿನ ಮೇಲು–ಕೀಳಿನ ಗ್ರಹಿಕೆ ಯಾವ ಬಗೆಯದು? ಈ ಗ್ರಹಿಕೆಯ ತಾತ್ವಿಕ ತಳಹದಿ ಯಾವುದು? ಈ ಕತೆಗಳು ಕುಲೀನತೆ ಮತ್ತು ರಾಜತ್ವವನ್ನು ಮುಕ್ತಿಯಾನದ ಆರೋಹಣಗಳಂತೆ ಯಾಕೆ ಪರಿಗಣಿಸುತ್ತವೆ? ಅಧಿಕಾರ ಮತ್ತು ಜಾತಿಮೇಲ್ಸ್ತರದ ಹುಟ್ಟು ಪುಣ್ಯದ ಫಲವಾಗುವ, ತೀರ್ಯಗಾವಸ್ಥೆ ಇಲ್ಲವೇ ಕುಲಹೀನ ಹುಟ್ಟು ಪಾಪದ ಫಲವಾಗುವ ವೈದಿಕ ಕರ್ಮಸಿದ್ಧಾಂತದ ತಾತ್ವಿಕತೆ ಇಲ್ಲೂ ಯಾಕಿದೆ? ಇಲ್ಲಿನ ಪಾರಮಾರ್ಥಿಕ ಅಥವಾ ಲೋಕೇತರವನ್ನು ಯಾವ ಲೌಕಿಕಸ್ತರವನ್ನಾಧರಿಸಿ ಕಟ್ಟಿಕೊಳ್ಳಲಾಗಿದೆ? ಹೀಗೆ ಕಟ್ಟಲಾದ ಲೌಕಿಕಸ್ತರವು ಯಾಕೆ ರಾಜ್ಯಾಧಿಕಾರ ಮತ್ತು ಜಾತಿ ಅಧಿಕಾರದ ಶ್ರೇಣೀಕೃತ ಮಾದರಿಯಲ್ಲೇ ಇದೆ? ಯಾಕೆ ಅಧಿಕಾರವು ಹೊಣೆ ಅಥವಾ ಜವಾಬ್ದಾರಿಗಿಂತ

ಹೆಚ್ಚಾಗಿ 'ಸುಖ'ವೆಂಬ ಅರ್ಥದಲ್ಲೇ ಇದೆ? ಮೋಕ್ಷಜೀವಿಯ ಮುಕ್ತಿಯಾನದ ಅಧಿಕಾರಸುಖದ ಕಥನಗಳಲ್ಲಿ ಪ್ರಭುತ್ವ ಮತ್ತು ಕುಲೀನತೆಗಳು ಯಾಕೆ ದಿವ್ಯವೆಂದೇ ಘೋಷಿತವಾಗುತ್ತವೆ? ಯಾಕೆ 'ಹಾವಭಾವ ವಿಲಾಸವಿಭ್ರಮಂಗಳಿಗೆ ಒಡೆಯರೆನಿಸಿದ' ವಿಲಾಸಿನಿಯರ ಜೊತೆಗೆ ಇಷ್ಟವಿಷಯ ಕಾಮಭೋಗಗಳನ್ನು ಅನುಭವಿಸಿದ ಉಳ್ಳವರ ಸಾವಿನ ಮುಖಾಮುಖಿಯನ್ನೇ ಇವು ವೈಭವೀಕರಿಸುತ್ತವೆ? ಕೊನೆಗೊಳ್ಳಲೇಬೇಕಾದ ಬದುಕನ್ನು ಜೈನವಿಧಿಯ ಮೂಲಕ ಧೈರ್ಯವಾಗಿ ಎದುರಿಸುವ ಆಳುವವರ್ಗವು ದೇವಲೋಕವೆಂಬ ಪರ್ಯಾಯ ರೂಪದಲ್ಲಿ ತಾನು ಕಳೆದುಕೊಂಡ ಸುಖೋಪಭೋಗವನ್ನೇ ಮರಳಿ ಪಡೆಯುತ್ತಿರುವುದರ ಔಚಿತ್ಯವೇನು? ದಿವ್ಯಸುಖಪ್ರಾಪ್ತಿಗೆ ಜಿನಾಗಮವನ್ನೇ ಆತ್ಯಂತಿಕ ದಾರಿಯಾಗಿ ತೋರುವ ಈ ಕತೆಗಳಿಗೆ ಮೋಕ್ಷತತ್ವಕ್ಕಿಂತಲೂ, ಹುಟ್ಟು ಸಾವುಗಳ ಚಕ್ರದಿಂದ ಮುಕ್ತವಲ್ಲದ ದೇವತೆಗಳ ಸ್ವರ್ಗಸುಖವೇ ಯಾಕೆ ಆಪ್ತವಾಗುತ್ತದೆ? ಈ ಸ್ವರ್ಗವೂ ಯಾಕೆ ಶ್ರೇಣೀಕರಣದಿಂದ ಮುಕ್ತವಾಗುವುದಿಲ್ಲ? ಸಾಮಾಜಿಕ ಕೆನೆಪದರಿನಲ್ಲಿರುವ ಲೌಕಿಕ ಬದುಕಿನ ಉನ್ನತರಾದ ಜಾತಿಶ್ರೇಷ್ಠರು ಮತ್ತು ರಾಜರುಗಳು ಜಿನಾಚಾರವನ್ನು ಪುರಸ್ಕರಿಸಿ ಸಾವಿನ ನಂತರವೂ ಸುದೀರ್ಘ ಕಾಲದವರೆಗೆ ಸುಖವಾಗಿ ಬದುಕುವ ಈ ಧರ್ಮಾನುಸರಣೆಯ ಕಥನಕ್ಕೆ ಸಮೂಹವನ್ನು ಪ್ರಭಾವಿಸುವ ಗುರಿಯಿದೆಯೇ? – ವಡ್ಡಾರಾಧನೆಯ ಲೌಕಿಕ ಜಗತ್ತನ್ನು ರಾಜಕೀಯ ಪ್ರಜ್ಞೆಯಲ್ಲಿ ವಿವರಿಸಿಕೊಳ್ಳಲು ಪ್ರೇರೇಪಿಸುವ ಇಂತಹ ಸಾಲುಸಾಲು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಬ್ರಾಹ್ಮಣತ್ವ, ರಾಜತ್ವ, ಲಿಂಗ, ಜಾತಿನೆಲೆಯ ಅಸಮಾನ ಸಾಂಪ್ರದಾಯಿಕ ಸಾಮಾಜಿಕತೆಯನ್ನೇ ಸಮ್ಮತಿಸಿದಂತಿರುವ ಕಥೆಗಳೊಳಗಿನ ಸಂಘರ್ಷದ ಕುತೂಹಲಕಾರಿ ಮುಖಗಳನ್ನು ಪರಿಚಯಿಸುವ ಹೊಸದಾರಿಗಳು ತೆರೆದುಕೊಳ್ಳುತ್ತವೆ. ಅಷ್ಟೇ ಅಲ್ಲ, ಇರುವ ವ್ಯವಸ್ಥೆಯನ್ನು ಸಮರ್ಥಿಸುತ್ತಲೇ ತಮಗೆ ಬೇಕಾದ ಅಥವಾ ತಾವು ಪ್ರತಿಪಾದಿಸುವ ಮತದ ಅಪೇಕ್ಷೆಗೆ ಪೂರಕವಾದ ಪರ್ಯಾಯವನ್ನು ಕಟ್ಟಿಕೊಳ್ಳಬಯಸುವ ಕತೆಗಳ ಹವಣಿಕೆಯೂ ಅನಾವರಣಗೊಳ್ಳುತ್ತದೆ. ಅದನ್ನು ಅರ್ಥೈಸಲು ಪೂರಕವಾಗುವಂತೆ ವಡ್ಡಾರಾಧನೆಯ ಕತೆಗಳಲ್ಲಿನ ಮುಖ್ಯಾಂಶಗಳನ್ನು ಈ ಮುಂದಿನಂತೆ ಚರ್ಚಿಸಬಹುದಾಗಿದೆ.

## ಬ್ರಾಹ್ಮಣ್ಯವೇ ಎದುರಾಳಿ ಮತ್ತು ಬ್ರಾಹ್ಮಣ್ಯವೇ ಅನುಕರಣೀಯ

ವಡ್ಡಾರಾಧನೆಯ ಕತೆಗಳ ಕೇಂದ್ರದಲ್ಲಿ ಇರುವುದು ಜೈನವೂ ಜೈನೇತರವೂ ಆದ ರಾಜರುಗಳು. ನಂತರದಲ್ಲಿ ಜೈನೇತರ ಹಿನ್ನೆಲೆಯ ಬ್ರಾಹ್ಮಣರಿದ್ದಾರೆ. ಆನಂತರದ ಸ್ಥಾನದಲ್ಲಿ ವಣಿಕರು ನಿಲ್ಲುತ್ತಾರೆ. ಅನುಕ್ರಮವಾಗಿ ಮೊದಲಿನೆರಡು ಸ್ಥಾನದಲ್ಲಿರುವ ರಾಜ ಮತ್ತು ಬ್ರಾಹ್ಮಣ ಇಬ್ಬರೂ ಪಾರಂಪರಿಕ ವ್ಯವಸ್ಥೆಯ ರಾಜಕೀಯ ಹಾಗೂ ಸಾಮಾಜಿಕ ಅಧಿಕಾರ ಕೇಂದ್ರಗಳು. ರಾಜಾರಾಮ ಹೆಗಡೆಯವರು ಗುರುತಿಸುವಂತೆ ಇಲ್ಲಿ "ಜೈನಮತವು ಮುಖಾಮುಖಿ ಮಾಡುವ ಎರಡು ಪ್ರಬಲ ಅಧಿಕಾರ

ಕೇಂದ್ರಗಳೆಂದರೆ ರಾಜ ಮತ್ತು ಬ್ರಾಹ್ಮಣ."(ಕನ್ನಡ ಅಧ್ಯಯನ ಸಂಪುಟ-7,ಸಂಚಿಕೆ-1,ಪು.2). ಹೀಗೆ ವಡ್ಡಾರಾಧನೆಯಲ್ಲಿ ಅಂತಿಮವಾಗಿ ಜೈನಮತದ ಮುಖಾಮುಖಿಗೆ ಒಳಗಾಗುವ ಉಪಸರ್ಗಕೇವಲಿಗಳಾದ ಜೈನಕಥಾಲೋಕದ ಮಹಾಪುರುಷರು ಈ ಕೇಂದ್ರಗಳಿಂದಲೇ ಹುಟ್ಟಿಬರುತ್ತಾರೆ. ಕ್ವಚಿತ್ತಾಗಿ ಇದಕ್ಕೆ ಹೊರತಾದ ವರ್ತಕರೂ ಉಪಸರ್ಗಕೇವಲಿಗಳಾಗುವುದುಂಟು. ಆದರೂ ಮಹಾಪುರುಷರಾಗುವ ಅವಕಾಶದ ಸಿಂಹಪಾಲು ರಾಜ ಮತ್ತು ಬ್ರಾಹ್ಮಣ ಕೇಂದ್ರಗಳದ್ದೇ. ಈ ಎರಡೂ ಕೇಂದ್ರಗಳ ಮಹತ್ತಿಕೆಯ ಪುರಸ್ಕರಣದ ಹಿಂದೆ ಪಾರಂಪರಿಕ ಸಮಾಜವು ವಿವರಿಸಿಕೊಟ್ಟ ಕುಲೀನತೆಯ ತಾತ್ವಿಕತೆಯೂ ಕೆಲಸಮಾಡಿದೆ.



ಈ ಕೇಂದ್ರಗಳನ್ನು ಇರುವಂತೆಯೇ ಹಾಗೆ ಹಾಗೆಯೇ ಈ ಕಥೆಗಳು ಮಾನ್ಯ ಮಾಡಿವೆ ಎಂದೇನಲ್ಲ. ಈ ಕತೆಗಳಲ್ಲಿನ ಜೈನಮತ ಅವುಗಳ ಜೊತೆಗೆ ಗುದ್ದಾಡಿದೆ. ಸಂವಾದ ನಡೆಸಿದೆ. ಈ ಗುದ್ದಾಟ, ಸಂವಾದಗಳ ಮುಖಾಮುಖಿ ಇಬ್ಬಗೆಯದು. ಅದರಲ್ಲೂ ಪಾಂಥಿಕವಾಗಿ ಜೈನಮತಾವರಣಕ್ಕೆ ಹೊರತೆನಿಸಿದ ಬ್ರಾಹ್ಮಣ್ಯದ ಜೊತೆಗಿನ ಮುಖಾಮುಖಿಯಲ್ಲಿ ಈ ಗುಣ ಇನ್ನಷ್ಟು ಹೆಚ್ಚು. ಎದುರಾಳಿ ಅನ್ಯವನ್ನು ಸ್ವಯವಾಗಿ ಪರಿವರ್ತಿಸಿ ಒಳಕೊಳ್ಳುವ ಈ ಮಾದರಿ, ಎದುರಾಳಿಯ ಮಹತ್ವವನ್ನು ಗೌರವಿಸಿ, ತನ್ನೊಳಗೆ ಪಳಗಿಸಿ ಅಳವಡಿಸಿಕೊಳ್ಳುವ ಮುಖಾಮುಖಿಯಲ್ಲಿ ತೊಡಗುತ್ತದೆ. ಹಾಗೆ ನೋಡಿದಲ್ಲಿ ಬ್ರಾಹ್ಮಣ್ಯದ ಕುರಿತು ಈ ಕತೆಗಳಲ್ಲಿ ತಿರಸ್ಕಾರಕ್ಕಿಂತ ಗೌರವವೇ ಹೆಚ್ಚು. ಬ್ರಾಹ್ಮಣರು ಶತ್ರು ಹಾಗೂ ಸ್ಪರ್ಧಿಗಳಾದಂತೆ ಅನುಕರಣೀಯ ಮಾದರಿಗಳಾಗಿಯೂ ಇಲ್ಲಿದ್ದಾರೆ. ಜಾತಿಪದ್ಧತಿ, ಅಸ್ಪೃಶ್ಯತೆಯನ್ನು ತಾತ್ವಿಕವಾಗಿ ಸಮ್ಮತಿಸುವ ಈ ಕತೆಗಳು ಬ್ರಾಹ್ಮಣರ ಧಾರ್ಮಿಕ ಯಜಮಾನಿಕೆಯನ್ನಷ್ಟೇ ನಿರಾಕರಿಸುತ್ತವೆ. ಬ್ರಾಹ್ಮಣರ ಸಾಮಾಜಿಕ ಶ್ರೇಷ್ಠತೆಯನ್ನು ನಿರಾಕರಿಸುತ್ತಿಲ್ಲ. 'ಉತ್ತಮರ ಕುಲದ ಶ್ರಾವಕರ ಬಸಿರಲ್ಲಿ" ಹುಟ್ಟುವ ಹೆಮ್ಮೆ ಇಲ್ಲಿಯೂ ಪುಣ್ಯವೇ. 'ಹೊಲೆಯರ ಮನೆಯಲ್ಲಿ ಹುಟ್ಟುವುದು' ಶಾಪವೇ. ವಾಯುಭೂತಿ ಎಂಬ ಬ್ರಾಹ್ಮಣ, ಜೈನಧರ್ಮವನ್ನು ಹಳಿದ ಪಾಪದಿಂದ ಸಂಕಷ್ಟದ ಸರಣಿಗೆ ಸಿಕ್ಕುತ್ತಾನೆ. ಔದುಂಬರ ಕುಷ್ಟದಿಂದ ಸತ್ತು ಪೆಣ್ಗತ್ತೆ, ಪೇಪಂದಿ, ಪೆಣ್ಣಾಯಾಗಿ ಕೊನೆಗೆ ಮಾದಿಗರ ಮನೆಯಲ್ಲಿ ಹುಟ್ಟುಗುರುಡಿಯಾಗಿ ಹುಟ್ಟುತ್ತಾನೆ.

ಹೊಲತಿಯಾಗಿದ್ದ ಜನ್ಮದಲ್ಲಿ ಅಗ್ನಿಭೂತಿಯಿಂದ ಶ್ರಾವಕಧರ್ಮವನ್ನು ಕೇಳಿಸಿಕೊಂಡು ಸೋಮಶರ್ಮನೆಂಬ ಬ್ರಾಹ್ಮಣನಿಗೆ ನಾಗಶ್ರೀ ಎಂಬ ಬ್ರಾಹ್ಮಣಕುವರಿಯಾಗಿ ಹುಟ್ಟುತ್ತಾನೆ. ಜೈನಸವಣ ಸುಧರ್ಮಾಚಾರ್ಯನಿಗೆ ತನ್ನಲ್ಲಿಗೆ ಠಕ್ಕಿನಿಂದ ಜ್ಯೋತಿಷವಿದ್ಯೆ ಕಲಿಯಲೆಂದು ಬಂದ ಸೂರ್ಯಮಿತ್ರನೆಂಬ ಬ್ರಾಹ್ಮಣ ಭವ್ಯನಾಗುವ ಅರ್ಹತೆಯುಳ್ಳವನಾಗಿ ಕಾಣುತ್ತಾನೆ.– ಹೀಗೆ ಈ ಕತೆಗಳಲ್ಲಿ ಕನಿಷ್ಠಜಾತಿ, ಹೆಣ್ತನ ಮತ್ತು ದೈಹಿಕವಿಕಲತೆಗಳು ವ್ಯಕ್ತಿಗತ ಪಾಪದ ಫಲಿತಗಳೆಂಬ ನಕಾರಾತ್ಮಕ ನಿಲುವಿದೆ. ದುರುದ್ದೇಶ ಉಳ್ಳವನಾದರೂ ಜಾತಿಶ್ರೇಷ್ಠನು ಭವ್ಯನಾಗುವ ಅರ್ಹತೆಯುಳ್ಳವನೆಂಬ ಗುಣಾತ್ಮಕ ನೋಟವಿದೆ. ಹೀಗೆ ಬ್ರಾಹ್ಮಣ್ಯದ ಮೇಲೆ ಪರೋಕ್ಷ ಅಕ್ಕರೆ ತೋರುವ ಈ ಕತೆಗಳು ವೇದಶಾಸ್ತ್ರ ಪಾರಂಗತರಾಗಿ, ರಾಜನ ಪ್ರಭುತ್ವ ನಿರ್ವಹಣೆಯಲ್ಲಿ ಮಹತ್ವದ ಜಾಗದಲ್ಲಿದ್ದ ಬ್ರಾಹ್ಮಣರನ್ನು ಪಳಗಿಸಿ ಒಳಗು ಮಾಡಿಕೊಳ್ಳಲು ಹವಣಿಸಿವೆ. ಅವುಗಳಲ್ಲೊಂದು ಮಾದರಿ ಜೈನಧರ್ಮದ ಗರಿಮೆ ಅರಿತು ಸೋತು ಸೇರ್ಪಡೆಗೊಂಡು ಉಚ್ಚತಮ ಅವಸ್ಥೆಗೆ ಏರುವ ಬ್ರಾಹ್ಮಣ್ಯವನ್ನು ತೋರಿದರೆ, ಇನ್ನೊಂದು ಮಾದರಿ ಅದನ್ನು ಹೀಗಳೆದು ನೀಚಜನ್ಮಗಳಲ್ಲಿ ನರಳಿ ಕೊನೆಗೂ ಅರಿವುಮೂಡಿ ಜೈನ ಆಚಾರಗಳನ್ನು ಸ್ವೀಕರಿಸಿ ಮೋಕ್ಷದತ್ತ ಸಾಗುವುದನ್ನು ತೋರುತ್ತದೆ. ಎರಡರಲ್ಲೂ ಜೈನದೆದುರು ಶರಣಾಗುವ ಬ್ರಾಹ್ಮಣ್ಯವೇ ಇದೆ. ಹೀಗೆ ಬ್ರಾಹ್ಮಣನಿಗೆ ಆತನ ಮತಿಯ(ಬುದ್ಧಿ) ದರ್ಶನ ಮಾಡಿಸಿ ತನ್ನ ಶಕ್ತಿಪ್ರದರ್ಶನ ಮಾಡುವ ಜೈನ ಯತ್ಯಾಚಾರದ ಈ ಮಾದರಿಗಳು ಅಂತಿಮವಾಗಿ ತಮಗೆದುರಾದ ಬ್ರಾಹ್ಮಣ್ಯವನ್ನು ತಮ್ಮೊಳಗು ಮಾಡಿಕೊಳ್ಳುತ್ತವೆ. ಹೀಗೆ ಸಾಮಾಜಿಕ ಔನ್ನತ್ಯದಲ್ಲಿರುವ ಸಮುದಾಯವೇ ತನ್ನ ಅಂಕೆಯೊಳಗೆ ಬರುವುದನ್ನು ಕಟ್ಟುವ ಮೂಲಕ ವಡ್ಡಾರಾಧನೆಯ ಜೈನಮತ ತನ್ನ ಪಾವಿತ್ರ್ಯವನ್ನೂ ಸಾರಿಕೊಳ್ಳುತ್ತದೆ.

ಇಲ್ಲಿಯ ಬಿಡುಗಡೆ ವ್ಯಕ್ತಿಗತವಾದುದು. ಆ ಬಿಡುಗಡೆಗೂ ಪರೋಕ್ಷವಾಗಿ ಕುಲೀನತೆಯ ನಂಟಿದೆ. ಉದಾಹರಣೆಗೆ ಸುಕುಮಾರಸ್ವಾಮಿ ಕತೆಯಲ್ಲಿ ಹುಟ್ಟುಗುರುಡಿಗೆ ಸಿಗುವ ಶ್ರಾವಕಧರ್ಮದ ಬೋಧನೆಯ ಹಿಂದೆ ಆ ಹೊಲೆಗೂಸಿಗೆ ಕರಗುವ ಅಗ್ನಿಭೂತಿಯ ಪೂರ್ವದ ನಂಟಿದೆ. ಅಲ್ಲಿ ಹೊಲೆತನದ ಸಾಮಾಹಿಕಬಿಡುಗಡೆಯ ತುಡಿತವಿಲ್ಲ. ಹೀಗಾಗಿ ಕರ್ಮಸಿದ್ಧಾಂತದ ನೆಲೆಗಟ್ಟನ್ನು ಬಳಸಿಕೊಂಡು ಜೈನಶ್ರೇಷ್ಠತೆಯನ್ನು ಪ್ರತಿಪಾದಿಸುವ ಈ ಕತೆಗಳ ಬ್ರಾಹ್ಮಣ–ಜೈನ ಸಂಘರ್ಷದ ಅಂತಿಮಗುರಿ ಬ್ರಾಹ್ಮಣರ ಜೈನೀಕರಣವಲ್ಲದೆ ತಳವರ್ಗಗಳ ಮೇಲ್ಚಲನೆಯಲ್ಲ. ಬ್ರಾಹ್ಮಣನೊಬ್ಬ ಹಾಗೆಯೇ ಜೈನಸವಣನಾಗುವ ಇಲ್ಲವೇ ತಳಮೂಲಕ್ಕೆ ಸಂದವನೊಬ್ಬನನ್ನು ಬ್ರಾಹ್ಮಣಕುಲಾಚಾರದಲ್ಲಿ ಹುಟ್ಟುವಂತೆಮಾಡಿ ನಂತರದಲ್ಲಿ ಜೈನಾಚಾರಕ್ಕೆ ತಂದುಕೊಳ್ಳುವ ಈ ನಡೆಯಲ್ಲಿ ಬ್ರಾಹ್ಮಣನಾಗಿ ಹುಟ್ಟುವುದು ಆರೋಹಣ ಇಲ್ಲವೇ ಗೌರವವೇ ಆಗುತ್ತದೆ. ಇದು ಬಸವಣ್ಣನ ವಚನಗಳಲ್ಲಿ ಕಾಣುವ ಜಾತಿನಿರಸನ ಮತ್ತು ನಿರ್ಜಾತೀಕರಣದ ಅಧೋಚಲನೆಯ ಆಶಯದ ಮಾದರಿಯಲ್ಲ. ಹಾಗಾಗಿ ಈ ಕತೆಗಳ ಬ್ರಾಹ್ಮಣವಿರೋಧವು ತಳಮೂಲದ ಪರವಾದ ಪ್ರಗತಿಪರತೆಯಲ್ಲ, ಜೈನವಿಸ್ತರಣೆಯ ಆಕಾಂಕ್ಷೆಯಷ್ಟೇ.

ಬ್ರಾಹ್ಮಣನ ವಿದ್ಯೆಯ ಬಗೆಗೆ ಇಲ್ಲಿ ಅಪಾರ ಗೌರವ. ಇಲ್ಲಿ ವಿದ್ಯೆಯೆಂದರೆ ಮುಖ್ಯವಾಗಿ ಶಾಸ್ತ್ರಪರಿಜ್ಞಾನವೇ. ಅದನ್ನು ಕರಗತ ಮಾಡಿಕೊಳ್ಳುವ ಕಲಿಕಾಸ್ವರೂಪದ ಬಗೆಗೆ ಈ ಕತೆಗಳು ವಿಸ್ತೃತವಾಗಿಯೇ ಮಾತಾಡುತ್ತವೆ. ಆದರೆ ಈ ಕಥೆಗಳು ಬ್ರಾಹ್ಮಣನಲ್ಲಿರುವ ವಿದ್ಯೆ ಅಥವಾ ಜ್ಞಾನವನ್ನೇ ಆತ್ಯಂತಿಕವೆಂದು ಮಾನ್ಯಮಾಡುವುದಿಲ್ಲ. ಬದಲಾಗಿ ಆ ಆತ್ಯಂತಿಕ ಶ್ರೇಷ್ಠತೆಯ ಗೌರವ ಜೈನಸವಣನ ಜ್ಞಾನಕ್ಕೆ ಸಲ್ಲುತ್ತದೆ. ಉದಾಹರಣೆಗೆ ಸುಕುಮಾರಸ್ವಾಮಿ ಕಥೆಯ ಬ್ರಾಹ್ಮಣ ಸೂರ್ಯಮಿತ್ರನಿಗೆ ತಾನು ಕಳೆದುಕೊಂಡ ಮಾಣಿಕ್ಯದುಂಗುರವನ್ನು ಪತ್ತೆ ಮಾಡಿಕೊಟ್ಟ ಸುಧರ್ಮಾಚಾರ್ಯನಲ್ಲಿ ಅಪೂರ್ವವಾದ ವಿದ್ಯೆಯಿದೆ ಅನ್ನಿಸುತ್ತದೆ. ಅಷ್ಟೇ ಅಲ್ಲ, “ಲೋಕದೊಳಿರ್ಪ ಸೂಕ್ಷ್ಮಾಂತರಿತ ದೂರಪದಾರ್ಥಗಳೆಲ್ಲಮನ್ ಅಱಿವಂತಪ್ಪ ಈ ಸವಣನ ಜೋಯಿಸಮನ್ ಎಂತಪ್ಪೊಡಂ ಕ್ಷಪಣಕನಂ ಮಿಥ್ಯಾವಿನಯದಿಂದಿಳಿಸಿ ಕಲ್ವೆನ್’ ಎಂದು ನಿರ್ಧರಿಸುತ್ತಾನೆ. ಆದರೆ ವಡ್ಡಾರಾಧನೆಯ ಯಾವ ಕತೆಯಲ್ಲೂ ಹೀಗೆ ಬ್ರಾಹ್ಮಣನಲ್ಲಿರುವ ವಿದ್ಯೆಗಾಗಿ ಬರುವ ಜೈನ ಸವಣನಿಲ್ಲ. ಅದಲ್ಲದೆ ಈ ಕತೆಗಳಲ್ಲಿ ಜೈನಸವಣನ ಜ್ಞಾನವು ಜೈನವಿಸ್ತರಣೆಯನ್ನು ಸಾಧ್ಯವಾಗಿಸುವ ಸಾಧನದಂತೆಯೂ ಬಳಕೆಯಾಗಿವೆ. ಈ ಜ್ಞಾನದ ಹಿರಿಮೆಯನ್ನು ಹಿಂಬಾಲಿಸಿ ಶ್ರಾವಕಧರ್ಮದಲ್ಲಿ ವಿಲೀನವಾದ ಬ್ರಾಹ್ಮಣರೇ ಈ ಕತೆಗಳಲ್ಲಿ ಯಥೇಚ್ಛವಾಗಿದ್ದಾರೆ. ಹೀಗೆ ಕತೆಗಳು ಬ್ರಾಹ್ಮಣನ ವಿದ್ಯೆಯನ್ನು ಗೌರವಿಸುತ್ತಲೇ ತೌಲನಿಕವಾಗಿ ಜೈನಜ್ಞಾನಪರಂಪರೆಯ ಶ್ರೇಷ್ಠತೆಯನ್ನು ಸಾರುತ್ತವೆ. ಅದನ್ನು ಬ್ರಾಹ್ಮಣನನ್ನೂ ಜೈನಧರ್ಮದ ಕಡೆಗೆ ಆಕರ್ಷಿಸಿ ಕರೆದುಕೊಂಡು ಬರುವ ಸಂಪತ್ತೆಂಬಂತೆಯೇ ಪ್ರತಿಪಾದಿಸುತ್ತವೆ.

ಈ ಕತೆಗಳು ರಾಜ್ಯಾಧಿಕಾರದಲ್ಲಿ ಬ್ರಾಹ್ಮಣನ ಜ್ಞಾನಕ್ಕಿದ್ದ ಮಹತ್ವವನ್ನು ನಿರಾಕರಿಸಿಲ್ಲ. ವಿದ್ಯೆಯಿಂದಾಗಿ ಬ್ರಾಹ್ಮಣ ಪಡೆದ ಸ್ಥಾನಮಾನದ ವಾಸ್ತವದ ಅರಿವು ಅವುಗಳಿಗಿದೆ. ವಾಸ್ತವದಲ್ಲಿ ಈ ತಿಳಿವಳಿಕೆಗೂ ವಡ್ಡಾರಾಧನೆಯ ಕಥೆಗಳಲ್ಲಿನ ಜೈನಮತವು ಅಧಿಕಾರದೊಂದಿಗೆ ಸಾಧ್ಯವಾಗಿಸಿಕೊಂಡ ಒಡನಾಡಕ್ಕೂ ನಂಟಿದೆ. ಮುಖ್ಯವಾಗಿ ಯಾವುದೇ ಮತಾಚಾರವೊಂದು ಪ್ರಭುತ್ವದ ಬೆಂಬಲ ಗಳಿಸಿಕೊಳ್ಳಬೇಕಾದರೆ ಅದು ರಾಜ ಹಾಗೂ ವರ್ತಕರ ಜೊತೆಗೆ ರಾಜನಿಗೆ ಆಪ್ತವಾದ ಪುರೋಹಿತವರ್ಗವನ್ನೂ ತನ್ನ ಸಮರ್ಥನೆಯ ಭಾಗವಾಗಿಸಿಕೊಳ್ಳಬೇಕಾಗುತ್ತದೆ. ಆದರೆ ಅದಕ್ಕಾಗಿ ಪಾಂಥಿಕವಾಗಿ ಅನ್ಯವೆನಿಸಿದ ವರ್ಗವೊಂದನ್ನು ಇಡಿಯಾಗಿ ವಿಲೀನಗೊಳಿಸುವ ಅಗತ್ಯವೇನಿಲ್ಲ. ಆಗ ಅದು ಅಧಿಕಾರಕ್ಕೆ ಆಪ್ತವಾದ ಕೇಂದ್ರದಲ್ಲಿ ಕುಳಿತ ವ್ಯಕ್ತಿಗಳತ್ತ ಗಮನಹರಿಸುತ್ತದೆ. ಆ ವ್ಯಕ್ತಿಗಳಿಗೆ ದತ್ತವಾದ ಅಧಿಕಾರದ ಕಾರಣಗಳನ್ನು ಶೋಧಿಸುತ್ತದೆ. ಆದರೆ ಅಷ್ಟಕ್ಕೇ ನಿಲ್ಲದೆ ಅದರ ಅಧಿಕಾರದ ಕಾರಣಗಳಿಗಿಂತಲೂ ಹಿರಿದಾದ ಮಾದರಿಗಳನ್ನು ಎದುರಿಗಿಟ್ಟು ಅದನ್ನು ಸೋಲಿಸುತ್ತದೆ, ಇಲ್ಲವೇ ಒಲಿಸುತ್ತದೆ. ವಡ್ಡಾರಾಧನೆಯ ಕತೆಗಳಲ್ಲಿ ಈ ಗುಣವಿದೆ. ಈ ಕಥೆಗಳಲ್ಲಿ ರಾಜ್ಯಾಧಿಕಾರಕ್ಕೆ ಆಪ್ತವಾದ ಬ್ರಾಹ್ಮಣ್ಯವನ್ನು ಪಳಗಿಸುವ ಅಂಶ ದಟ್ಟವಾಗಿಯೇ ಗೋಚರವಾಗುತ್ತದೆ. ಹಾಗೆ ಪಳಗಿಸುವಾಗ ಅವು ಎಲ್ಲಿಯೂ ಬ್ರಾಹ್ಮಣ್ಯದ ನೆಲೆ ಅಥವಾ ಸಾಮಾಜಿಕ ಅಸ್ತಿತ್ವ ನಿರಾಕರಿಸುವುದಿಲ್ಲ.

ಬದಲಿಗೆ ಜೈನಮತವನ್ನು ಅದರೊಂದಿಗೆ ತುಲನಾತ್ಮಕ ಹಿರಿಮೆಯಲ್ಲಿಟ್ಟು ಮೆರೆಯಿಸುತ್ತವೆ.

ಈ ತುಲನಾತ್ಮಕ ಹಿರಿಮೆಯ ಜೊತೆಗೆ ಇಲ್ಲೊಂದು ಸ್ವರಕ್ಷಣಾ ತಂತ್ರವಿದೆ. ಅದು ಜೈನಧರ್ಮದ ನಿಂದನೆಗೆ ನಿಲ್ಲುವ ಬ್ರಾಹ್ಮಣನ ಅಧೋಗತಿಯ ಜನ್ಮಯಾತ್ರೆಯ ರೂಪದಲ್ಲಿ ಪ್ರಕಟಗೊಳ್ಳುತ್ತದೆ. ಈ ಜನ್ಮಾಂತರಯಾತ್ರೆ ಬ್ರಾಹಣನ ಎದುರು ಆತ ಕಳೆದುಕೊಳ್ಳಲಿರುವ ಸಾಮಾಜಿಕ ಅಸ್ತಿತ್ವದ ಆತಂಕವನ್ನು ಕಥಿಸುತ್ತದೆ. ಹೀಗೆ ಈ ಕತೆಗಳಲ್ಲಿ ಧರ್ಮದ ಪಾವಿತ್ರ್ಯದ ಜೊತೆಗೆ ಅದಕ್ಕಿರುವ ಶಿಕ್ಷಾಶಕ್ತಿಯ ಪ್ರಕಟಣೆಯೂ ಇದೆ. ವೈದಿಕಮತ ಅಥವಾ ಬ್ರಾಹ್ಮಣ್ಯವನ್ನೇ ಗುರಿಯಾಗಿಸಿಕೊಂಡ ಈ ನಿರೂಪಣೆ, ಜೈನದೊಂದಿಗೆ ಸಂಘರ್ಷಕ್ಕಿಳಿಯದಂತೆ ಬ್ರಾಹ್ಮಣ್ಯಕ್ಕೆ ಬೆದರಿಕೆ ಒಡ್ಡುತ್ತದೆ. ಹೀಗೆ ಧರ್ಮವೇ ತನ್ನನ್ನು ಹೀಗಳೆದು ಕುಂದಿಸುವ ಅತಿಕ್ರಮಣದಿಂದ ಸ್ವಯಂರಕ್ಷಿಸಿಕೊಳ್ಳಬಲ್ಲ ಸಮರ್ಥಶಕ್ತಿಯಂತೆ ಬಿಂಬಿತವಾಗುತ್ತದೆ. ಇದಕ್ಕೆ ಜೈನವು ಬ್ರಾಹ್ಮಣ್ಯವನ್ನೇ ತನ್ನ ಪಾಲಿನ ಆತಂಕವಾಗಿ ಪರಿಗಣಿಸಿರಬಹುದಾದ ಹಿನ್ನೆಲೆ ಕಾರಣವಾಗಿರಬಹುದು. ಏಕೆಂದರೆ ವಡ್ಡಾರಾಧನೆಯ ಕತೆಗಳಲ್ಲಿನ ಜೈನಮತವು ತನ್ನನ್ನು ಧಮನಿಸದಂತೆ ಬ್ರಾಹ್ಮಣನನ್ನೇ ಗುರಿಯಾಗಿಸಿಕೊಂಡಿದೆ. ಆದರೆ ಇಲ್ಲಿ ಬ್ರಾಹ್ಮಣ್ಯವನ್ನು ಬೆದರಿಸಿ ಬಗ್ಗಿಸುವ ನಡೆಯಷ್ಟೇ ಇರುವುದಲ್ಲ. ಜೈನವನ್ನು ಒಪ್ಪಿ ಒಳಬರುವ ಬ್ರಾಹ್ಮಣನನ್ನು ಆಸ್ತಿಯಂಬಂತೆ ಪರಿಗಣಿಸುವ ಸ್ವಾಗತ ಮನೋಧರ್ಮವೂ ಇದೆ. ಹೀಗೆ ಸ್ವರಕ್ಷಣೆ, ಸ್ವಮತಶ್ರೇಷ್ಠತೆ, ವಿಸ್ತರಣೆ ಎಂಬ ಮೂರೂ ಹಂತಗಳಲ್ಲಿ ವಡ್ಡಾರಾಧನೆ ಕತೆಗಳಿಗೆ ಬ್ರಾಹ್ಮಣ್ಯವೇ ಬಹುದೊಡ್ಡ ಆಕರ್ಷಣೆಯ ಕೇಂದ್ರ. ಬ್ರಾಹ್ಮಣವು ತನ್ನ ಎದುರಾಳಿಯಾಗದಂತೆ ಬಗ್ಗುಬಡಿಯುವ ತಂತ್ರಗಳ ಜೊತೆಗೆ, ಅದನ್ನು ಒಳಗೊಳ್ಳುವುದನ್ನು ಅವು ಪ್ರತಿಷ್ಠೆಯಾಗಿಯೇ ಗಣಿಸಿವೆ. ಹಾಗಾಗಿ ಸಾಮಾಜಿಕ ಮೇಲುಸ್ತರದ ಕಡೆಗೇ ಕಣ್ಣಿಟ್ಟ ಈ ಕತೆಗಳಲ್ಲಿನ ಧರ್ಮದ ವಿಸ್ತರಣೆ ಕುಲೀನತೆಯನ್ನೇ ಅಪೇಕ್ಷಿಸಿದೆ. ಸಹಜವಾಗಿಯೇ ಅಲ್ಲಿ ಬ್ರಾಹ್ಮಣ್ಯಕ್ಕೆ ದಕ್ಕಿದ ಸಾಮಾಜಿಕ ಮತ್ತು ರಾಜ್ಯಾಧಿಕಾರದ ಅಧಿಕಾರಗಳ ಔಚಿತ್ಯದ ಪ್ರಶ್ನಿಸುವಿಕೆಯಿಲ್ಲ. ಬದಲಿಗೆ ರಾಜಕಾರಣ ಮತ್ತು ಧಾರ್ಮಿಕ ವಲಯದ ಪ್ರಭಾವಿ ವ್ಯಕ್ತಿತ್ವಗಳ ಜೈನೀಕರಣವಿದೆ. ಉದಾಹರಣೆಗೆ ಚಾಣಾಕ್ಯಋಷಿಯ ಕತೆಯು ಬ್ರಾಹ್ಮಣ ಚಾಣಾಕ್ಯನನ್ನು ಜೈನಋಷಿಯಾಗಿಸಿದರೆ; ಕಾರ್ತಿಕಋಷಿಯಕತೆ ಜೈನೇತರ ಕಾರ್ತಿಕೇಯನ ಪುರಾಣಕಥೆಯನ್ನು ಜೈನಸವಣನ ವ್ಯಾಪ್ತಿಗೆ ತಂದುಕೊಳ್ಳುತ್ತದೆ. ಮುಖ್ಯವಾಗಿ ಜೈನದ ಪಾಲಿಗೆ ಸವಾಲಾದ ಬ್ರಾಹ್ಮಣವನ್ನು ಈ ಕತೆಗಳು ನಿರ್ವಹಿಸಿದ ಬಗೆಯಲ್ಲಿ ತಳಮೂಲದ ಒಡನಾಡಿಯಾಗಿಬಿಡುವ ಗುಣವಿದೆ ಎನ್ನಲಾಗದು. ಕಠಿಣ ಅಭ್ಯಾಸದಲ್ಲಿ ಬ್ರಾಹ್ಮಣನೊಬ್ಬ ಕಲಿಯಬಹುದಾದ ವಿದ್ಯೆಯೆಲ್ಲವನ್ನೂ ಸವಣನೊಬ್ಬ ನಿರಾಯಾಸವಾಗಿ ದಕ್ಕಿಸಿಕೊಳ್ಳಬಲ್ಲ ಎನ್ನುವ ಧ್ವನಿಯ ಜೊತೆಗೆ ಜೈನವನ್ನು ನಿರಾಕರಿಸುವ ಬ್ರಾಹ್ಮಣನನ್ನು ಶಿಕ್ಷಿಸಬಲ್ಲ ಶಕ್ತಿಯೂ ಜೈನಧರ್ಮಕ್ಕಿದೆ ಎನ್ನುವ ಧ್ವನಿಯೇ ಇಲ್ಲಿ ಪ್ರಮುಖವಾಗಿದೆ.

ಅಚ್ಚರಿ ಎನ್ನುವಂತೆ ವಡ್ಡಾರಾಧನೆಯಲ್ಲಿ ಕಾಣುವ ಬ್ರಾಹ್ಮಣ್ಯದ ಕಡೆಗಿನ ಆಕರ್ಷಣೆಗೊಂದು ಪರಂಪರೆಯೂ ಇದ್ದಂತಿದೆ. ಆದಿಕವಿ ಪಂಪನೇ ತನ್ನ ತಂದೆ 'ಜಾತಿಯೊಳುತ್ತಮದ ಬ್ರಾಹ್ಮಣಕುಲದವನಾಗಿಯೂ ಜಿನಧರ್ಮವನ್ನು ದೊರೆಧರ್ಮವೆಂದು ನಂಬಿಬರುವ ಮೂಲಕ ತನ್ನನ್ನು ಉದ್ಧರಿಸಿಕೊಂಡ' ಎನ್ನುತ್ತಾನೆ. ಜೈನಕವಿಗಳಾಗಲೀ, ವಡ್ಡಾರಾಧನೆಯ ಕತೆಗಳಾಗಲೀ ಬ್ರಾಹ್ಮಣ್ಯದಿಂದ ದಾಟಿಕೊಂಡು ಜೈನವಾಗುವುದನ್ನು ಯಾಕೆ ಹೀಗೆ ಸಂಭ್ರಮಿಸುತ್ತವೆ? ಸಾಂಪ್ರದಾಯಿಕ ಸಾಮಾಜಿಕ ಅಧಿಕಾರ ಸಂಬಂಧವನ್ನು ಮಾನ್ಯಮಾಡುವ ಈ ಕತೆಗಳಲ್ಲಿನ ಬ್ರಾಹ್ಮಣ್ಯದ ಕಡೆಗಿನ ದೃಷ್ಟಿಯ ಹಿಂದೆ ಪಾವಿತ್ರ್ಯ, ಶ್ರೇಷ್ಠತೆಯ ಪ್ರತಿಷ್ಠಾಪನಾ ಆಶಯವಿದೆಯೆ? ಅಥವಾ ಜೈನಧರ್ಮದ ಕಡೆಗಿನ ಕುಲೀನರ ಆಕರ್ಷಣೆಯನ್ನು ಅವು ಮತಪಂಥದ ಜಾಹಿರಾತಿನಂತೆ ಬಳಸುತ್ತಿವೆಯೇ? ಸಾಮಾನ್ಯ ಸಮೂಹದ ಮೇಲೆ ಪ್ರಭಾವ ಬೀರುವಲ್ಲಿ ಈ ಬಗೆಯ ರಾಜಕಾರಣದಿಂದ ಜೈನಧರ್ಮಕ್ಕೆ ಯಶಸ್ಸು ಸಿಕ್ಕಿದೆಯೇ? – ಈ ಪ್ರಶ್ನೆಗಳಿಗೆ ಹುಡುಕಿಕೊಳ್ಳುವ ಉತ್ತರಗಳು ಈ ಕತೆಗಳಲ್ಲಿನ ಮೇಲ್ಸ್ತರದ ಮಮತೆಯ ಕಾರಣಗಳನ್ನು ವಿವರಿಸಬಲ್ಲವು. ಹಾಗೆಯೇ ಈ ಪ್ರಶ್ನೆ ಹಾಗೂ ಉತ್ತರಗಳನ್ನೂ ಮೀರಿ ವಡ್ಡಾರಾಧನೆಯ ಕಥಾಜಗತ್ತಿಗೆ ಈ ಸಾಮಾಜಿಕ ಅಧಿಕಾರಕೇಂದ್ರವು ಉಪಸರ್ಗಕೇವಲಿಗಳಾಗುವ ಮಹಾಪುರುಷರುಗಳ ದೊಡ್ಡಸಂಖ್ಯೆಯನ್ನೇ ಹಡೆದುಕೊಟ್ಟಿರುವ ಚಾರಿತ್ರಿಕ ಸತ್ಯವು, ಈ ಕತೆಗಳಲ್ಲಿ ತೆರೆದುಕೊಂಡೇ ಇದೆ ಎಂಬುದನ್ನು ನಿರಾಕರಿಸಲಾಗದು.

## ಪ್ರಭುತ್ವವು ದಿವ್ಯ ಮತ್ತು ಪ್ರತಿರೋಧ ರಹಿತ

ಜೈನಕಥನಗಳ ನಾಯಕರುಗಳು ಎಲ್ಲವನ್ನೂ ತೀವ್ರವಾಗಿಯೇ ಅನುಭವಿಸುವವರು. ಭೋಗ ಮತ್ತು ವಿರಕ್ತಿಗಳೆರಡಕ್ಕೂ ಅವರು ಸಮಾನ ತೀವ್ರತೆಯಲ್ಲಿ ತೆರೆದುಕೊಳ್ಳುವವರು. ಈ ಕಥನಗಳಲ್ಲಿ ಲೋಕಬದುಕಿನ ಪ್ರವೃತ್ತಿಗಳ ಪ್ರಬಲವಾದ ಸೆಳೆತದ ಜೊತೆಗೆ ನಿಗ್ರಹವನ್ನು ಹೇಳುವ ಧಾರ್ಮಿಕತೆಯೂ ಅಷ್ಟೇ ಗಟ್ಟಿಯಾಗಿದೆ. ವಡ್ಡಾರಾಧನೆ ಕಥೆಗಳೂ ಇದಕ್ಕೆ ಹೊರತಲ್ಲ. ಇಹಬದುಕಿನ ಉತ್ಕಟಾನುಭವದ ನಿರೂಪಣೆಗೆ ಇಲ್ಲಿಯೂ ಪ್ರಭುತ್ವದ ಆವರಣವೇ ಹೆಚ್ಚು ಬಳಕೆಗೊಂಡಿದೆ. ಜೈನಕಥನಗಳ ಸಾಮಾನ್ಯ ಸ್ವರೂಪದಂತೆ ಇಲ್ಲಿನ ಉಪಸರ್ಗಕೇವಲಿಗಳ ವಿಭವದ ಬದುಕುಗಳು ಬಹುಮಟ್ಟಿಗೆ ರಾಜತ್ವದ ನೆಲೆಗಟ್ಟನ್ನೇ ಹೊಂದಿವೆ. ವಡ್ಡಾರಾಧನೆ ಕತೆಗಳ ನಾಯಕರುಗಳಲ್ಲಿ ಬಹುಮಂದಿ ರಾಜತ್ವವನ್ನು ದಾಟಿಕೊಳ್ಳುವ ಮಹಾಪುರುಷರುಗಳೇ. ಆದರೆ ಜೀವದ ವಿಕಾಸ, ಚರಿತ್ರೆಯ ವಿಕಾಸಗಳೆರಡನ್ನೂ ಬೆಸೆದುಕೊಂಡು ನೋಡುವ ಈ ಕಥನಗಳಲ್ಲಿ ಪರಿಭಾವಿತವಾಗುವ 'ರಾಜತ್ವ'ವು ಕೇವಲ ವಿರಕ್ತಿಯನ್ನು ಪ್ರೋಜ್ವಲಗೊಳಿಸಿ ತೋರುವ ಪರಿಕರವಷ್ಟೇ ಅಲ್ಲ. ಆ ನಿರೂಪಣೆಗೆ ಸಾಂಸ್ಕೃತಿಕ ಮಹತ್ವವೂ ಇದೆ. ಯಾಕೆಂದರೆ ನಿಗ್ರಹವನ್ನು ಒಂದು ಅತಿಯಲ್ಲಿ ಮುಂದಿಡುವ ಜೈನಧರ್ಮದ ಭೂಮಿಕೆಯಲ್ಲಿ ಜೀವತಳೆದ ಈ ಕತೆಗಳು, ರಾಜತ್ವವನ್ನು ಜೀವವಿಕಾಸದ ಯಾವ ಅವಸ್ಥೆಯಲ್ಲಿಟ್ಟು ನೋಡುತ್ತವೆ? ಎಲ್ಲ ಬಿಟ್ಟು ಬಯಲ ಬತ್ತಲಿಗರೆನಿಸಿದ ಸವಣರ

ಕತೆ ಹೇಳುವ ಧಾರ್ಮಿಕ ಆವರಣವೊಂದು ಮಾನುಷಜಗತ್ತಿನ ಅಪೇಕ್ಷೆಗಳ ಮುದ್ದೆಯಂತಿರುವ, ಯಾವುದನ್ನೂ ಬಿಡಲೊಪ್ಪದ ಅರಸುತನವನ್ನು ಹೇಗೆ ಪರಿಭಾವಿಸಿವೆ? ಇದು ಮುಖ್ಯವಾಗುತ್ತದೆ. ಈ ಪ್ರಶ್ನೆಗಳ ಜೊತೆಗೆ ವಡ್ಡಾರಾಧನೆ ಕತೆಗಳು ಪ್ರಭುತ್ವಲೋಕವನ್ನು ಪ್ರವೇಶಿಸುವ ನಮಗೆ ಮೊದಲಿಗೆ ಬಲವಾಗಿ ಪ್ರತಿಪಾದಿತವಾದ ಅದರ ಅನುವಂಶಿಕ ರಾಜತ್ವ ಗೋಚರವಾಗುತ್ತದೆ. ಇಲ್ಲಿ ಯಾವ ಅಧಿಕಾರವೂ ಈ ಪಾರಂಪರಿಕ ಸಂರಚನೆಯನ್ನು ಉಲ್ಲಂಘಿಸಿ ಹಸ್ತಾಂತರಗೊಳ್ಳುವುದಿಲ್ಲ. ಎರಡನೆಯದಾಗಿ ವಡ್ಡಾರಾಧನೆ ಕತೆಗಳ ಪ್ರಭುತ್ವ ಹೊಂದಿರುವ ದಿವ್ಯತ್ವದ ಪರಿವೇಷ ಗಮನ ಸೆಳೆಯುತ್ತದೆ. ಇಲ್ಲಿ ರಾಜನ ದೇಹದಿಂದ ಹಿಡಿದು ಬದುಕಿನ ಕ್ರಮದ ತನಕ ಎಲ್ಲವೂ ಸುಖದೊಂದು ಪಿಂಡದಂತೆಯೇ ಇವೆ. ಅಷ್ಟೇ ಅಲ್ಲ, ಆತನ ಅಧಿಕಾರ ಮತ್ತು ಹಕ್ಕಿಗೆ ಮೇರೆ ಎಂಬುದೂ ಇಲ್ಲ. ಆತ ಸರ್ವಸಮರ್ಥ. ರಾಜ್ಯದ ಸರ್ವಸಂಪತ್ತಿನ ನಿಜವಾದ ಹಕ್ಕುದಾರ. ಆಜ್ಞಾಕಾರಕ ಶಕ್ತಿ. ರಾಜ್ಯದ ಎಲ್ಲ ಸುಖಗಳ ಯಜಮಾನ. ಜೊತೆಗೆ ಈ ದಿವ್ಯತ್ವವೂ ಸುಖಾಸುಮ್ಮಗೆ ದೊರೆತುದಲ್ಲ. ಅದು ಪುಣ್ಯಪುಂಜದ ಫಲ. ಜೀವವು ತೊಡಗಿಕೊಂಡ ಆಗಮಿಕ ಯಾನ ಅಥವಾ ಧಾರ್ಮಿಕ ಪಯಣದ ಏರುಗತಿಗೆ(ಊರ್ಧ್ವ) ಸಾಧ್ಯವಾದ ಸ್ಥಿತಿ. ಇಲ್ಲಿ ರಾಜತ್ವವೆಂಬುದು ಮೋಕ್ಷ ಸಮೀಪದ ಜೀವವಿಕಾಸದ ಉನ್ನತಾವಸ್ಥೆ. ಹೀಗಾಗಿಯೇ ಬಡವನಾಗಿ ಹುಟ್ಟುವುದು, ದಾರಿದ್ರ್ಯ ಅಡರಿಕೊಳ್ಳುವುದು ಪಾಪದಿಂದಾದರೆ, ರಾಜನಾಗಿ ಹುಟ್ಟುವುದು ಪುಣ್ಯದಿಂದಾಗುತ್ತದೆ. ಇದಕ್ಕೆ 'ಭದ್ರಬಾಹುಭಟ್ಟಾರರ ಕಥೆ'ಯ ಬಡ ನಂದಿಮಿತ್ರ ಹಾಗೂ ಸಂಪ್ರತಿ ಚಂದ್ರಗುಪ್ತರುಗಳ ಜನನ ನಿರೂಪಣೆಗಳ ವ್ಯತ್ಯಾಸದಲ್ಲೇ ಉದಾಹರಣೆ ಇದೆ. ನಂದಿಮಿತ್ರ, 'ಪ್ರಥ್ವಿಶೀಯೆಂಬೊಳಾಕೆಯ ಗರ್ಭದೊಳ್ ಪಾಪಕರ್ಮಜೀವಂ ನೆಲೆಸಿದೊಡೆ ಏನುಂ ನೆವಮಿಲ್ಲದೆ ಕಸವರವೆಲ್ಲಂ ಕೆಟ್ಟಿತ್ತು' ಎನ್ನಿಸಿ ದರಿದ್ರನಾಗಿ ಹುಟ್ಟುತ್ತಾನೆ. ಆದರೆ 'ಕನಕಧ್ವಜನೆಂಬ ದೇವಂ ಪಲಕಾಲಂ ದೇವಲೋಕದ ಸುಖಮನನುಭವಿಸಿ ಬಂದಿಲ್ಲಿ" ಪುಣ್ಯಯಾನದ ಭಾಗವಾಗಿ ಸಂಪ್ರತಿ ಚಂದ್ರಗುಪ್ತನಾಗಿ ಹುಟ್ಟುತ್ತಾನೆ. ಹೀಗೆ ಈ ಕತೆಗಳ ಜನ್ಮ ಸರಪಳಿಯಲ್ಲಿ 'ರಾಜ'ನದು ಅತ್ಯಂತ ಮೇಲಿನ ಹಾಗೂ ಕೊನೆಯ ಜನ್ಮ. ಅದೊಂದು ದೈವಾಂಶಸಂಭೂತ ಸುಖಾವಸ್ಥೆ. ಅದು ಭಾಗ್ಯದಿಂದ ದತ್ತವಾದುದು. ಹೀಗೆ ಭಾಗ್ಯದಿಂದ ರಾಜನಾದವನಿಗೆ ಅಧಿಕಾರವು ಹೊಣೆಗಿಂತ ಹೆಚ್ಚಾಗಿ ಸುಖವನ್ನು ಅನುಭವಿಸುವ ಅವಕಾಶ. ಸುಖಸಂಕಥಾ ವಿನೋದ ಎಂಬುದು ಅಲ್ಲಿನ ಸಾಮಾನ್ಯ ಪದ.

ವಡ್ಡಾರಾಧನೆ ಮುಂದಿಡುತ್ತಿರುವ ಪ್ರಭುತ್ವದ ಈ ಸುಖಲೋಲುಪ್ತ ಮುಖಕ್ಕೂ ಇತಿಹಾಸ ಕಾಲಘಟ್ಟದ ವಾಸ್ತವಕ್ಕೂ ಸಂಬಂಧ ಇರುವಂತಿದೆ. ಮುಖ್ಯವಾಗಿ ವಡ್ಡಾರಾಧನೆ ಕಥೆಗಳ ರಾಜತ್ವಕ್ಕೆ ಮಧ್ಯಕಾಲೀನಯುಗದ ಸಾಮಂತಶಾಹಿ ಪ್ರಭುತ್ವದ ಲಕ್ಷಣವಿದೆ. ರಾಜಾರಾಮ ಹೆಗಡೆ ಅವರು ಗುರುತಿಸುವಂತೆ, "ಮಧ್ಯಕಾಲೀನ ಭಾರತದ ರಾಜ್ಯವ್ಯವಸ್ಥೆ(ಸುಮಾರು 7ನೇ ಶತಮಾನದ ನಂತರ) ಸಾಮಂತಶಾಹಿ ಪ್ರಭುತ್ವವಾಗಿ ಮಾರ್ಪಟ್ಟಿತು. ಆಳುವ ವರ್ಗಗಳು ತಮ್ಮ ಹೊರೆಯನ್ನು ಆದಷ್ಟು

ಹಂಚಿಕೊಂಡು ಒಂದು ಸಾಮಂತಶಾಹೀ ಶ್ರೇಣೀಕರಣವನ್ನು ಲೋಕಶೃದ್ಧೆಯಾಗಿ ಮಾರ್ಪಡಿಸಿದ್ದುದರಿಂದ ಆಳುವ ವರ್ಗಗಳಲ್ಲಿ ಸುಖೋಪಭೋಗ, ವಿಲಾಸಗಳು ನೆಲೆಯೂರಿದುವು. ಅಧಿಕಾರದ ಸಂಕೇತವಾಗಿ ಈ 'ಸುಖೋಪಭೋಗ'ದ ಸಂಸ್ಕೃತಿ ಮೈ ತಳೆದಿದ್ದು ಕಂಡುಬರುತ್ತದೆ. ಈ ಕಾಲದ ಆಳ್ವಿಕೆಯನ್ನು 'ಸುಖಸಂಕಥಾ ವಿನೋದದಿಂದ ರಾಜ್ಯಂಗೆಯ್ಯುತ್ತಾರೆ' ಎಂದು ಶಾಸನಗಳು ವರ್ಣಿಸುವುದನ್ನೂ ನೋಡಬಹುದು. ರಾಜ್ಯವನ್ನು ಆಳುವುದು ಅರ್ಥಶಾಸ್ತ್ರದ ಪರಿಭಾಷೆಯ ಕ್ಲಿಷ್ಟಕರವಾದ ವ್ಯವಹಾರವಾಗದೇ, ತೀರ ಸರಳವಾದ ವ್ಯವಹಾರವಾಗಿ ಮಧ್ಯಕಾಲದಲ್ಲಿ ಚಿತ್ರಿತವಾಗುತ್ತದೆ" (ಕನ್ನಡಅಧ್ಯಯನ, ಸಂಪುಟ–7, ಸಂಚಿಕೆ–1, ಪು.21). ಕಾಲಧರ್ಮದ ಪ್ರಭಾವಕ್ಕೊಳಗಾದ ವಡ್ಡಾರಾಧನೆ ಕತೆಗಳ ಪ್ರಭುತ್ವಕ್ಕೆ ಅಧಿಕಾರದ ಯಾವ ಕಷ್ಟಗಳ ತೊಳಲಾಟವಿಲ್ಲ. ಅಲ್ಲಿ ಅಧಿಕಾರವೆಂದರೆ ಅದೊಂದು ಬಿಡುವಿನ ಮನರಂಜನೆ. ಆಡಳಿತ ವ್ಯವಹಾರದ ಪಾಡುಗಳ ಯಾವ ಹೊರೆಯೂ ಇಲ್ಲದ ಈ ನಾಯಕರುಗಳು 'ಇಷ್ಟವಿಷಯಕಾಮಭೋಗ'ಗಳನ್ನು ನಿರಾತಂಕವಾಗಿ ಅನುಭವಿಸುತ್ತಾರೆ. ಇಲ್ಲಿ ಆಳ್ವಿಕೆ ಮತ್ತು ಅಧಿಕಾರವು ವಿಲಾಸಿ ಜೀವನಕ್ಕೆ ಇರುವ ಪರ್ಯಾಯ ಪದಗಳು. ರಾಜನೆಂದರೆ ಧರೆಗೆ ದೊಡ್ಡವನಾಗಿ ಅನುಭವಿಸಲೆಂದೇ ಇರುವವನು. ಆತ ಲೋಕದ ದೇವರು. ರಾಜನ ಈ ದೈವಾಂಶಸಂಭೂತತೆಯ ಪ್ರತಿಪಾದನೆಯ ಗುಣವನ್ನು ಅಧಿಕಾರದ ಜೊತೆಗೆ ಭಾಗವಹಿಸಿದ ಎಲ್ಲ ಮತಪಂಥಗಳಂತೆ ಜೈನಸಂಪ್ರದಾಯವೂ ಅಳವಡಿಸಿಕೊಂಡುದಕ್ಕೆ ಪುರಾವೆ ಒದಗಿಸಿದಂತೆಯೇ ವಡ್ಡಾರಾಧನೆಯ ಕಥಾಜಗತ್ತಿದೆ. ಲೋಕಸುಖದ ಪರಾಕಾಷ್ಠೆ ಅಥವಾ ಸುಖಾನುಭವದ ತೀವ್ರತೆಗಾಗಿ ಪ್ರಭುತ್ವದ ದಿವ್ಯತೆಯು ಬಳಕೆಗೊಂಡಿದೆ ಎನ್ನುವ ವಾದ ಸಾಧ್ಯವಿದೆ. ಆದರೆ ಈ ರಾಜತ್ವಕ್ಕೆ ಇದನ್ನೂ ಮೀರಿದ ಸಾಂಸ್ಕೃತಿಕ ಸೂಕ್ಷ್ಮವಿದೆ. ಇಲ್ಲಿ ನಿರೂಪಿತವಾದಂತೆ ಈ ಅವಸ್ಥೆ ದಿಢೀರ್ ಸಾಧ್ಯವಾದುದಲ್ಲ. ಅದು ಪುಣ್ಯಫಲಿತವಾಗಿ ದಕ್ಕಿರುವಂತೆ ನಿರೂಪಿತವಾಗಿದೆ. ಅಷ್ಟೇ ಅಲ್ಲದೆ ಆ ಪುಣ್ಯದ ಕಾರಣ ನಿವೇದನೆಯ ಮೂಲಕ ಪ್ರಭುತ್ವದ ಅನಿವಾರ್ಯ ಅಂಗವಾಗಿ ಜೈನರನ್ನು ಅವು ಒಳಸೇರಿಸುತ್ತವೆ. ವರ್ಣಾಶ್ರಮ ಧರ್ಮವನ್ನು ಪಾಲಿಸುವುದರಿಂದ ಮಾತ್ರವೇ ರಾಜನ ದೈವಿಕತೆ ಸಾಧ್ಯವಾಗುತ್ತದೆ ಎನ್ನುವ ಮೂಲಕ ವೈದಿಕಶಾಸ್ತ್ರಗಳು ಬ್ರಾಹ್ಮಣರನ್ನು 'ರಾಜತ್ವ'ದ ಅನಿವಾರ್ಯ ಅಂಗವಾಗಿಸುತ್ತವೆ. ಅಂತೆಯೇ ಜೈನ ಆಚಾರಗಳನ್ನೇ ಜೈನ ಅರಸನ ದೈವಿಕತೆಯ ಕಾರಣಗಳನ್ನಾಗಿ ಮುಂದಿಡುವ ಜೈನ ಕಥನಗಳು, ಜೈನರನ್ನೂ ರಾಜತ್ವದ ಅನಿವಾರ್ಯ ಅಂಗವಾಗಿಯೇ ಪ್ರತಿಪಾದಿಸುತ್ತವೆ. ಹೀಗೆ ಇಲ್ಲಿ ಪ್ರಭುತ್ವದ ದಿವ್ಯತ್ವದ ಕಾರಣವಾಗುವ ಜೈನವು, ಪ್ರಭುತ್ವದ ದಿವ್ಯತೆಯ ಭಾಗವೂ ಆಗುತ್ತದೆ.

ಆಳಿಸಿಕೊಳ್ಳುವ ಅಧೀನ ವರ್ಗವನ್ನು ತನಗೆ ಬೇಕಾದಂತೆ ನಿರ್ವಚಿಸಿ ಅದರ ಮನಸ್ಸು ಮತ್ತು ದೇಹವನ್ನು ತನ್ನ ವ್ಯಾಖ್ಯಾನಕ್ಕೆ ಅನುಸಾರವಾಗಿ ನಿರೂಪಿಸುವುದು ಪ್ರಭುತ್ವದ ಗುಣ. ವಡ್ಡಾರಾಧನೆಯ ಕತೆಗಳ ಪ್ರಭುತ್ವವು ಅನುಭವಿಸುವ ಭೌತಿಕಭೋಗ ಹಾಗೂ ಅದರ ಅಂಕುಶವಿರದ ಅಧಿಕಾರದಲ್ಲಿ ಈ ಅಂಶ ನಿಚ್ಚಳವಿದೆ. ಇಲ್ಲಿ ರಾಜ್ಯ ಮತ್ತು ರಾಜ ಎರಡೂ ಒಂದೇ. ಇಲ್ಲಿಯ ರಾಜ ತನ್ನ ವ್ಯಾಪ್ತಿಯ ಎಲ್ಲವನ್ನೂ

ಅಂಕೆಯಿಲ್ಲದೆ ಭೋಗಿಸುವ ಮತ್ತು ಭೋಗಿಸಲು ಅನುಮತಿಸುವ ಲೌಕಿಕಾಧಿಕಾರವುಳ್ಳವನು. ಪ್ರಭುತ್ವದ ಈ ಚಿತ್ರದ ಮೂಲಕ ವಡ್ಡಾರಾಧನೆಯ ಕತೆಗಳು ಅದರ ದಿವ್ಯತ್ವದ ಜೊತೆಜೊತೆಗೆ ಕೇಡುಗಳನ್ನೂ ಎದುರಿಗಿಟ್ಟಿವೆ. ಪ್ರತಿರೋಧವೇ ಇಲ್ಲದ ರಾಜತ್ವದ ವಿಪರೀತಮುಖವನ್ನು ತೋರಿವೆ. ಉದಾಹರಣೆಗೆ ಕಾರ್ತಿಕಋಷಿ ಕತೆಯ ಅಗ್ನಿರಾಜ, "ಎನ್ನಾಳ್ವ ಮಂಡಳಂಗಳೊಳ್ ಪುಟ್ಟಿದ ಲೇಸಪ್ಪ ವಸ್ತುವಾರ್ಗಕ್ಕುಂ?" ಎಂದು ಪ್ರಶ್ನಿಸಿ ಪ್ರಜಾಸಮುದಾಯದಿಂದ ನಿರಾಯಾಸದ ಸಮ್ಮತಿ ಪಡೆಯುತ್ತಾನೆ. ಆದರೆ ವಸ್ತು ಯಾವುದು ಎಂಬುದನ್ನು ತಿಳಿದರೆ ಪ್ರಶ್ನೆಗೆ ಉತ್ತರಿಸಬಹುದೆಂದು ವಿಚಾರಿಸಲು ಮುಂದಾದ ಋಷಿಗಳನ್ನು ರಾಜ್ಯದಿಂದಲೇ ಹೊರಹಾಕುತ್ತಾನೆ. ಸಾಮಾಜಿಕ ಸಂಬಂಧದ ವ್ಯತ್ಯಯದಲ್ಲೇ ರೂಪು ಪಡೆಯುವ ಅಧಿಕಾರಕ್ಕೆ ಕುಟುಂಬ ರಚನೆಯೂ ಹೊರತಲ್ಲ. ರಾಜ್ಯವ್ಯವಸ್ಥೆಯಿಂದ ಸೃಷ್ಟಿಯಾಗುವ ಪ್ರಜೆಗಳ ಪಾಡು ಕುಟುಂಬದೊಳಗೆ ಹೆಣ್ಣಿನದಾಗುತ್ತದೆ. ಹೀಗಾಗಿ ಕುಟುಂಬದೊಳಗಿನ ಅಧೀನ ನೆಲೆಗೆ ಸೇರಿದ ರಾಣಿ ವೀರಮತಿಯೂ ಪ್ರಜಾಸಮುದಾಯದಂತೆ ಗಂಡನ ಕೋರಿಕೆಗೆ ಪ್ರತಿಯಾಡದೆ ಮಗಳನ್ನು ಒಪ್ಪಿಸುತ್ತಾಳೆ.

ಅಗ್ನಿರಾಜ ತನ್ನಿಚ್ಛೆಯಂತೆ ಮಗಳಾದ ಕೃತ್ತಿಕೆಯನ್ನೇ ಮದುವೆಯಾಗುತ್ತಾನೆ, ಮಕ್ಕಳನ್ನೂ ಪಡೆಯುತ್ತಾನೆ. ಗಂಡನ ಎದುರು ಮಾತಿನ ಹಕ್ಕನ್ನೇ ಕಳೆದುಕೊಂಡವಳೂ, ಗಂಡನಿಂದ ಮಗಳನ್ನು ರಕ್ಷಿಕೊಳ್ಳಲಾರದವಳೂ ಆದ ವೀರಮತಿ ಅಧಿಕಾರದ ಆವರಣದಿಂದ ಹೊರಹೋಗಿ ಕಂತಿಯಾಗುತ್ತಾಳೆ. ಸೇಡಿಗಾಗಿ ಕಾದ ಬೆಂತರವೂ ಆಗುತ್ತಾಳೆ. ಇನ್ನೊಂದು ಕಡೆಯಿಂದ ವಿರೋಧಿಸಲಾಗದ ಅರಸನನ್ನೇ ಅನುಕರಿಸಿ ರಾಜ್ಯಕ್ಕೆ ರಾಜ್ಯವೇ ನೈತಿಕಭ್ರಷ್ಟತೆಗೆ ತುತ್ತಾಗುತ್ತದೆ.



ಇನ್ನು 'ಗಜಕುಮಾರನ ಕಥೆ'ಯಲ್ಲಿ ದ್ವಾರಾವತಿಯ ಅರಸ ವಿಷ್ಣುವಿನ ವಿರೋಧಿ ಸೂರದತ್ತನನ್ನು ಜಯಿಸಿ ಕೊಟ್ಟುದಕ್ಕೆ ಪ್ರತಿಯಾಗಿ, "ಅಂತಃಪುರಮನುಳಿಯೆ ಪೊಲಿಲೊಳಗೆನ್ನ ಮೆಚ್ಚಿದ ಪೆಂಡಿರನೆ ಕೊಂಡೆನ್ನಿಚ್ಚೆಯೊಳ್ ಮೆಚ್ಚಿದಂತೆ ಬಾಟ್ವೆನ್" ಎಂಬ ಕೋರಿಕೆಗೆ ರಾಜಾನುಮತಿ ಪಡೆದ ಗಜಕುಮಾರ ಸಿಕ್ಕಸಿಕ್ಕವರ ಹೆಂಡಿರು–ಮಕ್ಕಳನ್ನು ಅನುಭವಿಸುತ್ತಾನೆ. ಅವನ ಲೈಂಗಿಕ ದಾಳಿಗೆ ಸ್ವರ್ಣಕಾರ ಪಂಗುಳನ ಹೆಂಡತಿಯೂ ತುತ್ತಾಗುತ್ತಾಳೆ. ಈ ದಾಳಿಗೆದುರಾಗಿ ಮಾತನಾಡಲಾರದ ಅಸಹಾಯಕ ಪಂಗುಳ, ಹೆಂಡತಿಯನ್ನು ಉಳಿಸಿಕೊಳ್ಳಲಾರದ ತನ್ನ ಅಸಾಮರ್ಥ್ಯಕ್ಕೆ ಮನಸ್ಸಿನಲ್ಲೇ ಕುದಿಯುತ್ತಾನೆ. ಆದರೆ ಮುಂದೆ ಅಧಿಕಾರ ತೊರೆದು ಸವಣನಾದ ಗಜಕುಮಾರನ ಮೇಲೆ ಸೇಡು ತೀರಿಸಿಕೊಳ್ಳುತ್ತಾನೆ. ಇನ್ನು ಸನತ್ಕುಮಾರ ಚಕ್ರವರ್ತಿ ಕತೆಯಲ್ಲಿ 800 ಮಂದಿ ಅರಸಿಯರನ್ನು ಹೊಂದಿಯೂ, ಮಗಧೆಯ ಅರಸನಾದ ಪ್ರತಿಮುಖ ನಾಗಚಂದ್ರನೆಂಬ ಸಾರ್ಥಾಧಿಪತಿಯ ಹೆಂಡತಿಯನ್ನು ನೋಡಿ ಮರುಳಾಗುತ್ತಾನೆ. ಅಷ್ಟೇ ಅಲ್ಲ, ಮಂತ್ರಪ್ರಯೋಗದಿಂದ ಆಕೆಯನ್ನು ತನ್ನವಳನ್ನಾಗಿ ಮಾಡಿಕೊಳ್ಳುತ್ತಾನೆ. ಹೆಂಡತಿಯನ್ನು ಕಳೆದುಕೊಂಡ ವಿಯೋಗದಲ್ಲಿ ವಿಷ್ಣು ಆತ್ಮಧ್ಯಾನದಿಂದ ಸಾಯುತ್ತಾನೆ. ಹೀಗೆ ಬೇರೆ ಬೇರೆ ಕತೆಗಳು ಅರಸನಾದವನಿಗೆ ಪ್ರಜಾಸಮುದಾಯದ ಕಡೆಯಿಂದ ವ್ಯಕ್ತವಾಗುತ್ತಿದ್ದ ಶೂನ್ಯಪ್ರತಿರೋಧವನ್ನೂ, ಆ ಪ್ರತಿರೋಧ ರಹಿತ ಸ್ಥಿತಿಯಲ್ಲಿ ಪ್ರಭುತ್ವವು ತನಗೆ ಬೇಕಾದುದನ್ನು ನಿರಾಯಾಸವಾಗಿ ಪಡದುಕೊಳ್ಳುತ್ತಿದ್ದುದರ ಬೇರೆ ಬೇರೆ ಸ್ವರೂಪಗಳನ್ನೂ ಪರಿಚಯಿಸುತ್ತವೆ.

ಹೀಗೆ ಈ ಕಥೆಗಳ ಲೌಕಿಕಾಧಿಕಾರದ ನಿರಂಕುಶ ವಾಸ್ತವದಲ್ಲಿ ಮಾತುಕಳೆದುಕೊಂಡ ಸಮುದಾಯವಿದೆ. ಇದನ್ನು ಮೀರಿ ರಾಜ್ಯ ಮತ್ತು ಕುಟುಂಬದಿಂದ ಹೊರದೂಡಿಸಿಕೊಂಡ ಕಾರ್ತಿಕಋಷಿ ಕತೆಯ ಋಷಿಯರುಗಳು, ಸುಕೌಶಳಸ್ವಾಮಿ ಕತೆಯ ಜಯಾವತಿ, ಸುಕುಮಾರಸ್ವಾಮಿ ಕತೆಯ ಮೋದಾಳಿ, ಚಿಲಾತಪುತ್ರನ ಕತೆಯ ಸುಭದ್ರೆ, ವೃಷಭಸೇನ ಭಟಾರರ ಕತೆಯ ರಾಣಿ ಇನ್ನಿತರರೂ ಇದ್ದಾರೆ. ಅಂದರೆ ತಳಮೂಲವು ಮಾತಾಡದಂತೆ ಅದರ ಮಾತುಗಳನ್ನೇ ಕಸಿದಿಟ್ಟ ಹಾಗೂ ಕಸಿಯಲಾಗದ ಮಾತುಗಳನ್ನು ಹೊರಗಟ್ಟಿದ ಎರಡು ಬಗೆಗಳೂ ಇಲ್ಲಿವೆ. ಹೀಗೆ ದೈವಸನ್ನಿಭವಾದ ಪ್ರಭುತ್ವವು ತನ್ನ ಅಧೀನ ಸಮುದಾಯದ ಮಾತನ್ನು ಕಸಿದಿಡುವ ಮೂಲಕವೇ ತನ್ನನ್ನು ಸ್ಥಾಪಿಸಿಕೊಳ್ಳುವುದನ್ನು ಅವು ಸ್ಪಷ್ಟವಾಗಿಯೇ ತೋರಿವೆ.

## ಅಬಾಧಿತವಾದ ಗಂಡಿನ ಹಕ್ಕು, ಅಸುರಕ್ಷಿತ ಹೆಣ್ಣು

ವಡ್ಡಾರಾಧನೆಯಲ್ಲಿ ಪ್ರಭುತ್ವವು ರಾಜತ್ವವಷ್ಟೇ ಅಲ್ಲ. ಅದು ಸಾಮಾಜಿಕ ಮತ್ತು ಆರ್ಥಿಕಪ್ರಭುತ್ವವಾಗಿಯೂ ಇದೆ. ಈ ಕತೆಗಳಲ್ಲೂ ಸಾಮಾಜಿಕ ಪ್ರಭುತ್ವದ ಮಾದರಿಗಳಲ್ಲೊಂದಾದ ಬ್ರಾಹ್ಮಣ್ಯವು ರಾಜಪ್ರಭುತ್ವಕ್ಕಿಂತಲೂ ಪ್ರಭಾವೀ ಕೇಂದ್ರವೇ. ಬುದ್ಧಿಯ ಬಲದಿಂದ ಪ್ರಭುತ್ವಕ್ಕಿಂತಲೂ ಬಲಯುತವಾಗಿ ಸ್ಥಾಪಿತವಾದ ಬ್ರಾಹ್ಮಣ್ಯದ

ಮಾದರಿಗಳಾಗಿ ಚಾಣಾಕ್ಯ ಋಷಿಯರ ಕತೆಯ ಚಾಣಾಕ್ಯನ ಜೊತೆಗೆ ಮಿಕ್ಕಕತೆಗಳ ಆಸ್ಥಾನಪುರೋಹಿತರ ಪಾತ್ರಗಳಿವೆ. ಈ ಸಾಮಾಜಿಕ ಬಂಡವಾಳವು ಇಲ್ಲಿ ವೈದಿಕ ಕಥನಗಳ ಮಾದರಿಯಲ್ಲೇ ಇದೆ. ಜೊತೆಗೆ ಸಾಮಾಜಿಕ ಘಟಕವಾದ ಕುಟುಂಬವೂ ಅದೇ ಸಾಂಪ್ರದಾಯಿಕ ಭೌತಿಕ ಚಹರೆಯಲ್ಲಿದೆ. ಲೈಂಗಿಕ ಅಧಿಕಾರದ ಮೇಲೆ ನಿಂತಿರುವ ಈ ಮಾದರಿಯಲ್ಲಿ ಮದುವೆ ಎಂಬ ಸಂಸ್ಥೆಯು ಕಾಮತೃಷೆಗಿಂತ ಹೆಚ್ಚಾಗಿ ಉತ್ತರಾಧಿಕಾರಕ್ಕೆ ಹಕ್ಕುಳ್ಳ ಗಂಡು ಮಕ್ಕಳನ್ನು ಪಡೆಯುವ ಮಾರ್ಗವೆಂಬ ಸೂಚನೆಯೂ ಇದೆ. ಉದಾಹರಣೆಗೆ ಮಗಳಾದ ಕೃತ್ತಿಕೆಯನ್ನೇ ಮದುವೆಯಾಗುವ ಅಗ್ನಿರಾಜನಿಗೆ ಇರುವ ಎಂಟೂಮಂದಿ ಹೆಣ್ಣುಮಕ್ಕಳೇ. ರಾಜನಾಗಿದ್ದೂ ಹೆಣ್ಣು ಮಕ್ಕಳಿಗೆ ಅಧಿಕಾರವನ್ನು ವರ್ಗಾಯಿಸಲಾರದ ಸಾಮಾಜಿಕ ವಾಸ್ತವ ಆತನದು. ಆದರೆ ಇದು ಅಗ್ನಿರಾಜನ ಸೃಷ್ಟಿಯಲ್ಲ. ಸಾಮಾಜಿಕ ರೂಢಿ. ಈ ಅಧಿಕಾರದ ಪ್ರಶ್ನೆಯನ್ನು ಅದರ ಸಂಕೇತವೇ ಆದ ರಾಜನಾಗಿ ಆತ ಮುರಿಯಲಾರ. ಹಾಗಾಗಿ ಅಗ್ನಿರಾಜನಿಗೆ ಸಹಜವಾಗಿಯೇ ತನ್ನ ತರುವಾಯದ ಉತ್ತರಾಧಿಕಾರದ ಪ್ರಶ್ನೆಗೆ ಉತ್ತರ ಹುಡುಕುವ ತುರ್ತಿದೆ. ಕತೆಯಲ್ಲಿ ಆತ ಕೃತ್ತಿಕೆಯಿಂದ ಗಂಡು ಮಕ್ಕಳನ್ನು ಪಡೆದನೆಂಬ ವಿವರಗಳಿರುವುದು ಅದನ್ನೇ ಸಮರ್ಥಿಸುತ್ತದೆ. ಅಗ್ನಿರಾಜ ರಾಜನಾಗಿ ಮಾಡಿದ ಕುಟುಂಬ ನಿಯಮದ ಉಲ್ಲಂಘನೆಯಿಂದ ಆತನ ಸಾಮಾಜಿಕ ಕೊಡುಕೊಳುಗೆಗೆ ಭಂಗವುಂಟಾದ ವಿವರಗಳು ಯಾವುವೂ ಕತೆಯಲ್ಲಿಲ್ಲ. ಕೃತ್ತಿಕೆಯಲ್ಲಿ ಪಡೆದ ವೀರಶ್ರೀ ಎಂಬ ಮಗಳನ್ನು ಆತ ಕೋಗಳಿಯ ಕ್ರೌಂಚನೆಂಬ ರಾಜನಿಗೆ ವಿವಾಹ ಮಾಡಿಕೊಡುತ್ತಾನೆ! ಹಾಗಾಗಿ ಅಗ್ನಿರಾಜ ಮಾಡಿದ ಈ ನೈತಿಕ ಉಲ್ಲಂಘನೆಯನ್ನು ಕಥೆಯೊಳಗಿನ ಸಾಮಾಜಿಕ ಜಗತ್ತು ವಿರೋಧಿಸಿದಂತಿಲ್ಲ. ಗಂಡುಮಕ್ಕಳನ್ನು ಪಡೆಯುವ ಒತ್ತಡವು ಈ ನೈತಿಕತೆಯ ಪ್ರಶ್ನೆಗಿಂತಲೂ ಗುರುತರವಾಗಿಯೂ ಇರಬಹುದು. ಯಾಕೆಂದರೆ ಕತೆಯ ಯಾವ ಹಂತದಲ್ಲಿಯೂ ಸನ್ಯಾಸದ ಸಮವಸರಣಕ್ಕೆ ಹೊರಟವರಿರಲಿ, ಅಧಿಕಾರವನ್ನು ಬಿಟ್ಟು ಹೊರಟ ಬೇರೆ ಸಂದರ್ಭವಿರಲಿ, ತಮ್ಮ ತರುವಾಯದಲ್ಲಿ ಅದನ್ನು ತಮ್ಮ ಗಂಡು ಸಂತಾನಕ್ಕೇ ಹಸ್ತಾಂತರಿಸಿ ಹೊರಡುವ ಪದ್ಧತಿ ವಡ್ಡಾರಾಧನೆಯ ಕತೆಗಳಲ್ಲಿದೆ. ಯಾವುದೇ ಕತೆಯೂ ಈ ಸ್ಥಾಪಿತ ರಚನೆಯನ್ನು ಉಲ್ಲಂಘಿಸಿರುವುದು ಕಂಡು ಬರುವುದಿಲ್ಲ. ಈ ಹಿನ್ನೆಲೆಯಲ್ಲಿ ರಾಜ್ಯಾಧಿಕಾರದ ಸಂವಿಧಾನವನ್ನು ಗಂಡಿನಿಂದ ಕಳೆದುಹೋಗದಂತೆ ಕಾಪಾಡುವ ಪುರುಷಾಧಿಪತ್ಯದ ನಿರೂಪಣೆಗಳು ವಡ್ಡಾರಾಧನೆಯಲ್ಲಿ ಗಟ್ಟಿಯಾಗಿಯೇ ಇವೆ ಎನ್ನಬಹುದು.

ಆದರೆ ವಡ್ಡಾರಾಧನೆಯ ಕತೆಗಳಲ್ಲಿ ಹೆಣ್ಣಿನ ವಿಷಯದಲ್ಲಿ ಈ ಪ್ರಮಾಣದ ನಿಗಧಿಯಾದ ಸುರಕ್ಷಿತ ಆವರಣವೊಂದನ್ನು ಕಾಣಲಾಗದು. ಅಧಿಕಾರದ ಮಾತು ಹಾಗಿರಲಿ, ಆಕೆಯ ಪಾಲಿಗೆ ಕುಟುಂಬವೂ ಸುರಕ್ಷಿತ ಆವರಣವೆಂಬ ನಿಶ್ಚಿತಧ್ವನಿ ಇಲ್ಲಿದೆ ಎನ್ನಲಾಗದು. ಯಾಕೆಂದರೆ ವಡ್ಡಾರಾಧನೆಯಲ್ಲಿ ಕುಟುಂಬರಚನೆಯ ನೈತಿಕಗೆರೆಯ ಉಲ್ಲಂಘನೆಯ ಬಹು ನಿದರ್ಶನಗಳಿವೆ. ಮತ್ತು ಅವೆಲ್ಲವೂ ಒಂದರ್ಥದಲ್ಲಿ

ಹೆಣ್ಣಿನ ಮೇಲಿನ ಆಕ್ರಮಣದ ರೂಪದಲ್ಲಿ ಸಂಭವಿಸುತ್ತವೆ. ಮದುವೆಯಾಗಿ ಗಂಡನ ಸ್ವತ್ತಾಗಿದ್ದ, ಕೊಡಗೂಸಾಗಿ ತಾಯ್ತಂದೆಯ ಸ್ವತ್ತಾಗಿದ್ದ ಹೆಣ್ಣು ತನ್ನ ಆದುವೇ ಅಸ್ತಿತ್ವವನ್ನೂ ಉಳಿಸಿಕೊಳ್ಳಲಾಗದೆ, ಆಕ್ರಮಣಕ್ಕೆ ತುತ್ತಾಗುವ ಮೂಲಕ 'ವಸ್ತುವಾಗುತ್ತಾಳೆ'. ಅಧಿಕಾರವುಳ್ಳ ಪ್ರಭುತ್ವದ ಕೈಗೆ ಆಕೆ ನಿರಾಯಾಸವಾಗಿ ಸಿಗುತ್ತಾಳೆ. ಉದಾಹರಣೆಗೆ ಗಜಕುಮಾರನ ಕತೆಯಲ್ಲಿ ಸ್ವರ್ಣಕಾರ ಪಂಗುಳನ ಹೆಂಡತಿಯನ್ನು ಗಜಕುಮಾರ ಅನುಭವಿಸುತ್ತಾನೆ, ಸನತ್ಕುಮಾರಚಕ್ರವರ್ತಿ ಕತೆಯಲ್ಲಿ ಸಾರ್ಥಾಧಿಪತಿ ನಾಗಚಂದ್ರನ ಮಡದಿ ವಿಷ್ಣುಶ್ರೀಯನ್ನು ಮಗಧೆಯ ಅರಸ ಪ್ರತಿಮುಖ ವಶಪಡಿಸಿಕೊಳ್ಳುತ್ತಾನೆ, ಕಾರ್ತಿಕಋಷಿ ಕತೆಯ ಅಗ್ನಿರಾಜ ತನ್ನ ಮಗಳನ್ನೇ ಮದುವೆಯಾಗುತ್ತಾನೆ. ಹೆಣ್ಣಿನ ವಿಷಯದಲ್ಲಿ ಕುಟುಂಬ ಧರ್ಮವನ್ನು ಎಲ್ಲರೂ ನಿರಾಯಾಸವಾಗಿ ಉಲ್ಲಂಘಿಸುತ್ತಾರೆ. ಗಂಡಿನ ಹಕ್ಕಿನಲ್ಲಿ ಸಾಧ್ಯವಾಗದ ಉಲ್ಲಂಘನೆ ಹೆಣ್ಣಿನ ಸಂದರ್ಭದಲ್ಲಿ ನಿರಾಯಾಸವಾಗಿ ಸಂಭವಿಸುತ್ತದೆ! ಈ ಸಾಮಾಜಿಕಸತ್ಯದಂದಲೇ ಅಗ್ನಿರಾಜ ಗಂಡುಮಕ್ಕಳನ್ನು ಪಡೆಯಲೆಂದು ಕುಟುಂಬದ ನೈತಿಕಗೆರೆಯ ಉಲ್ಲಂಘನೆಯನ್ನೇ ಸುಲಭ ಎಂದುಕೊಂಡಂತಿದೆ. ಈ ಹಿನ್ನೆಲೆಯಲ್ಲಿ ಅಗ್ನಿರಾಜನ ಕತೆ ಗಂಡಿನ ಅಧಿಕಾರದ ರಕ್ಷಣೆಗಾಗಿ ಅನುಸರಿಸಿದ ಮಾರ್ಗೋಪಾಯದ ಕುರುಹಾಗಿಯೂ, ಹೆಣ್ಣಿನ ಅಸ್ತಿತ್ವದ ಆತಂಕವಾಗಿಯೂ ತೆರೆದುಕೊಳ್ಳುತ್ತದೆ.



ಹೆಣ್ಣಿಗೆ ಸ್ವಾತಂತ್ರ್ಯಸಲ್ಲದೆಂದ ವೈದಿಕ ಮತವನ್ನು ವಿರೋಧಿಸಿದ ಜೈನಪಂಥದ ಕತೆಗಳಾಗಿಯೂ ಇಲ್ಲಿನ ಹೆಣ್ಣಿನ ಜಗತ್ತು ಭಿನ್ನವಲ್ಲ. ಪುರುಷಾಧಿಪತ್ಯದ ಸಾಂಪ್ರದಾಯಿಕ ರಚನೆಯೇ. ಹೆಣ್ಣಿಗೆ ತನ್ನ ಸಾಮಾಜಿಕ ಅವನತಾವಸ್ಥೆಯ ದ್ವಿತೀಯ ಪ್ರಜೆಯ ಸ್ಥಾನದಿಂದ ಬಿಡುಗಡೆ ಸಿಕ್ಕಿಲ್ಲ(ಪಂಪನಲ್ಲಿ ಬರುವ ಕುಯೋನಿಯ ಮಾತು ಇಲ್ಲೂ ಇದೆ. ಸುಕುಮಾರಸ್ವಾಮಿಕತೆ ದುರ್ಭಗತ್ವವನ್ನು ಉಲ್ಲೇಖಿಸುತ್ತದೆ. ಆದರೆ ಪಂಪನಲ್ಲಾಗಲೀ, ವಡ್ಡಾರಾಧನೆಯಲ್ಲಾಗಲೀ 'ಕುಶಿಶ್ನ'ದ ಉಲ್ಲೇಖವಿಲ್ಲ).

ಹಾಗೆಯೇ ಹೆಣ್ಣಿನ ಲೈಂಗಿಕಪಾವಿತ್ರ್ಯವು ಇಲ್ಲಿಯೂ ಬಹುದೊಡ್ಡ ಮೌಲ್ಯ. ಹೆಣ್ಣಿನ ಮಾತು ಆಲಿಸುವ ಹಾಗೂ ಆಕೆಯ ಸ್ವತಂತ್ರ ನಡೆಯನ್ನು ಸಹಿಸುವ ಸಂದರ್ಭಗಳು ಇಲ್ಲಿಲ್ಲ. ವಡ್ಡಾರಾಧನೆ ಕತೆಗಳ ಅನೇಕಕಡೆ ಹೆಣ್ಣು ಬ್ರಾಹ್ಮಣ್ಯಕ್ಕೂ ಮಿಗಿಲಾದ ಆತಂಕದಂತೆ ಪರಿಗಣಿತವಾಗಿದೆ. ಬ್ರಾಹ್ಮಣ್ಯವನ್ನು ಸೈದ್ಧಾಂತಿಕ ಎದುರಾಳಿಯಂತೆ ಎದುರಾಗುವ ಈ ಕತೆಗಳು ಹೆಣ್ಣಿನ ಪ್ರಶ್ನೆಗೆ ಧಾರ್ಮಿಕತೆಯನ್ನು ಮೀರಿದ ಭೌತಿಕವಾಸ್ತವದಲ್ಲೇ ವ್ಯವಹರಿಸಿವೆ. ಅದನ್ನು ಅಮೂರ್ತ ಸೈದ್ಧಾಂತಿಕತೆಗಿಂತ ಭಿನ್ನವೂ ನಿಖರವೂ ಆದ ಸಾಮಾಜಿಕ ಆವರಣದ ಉಲ್ಲಂಘನೆಯ ಆತಂಕವಾಗಿ ಕಂಡಿವೆ. ಪುರುಷಾಧಿಕಾರದ ಈ ಸಾಮಾನ್ಯ ಪ್ರಶ್ನೆಗೆ ಬ್ರಾಹ್ಮಣ್ಯಕ್ಕಿಂತಲೂ ಹೆಚ್ಚಿನ ನಿಗಾ ತೋರಿವೆ. ನಿರ್ವಹಣೆಯ ಭಿನ್ನ ಮಾದರಿಗಳ ಮೂಲಕ ಸಾಮಾಜಿಕವಾಗಿ 'ಆಕೆಯನ್ನು' ಪರಿಹರಿಸಿಕೊಳ್ಳುವ ಬೇರೆ ಬೇರೆ ದಾರಿಗಳ ಶೋಧನೆಗೂ ಇಳಿದಿವೆ. ಸ್ವತಂತ್ರವಾಗಿ ನಡೆದರೆ ದಾಕ್ಷಿಣ್ಯವಿಲ್ಲದೆ ಶಿಕ್ಷೆಗೆ ಗುರಿಯಾಗುವ (ಪುರುಷವ್ರತ ಘೋಷಿಸಿದ ವೃಷಭಸೇನ ಭಟಾರರ ಕತೆಯ ರಾಣಿಯ ಸಂದರ್ಭವನ್ನು ಗಮನಿಸಿ) ಇಲ್ಲಿಯ ಹೆಣ್ಣಿನದು ಪಳಗಿಸಿಟ್ಟ ಮಾದರಿ. ಆಕೆ ಬದುಕಿರುವುದೇ ಗಂಡಿಗಾಗಿ. ಈ ವಿನ್ಯಾಸದಲ್ಲಿ ಮಹಾಪುರುಷರ ಕರ್ಮಕ್ಷಯವನ್ನೇ ಗಮನಿಸುವ ಈ ಕತೆಗಳು ಹೆಣ್ಣಿನ ಪಾತ್ರಕ್ಕೆ ಕೊಟ್ಟ ಸ್ಪೇಸ್ ಕೂಡ ಚಿಕ್ಕದು. ಅದೂ ಹೆಸರಿಲ್ಲದಂತೆ, ನಾಯಕನ 'ಇಷ್ಟವಿಷಯ ಕಾಮಭೋಗದ' ಈಡೇರಿಕೆಯ ಹೆಣ್ಣು ಎನ್ನುವ 'ದೇಹವಾಗಿ'. ಆದರೂ ವಡ್ಡಾರಾಧನೆಯ ಕೆಲವೊಂದೆಡೆ ಪುಟ್ಟಸ್ಪೇಸ್‌ನಲ್ಲಿ ಅಡಿಟಿಪ್ಪಣಿಯ ರೂಪದಲ್ಲಾದರೂ ಲೌಕಿಕವಾಗಿ ಬದುಕಲು ಹಾತೊರೆಯುವ ಸ್ತ್ರೀಯರ ಗೊಣಗಾಟ ಮತ್ತು ಪ್ರಾಸಂಗಿಕ ಪ್ರತಿರೋಧಗಳಿವೆ. ಇವು ವಾಸ್ತವದಲ್ಲಿ ಕಥಾನಾಯಕರಾದ ಮಹಾಪುರುಷರ ತ್ಯಾಗ, ಧೀರತನಗಳನ್ನೇ ಪ್ರಶ್ನಿಸುತ್ತವೆ. ಗಂಡಿನ ಅಧಿಕಾರದ ವಿರುದ್ಧ ಕುಟುಂಬದ ಒಳಗಿಂದಲೇ ದಂಗೆ ಏಳುತ್ತವೆ. ಉದಾಹರಣೆಗೆ ಸುಕೌಶಳಸ್ವಾಮಿ ಕತೆಯ ಜಯಾವತಿ, ಸುಕುಮಾರಸ್ವಾಮಿಕತೆಯ ಮೋದಾಳಿ, ಚಿಲಾತಪುತ್ರನ ಕತೆಯ ಸುಭದ್ರೆ, ವೃಷಭಸೇನಭಟಾರರ ಕತೆಯ ರಾಣಿ ಇನ್ನಿತರರನ್ನು ಕಾಣಬಹುದು. ಆದರೆ ವಡ್ಡಾರಾಧನೆ ಕತೆಗಳು ಈ ಅಸಮಾಧಾನ, ನೋವನ್ನು ಧಾರ್ಮಿಕ ಪರಿವೇಷದಲ್ಲಿ ಮುಚ್ಚಿಮರೆ ಮಾಡಿವೆ. ಅವು ಹೆಣ್ಣಿನಸೇಡನ್ನು ಜೈನಸವಣರ ಪರೀಷಹ ಸೈರಣೆಗೆ ವಿಧಿಸಮೆದ ಆಟಗಳಂತೆ ಬಳಸಿವೆ. ಜೈನಧರ್ಮದ ಈ ವಿರಕ್ತಿ ಮೀಮಾಂಸೆಯಿಂದಾಗಿ, "ಮಾನವೀಯವಾಗಿ ಸರಳನ್ಯಾಯದಲ್ಲಿ ನೋಡಬೇಕಾದ ಪ್ರಸಂಗಗಳು ಕೂಡ ಕೇಡೆಂಬ" (ಕತ್ತಿಯಂಚಿನದಾರಿ,ಪು,176) ವ್ಯಾಖ್ಯಾನಕ್ಕೆ ಒಳಪಡುತ್ತವೆ. ಅಷ್ಟೇ ಅಲ್ಲ, ಆತ್ಯಂತಿಕವಾಗಿ ಹೆಣ್ಣಿನ ದನಿಯೇ ನಿರಾಕರಣಕ್ಕೆ ಒಳಗಾಗುತ್ತವೆ. ಆದರೆ ಕೃತಿಯೊಳಗಿನ ಧಾರ್ಮಿಕ ಪರಿವೇಷವನ್ನು ದಾಟಿಕೊಂಡು ಸಾಮಾಜಿಕವಾಗಿ ದುರ್ಬಲರ ಹಾಗೂ ಅಂಚಿನವರ ನೆಲೆಯಿಂದ ಈ ವಿವರಗಳನ್ನು ಗಮನಿಸಿದಾಗ, ಈ ಪಾತ್ರಗಳು ಸಾಂಪ್ರದಾಯಿಕ ಅಧಿಕಾರ ಸಂಬಂಧವನ್ನು ಪರಿಚಯಿಸುತ್ತಲೇ, ಅದರ ವಿರುದ್ಧದ ಪ್ರತಿರೋಧದ ಮಾದರಿಗಳೂ ಆಗುತ್ತವೆ ಎಂಬುದನ್ನು ನಾವು ಗಮನಿಸಬೇಕಾಗಿದೆ.

ಈ ನಡುವೆ ಸಂಬಂಧವಾಚಕಗಳ ಬಳಕೆಯ ನೆಲೆಯಿಂದ ವಡ್ಡಾರಾಧನೆಗೊಂದು ವಿಶಿಷ್ಟತೆ ಇದೆ. ಅದೇನೆಂದರೆ ಅಲ್ಲಿ ಗಂಡನ್ನು ಆಧರಿಸಿ ಬಳಕೆಗೆ ಬರುವ ಸಂಬಂಧವಾಚಕಗಳಂತೆ ಹೆಣ್ಣನ್ನು ಆಧಾರವಾಗಿಟ್ಟುಕೊಂಡ ಸಂಬಂಧವಾಚಕಗಳೂ ಇವೆ. ಈ ದೃಷ್ಟಿಯಿಂದ ಕಾರ್ತಿಕಋಷಿ ಕತೆ ಮುಖ್ಯವಾದುದು. ಅಲ್ಲಿ ಕಾರ್ತಿಕನಿಗೆ ಸಂಬಂಧಿಸಿದ ಸಂಬಂಧವಾಚಕಗಳು ಹೆಣ್ಣನ್ನು ಆಧರಿಸಿಯೇ ಬಳಕೆಗೊಂಡಿವೆ. ತಾಯಿಗೆ 'ನಿಮ್ಮ ತಂದೆಯಾದ ನಮ್ಮ ಅಜ್ಜ ಇದ್ದಾನೋ? ಇಲ್ಲವೋ?' ಎಂದು ಪ್ರಶ್ನಿಸುವ ಬಾಲಕ ಕಾರ್ತಿಕನಿಗೆ ಉತ್ತರಿಸುವ ತಾಯಿ,'ನಿನಗೆ ತಂದೆಯಾದವನೇ ನನಗೂ ತಂದೆ' ಎನ್ನುತ್ತಾಳೆ. ಇಲ್ಲಿ ಇಡಿಯ ಸಂಬಂಧವನ್ನು ಆಕೆ ತನ್ನನ್ನು ಆಧರಿಸಿಯೇ ನಿರೂಪಿಸುತ್ತಾಳೆ. ಅಂತೆಯೇ ಕ್ರೌಂಚನಿಂದ ತಿವಿಯಲ್ಪಟ್ಟು ನೋವಿಗೊಳಗಾದ ಕಾರ್ತಿಕನನ್ನು ಬೆಂತರವಾಗಿ ಕಾಯುವ ಅಗ್ನಿರಾಜನ ಹೆಂಡತಿ ವೀರಮತಿಯನ್ನು ಕತೆ ದೊಡ್ಡಮ್ಮ ಎಂದಿಲ್ಲ, ಅಜ್ಜಿ ಎಂದೇ ಸಂಭೋದಿಸಿದೆ. ಅಗ್ನಿರಾಜನ ವೈವಾಹಿಕಸಂಬಂಧದಿಂದ ಕಾರ್ತಿಕನಿಗೆ ದೊಡ್ಡಮ್ಮನಾಗುವವಳೇ, ಕೃತ್ತಿಕೆಯ ಕಾರಣದಿಂದ ಅಜ್ಜಿಯಾಗಬೇಕು. ಹೀಗೆ ಭಿನ್ನ ಸಂಬಂಧವಾಚಕಗಳ ಬಳಕೆಗೆ ಅವಕಾಶವಿದ್ದಾಗ ಹೆಣ್ಣನ್ನು ಆಧರಿಸಿದ ಸಂಬಂಧವಾಚಕವನ್ನೇ ಕತೆ ಬಳಸಿದೆ ಎಂಬುದು ವಿಶೇಷ. ಈ ನಿರೂಪಣೆ ಜೈನ ವಿರಕ್ತಿಯ ಉತ್ತೇಜನಕ್ಕಾಗಿಯಷ್ಟೇ ಬಂದಿದೆ ಎಂಬುದು ಸರಳ ವಿವರಣೆಯಾಗುತ್ತದೆ. ಆದ್ದರಿಂದ ಕತೆಯ ಈ ನಿರೂಪಣೆಯಲ್ಲಿ ವಿರಕ್ತಿಯ ಉದ್ದೇಶವನ್ನೂ ಮೀರಿದ ಸಾಮಾಜಿಕ ಕಾರಣಗಳ ಸೂಚನೆಯೂ ಇರುವಂತಿದೆ. ಅಮುಖ್ಯಳಾಗುವ ಹೆಣ್ಣೇ ಸಂಬಂಧದ ನಿರ್ಧಾರಕ ಅಂಶವಾಗುವ ಈ ಬಗೆ, ಪುರುಷಾಧಿಪತ್ಯದ ಯಾಜಮಾನ್ಯವನ್ನು ಬೇರೊಂದು ನೆಲೆಯಲ್ಲಿ ಚಿತ್ರಿಸುತ್ತಿದೆಯೇ ಎಂಬುದನ್ನು ವಿಚಾರಿಸಬೇಕಿದೆ.

## ವಣಿಕ ವೈಭವದಲ್ಲಿ ಧನ್ಯವಾಗುವ ರಾಜತ್ವ

ವಡ್ಡಾರಾಧನೆಯಲ್ಲಿ ವಿಶಿಷ್ಟವಾದ ಇನ್ನೂ ಒಂದು ಶಕ್ತಿಕೇಂದ್ರದ ಸೂಚನೆ ಇದೆ. ಅಲ್ಲಿರುವ ಇಂತಹದ್ದೊಂದು ಮಾದರಿಗೆ ವಣಿಕ ಸಮುದಾಯದ ಬೆಂಬಲವನ್ನು ನೆಮ್ಮಿದ ಜೈನಧಾರ್ಮಿಕ ಪರಿಸರದ ಹಿನ್ನೆಲೆಯೂ ಕಾರಣವಿರಬಹುದು. ಅದೇನೇ ಇದ್ದರೂ ವಡ್ಡಾರಾಧನೆಯ ಈ ಪ್ರಭುತ್ವವು ನಾವು ಸಹಜಪ್ರಭುತ್ವವೆಂಬಂತೆ ಪರಿಗಣಿಸುವ ರಾಜತ್ವವನ್ನೇ ಗಣಿಸದ, ಅದರೆದುರಿಗೆ ತನ್ನನ್ನೇ ಕೌತುಕವಾಗಿ ತೆರೆದಿಡಬಲ್ಲ ವೈಭವವುಳ್ಳದ್ದು. ಸುಕುಮಾರಸ್ವಾಮಿ ಕತೆಯ ಸುಕುಮಾರಸ್ವಾಮಿಯ ಭವದ ಕತೆ ಈ ದೃಷ್ಟಿಯಿಂದ ಮುಖ್ಯ. ಅಲ್ಲಿ ಅರಸ ಕೊಳ್ಳಲಾಗದ ಲಕ್ಷದಿನಾರಿನ ರತ್ನಗಂಬಳಿಯನ್ನು ಸುಕುಮಾರಸ್ವಾಮಿಯ ತಾಯಿ ಕೊಳ್ಳುತ್ತಾಳೆ! ಅಷ್ಟೇ ಅಲ್ಲ, ಅದನ್ನು 32 ಚೂರಾಗಿಮಾಡಿ 32 ಮಂದಿ ಸೊಸೆಯಂದಿರಿಗೆ ಹಂಚಿಕೊಡುತ್ತಾಳೆ. ಅವರುಗಳೋ ಅದನ್ನು ತಂತಮ್ಮ ಕಾಲಚಪ್ಪಲಿಗೆ ತೊಡಿಸುತ್ತಾರೆ. ಈ ವಾರ್ತೆಯಿಂದ ದಂಗಾಗಿ ಸುಕುಮಾರನ ವೈಭವವನ್ನು ನೋಡಲೆಂದು ಬಂದ ಅರಸ ಸುಕುಮಾರನ ಮನೆ ಹೊಕ್ಕಂತೆಯೇ,

"ಸುರಲೋಕಂಬೊಕ್ಕ ಪುಣ್ಯವಂತ"ನಂತೆ ಧನ್ಯತೆಯನ್ನು ಅನುಭವಿಸುತ್ತಾನೆ! ಸುಕುಮಾರನನ್ನು ನೋಡಬಯಸಿ ದೂತರನ್ನು ಕಳಿಸಿ ಆತನನ್ನು ಕರೆಯುವಂತೆ ಯಶೋಭದ್ರೆಯನ್ನು ವಿನಂತಿಸುತ್ತಾನೆ. ಅರಸರ ವಿನಂತಿಗೆ ಪೂರಕವಾಗಿ ಮಗನನ್ನು ಕರೆಯಲು ಹೋದ ಯಶೋಭದ್ರೆ, "ಮಗನೆ ಅರಸರ್ ವಂದರ್ ಬಾ ಪೋಪಂ' ಎನ್ನುತ್ತಾಳೆ. ಆದರೆ ಅಚ್ಚರಿಗೊಂಡ ಸುಕುಮಾರ, 'ಅರಸರೆಂಬೊರಾರ್?' ಎಂದು ಪ್ರಶ್ನಿಸುತ್ತಾನೆ. ಅದಕ್ಕುತ್ತರಿಸುವ ತಾಯಿ, 'ನಮ್ಮನಾಳ್ವೊರ್' ಎನ್ನುತ್ತಾಳೆ. ಇದಕ್ಕೆ 'ನಮ್ಮನಾಳ್ವರುಂ ಒಳರೆ?' ಎಂದು ಸುಕುಮಾರ ವಿಸ್ಮಯ ಪಡುತ್ತಾನೆ. ಕೊನೆಗೆ ತಾಯಿಯ ಒತ್ತಾಯಕ್ಕೆ ಮಣಿದು ಅರಸನಲ್ಲಿಗೆ ಬರುತ್ತಾನೆ! ಇಲ್ಲಿ ಅರಸ ಮನೆಗೆ ಬಂದುದನ್ನೂ ಅರಿಯದ ಸುಖದಿರುವಿಕೆ ಸುಕುಮಾರನದಾದರೆ, ಆತನ ಸುಖದ ಉತ್ಕರ್ಷಕ್ಕೆ ಮಾತು ಕಳೆದುಕೊಂಡು ಮೂಗಿನ ಮೇಲೆ ಬೆರಳಿಡುವ ಸರದಿ ಅರಸನದು. ತನ್ನ ಅಂಕೆಯಲ್ಲಿರುವ ಮತ್ತು ಅರಸನಾದ ತನ್ನನ್ನೇ ಎದುರಾಗಲು ಉತ್ಸುಕನಲ್ಲದ ವಣಿಕನ ಶ್ರೀಮಂತಿಕೆಯ ಜೊತೆಗೆ ಹೊಂದಾಣಿಕೆ ಮಾಡಿಕೊಂಡು, ಆತನ ವಿಭವವನ್ನು ನೋಡಿ ಸ್ವಯಂ ಬೆರಗಾಗುವ ಅಪೂರ್ವ ಚಿತ್ರವಿದು. ಹೀಗೆ ನೆಲದ ಮೇಲಿನ ದೈವವಾದ ರಾಜತ್ವವೇ ಕೀಳರಿಮೆಗೆ ಗುರಿಯಾಗುವ, ಪ್ರಭುತ್ವವೇ ತನ್ನನ್ನು ಕ್ಷುಲ್ಲಕವೆಂದು ಭಾವಿಸುವ ಈ ಚಿತ್ರವು ಸಮಕಾಲೀನ ಸಂದರ್ಭವನ್ನು ವಿವರಿಸಿಕೊಳ್ಳುವಲ್ಲಿ ಉಪಯುಕ್ತ ಸರಕೂ ಆಗಿದೆ.

ಯಾಕೆಂದರೆ ಇದು ಮಾರುಕಟ್ಟೆಯನ್ನು ಸರ್ಕಾರ ನಿಯಂತ್ರಿಸಬೇಕು ಎನ್ನುವ ಚರ್ಚೆಯ ಕಾಲವಲ್ಲ. ಆ ಬದಲಿಗೆ ಮಾರುಕಟ್ಟೆ/ಬಂಡವಾಳ/ಕಾರ್ಪೋರೇಟ್ ಶಕ್ತಿಯೇ ಸರ್ಕಾರವನ್ನು ನಿಯಂತ್ರಿಸುತ್ತಿರುವ ಕುರಿತು ಚರ್ಚೆಯಾಗುತ್ತಿರುವ ಕಾಲ. ಸರ್ಕಾರದ ಕಾನೂನು ಕಟ್ಟಳೆಗಳಿಲ್ಲದ ಮುಕ್ತ ಆರ್ಥಿಕವಲಯಗಳ ನಿರ್ಮಾಣದ ಕಾಲ. ವ್ಯಾಪಾರಿಗಳೇ ಸಾರ್ವಭೌಮರಾಗಿ, ದೇಶಗಳೇ ವಸಾಹತುಗಳಾಗಿ, ರಾಜತ್ವದ ಗುರುತಿನ ಕಾರಣವಾಗುವ ಭೌಗೋಳಿಕ ಮೇರೆಗಳೇ ಅಳಿದುಹೋಗಿ ಪ್ರಭುತ್ವವೆಂಬ ಪದವೇ ಅಪ್ರಸ್ತುತವಾಗುತ್ತಿರುವ ಕಾಲ. ಸರ್ಕಾರಗಳನ್ನೇ ಕಾರ್ಪೋರೇಟ್ ದಣಿಗಳು ಖರೀದಿಸುತ್ತಿರುವ ಕಾಲ. ಸರ್ಕಾರಕ್ಕೆ ಅಂಜಬೇಕಾದ ವ್ಯಾಪಾರಿಗಳೇ ಸರ್ಕಾರದ ಕಾನೂನುಗಳ ನಕ್ಷೆ ಸಿದ್ಧಪಡಿಸಿಕೊಡುತ್ತಿರುವ ಕಾಲ. ಟಿ.ಆರ್ ಚಂದ್ರಶೇಖರ ಹೇಳುವಂತೆ, ಇಂದು "ಮಾರುಕಟ್ಟೆಯು ಪ್ರಧಾನವಾಗಿ ಸರ್ಕಾರವು ಆನುಷಂಗಿಕವಾಗಿದೆ" (ಹೊಸತು ಜುಲೈ2015, ಪು.12). ಬಾಳುವ ಬದುಕು ಮತ್ತು ಆಳುವ ಅರಸೊತ್ತಿಗೆ ಎರಡೂ ಅಸ್ತಿತ್ವ ಕಳೆದುಕೊಳ್ಳುತ್ತಿವೆ. ಆಳುವ ಪ್ರಭುತ್ವವೇ ತನ್ನ ರಕ್ತದಲ್ಲೇ ವಾಣಿಜ್ಯವಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದೆ. ಬಂಡವಾಳದ ದಣಿಗಳು ಬೆರಳುತೋರಿದವರೇ ಅರಸರಾಗಿ ಅಕ್ಕಸಾಲಿಗರ ವೇಷತೊಟ್ಟು ಸಂಭ್ರಮಿಸುತ್ತಿದ್ದಾರೆ. ಜನರಿಗೆ ಉತ್ತರದಾಯಿತ್ವದ ಹೊಣೆಗಾರಿಕೆಯ ಯಾವ ಹೊರೆಯಿರದ, ಪ್ರಭುತ್ವವೆಂಬ ಅಂಕುಶದ ಯಾವ ಭಯವಿರದ ಬಂಡವಾಳಶಕ್ತಿ ಪ್ರಭುತ್ವವನ್ನೇ ತನ್ನ ಮರ್ಜಿ ಕಾಯುವಂತೆ ಮಾಡಿದೆ. ಸುಕುಮಾರಸ್ವಾಮಿಯ ಜೀವನಶೈಲಿ ಮತ್ತು ಮಾತುಗಳಲ್ಲಿ ವರ್ತಮಾನ ಕಾಲದ ಬಂಡವಾಳಿಗರ ಈ

ಛಾಯೆಯಿದೆ. ಹಾಗಾಗಿ ಅರಸು ಎಂದರೆ ಯಾರು?– ಇದು ಸುಕುಮಾರಸ್ವಾಮಿ ಯಶೋಭದ್ರೆಗೆ ಆಡಿದ ಮಾತಷ್ಟೇ ಅಲ್ಲ. ಇಂದಿನ ಜನಸಮುದಾಯಕ್ಕೆ ಬಂಡವಾಳ ಶಕ್ತಿ ಕೇಳುತ್ತಿರುವ ಪ್ರಶ್ನೆ. ಅದು ಅಲ್ಲಿಗೆ ನಿಂತೂ ಇಲ್ಲ. ಖಚಿತ ನಿರ್ಧಾರಾತ್ಮಕ ಉತ್ತರವನ್ನು ತನ್ನೊಳಗೇ ಗರ್ಭೀಕರಿಸಿಕೊಂಡು, 'ನಮ್ಮನಾಳ್ವರುಂ ಒಳರೆ?' ಎಂಬ ಪ್ರಶ್ನೆಯಾಗುತ್ತದೆ. ಇದು ಪ್ರಶ್ನೆಯಂತಿರುವ ಉತ್ತರ. ಯಾಕೆಂದರೆ ಅರಸು ಎಂದರೆ ಇಲ್ಲದವರನ್ನು ಆಳುವುದಕ್ಕಲ್ಲದೆ, ತಮ್ಮನ್ನಲ್ಲ ಎಂಬ ಖಚಿತ ಧ್ವನಿಯಲ್ಲಿ ಆ ಪ್ರಶ್ನೆಯ ತುದಿಯಲ್ಲೇ 'ಇಲ್ಲ' ಎಂಬ ಉತ್ತರವೂ ಸಿದ್ಧವಿದೆ. ವರ್ತಮಾನಕಾಲದ ಅರಸು ಮಾಡುತ್ತಿರುವುದು ಅದನ್ನೇ. ಸಮೂಹವನ್ನು ನಿಯಂತ್ರಿಸುವ ಕೆಲಸವನ್ನಲ್ಲದೆ, ಉಳ್ಳವರನ್ನು ರೆಗ್ಯುಲೇಟ್ ಮಾಡುವ ಕೆಲಸವನ್ನಲ್ಲ. ಪ್ರಭುತ್ವವು ಆರ್ಥಿಕಶಕ್ತಿಯ ಎದುರು ಮಂಡಿಯೂರಿದೆ. ಆಧುನಿಕ ಕಾಲದಲ್ಲಿ ನಾವು ಅನುಭವಿಸುತ್ತಿರುವ ಪ್ರಭುತ್ವದ ಈ ಮುಖ ಸುಕುಮಾರಸ್ವಾಮಿ ಕತೆಯಲ್ಲೂ ಸೂಚ್ಯವಾಗಿ ವ್ಯಕ್ತವಾಗಿದೆ. ಈ ಮೂಲಕ ವಡ್ಡಾರಾಧನೆಯು ತಾನೇ ಸ್ವಯಂಭು ಎನ್ನುವಂತೆ ಚಿತ್ರಿಸಿದ ಪ್ರಭುತ್ವವನ್ನೇ ಕೇಂದ್ರದಿಂದ ಅಂಚಿಗೆ ಸರಿಯಬಲ್ಲ ಸಾಪೇಕ್ಷ ಸ್ವರೂಪವುಳ್ಳದೆಂದೂ ಹೇಳಲು ಹಿಂಜರಿದಿಲ್ಲ. ಆದರೆ ವಡ್ಡಾರಾಧನೆಯಲ್ಲಿ ಪ್ರಭುತ್ವ ಪರಿಕಲ್ಪನೆಯ ಸಾಪೇಕ್ಷತೆಯ ಪ್ರತಿಪಾದನೆಯನ್ನು ಗುರುತಿಸುವಾಗಲೂ, ಧಾರ್ಮಿಕ ಉದ್ದೇಶಕ್ಕನುಸಾರವಾದ ಅಲ್ಲಿನ ಜೈನಮಹಾಪುರುಷರುಗಳ ಯಾದಿಯಲ್ಲಿ ರಾಜಪ್ರಭುತ್ವ, ಬ್ರಾಹ್ಮಣ್ಯಗಳಿಗೆ ಮಣೆಹಾಕಲಾಗಿದೆಯಲ್ಲದೆ, ಐಹಿಕ ಸಂಪತ್ತಿನ ಪ್ರತೀಕಗಳಾದ ವರ್ತಕರಿಗಲ್ಲ ಎನ್ನುವುದನ್ನೂ ಮರೆಯಲಾಗದು.

## ಸಾವಿನ ಏಣಿಯಲ್ಲಿ ಅರಳುವ ಸಾಗರೋಪಮಾಯುಷ್ಯ

ಮತ, ಸಮಾಜ ಮತ್ತು ಅಧಿಕಾರದ ನೆಲೆಯ ಪ್ರಶ್ನೆಗಳನ್ನು ವಿವರಿಸಿಕೊಳ್ಳುತ್ತಾ ರೂಪುವೊಡೆಯುವ ವಡ್ಡಾರಾಧನೆಯ ಕತೆಗಳ ಕೇಂದ್ರ ವಸ್ತು, ಸುಖಲೋಲುಪ್ತ ವರ್ಗದ ಪಾಲಿನ ಆಘಾತಕಾರಿ ಸತ್ಯವಾದ ಸಾವು. ಉಳ್ಳವರ ಐಹಿಕ ದಿವ್ಯತೆಗಳನ್ನು ಅನಿತ್ಯವೆಂದು ಸಾರುವ ನಿತ್ಯಸತ್ಯವಾದ ಸಾವು ಇಲ್ಲಿನ ಅನೇಕ ಕತೆಗಳ ನಾಯಕರುಗಳ ವೈರಾಗ್ಯ ಕಾರಣ ಎಂಬ ನಿರೂಪಣೆ ಇದೆ. ವಾಸ್ತವದಲ್ಲಿ ಜೈನ ಸಮಾಧಿಮರಣಕ್ಕೆ ವಿಶಿಷ್ಟವಾದ ತಾತ್ವಿಕ ನೆಲೆಗಟ್ಟೂ ಇದೆ. ಅದು ಸಾವು ಎರಗಿ ಬಂದಾಗ ಅದನ್ನು ಸ್ವಾಗತಿಸುವ ಒಂದು ದಿವ್ಯವಿಧಾನವನ್ನು ವಿಧಿಬದ್ಧಗೊಳಿಸಿಕೊಂಡ ಕ್ರಮ. ವಡ್ಡಾರಾಧನೆ ಕತೆಗಳು ವಿಶೇಷವಾಗಿ ಒದಗಿಬರುವ ಸಾವನ್ನು ದಿವ್ಯವಾಗಿ ದಾಟುವುದನ್ನು ಹೇಳುತ್ತವೆ. ಅಂದರೆ ಯಾವಜ್ಜೀವ ಆಹಾರಾದಿಗಳನ್ನು ತ್ಯಜಿಸಿ, ದೇವೋಪಸರ್ಗವೇ ಮೊದಲಾದುವನ್ನು ಸೈರಿಸಿ ನಿಶ್ಚಿತವಾದ ಸಾವನ್ನು ಎದುರುಗೊಂಡ ಬಗೆಯನ್ನು ಕಥಿಸುತ್ತವೆ. ಜೊತೆಗೆ "ಶುಭಪರಿಣಾಮದಿಂ ಮುಡಿಪಿ ಸರ್ವಾರ್ಥಸಿದ್ಧಿಯೊಳ್ ಮೂವತ್ತುಮೂಱು ಸಾಗರೋಪಮ ಆಯುಷ್ಯಮನೊಡೆಯೊನ್ ಅಹಮಿಂದ್ರದೇವನಾಗಿ" ಹುಟ್ಟುವ ಕತೆಗಳ ಮೂಲಕ ಹಾಗೆ ದಾಟುವುದರ



ಪರಿಣಾಮವನ್ನೂ ಅವು ಭವ್ಯವಾಗಿಸುತ್ತವೆ. ಹೀಗೆ ಮರಣದ ದಾರಿಯಲ್ಲಿ ಪರೀಷಹೋಪಸರ್ಗಗಳನ್ನು ಗೆಲ್ಲುವ ಪರಮಸಾಧನೆಯಲ್ಲಿ ತೊಡಗಿ, ಸರ್ವಾರ್ಥಸಿದ್ಧಿಯೇ ಮೊದಲಾದ ಸುಖಭೋಗದ ಸ್ವರ್ಗಕಲ್ಪ ಇಲ್ಲವೇ ಜೀವಚಕ್ರದಾಚೆಗಿನ ಮೋಕ್ಷ ಹೊಂದುವುದೇ ಈ ಕತೆಗಳಲ್ಲಿನ ವಸ್ತು. ಪರೀಷಹ ಸುಭಟರನ್ನು ಜಯಿಸಿದ ಇಲ್ಲಿಯ ನಾಯಕರು ಪುರುಷಸಿಂಹರು. ಇವರು ನಿತ್ಯವೆಂದುಕೊಂಡ ಬದುಕಿನ ಸುಖವನ್ನು ಅನಿತ್ಯವಾಗಿಸುತ್ತದೆ ಎನ್ನಲಾದ ಸಾವನ್ನೇ ಸೈರಿಸಬಲ್ಲವರು. ಇವರ ಸೈರಣೆ ಇರುವ ಸುಖವನ್ನೂ ಮೀರಿದ ಪರಮಸುಖದ ಭರವಸೆ ಹುಟ್ಟಿಸುತ್ತವೆ. ಆದರೆ ಈ ಭರವಸೆಯಲ್ಲಿ ಲೌಕಿಕ ಅಧಿಕಾರದ ತಳಹದಿಯಲ್ಲೇ ಕಟ್ಟಿದ ಪ್ರಭುತ್ವದ ರಮ್ಯೀಕರಿಸಿದ ಮಾದರಿಯೇ ಇದೆ. ಸಾವನ್ನು ಧೈರ್ಯವಾಗಿ ದಾಟಿ ಪಡೆವ ಸಾವಿನಾಚೆಗಿನ ಆ ದಿವ್ಯಲೋಕವು ಅಲ್ಪಕಾಲಿಕ ಮರ್ತ್ಯದ ಎದುರಿನ ಅಪರಿಮಿತ ಕಾಲದ ಅಮರ್ತ್ಯ.

ಸೀಮಿತಾಯುಷ್ಯದ ಎದುರಿನ ಅಪರಿಮಿತ ಆಯುಷ್ಯಕಾಲ. ಅಶಾಶ್ವತವಾದ ಮರ್ತ್ಯದ ಎದುರಿನ ಶಾಶ್ವತವೂ, ಭವ್ಯವೂ ಆದ ದೇವಲೋಕವೆಂಬ ಅವಳಿವೈರುಧ್ಯ. ಹೀಗೆ ಇಲ್ಲಿ ವಿರುದ್ಧಸತ್ಯಗಳ ಮೂಲಕವೇ ಸೈರಣೆಯ ಘನತೆ ಹೆಚ್ಚಿಸಿ, ಸಮಾಧಿಮರಣದ ವಿಧಿಯನ್ನು

ಜನಪ್ರಿಯಗೊಳಿಸುವ ತಂತ್ರಗಾರಿಕೆಯಿದೆ. ಸಾವನ್ನು ಧೈರ್ಯವಾಗಿ ಎದುರಿಸಿ ಬದುಕಿಗೆ ಘನತೆ ತಂದುಕೊಳ್ಳಬಹುದೆಂಬ ಭರವಸೆಯ ಬೀಜವೂ ಇದೆ. ಆದರೆ ಈ ಭರವಸೆಯ ಬೀಜದ ಗಮನದಲ್ಲಿ ರಾಜರು, ಶ್ರೇಷ್ಠಿಗಳು ಮತ್ತು ಜೈನವು ಒಳಗೊಳ್ಳಲು ಬಯಸುವ ಮೇಲ್ಸ್ತರದ ಯಜಮಾನ ವರ್ಗಗಳಿವೆ.

ಹಾಗಾಗಿ ಪರೀಷಹಜಯದ ಭಾಗವಾಗಿ ಒತ್ತುಕೊಟ್ಟು

ಹೇಳುವ ಸ್ವೈರಣೆ ಸನ್ಯಾಸಿಗಳ ಮರಣಾವಸ್ಥೆಯ ಭೀಕರತೆಯನ್ನು ಕಣ್ಣೆದುರು ತರುತ್ತದೆಯಾದರೂ, "ಈ ಸ್ವೈರಣೆಯು, ವ್ಯಕ್ತಿಗಳು ಸಾವಿನಲ್ಲಿ ತೋರುವ ಧಾರ್ಮಿಕ ಶ್ರದ್ಧೆಯನ್ನು ಬಿಂಬಿಸುವಂತೆ, ಸಾಮಾಜಿಕವಾಗಿ ಯಥಾಸ್ಥಿತಿವಾದಿ ಮೌಲ್ಯವನ್ನೂ ಸಹ ಪೋಷಿಸುತ್ತದೆ"(ಕತ್ತಿಯಂಚಿನದಾರಿ, ಪು,181). ಹೀಗೆ ವಡ್ಡಾರಾಧನೆ ಜೈನ ಸಂಪ್ರದಾಯವು ತನ್ನ ಅಸ್ತಿತ್ವಕ್ಕಾಗಿ ಅವಲಂಬಿಸಬೇಕಾದ ಅಥವಾ ಉದ್ದೇಶಿಸಿದ ವರ್ಗಕ್ಕೆ ತಕ್ಕಂತೆ, ಅದಕ್ಕೆ ಹಿತವೆನಿಸುವ ಚಿತ್ರವನ್ನೇ ಕೊಡುತ್ತದೆ. ಶ್ರಾವಕವರ್ಗಕ್ಕೆ ರೋಗ ಇಲ್ಲವೇ ಇನ್ನಾವುದೇ ಭೌತಿಕಕಾರಣದಿಂದ ಒದಗಿ ಬರಬಹುದಾದ ಹೀನ ಸಾವನ್ನು ದಿವ್ಯವಾಗಿ ದಾಟುವುದನ್ನೇ ಕಥಿಸುವ ಈ ಮಾದರಿ ಊಳಿಗಮಾನ್ಯ ಸಮಾಜವೊಂದರ ಮುಖ್ಯಕೇಂದ್ರಗಳನ್ನೇ ಗಮನಿಸಿಕೊಂಡು ಹೋಗುತ್ತದೆ. ಈ ಮೂಲಕ ಅಧಿಕಾರಸ್ಥ ಸಮುದಾಯದ ಬೆಂಬಲ ಗಿಟ್ಟಿಸುವ ಮತಪಂಥದ ರಾಜಕೀಯ ಅಪೇಕ್ಷೆಯ ಭಾಗವಾಗಿಯೂ ತೆರೆದುಕೊಳ್ಳುತ್ತವೆ.

## ಮುಗಿಸುವ ಮುನ್ನ

ಹೀಗೆ ಸ್ವೈರಣೆಯ ವೈಭವೀಕರಣದ ವಡ್ಡಾರಾಧನೆಯ ಕತೆಗಳ ವಿಸ್ತಾರವಾದ ಕಥನಬಿತ್ತಿಯಲ್ಲಿ ಲೌಕಿಕ ಹಾಗೂ ಅದನ್ನು ದಾಟಿದ ಲೋಕಾತೀತ ಜಗತ್ತುಗಳೆರಡೂ ಬೆರೆತಿವೆ. ಮತ್ತು ಈ ಲೋಕಗಳು ಐಹಿಕ ಅಡಿಪಾಯದಲ್ಲೇ ಇವೆ. ಆದರೆ ಇಲ್ಲಿ ಐಹಿಕವೆಂದರೆ ಮರಗಿಡ ಬೆಟ್ಟಬಯಲಿನ ಭೌಗೋಳಿಕ ಸತ್ಯವಲ್ಲ. ಅದು ಮನುಷ್ಯರ ನಡುವಿನ ಅಧಿಕಾರ ಸಂಬಂಧದ ಪ್ರಾಪಂಚಿಕ ಪ್ರಭುತ್ವವ್ಯವಸ್ಥೆ. ನಿಸರ್ಗದಂತೆ ಸಹಜವಲ್ಲದ, ಸಹಜ ಬದಲಾವಣೆಗೂ ಒಳಗಾಗದ ಈ ಐಹಿಕದ ಕೇಂದ್ರದಲ್ಲಿ ರಾಜನಿದ್ದಾನೆ. ಈ ರಾಜಪ್ರಭುತ್ವದ ಸಾಂಸ್ಕೃತಿಕ ರಚನೆಯ ಕೇಂದ್ರದಲ್ಲಿ ಬ್ರಾಹ್ಮಣ ಅಥವಾ ಮಂತ್ರಿ ಇದ್ದಾನೆ. ವಡ್ಡಾರಾಧನೆಯ ಕಥಾಜಗತ್ತು ಇಂತಹ ನಾಯಕಮಾನ್ಯತೆಯ ಊಳಿಗಮಾನ್ಯ ಸಾಮಾಜಿಕ ಸಂಬಂಧವನ್ನಾಧರಿಸಿದ ಐಹಿಕ. ಈ ಐಹಿಕದಲ್ಲಿ ಅಧಿಕಾರದ ಅನುವಂಶಿಕ ಮುಂದುವರಿಕೆಯ ನಿದರ್ಶನ ಮತ್ತು ಆಶಯಗಳೆರಡೂ ಇವೆ. ಜೈನ ಪಾಂಥಿಕ ಉದ್ದೇಶದ ಈ ಕತೆಗಳ ಐಹಿಕದಲ್ಲಿ ಪಾರಂಪರಿಕ ಸಾಮಾಜಿಕ ಸಂಬಂಧಗಳ ಪಾಲನೆಯೇ ಪ್ರತಿಪಾದಿತವಾಗಿದೆ. ಅದರ ವಿರುದ್ಧವಾದ ಪ್ರತಿರೋಧದ ಕಿರುದನಿಗಳ ನಡುವೆಯೂ ಸಾಮಾನ್ಯವಾದ ಒಂದು ತೃಪ್ತಿಯೇ ಅಲ್ಲಿ ವ್ಯಕ್ತವಾಗಿದೆ. ಈ ಸಾಮಾಜಿಕ ರಚನೆಯನ್ನು ಮಾನ್ಯಮಾಡಿಕೊಂಡೇ ಕತೆಗಳು ತಮ್ಮ ಧಾರ್ಮಿಕ ಉದ್ದೇಶಗಳ ಈಡೇರಿಕೆಗೆ ಯತ್ನಿಸಿವೆ. ಹೀಗೆ ಪ್ರಭುತ್ವ, ವರ್ಣ, ಲಿಂಗವೆಂಬ ಬಹುವಿಧಗಳ ಯಜಮಾನ್ಯದ ಮಾದರಿಗಳನ್ನು ಸುರಕ್ಷಿತವಾಗಿ ಮುನ್ನಡೆಸುವ ಈ ಕತೆಗಳಲ್ಲಿ ಹೆಚ್ಚೂ ಕಡಿಮೆ ಮಧ್ಯಕಾಲೀನಯುಗದ ಲೌಕಿಕ ಅಧಿಕಾರಜಗತ್ತಿನ ಪ್ರತಿಬಿಂಬವೇ ಇದೆ. ಹಾಗಾಗಿಯೇ ಈ ನಾಯಕಕೇಂದ್ರಿತ, ಸುಖಲೋಲುಪ್ತ ಮಾದರಿ ಉನ್ನತಾವಸ್ಥೆಯನ್ನು ಆತ್ಮದ ಉತ್ಕರ್ಷಾವಸ್ಥೆಯಾಗಿ ಬಿಂಬಿಸಿದೆ. ರಾಜ್ಯಸಂಸ್ಕೃತಿಯ ಈ ಲೌಕಿಕ ಸ್ವರೂಪವು ಕೇವಲ ಲೋಕಸಂದರ್ಭಕ್ಕಷ್ಟೇ

ಸೀಮಿತವಾಗದೆ, ವಡ್ಡಾರಾಧನೆ ಒಳಗೊಳ್ಳುವ ಲೋಕಾತೀತಕ್ಕೂ ಅನ್ವಯವಾಗಿದೆ. ಇಲ್ಲಿನ ಸ್ವರ್ಗಗಳೂ ಅಧಿಕಾರ ಶ್ರೇಣೀಕರಣದ ಮಾದರಿಯಲ್ಲೇ ಇವೆ. ಮುಖ್ಯವಾಗಿ ಈ ಕತೆಗಳನ್ನು ಕಟ್ಟಿದ ಜೈನಮನಸ್ಸಿಗೆ ಚಾಲ್ತಿಯ ಸಾಮಾಜಿಕ ಸಂರಚನೆಯನ್ನು ವಿರೋಧಿಸುವ ಇಲ್ಲವೇ ಬದಲಾಯಿಸುವ ಆಶಯ ಇದ್ದಂತಿಲ್ಲ. ಬದಲಾಗಿ ಸ್ಥಾಪಿತ ಅಧಿಕಾರ ಕೇಂದ್ರಗಳನ್ನೇ ಬಳಸಿಕೊಂಡು ಜಿನಧರ್ಮದ ಮೂಲಕವಾಗಿ ಪಡೆಯಬಲ್ಲ ಶಾಶ್ವತವಾದ ಜ್ಞಾನ ಹಾಗೂ ಸುಖಗಳನ್ನು ಸಾರುವ ಉದ್ದೇಶವಿದೆ. ಯಾಕೆಂದರೆ ವಡ್ಡಾರಾಧನೆಯ ಕತೆಗಳ ನಿಲುವಿನಲ್ಲಿ ಮೂಲತಃ ನಮ್ಮ ಸಮಾಜದ ಅಧಿಕಾರಸ್ಥ ನೆಲೆಗಳಿಗೆ ಪ್ರತಿರೋಧ ಕಡಿಮೆ. ಇವು ಅಧಿಕಾರಸ್ಥರ ವಿರುದ್ಧ ದಂಗೆಹೂಡುವ ಅಧಿಕಾರರಹಿತ ದುರ್ಬಲರನ್ನು ಒಳಗೊಳ್ಳುವ ಜನಪದ ಕತೆಗಳಂತಲ್ಲ. ಹಾಗಾಗಿ ರಾಜತ್ವ ಎನ್ನುವ ಸಂಸ್ಥೆಯ ಕುರಿತಂತೆ, ಮತಧರ್ಮದ ಸಂಕೇತಗಳ ಕುರಿತಂತೆ ಇಲ್ಲಿ ಯಾವುದೇ ತಕರಾರು ಇದ್ದಂತಿಲ್ಲ. ಅಂತೆಯೇ ಹೆಣ್ಣಿನ ಪ್ರಶ್ನೆಯನ್ನೂ ಲಿಂಗರಾಜಕಾರಣದ ನೆಲೆಗಿಂತ ಭಿನ್ನವಾಗಿ ಅದು ಸಾಂಪ್ರದಾಯಿಕ ಪುರುಷವಾದಿ ಸಾಮಾಜಿಕ ಆವರಣದ ಯಥಾರೂಪದಲ್ಲಿಯೇ ಮಂಡಿಸಿದೆ ಎನ್ನಬೇಕು.

ವಡ್ಡಾರಾಧನೆ ಕತೆಗಳ ಅನೇಕ ಕಡೆ ದ್ವಂದ್ವಾತ್ಮಕ ವಿನ್ಯಾಸವಿದೆ. ಹಾಗಾಗಿ ಇಲ್ಲಿ ಕಾರಣಗಳು ಸಾಪೇಕ್ಷಗಳಾಗುತ್ತವೆ. ಅವುಗಳನ್ನು ಶಾಶ್ವತಗೊಳಿಸಲಾಗಿಲ್ಲ. ಉದಾಹರಣೆಗೆ ತಂದೆಯೇ ಮಗಳನ್ನು ಮದುವೆಯಾದ ಪ್ರಸಂಗವು ಹೆಂಡತಿಯಲ್ಲಿ ಬ್ರಹ್ಮಚರ್ಯ ವ್ರತವನ್ನು ಪ್ರೇರೇಪಿಸುತ್ತದೆ. ಮಗನಲ್ಲಿ ವೈರಾಗ್ಯಕ್ಕೆ ಕಾರಣವಾಗುತ್ತದೆ. ಆದರೆ ಅದುವೇ ಪ್ರಸಂಗವು ಮಗಳಾಗಿ ಹುಟ್ಟಿ ಹೆಂಡತಿಯಾಗಿ ಬಾಳಿದ ಕೃತ್ತಿಕೆಯಲ್ಲಾಗಲೀ, ಕೃತ್ತಿಕೆಯಲ್ಲಿ ಹುಟ್ಟಿದ ವೀರಶ್ರೀಯಲ್ಲಾಗಲೀ ಯಾವುದೇ ವೈರಾಗ್ಯಕ್ಕೆ ಕಾರಣವಾಗಿಲ್ಲ. ಹೀಗೆ ಒಂದೇ ಘಟನೆ ಒಬ್ಬರಲ್ಲಿ ವಿರಕ್ತಿಗೆ ಕಾರಣವಾದರೆ, ಇನ್ನೊಬ್ಬರಲ್ಲಿ ಅನುರಕ್ತಿಯ ಅನುಭೂತಿಗೆ ಕಿಂಚಿತ್ತೂ ತೊಡಕುಂಟುಮಾಡದೆ ಸಂಸಾರ ಸುಖದಲ್ಲಿ ತೊಡಗಿಸುತ್ತದೆ. ಈ ಸತ್ಯಗಳೆರಡನ್ನೂ ವಡ್ಡಾರಾಧನೆಯ ಕತೆಗಳು ಹಿಡಿದುಕೊಡುತ್ತವೆ. ಅಷ್ಟೇ ಅಲ್ಲ, ಒಬ್ಬನೇ ವ್ಯಕ್ತಿಯಲ್ಲಿಯೂ ಈ ಬಗೆಯ ವೈರುಧ್ಯಗಳನ್ನೂ ವಡ್ಡಾರಾಧನೆಯ ಕತೆಗಳು ಹಿಡಿದಿಟ್ಟಿವೆ. ಉದಾಹರಣೆಗೆ ನಿಜವಾದ ಅಣ್ಣನೇ ಸವಣನಾಗಿ ಬಂದಾಗ ಅನುಮಾನಪಟ್ಟು ಶಕ್ತ್ಯಾಯುಧದಿಂದ ತಿವಿದ ಕ್ರೌಂಚನೇ, ಪಗರಣದ ಸವಣನನ್ನು ಆಕೆಯ ಸಹೋದರರಾದ ಭಟಾರರೆಂದೇ ಪರಿಚಯಿಸುವ ಮೂಲಕ ಸಹೋದರ ಸಂಬಂಧವನ್ನು ಕಲ್ಪಿಸುತ್ತಾನೆ. ಅದಲ್ಲದೆ ಸಾಮಾಜಿಕ ಸಂದರ್ಭದ ನಿರಾಕರಣ ಮತ್ತು ಪುರಸ್ಕರಣದ ಭಿನ್ನ ವಿನ್ಯಾಸಗಳೂ ಇಲ್ಲಿವೆ. ಉದಾಹರಣೆಗೆ ವೀರಶ್ರೀಯ ಮಾತು, ಅಭಿಪ್ರಾಯಗಳನ್ನು ಮನ್ನಿಸದೆ ಹೆಣ್ಣಿನ ಅನಿಸಿಕೆಗಳನ್ನು ನಿರಾಕರಿಸಿದ ಕಾರ್ತಿಕಋಷಿ ಕತೆಯಲ್ಲೇ ಕೃತ್ತಿಕೆಯ ಜಲಕ್ರೀಡೆಯ ಬಯಕೆ ತಣಿಸಲು ಕೊಳದ ನಿರ್ಮಾಣವಾದರೆ ವೀರಶ್ರೀಯ ಸವಣನ ಕಡೆಗಿನ ಒಲವು ತಣಿಸಲು ಪಗರಣಿಗರನ್ನು ಕರೆಸಲಾಗುತ್ತದೆ. ಇನ್ನು ಮತವೈರುಧ್ಯದ ನೆಲೆಯಲ್ಲಿ ಜೈನಮತಕ್ಕೆ ಸವಾಲಾದ ಬ್ರಾಹ್ಮಣರನ್ನು ಜೈನಕ್ಕೆ ಶತ್ರುಗಳಾಗಿ, ಸ್ಪರ್ಧಿಗಳಾಗಿ ಕಂಡಂತೆಯೇ, ಅನುಕರಣೀಯ ಮಾದರಿಗಳಾಗಿಯೂ ಪರಿಗಣಿಸಲಾಗಿದೆ. ಅಂತೆಯೇ ಕತೆಯ ಆಂತರಿಕ ಜಗತ್ತು

ಜಾತಿಪದ್ಧತಿ, ಅಸ್ಪೃಶ್ಯತೆಗಳಿಗೆ ತಾತ್ವಿಕ ಸಮ್ಮತಿ ತೋರಿಸಿಯೂ, ಬ್ರಾಹ್ಮಣರ ಧಾರ್ಮಿಕ ಯಜಮಾನಿಕೆಯನ್ನು ನಿರಾಕರಿಸುತ್ತದೆ. ಇಷ್ಟೇ ಅಲ್ಲದೆ ಜೈನಧರ್ಮದ ತಾತ್ವಿಕ ಆಶಯಕ್ಕೆ ಪೂರಕವಾಗಿ ಮೋಕ್ಷದ ಪ್ರತಿಪಾದನೆಯ ಜೊತೆಗೆ ಲೌಕಿಕಅಧಿಕಾರದ ಛಾಯಾರೂಪವೇ ಆದ ಸ್ವರ್ಗಸುಖದ ವಿವರಗಳು ಯಥೇಚ್ಛವಾಗಿ ಬರುತ್ತವೆ.

ಲೌಕಿಕ ಅಧಿಕಾರ ಜಗತ್ತಿನಲ್ಲಿ ತನ್ನ ಪ್ರಸ್ತುತತೆಯನ್ನು ಕಾಯ್ದುಕೊಳ್ಳಲು ಬೇಕಾದ ಮತೀಯ ಅಸ್ಮಿತೆಯ ಪ್ರತೀಕಗಳನ್ನು ವಡ್ಡಾರಾಧನೆ ಸ್ಪಷ್ಟವಾಗಿಯೇ ಮುಂದೊತ್ತುವ ಯತ್ನ ಮಾಡಿದೆ. ಅದರ ಭಾಗವಾಗಿ ಬ್ರಾಹ್ಮಣ್ಯವನ್ನು ಮೀರಿದ ಋಷಿಯರ ಅವಸ್ಥೆ; ವೈದಿಕ ಮುಕ್ತಿಗಿಂತ ಸರ್ವಶ್ರೇಷ್ಠವಾದ ಮೋಕ್ಷಕಲ್ಪನೆ; ಉಚ್ಚ-ನೀಚ ಜನ್ಮಪ್ರಭೇದಗಳ ವಾಸ್ತವವನ್ನು ಮೀರುವ ಸಾಧ್ಯತೆಯಾಗಿ ಜೈನ ಶ್ರಾವಕಾಚಾರ; ಜೈನ ತಪೋಮಾರ್ಗ ಹಾಗೂ ಸಮಾಧಿಮರಣದ ಸೈರಣೆಯು ಕಾರಣದಿಂದ ಪಡೆದ ಅನಂತಸುಖದ ಮಾದರಿಯಾದ ಸರ್ವಾರ್ಥಸಿದ್ಧಿಯಲ್ಲಿನ ಅಹಮಿಂದ್ರ ಇಲ್ಲವೇ ಸಯಸತ್ತದೇವನ ಅವಸ್ಥೆಗಳು ಇಲ್ಲಿ ಮತ್ತೆ ಮತ್ತೆ ಪುನರಾವರ್ತಿಯಾಗುತ್ತವೆ. ಇಷ್ಟಕ್ಕೇ ಕತೆಯ ಉದ್ದೇಶಗಳೆಲ್ಲವೂ ಈಡೇರಿತು ಎಂದಲ್ಲ. ವಡ್ಡಾರಾಧನೆಯ ಕರ್ತೃವಿಗೆ ಈ ಎಚ್ಚರವಿದೆ. ಕತೆಯ ವಸ್ತುವಿನಷ್ಟೇ ಪ್ರಾಮುಖ್ಯತೆ ಅದರ ಭಾಷಿಕ ನಿರ್ವಹಣೆಗಿದೆ. ಕತೆಯಲ್ಲಿ ಏನಿದೆ ಎನ್ನುವಷ್ಟೇ ಪ್ರಾಮುಖ್ಯತೆ ಅದನ್ನು ಹೇಗೆ ಹೇಳಲಾಗಿದೆ ಎನ್ನುವ ಕಡೆಗಿದೆ ಎಂಬ ಎಚ್ಚರ ವಡ್ಡಾರಾಧನೆಕಾರನಿಗೆ ಇದೆ. ಹಾಗಾಗಿ ವಡ್ಡಾರಾಧನೆ ತನ್ನ ಚಿತ್ರಗಳನ್ನು ಅಷ್ಟೇ ಹದವಾದ ಭಾಷಿಕ ಆವರಣದಲ್ಲಿ ಕಟ್ಟುತ್ತದೆ. ಪ್ರಮುಖವಾಗಿ ಅದು ತನ್ನ ಕತೆಯ ಮಾಧ್ಯಮವಾಗಿ ಲೋಕಭಾಷೆಯಾದ ಕನ್ನಡವನ್ನು ಆಯ್ದುಕೊಂಡಿದೆ. ಅಲ್ಲಿ ಸಂಸ್ಕೃತದ ಬಳಕೆ ನಡುವೆಯೂ ಅಚ್ಚುಕಟ್ಟಾದ ಮತ್ತು ಸೊಗಸಾದ ದೇಸೀ ನುಡಿಗಟ್ಟುಗಳನ್ನು ಹದವಾಗಿ ಬೆರೆಸಿಟ್ಟಿದೆ. ಹುಟ್ಟುಗುರುಡಿ, ಗೋಸನೆ, ಬಿರ್ದಿ, ಬಸಿರ್ಪೆಂಡಿತಿ, ಬ್ರಹ್ಮಯ್ಯ, ಕಿತ್ತಯ್ಯ, ತವಿಸಿ, ನಿಸಿದಿಗೆ, ಬ್ರತ, ಕಟ್ಟಿಪ್ಪು, ಕಿಚ್ಚು, ಪುಸಿ, ತಳಾರ ಇತ್ಯಾದಿ ಜನಭಾಷೆಯ ರೂಪಗಳ ಯಥೇಚ್ಛ ಬಳಕೆಯಿಂದ ಕಥನದ ಸ್ಥಳೀಕರಣದಲ್ಲಿ ಅದು ಯಶಕಂಡಿದೆ. ಹೀಗೆ ಜನ ಮಾತಾಡುವ ಧಾಟಿಯಲ್ಲೇ ಆಡುನುಡಿಯನ್ನು ಹಿಡಿದಿಟ್ಟು ಕೊಟ್ಟ ವಡ್ಡಾರಾಧನೆಯಲ್ಲಿ ಆ ಕಾಲದ ದೇಸಿಮಾತು ಸರಳತೆ ಮತ್ತು ಶಕ್ತಿಯೊಂದಿಗೆ ಮೈದೋರಿ ಅದರ ಸಂವಹನಶಕ್ತಿಯನ್ನು ಹೆಚ್ಚಿಸಿದೆ. ಕೇವಲ ಪದಬಳಕೆಯಲ್ಲಷ್ಟೇ ಅಲ್ಲ ವಾಕ್ಯರಚನೆಯ ನೆಲೆಯಿಂದಲೂ ವಡ್ಡಾರಾಧನೆ ಗಮನ ಸೆಳೆಯುತ್ತದೆ. ಸಮಾಸಯುಕ್ತ ದೀರ್ಘವಾಕ್ಯಗಳ ನಡುವೆ ಬರುವ ಅದರ ಸಾಮಾನ್ಯಗಾತ್ರದ ವಾಕ್ಯಗಳೋ, ಪ್ರತಿಮಾತುಗಳ ಸರಣಿಯಲ್ಲಿ ಬರುವ ಸಂಭಾಷಣೆಯ ತುಂಡುವಾಕ್ಯಗಳೋ ದೇಸೀಸೊಗಸಿನ ಸ್ಪರ್ಶಪಡೆದು ಆಪ್ತವಾಗುತ್ತವೆ. ಇನ್ನು ಕಥನ ತಂತ್ರದ ಭಾಗವಾಗಿ ಕತೆಯೊಳಗೇ ಅನೇಕ ಉಪಕತೆಗಳನ್ನು ಹೆಣೆಯುವ ವಡ್ಡಾರಾಧನೆ ಆಪ್ತವಾಗಿ ಕತೆಹೇಳುತ್ತಲೇ ತನ್ನನ್ನು ಒಪ್ಪಿಕೊಳ್ಳುವ ಒತ್ತಾಸೆಯನ್ನು ಉಂಟುಮಾಡುತ್ತದೆ. ಈ ಎಲ್ಲಾ ತಂತ್ರಗಳ ಬಳಕೆಯ ಮೂಲಕ ಜೈನಧರ್ಮ ಮತ್ತು ಜೈನ ಯತಿಗಳೇ ಮೇಲೆನಿಸುವ ಜೈನ ತಾರತಮ್ಯಕ್ಕೆ ವಡ್ಡಾರಾಧನೆ ಯತ್ನಿಸಿದೆ. ಈ ಉದ್ದೇಶ ಸಾಧನೆಗೆ ಬೇಕಾದ ಮಾದರಿಯನ್ನು ಅದು ಲೌಕಿಕದಿಂದಲೇ ಎತ್ತಿಕೊಳ್ಳುತ್ತದೆ. ಲೌಕಿಕ ಅಧಿಕಾರವನ್ನುದ್ದೇಶಿಸಿದ ನಿರೂಪಣೆಗೆ ಲೋಕದ ಮಾನದಂಡವನ್ನೇ ಬಳಸುವ

ವಡ್ಡಾರಾಧನೆ ಅದರ ಮೂಲಕವೇ ಲೋಕೋತ್ತರ ಎನ್ನಲಾಗುವ ಕಲ್ಪಿತವನ್ನೂ ಹೆಣೆಯುತ್ತದೆ. ಹೀಗೆ ವಡ್ಡಾರಾಧನೆಯ ಜೈನಮತವು ಲೋಕಭಾಷೆಯನ್ನೇ ಬಳಸಿ ಲೋಕಸಂಬಂಧದ ಚಹರೆಗಳನ್ನೇ ತೆರೆದುತೋರಿ ಲೋಕವನ್ನು ಮೀರುವ ಪಾಠ ಹೇಳಿದೆ. ಮತ್ತದೇ ಹೊತ್ತಿನಲ್ಲಿ ತನ್ನ ಶ್ರಾವಕಾಚಾರವನ್ನು ನೆಲೆಗೊಳಿಸಿ ಸ್ಥಾಪಿಸಿಕೊಳ್ಳಲೂ ಹವಣಿಸಿದೆ.

**ಪರಾಮರ್ಶನ ಸಾಹಿತ್ಯ:**


1. ಕೆ. ಪಣಿರಾಜ್, ಅಂಟೋನಿಯೊ ಗ್ರಾಮ್ಷಿ, ಅಭಿನವ ಪ್ರಕಾಶನ ಬೆಂಗಳೂರು,2003
2. ಡಿ.ಎಲ್.ನರಸಿಂಹಾಚಾರ್(ಸಂ), ಶಿವಕೋಟ್ಯಾಚಾರ್ಯ ವಿರಚಿತ ವಡ್ಡಾರಾಧನೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು,1998
3. ಡಿ.ಆರ್.ನಾಗರಾಜ್, ಸಾಹಿತ್ಯ ಕಥನ,ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ, 1996,2006
4. ರಹಮತ್ ತರೀಕೆರೆ ಕತ್ತಿಯಂಚಿನ ದಾರಿ 2006,ಅಭಿನವ ಪ್ರಕಾಶನ ಬೆಂಗಳೂರು
5. ಬಿ.ಎಂ ಪುಟ್ಟಯ್ಯ, ಕಾರ್ತಿಕಋಷಿ ಕಥೆಯ ಭೌತವಾದಿ ವಿಶ್ಲೇಷಣೆ, ಕನ್ನಡ ಅಧ್ಯಯನ ಸಂಪುಟ–6 ಸಂಚಿಕೆ–1,ಜುಲೈ–ಸೆಪ್ಟೆಂಬರ್ 1999, ಕನ್ನಡ ವಿಶ್ವವಿದ್ಯಾಲಯ ಹಂಪಿ
6. ರಾಜಾರಾಮ ಹೆಗಡೆ, ವಡ್ಡಾರಾಧನೆ:ಲೌಕಿಕ ಅಧಿಕಾರ ಮತ್ತು ಮಧ್ಯಕಾಲೀನ ಜೈನಮತ, ಕನ್ನಡ ಅಧ್ಯಯನ ಸಂಪುಟ–7,ಸಂಚಿಕೆ–1,ಜುಲೈ–ಸೆಪ್ಟೆಂಬರ್ 2000, ಕನ್ನಡ ವಿಶ್ವವಿದ್ಯಾಲಯ ಹಂಪಿ
7. ಹಂಪ ನಾಗರಾಜಯ್ಯ, ವಡ್ಡಾರಾಧನೆ�ಕೃತಿಪರಿಶೀಲನೆ, ಸಮಗ್ರಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ–2, ಬೆಂಗಳೂರು ವಿಶ್ವವಿದ್ಯಾಲಯ, 1975,
8. ಟಿ.ಆರ್.ಚಂದ್ರಶೇಖರ, 'ಅಭಿವೃದ್ಧಿಯು ಒಳಗೊಳ್ಳುವ ಸಂಗತಿಗಳಾವುವು?..', ಹೊಸತು ಮಾಸಪತ್ರಿಕೆ ಜುಲೈ 2015,
9. ಶೇಷಶಾಸ್ತ್ರಿ, ಶಾಸನ ಪರಿಚಯ, ಬೆಂಗಳೂರು ವಿಶ್ವವಿದ್ಯಾಲಯ, 1982
10. ಚಿದಾನಂದಮೂರ್ತಿ ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, 1966


(2015 ರ ಫೆಬ್ರವರಿಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಅರಸಿಕೆರೆಯಲ್ಲಿ ಆಯೋಜಿಸಿದ್ದ ಕಥಾಕಮ್ಮಟದಲ್ಲಿ ಮಾಡಿದ ಭಾಷಣದ ಲೇಖನ ರೂಪ)

■



## ಡಿ.ಎನ್.ಶ್ರೀನಾಥ್ ಅನುವಾದಿಸಿದ ಕವಿತೆಗಳು

# ಮಂದಬುದ್ಧಿ

**ಅಸ್ಸಾಮಿ ಮೂಲ : ನೀಅಮಾ ಠಾಕುರಿಯಾ ಹಕ್**

ನಾನೊಂದು ಮಂದಬುದ್ಧಿಯ ಶಿಶು
ಮುವತ್ತನೇ ವಯಸ್ಸಿನಲ್ಲಿ ಕಲಿತೆ ನಡೆಯಲು
ನಲ್ವತ್ತನೇ ವಯಸ್ಸಿನಲ್ಲಿ ಸಾಧ್ಯವಾಯಿತು ಮಾತನಾಡಲು

ಸಾಧ್ಯವಾಯಿತು ಐವತ್ತನೇ ವಯಸ್ಸಿನಲ್ಲಿ ವರ್ಣಮಾಲೆ ಕಲಿಯಲು
ಅರವತ್ತನೇ ವಯಸ್ಸಿನಲ್ಲಿ ಬಹುಶಃ
ಸಾಧ್ಯವಾಗುವುದೇನೋ ಅಕ್ಷರಗಳನ್ನು ಗುರುತಿಸಲು –
ಎರಡು ಒಂದು ಮೂರು ಆಗುತ್ತದೆ ಕಲಿಯುತ್ತಾ–
ಕಲಿಯುತ್ತಾ
ಜೀವನದ ಕೊನೆಯಾಗುತ್ತದೆ ಬಹಶಃ
'ಆದರೂ ಸರಿಯೇ', ಪಿಸುಗುಟ್ಟಿದರು ಒಬ್ಬರು
'ಏನೂ ತಿಳಿಯದಿದ್ದಾಗ , ಏನೂ ಕಲಿಯದಿದ್ದಾಗ
ಬದುಕಿನ ಬೆಂಕಿ ಸುಡಲಿಲ್ಲ ಅವನನ್ನು
ವೃದ್ಧ ಶಿಶು ಅವನು. ಶಿಶು ಬುದ್ಧ. '
'ಸರಿ , ಸರಿ , ಸರಿ'

ಹೇಳಿಕೊಂಡೆ ನನಗೆ ನಾನೇ
ಹೊರಳಾಡಿದೆ ಬಿಸಿಲಿನಲ್ಲಿ ,
ಇಟ್ಟುಕೊಂಡೆ ಮಣ್ಣಿನ ತಿಲಕ
ನನ್ನ ಮರಳಿನ ರೇಖೆಗಳು
ಮುಗುಳ್ನಕ್ಕವು ಚಿಗುರಿ.

## ನಿರ್ವಾಣ

**ಗುಜರಾತಿ ಮೂಲ : ನಿತೀನ್ ಮೆಹ್ತಾ**

ನನ್ನ ಮೆದುಳಿನಲ್ಲಿ ಕೂತು
ಬುದ್ಧ ಮತ್ತು ಮೈದಾಸ
ಚೆಸ್ ಆಡುತ್ತಾರೆ
ಎರಡೂ ಕಡೆಯಿಂದಲೂ ನಾನು
ಆಡುತ್ತೇನೆ ಆಟ
ಮತ್ತು ಸೋಲುತ್ತೇನೆ .

ಬುದ್ಧ ಸಾಸಿವೆ ಕಾಳಿನ
ದಾಳದಲ್ಲಿ ಸಾಗುತ್ತಾರೆ
ಮೈದಾಸ ಸ್ಪರ್ಶದ
ದಾಳದಲ್ಲಿ ಸಾಗುತ್ತಾನೆ ಮತ್ತು
ನಾನು ಬಿರುಕುಬಿಟ್ಟ ಕನ್ನಡಿಯಲ್ಲಿ
ಅಸಂಖ್ಯ ರಾಗಿ ಕಾಳುಗಳಾಗಿ
ಉದುರುವ ಸುವರ್ಣದ ಕಣ್ಣೀರಾಗಿ
ಜನ್ಮತಾಳುತ್ತೇನೆ .

ಆದರೂ ನಾನೇನೂ ಮಾಡಲಾರೆ
ಯಾಕಾಗಿ ಏನಾದರೂ ಮಾಡಬೇಕು?
ನಾನಂತೂ ಬುದ್ಧನಾಗಲಾರೆ
ಮೈದಾಸನೂ ಆಗಲಾರೆ

ಬೇರೇನೂ ಆಗದಾದೆ
ಮತ್ತೆ ಹೀಗೆಲ್ಲವೂ ಹಾಗೂ ಏನೂ ಇಲ್ಲ .
ಬೋಧಿವೃಕ್ಷದ ನೆರಳಿನಲ್ಲಿ ಚೆಲ್ಲಿದ
ಸುವರ್ಣದ ರಾಗಿಯ ಕಾಳುಗಳಲ್ಲಿ ಮೈದಾಸನಿಗೆ
ಬುದ್ಧನಾಗುವ ಕನಸು ಬೀಳುತ್ತದೆ
ಆಗ ಒಮ್ಮೆಲೆ ಅನೇಕ
ಅನೈತಿಹಾಸಿಕ ಸಮಯದಲ್ಲಿ
ಆಗುತ್ತದೆ ನನ್ನ ನಿರ್ವಾಣ!

## ಅನಾಮಧೇಯ ಪತ್ರಕರ್ತನೊಬ್ಬನ ಚೀಲದಲ್ಲಿ

**ಒರಿಯಾ ಮೂಲ : ಮಾನಸ್‌ರಂಜನ್ ಮಹಾಪಾತ್ರ**

ದೂಷಿತ ಗಲ್ಲಿಯ ಆ ಹುಡುಗಿ
ತಲೆ ಎತ್ತದಾದಳು ಈಗ
ಹೋರಾಡಿದಳು ಸಮಾಜದೊಂದಿಗೆ ಬಹಳ
ಪಡೆಯಲು ತನ್ನ ಪರಿಚಯ
ಯಾಚಿಸಿದಾಗ ತನ್ನ ಹಕ್ಕನ್ನು
ಪೆಟ್ಟು ತಿಂದಳು ಚಪ್ಪಲಿಯಿಂದ
ಸುಟ್ಟಳು ಸಿಗರೇಟಿನಿಂದ
ಮುಳುಗಿದಳು ಮದ್ಯದ ಪೆಗ್‌ನಲ್ಲಿ
ಮಹಾನಗರದ ಕೆಂಪು-ಹಸಿರು , ನೀಲಿ-ಹಳದಿ
ಬೆಳಕಿನಲ್ಲಿ ದೇಹಕ್ಕಂಟಿದ ತೆರೆದ ವಸ್ತ್ರಗಳನ್ನು
ತ್ರಿವರ್ಣ ಮಾಡಿ ಹಾರಿಸಿದಳು
ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ ಆದಳು

ತಲೆ ಎತ್ತಿದಾಗ ನಗ್ನಗೊಂಡಳು
ಬಾಗಿಸಿ ಎದೆಯ ಮಣ್ಣನ್ನು ತುರುಕಿಕೊಂಡಳು
ದೇವಿಯಾದಳು ಆಗ , ಕಣ್ಣಾದಳು

## ಅನಿಕೇತನ ।೧೦೮



ಅವಳ ಹಾದಿಯ ಮಣ್ಣು
ತಿಲಕವಾಯಿತು
ಅವಳ ಅಂಗವಸ್ತ್ರಗಳು ದೇವಸ್ಥಾನದ ಧ್ವಜಗಳಾದವು
ಹೊಸ-ಹೊಸ ವೇಷದಲ್ಲಿ ಅವಳೂ ಚಿತ್ರಿತಗೊಂಡಳು

ಆ ಅನಾಮಧೇಯ ಗಲ್ಲಿಯ ಹುಡುಗಿ
ತಿಳಿಯಲಿಲ್ಲ ತಲೆ ಎತ್ತಬೇಕೆಂಬ ಅನಿವಾರ್ಯತೆಯನ್ನು
ಮರೆತಳು ಒಂದು ಕಾಲದಲ್ಲಿ  ತನ್ನದೂ ತಲೆಯಿತ್ತೆಂದು
ಬಾಂಬ್ ಆದಳು ಅವಳು
ಸ್ಫೋಟದಲ್ಲಿ ದೊಡ್ಡ-ದೊಡ್ಡ ಕಟ್ಟಡಗಳು
ಕುಸಿದವು ನಗರ ಮತ್ತು ಹಳ್ಳಿಗಳು

ಬರೆದರು ಪ್ರಾಚೀನ ಶೋಧ ತಜ್ಞರು-
ಮಹಿಳಾ ಕೇಂದ್ರಿತ ನಾಗರಿಕತೆಯಿತ್ತು ಒಂದು ಕಾಲದಲ್ಲಿ
ಇಲ್ಲಿ.


# ಮೌನ ಮಾಲಿನ್ಯ

**ತೆಲುಗು ಮೂಲ : ಕೊಂಡೆಪೋಗು ಬಿ. ಡೇವಿಡ್ ಲಿವಿಂಗ್‌ಸ್ಟನ್**

ಧ್ವನಿ ಅಲ್ಲ, ಮೌನವೇ
ದೊಡ್ಡ ಸಮಸ್ಯೆ ಇಂದು
ಮನೆ-ಮನೆಯಲ್ಲಿ ಬಣ್ಣದ ಅಂಧಕಾರ
ಸರಿದು ವಾಯುಮಂಡಲದಿಂದ
ಸುತ್ತುವರೆಯುತ್ತಿದೆ ಮನುಷ್ಯನ ಗೋಡೆಗಳು
ಈಗೆಲ್ಲವೂ ಸೌಂಡ್-ಪ್ರೂಫ್
ಯಾರೊಂದಿಗೂ ಇಲ್ಲ ಸಂವಾದ
ಪ್ರತಿಯೊಬ್ಬರಿಗೂ ಅವರದೇ ಆದ ಒಂದು ಜಗತ್ತಿದೆಯಲ್ಲ !
ನೆಟ್‌ನಿಂದ ಶಬ್ದಗಳನ್ನು ರದ್ದು ಮಾಡಿದ ಮೇಲೆ
ಚಿಕ್ಕ ಬಟ್ಟೆಯಿಂದ ಬಾಯಿಯನ್ನು ಕಟ್ಟಿದ ನಂತರ
ಕಂಪ್ಯೂಟರ್‌ನಿಂದ ಕರ್ಫ್ಯೂ ವಿಧಿಸಿದ ನಂತರ
ಉಳಿದಿದೆ ಈಗೇನು , ಸ್ಮಶಾನದ ಮೌನವನ್ನು ಹೊರತುಪಡಿಸಿ?
ಗ್ಲೋಬಲ್ ಹಳ್ಳಿಯಲ್ಲಿ ಕೋಗಿಲೆ ಹಾಡಿನ ಬಯಕೆ?
ಮಾನವ ಈಗ ಶಬ್ದ-ದಾರಿದ್ರ್ಯದಲ್ಲಿ ಗ್ರಸ್ತನಾಗಿದ್ದಾನೆ
ಸ್ಪರ್ಧೆಯ ಬಿರುಗಾಳಿಯಲ್ಲಿ ಹರಿಯುತ್ತಿದ್ದಾನೆ
ಆಟಗಳಿಂದ ವಂಚಿತಗೊಂಡ ಬಾಲ್ಯ
ಆತ್ಮೀಯ-ವಾಕ್ಯಗಳಿಂದ ವಂಚಿತ ವೃದ್ಧಾಪ್ಯ
ಒಲ್ಡ್ ಏಜ್ ಹೋಮ್‌ನನಲ್ಲಿ ಕರುಣಾಕ್ರಂದನ
ಕತ್ತರಿಸುತ್ತಿದೆ ಸಾಮೂಹಿಕತೆ
ಜೀವನವನ್ನು ಹುಣ್ಣಾಗಿಸಿ ಒಣ ಕೊಂಬೆಯಿಂದ
ನೇತಾಡುವ ಬಾವಲಿಯಂತೆ
ಆಗಿದ್ದಾನೆ ಮಾನವ ಅತಿ ದೈನ್ಯ!
ಕತ್ತರಿಸುವ ಮೌನ, ಮುರಿಯುವ ಮೌನ
ಉಸಿರುಗಟ್ಟಿಸುವ ಮೌನ
ಹಬ್ಬಿದೆ ಸುತ್ತಲೂ ಚೈತನ್ಯರಹಿತಗೊಂಡು
ನುಗ್ಗುತ್ತಾನೆ ಪೋಸ್ಟ್-ಮಾರ್ಡನ್ ಮಾನವ
ಶಬ್ದ-ಸಾಹಿತ್ಯದ ಸಾವಿನೊಳಗೆ
ನುಗ್ಗುತ್ತಾನೆ ಜೀವಂತ ಶವದಂತೆ
ಸಿದ್ಧಗೊಂಡ ಸಮಾಧಿಗಳೊಳಗೆ.

■





# ಕ್ರಾಂತಿಕಾರಿ ಬರಹಗಾರ – ಬಸವರಾಜ ಕಟ್ಟೀಮನಿ

ಡಾ.ಬಸವರಾಜ ಸಾದರ

ಸಾಹಿತ್ಯ ಸಾಮಾಜಿಕ ಕ್ರಾಂತಿಯ ಸಾಧನವಾಗಬಲ್ಲುದೆಂಬ ಗಟ್ಟಿ ವಿಶ್ವಾಸದೊಂದಿಗೆ ಬರವಣಿಗೆ ಮಾಡಿದ ಬಸವರಾಜಕಟ್ಟೀಮನಿಯವರು, ಕನ್ನಡ ಪ್ರಗತಿಶೀಲ ಲೇಖಕರಲ್ಲಿ ಅಗ್ರಗಣ್ಯರು. ಶೋಷಣೆ ರಹಿತ, ಚಲನಶೀಲ ಹಾಗೂ ಸರ್ವಸಮಾನತೆಯ ಸಮಾಜವೊಂದರ ಕನಸನ್ನು ನಿರಂತರ ಜೀವಂತವಾಗಿಟ್ಟುಕೊಂಡೇ ಬರೆದ ಅವರು ಶೋಷಕರಿಗೆ ಕುಟ್ಟೋಶನಿಯಾಗಿ ಹಾಗೂ ಶೋಷಿತರಿಗೆ ಆಪದ್ಬಾಂಧವನಾಗಿ ಬರವಣಿಗೆಯ ಒಂದು ಹೊಸ ಪರಂಪರೆಯನ್ನು ಹುಟ್ಟುಹಾಕಿದರು. ಕಳೆದ ಶತಮಾನದ 80ರ ದಶಕದಲ್ಲಿ– "ಖಡ್ಗವಾಗಲಿ ಕಾವ್ಯ, ಜನರ ನೋವಿಗೆ ಮಿಡಿವ ಪ್ರಾಣಮಿತ್ರ"– ಎಂಬ ಘೋಷಣೆಯೊಂದಿಗೆ ಬಂಡಾಯ ಸಾಹಿತ್ಯ ಘಟ್ಟ ತನ್ನ ಅಸ್ತಿತ್ವವನ್ನು ಗುರುತಿಸಿಕೊಂಡಿತು. ಬಂಡಾಯ ಸಾಹಿತ್ಯ ಘಟ್ಟಕ್ಕೂ ನಲವತ್ತು ವರ್ಷಗಳಷ್ಟು ಹಿಂದೆಯೇ ಕಟ್ಟೀಮನಿಯವರಂಥವರು ನಿಜವಾದ ಬಂಡಾಯಗಾರರಾಗಿ ಸಾಹಿತ್ಯಕೃಷಿ ಮಾಡಿದ್ದು ಅನನ್ಯ ಸಾಧನೆ. ಈ ಕಾರಣಕ್ಕಾಗಿಯೇ ಬಂಡಾಯ ಸಾಹಿತ್ಯದ ಮೂಲ ಸೆಲೆಯನ್ನು ಪ್ರಗತಿಶೀಲರಲ್ಲಿ, ಅದರಲ್ಲೂ ಮುಖ್ಯವಾಗಿ ಬಸವರಾಜ ಕಟ್ಟೀಮನಿಯವರ ಬರವಣಿಗೆಯಲ್ಲಿ ಕಾಣಬಹುದಾಗಿದೆ.

ಹೊಸಗನ್ನಡ ಸಾಹಿತ್ಯದಲ್ಲಿ ಮೊದಲು ಕಂಡು ಬಂದ ನವೋದಯ ಘಟ್ಟವನ್ನು ಉಗ್ರವಾಗಿ ಪ್ರತಿಭಟಿಸುತ್ತ, ವಾಸ್ತವವಾದಿ ನೆಲೆಯಲ್ಲಿ ಸಾಹಿತ್ಯ ನಿರ್ಮಿಸತೊಡಗಿದ ಪ್ರಗತಿಶೀಲರು ಕನ್ನಡದಲ್ಲಿ ಹೊಸದಾದ ಧೋರಣೆಯೊಂದನ್ನು ಚಾಲ್ತಿಗೆ ತಂದರು. ಐರೋಪ್ಯ ರಾಷ್ಟ್ರಗಳಲ್ಲಿ ಉಂಟಾದ ಔದ್ಯೋಗಿಕ ಕ್ರಾಂತಿ ಮತ್ತು ರಾಜಕೀಯ ವಿಪ್ಲವಗಳ ಪರಿಣಾಮವಾಗಿ ಹುಟ್ಟಿದ ಪ್ರಗತಿಶೀಲ ಚಳುವಳಿ (ಪ್ರೊಗ್ರೆಶ್ಶೀವ್ ಮೂವಮೆಂಟ್) ಅಲ್ಲಿಂದ ಭಾರತಕ್ಕೆ, ತನ್ಮೂಲಕ ಕರ್ನಾಟಕಕ್ಕೂ ಬಂತು. ಆ ಹಂತದಲ್ಲಿ ಅದನ್ನು ತಲೆಯ ಮೇಲೆ ಹೊತ್ತುಕೊಂಡು ನಾಡಿನ ತುಂಬ ಪ್ರಚಾರ ಮಾಡಿದ ಕೀರ್ತಿ ಅ.ನ.ಕೃ. ಅವರಿಗೆ ಸಲ್ಲುತ್ತದೆ. ಆ ಚಳುವಳಿಯಿಂದ ಪ್ರಭಾವಿತರಾದರೂ ತಮ್ಮ ಮೂಲಬಂಡಾಯ ಮನೋಧರ್ಮವನ್ನು ಪ್ರದರ್ಶಿಸುತ್ತಲೇ ಸಾಹಿತ್ಯ ನಿರ್ಮಿಸತೊಡಗಿದ ಕಟ್ಟೀಮನಿಯವರು, ಸಮಾಜವಾದಿ ಪ್ರಗತಿಶೀಲತೆಯ ವಿನೂತನ ಮಾರ್ಗವನ್ನು ತುಳಿದರು. ಸಿದ್ಧ ಸಾಹಿತ್ಯ ಸಿದ್ಧಾಂತಗಳಿಗೆ ಭಿನ್ನವಾಗಿ ಅವರನ್ನೊಬ್ಬ ಬರಹಗಾರನನ್ನಾಗಿ ಮಾಡಿದ್ದು ಅವರ ಬದುಕು. ಅವರ ಬದುಕಿನ ವಾಸ್ತವ ಅನುಭವಗಳೇ ಅವರ ಸಾಹಿತ್ಯದ ಬುನಾದಿ ಎನ್ನಬಹುದು. ಈ ಅನುಭವಗಳಲ್ಲಿ ಎರಡು ವಿಧ; ಅವರು ಸ್ವತ: ಅನುಭವಿಸಿದ್ದು ಒಂದು ವಿಧವಾದರೆ, ಅಲೆಮಾರಿಯಾದ ಅವರ ಬದುಕು ಹೋದಲ್ಲೆಲ್ಲ ಕಂಡು ಅರಿತದ್ದು ಮತ್ತೊಂದು ವಿಧ.

1919ರ ಅಕ್ಟೋಬರ್ 5ರಂದು ಜನಿಸಿದ ಬಸವರಾಜ ಕಟ್ಟೀಮನಿಯವರು ಹುಟ್ಟುತ್ತಲೇ ಬಡತನವನ್ನು ಬೆನ್ನಿಗಂಟಿಸಿಕೊಂಡೇ ಬಂದವರು. ಅವರ ಅವ್ವ ಬಾಳವ್ವ ಮತ್ತು ಪೋಲೀಸ್ ಸಿಪಾಯಿಯಾಗಿದ್ದ ತಂದೆ ಅಪ್ಪಣ್ಣ– ಇಬ್ಬರೂ ಬಡತನದಲ್ಲಿ ಬೆಂದವರೆ. ಇಂಥವರ ಮಗನಾಗಿ ಹುಟ್ಟಿದ ಕಟ್ಟೀಮನಿಯವರು ಬಾಲ್ಯದಿಂದಲೂ ಅಭಾವದ ಬದುಕನ್ನೇ ಕಳೆಯಬೇಕಾಯ್ತು. ತಂದೆಗೆ ಮತ್ತೆ ಮತ್ತೆ ವರ್ಗಾವಣೆ ಆಗುತ್ತಿದ್ದ


ಕಾರಣದಿಂದಾಗಿ ಅವರ ಶಿಕ್ಷಣ ಕೂಡ ಒಂದು ವ್ಯವಸ್ಥಿತ ಕ್ರಮದಲ್ಲಿ ಸಾಗಲಿಲ್ಲ. ಪರಿಸ್ಥಿತಿಯ ಒತ್ತಡ ಹಾಗೂ ಕಟ್ಟೀಮನಿಯವರೇ ತೋರಿಸಿದ ನಿರಾಸಕ್ತಿಯಿಂದಾಗಿ ಅವರು ಮೆಟ್ರಿಕ್ ಹಂತವನ್ನೂ ದಾಟಲಾಗಲಿಲ್ಲ. ಪ್ರತಿಕೂಲ ಪರಿಸ್ಥಿತಿಯಲ್ಲೇ ಬದುಕಬೇಕಾಗಿ ಬಂದ ಕಟ್ಟೀಮನಿಯವರಿಗೆ ಹೋದಲ್ಲೆಲ್ಲ ಸಿಕ್ಕಿದ್ದು ಶೋಷಣೆಯ ಅನುಭವ, ಬಡತನ, ಅವಮಾನ. ಇವೆಲ್ಲವನ್ನು ಸ್ವತ: ಅನುಭವಿಸಿದ ಅವರು ಅಂಥ ಸ್ಥಿತಿಯನ್ನು ನಿರ್ಮಿಸಿದ ವ್ಯಕ್ತಿಗಳು ಮತ್ತು ಸಮಾಜದ ವಿರುದ್ಧ ಉಗ್ರಕೋಪ ತಾಳಿದರು. ಶೋಷಣೆಯ ಅನಂತ ಮುಖಗಳನ್ನು ಹಾಗೂ ಶೋಷಿತರ ದಾರುಣವಾದ ಬದುಕುಗಳನ್ನು ನೋಡುತ್ತ ಹೋದ ಹಾಗೆ ಅವರೊಳಗಿದ್ದ ಬಂಡಾಯಗಾರ ಜಾಗ್ರತನಾದ.

ಈ ಬಗೆಯ ಶೋಷಣೆಯ ಅನುಭವದ ಮೂಲಕ ಮೃದುತ್ವವನ್ನು ಕಳೆದುಕೊಂಡ ಕಟ್ಟೀಮನಿಯವರ ಸಂವೇದನೆಯಲ್ಲಿ ಮೊದಲು ಬೀಜಾಂಕುರವಾದದ್ದು ಪ್ರತಿಭಟನೆಯ ಮನೋಧರ್ಮ. ಇದು ಕ್ರಮೇಣ ಮುಂದೆ ಬಂಡಾಯದ ಹೆಮ್ಮರವಾಗಿ ಬೆಳೆದು, ಕ್ರಾಂತಿಕಾರಕವಾದ ಹೋರಾಟದ ಟೊಂಗೆ-ಟಿಸಿಲುಗಳನ್ನು ಪಡೆದುಕೊಂಡಿತು. ಕಟ್ಟೀಮನಿಯವರ ಲೇಖನಿ ಅಕ್ಷರಗಳನ್ನು ಬರೆಯುವ ಸಾಮರ್ಥ್ಯ ಕಂಡುಕೊಳ್ಳುವ ಹೊತ್ತಿಗಾಗಲೇ ಅವರ ಬದುಕು ಕಂಡುಕೊಂಡಿದ್ದ ಈ ಬಗೆಯ ಆಯಾಮವೇ ಅವರ ಬರವಣಿಗೆಯ ಮೂಲದ್ರವ್ಯವಾಯಿತು. ಶೋಷಣೆ ಯಾವುದೇ ಬಗೆಯದಿರಲಿ, ಅದರ ವಿರುದ್ಧ ನೇರವಾಗಿ ಕಿಡಿಕಾರುವ ಕಟ್ಟೀಮನಿಯವರ ಬಂಡಾಯದ ಮನೋಧರ್ಮ ಕೇವಲ ಅವರ ಸಾಹಿತ್ಯಕ್ಕೊಂದು ಸಿದ್ಧಾಂತ ಮಾತ್ರ ಅಗಲಿಲ್ಲ. ಹಾಗೆಯೇ ಅದು ಸಾಹಿತ್ಯಕ ಸಹಾನುಭೂತಿಯೂ ಆಗಲಿಲ್ಲ. ಇವೆರಡನ್ನೂ ಮೀರಿದ, ನೊಂದವರ ಹಾಗೂ ಶೋಷಣೆಗೊಳಗಾದವರ ಬದುಕುಗಳನ್ನು ಮೇಲಕ್ಕೆತ್ತುವ ಕ್ರಿಯಾತ್ಮಕ ಕಾಳಜಿಯಾಯ್ತು. ಇಂಥ ಬದ್ಧತೆಯಿದ್ದ ಕಾರಣಕ್ಕಾಗಿಯೇ ಅವರ ಸಾಹಿತ್ಯ ಕ್ರಾಂತಿಯ ಕಿಡಿಯಾಯ್ತು; ಸಮಾಜದ್ರೋಹಿಗಳಿಗೆ ಖಡ್ಗದ ಅಲಗಾಯ್ತು. ಸಾಹಿತ್ಯದ ತಾಂತ್ರಿಕ ಪರಿಕರಗಳು, ಕಲಾತ್ಮಕತೆ ಇವುಗಳ ಕಡೆಗೆ ಅಷ್ಟಾಗಿ ಗಮನ ಕೊಡದ ಕಟ್ಟೀಮನಿಯವರು ಅದರ ಸಾಮಾಜಿಕ ಗುರಿಯನ್ನೇ ಪ್ರಧಾನವಾಗಿಟ್ಟುಕೊಂಡು ಬರೆದರು. ಹೀಗಾಗಿಯೇ ಅವರ ಕಾದಂಬರಿಗಳಲ್ಲಿ ಸಿಟ್ಟು, ರೊಚ್ಚು, ನೇರ ಮಾತುಗಳು ಪ್ರಧಾನವಾಗಿ ಎದ್ದು ಕಾಣುತ್ತವೆ. ಇಂಥ ಬರವಣಿಗೆಯಿಂದಾಗಿ ಅವರು ಸಾಕಷ್ಟು ಜನರ ವಿರೋಧವನ್ನು ಕಟ್ಟಿಕೊಳ್ಳಬೇಕಾಯ್ತು, ಪ್ರಾಣಾಂತಿಕ ಪ್ರಸಂಗಗಳನ್ನೂ ಎದುರಿಸಬೇಕಾಯ್ತು. 'ಜರತಾರಿ ಜಗದ್ಗುರು' ಕಾದಂಬರಿ ಪ್ರಕಟವಾದಾಗ ಸ್ವಾಮಿಯೊಬ್ಬರು ಕಟ್ಟೀಮನಿಯವರ ಕೊಲೆ ಮಾಡಿಸಲು ನಡೆಸಿದ ಪ್ರಯತ್ನವೇ ಇದಕ್ಕೆ ಸಾಕ್ಷಿ. ಇಂಥ ದಾರಿಯನ್ನು ತುಳಿಯುವ ಮೂಲಕ ಅವರು ಸಾಹಿತ್ಯದ ಹೊಸ ಮುಖವೊಂದನ್ನು ತೆರೆದು ತೋರಿಸಿದರು. ಹಾಗೆಯೇ ಸಾಹಿತ್ಯದ ಸಾಮಾಜಿಕ ಕಾಳಜಿಗಳೇನೆಂಬುದನ್ನೂ ಎತ್ತಿ ತೋರಿಸಿದರು.

**ಪತ್ರಿಕೋದ್ಯೋಗಿಯಾಗಿ ಕಟ್ಟೀಮನಿ:**

ಬಸವರಾಜ ಕಟ್ಟೀಮನಿಯವರ ಬದುಕಿನಲ್ಲಿ ಅವರು ಪತ್ರಿಕೋದ್ಯೋಗಿಯಾಗಿ ದುಡಿದದ್ದು, ಅದಕ್ಕಾಗಿ ಅಲೆದಾಡಿದ್ದು ಹಾಗೂ ಒಂದು ಕಡೆಯೂ ನಿಶ್ಚಿತ ನೆಲೆ ಸಿಗದೇ ಒದ್ದಾಡಿದ್ದು ಒಂದು ಮಹತ್ವದ ಘಟ್ಟ. ಅವರೊಳಗಿದ್ದ ಬರಹಗಾರನನ್ನು ಕ್ರಿಯಾಶೀಲಗೊಳಿಸಲು ಪ್ರೇರಕವಾದ ಮಹತ್ವದ ಘಟ್ಟ ಕೂಡ ಇದು. ಸತ್ಯಾನ್ವೇಷಣೆ, ಅನ್ಯಾಯದ್ವೇಷ, ನಿಷ್ಠುರ ಮನೋಭಾವ, ನೇರ ನುಡಿ, ನುಡಿಗೆ ತಕ್ಕ ನಡೆ–ಇವೆಲ್ಲ ಅವರ ಪತ್ರಿಕಾ ಬರಹಗಳ ವಿಶಿಷ್ಟ ಗುಣಗಳು. ಈ ಗುಣಗಳೇ ಮಾರಕವಾಗಿ ಅವರು ಹೋದಲ್ಲೆಲ್ಲ ಸಂಪಾದಕರಿಂದ, ಮಾಲಕರಿಂದ ಹೊರಹಾಕಿಸಿಕೊಳ್ಳಲು ಕಾರಣವಾದವು. ಪತ್ರಿಕೆಯ ಶಕ್ತಿ–ಸಾಮರ್ಥ್ಯಗಳನ್ನರಿತಿದ್ದ ಅವರು ಹೋದಲ್ಲೆಲ್ಲ ಬಂಡಾಯದ ಬಾವುಟ ಹಾರಿಸಿದ್ದೇ ಅವರ ಪತ್ರಿಕಾವೃತ್ತಿ ಜೀವನದ ಮುಖ್ಯ ಲಕ್ಷಣ. ಇದು ಕಟ್ಟೀಮನಿಯವರಿಗೆ ಕ್ರಾಂತಿಕಾರಿ ಪತ್ರಕರ್ತ ಎಂದು ಹೆಸರು ತಂದುಕೊಟ್ಟಿತೇ ವಿನಾ ಹೊಟ್ಟೆ ತುಂಬಿಸಲಿಲ್ಲ; ಒಂದು ನಿಶ್ಚಿತ ನೆಲೆಯನ್ನು ಕಲ್ಪಿಸಲಿಲ್ಲ. ಅವರದು 'ಅಲೆಮಾರಿ' ಪತ್ರಕರ್ತ ವೃತ್ತಿಯಾಯಿತು.

ಬದುಕಿನ ನಿರ್ವಹಣೆಗಾಗಿ ಅವರು ಮೊಟ್ಟಮೊದಲು ಸೇರಿದ್ದು ಬೆಳಗಾವಿಯಿಂದ ಪ್ರಕಟವಾಗುತ್ತಿದ್ದ 'ಸಂಯುಕ್ತ ಕರ್ನಾಟಕ'(1936)ದಲ್ಲಿ. ಅನಂತರ 'ತರುಣ ಕರ್ನಾಟಕ', 'ಸಮಾಜ', 'ಲೋಕಮತ', 'ಕರ್ನಾಟಕ ಬಂಧು', 'ಸ್ವತಂತ್ರ ಕರ್ನಾಟಕ',–ಇವೇ ಮೊದಲಾದ ಹಲವಾರು ಪತ್ರಿಕೆಗಳಲ್ಲಿ ಅವರು ಕೆಲಸ ಮಾಡಿದರು. ಪ್ರತಿಯೊಂದು ಪತ್ರಿಕೆಯಲ್ಲೂ ಅದರ ಮಾಲಕರ ಹಾಗೂ ಸಂಪಾದಕರ ಧೋರಣೆಗೆ ವಿರುದ್ಧವಾದ ವಿಚಾರಗಳ ಕ್ರಾಂತಿಕಾರಿ ಬರಹಗಳನ್ನು ಬರೆದ ಕಾರಣಕ್ಕಾಗಿಯೇ ಹೊರಗೆ ಹಾಕಿಸಿಕೊಂಡ ಕಟ್ಟೀಮನಿಯವರಿಗೆ ಕೆಲಕಾಲವಾದರೂ ತೃಪ್ತಿ ಕೊಟ್ಟ ಪತ್ರಿಕೆಗಳೆಂದರೆ ಬೆಂಗಳೂರಿನ 'ಉಷಾ' ಮತ್ತು 'ಸ್ವತಂತ್ರ'. ಪ್ರಗತಿಶೀಲ ಧೋರಣೆಯ ಈ ಎರಡೂ ಪತ್ರಿಕೆಗಳ ಮಾಲಕರು ಕಟ್ಟೀಮನಿಯವರಿಗೆ ಸಂಪಾದಕನ ಸ್ವಾತಂತ್ರ್ಯ ಕೊಟ್ಟ ಕಾರಣ ತಮ್ಮ ನೇರ ನುಡಿಯ ಪ್ರಭಾವವನ್ನು ಅಲ್ಲಿ ತೋರಿಸಿದರು.




ಒಂದು ಕಾಲದಲ್ಲಿ 'ಉಷಾ' ಪತ್ರಿಕೆಯು ಕ್ರಾಂತಿಕಾರಿ ಪತ್ರಿಕೆಯಂದು ನಾಡಿನ ತುಂಬ ಹೆಸರು ಮಾಡಿತು. ಲೇಖಕರಿಗೆ ಸಂಭಾವನೆಯನ್ನು ಕೊಡುವ ಉಪಕ್ರಮವನ್ನು 'ಉಷಾ' ಮೊಟ್ಟ ಮೊದಲು ಆರಂಭಿಸಿತು.

ಇದೆಲ್ಲವನ್ನು ಮಾಡಿದವರು ಕಟ್ಟೀಮನಿಯವರು. ಆದರೆ ಆರ್ಥಿಕ ದುಸ್ಥಿತಿಯಿಂದಾಗಿ ಹಾಗೂ ಮಾಲಕರೊಂದಿಗೆ ಕಟ್ಟೀಮನಿಯವರು ಮಾಡಿಕೊಂಡ ಸಂಘರ್ಷದಿಂದಾಗಿ ಅವರು ಅಲ್ಲಿಂದಲೂ ಹೊರಬೀಳಬೇಕಾಯ್ತು. ಮುಂದೆ ಕೆಲದಿನಗಳ ನಂತರ ಅವರು 'ಸ್ವತಂತ್ರ' ಪತ್ರಿಕೆಯನ್ನು ಕಟ್ಟಿ ಬೆಳೆಸಿದರು. ಅದೂ ಬಹಳ ದಿನ ನಡೆಯಲಿಲ್ಲ. ಈ ಹಂತದಲ್ಲಿ 'ಸ್ವತಂತ್ರ' ಪತ್ರಿಕೆಯನ್ನು 'ಸ್ವತಂತ್ರ' ಲಿಮಿಟೆಡ್ ಕಂಪನಿಯನ್ನಾಗಿ ಮಾಡಿಕೊಂಡ ಅವರು ಅದನ್ನು ದಾವಣಗೆರೆಗೆ ತಂದು ಅಲ್ಲಿಂದ ಮತ್ತೆ ಪತ್ರಿಕೆಯನ್ನು ಆರಂಭಿಸಿದರು. ಆದರೆ ಅದರ ಆರಂಭದಲ್ಲೇ ದೊಡ್ಡ ಸಮಸ್ಯೆಗೆ ಸಿಕ್ಕಿಹಾಕಿಕೊಂಡರು. ಸ್ವತಂತ್ರ ಲಿಮಿಟೆಡ್ ಕಂಪನಿಯ ಹಿತೈಷಿಗಳಾಗಿದ್ದ ರಾಮಶೆಟ್ಟಿ ಎಂಬವರು ದಾವಣಗೆರೆಯ ಕಾಟನ್ ಮಿಲ್ಲಿನ ಕಾರ್ಮಿಕರ ಮೇಲೆ ನಡೆಸುತ್ತಿದ್ದ ಶೋಷಣೆಯನ್ನು ಪ್ರತಿಭಟಿಸಿ ಲೇಖನ ಬರೆದು ಅದನ್ನು 'ಸ್ವತಂತ್ರ'ದ ಮೊದಲ ಸಂಚಿಕೆಯಲ್ಲಿಯೇ ಪ್ರಕಟಿಸಿಬಿಟ್ಟರು. ಇದರಿಂದಾಗಿ ದೊಡ್ಡ ಕೋಲಾಹಲವೇ ನಡೆದು, ಅದರ ಪರಿಣಾಮವಾಗಿ ಕಟ್ಟೀಮನಿಯವರು ಅಲ್ಲಿಂದಲೂ ಹೊರಬರಬೇಕಾಯ್ತು. ಇದರಿಂದ ಅವರು ದೊಡ್ಡ ತೊಂದರೆಗೆ ಒಳಗಾಗಬೇಕಾಯ್ತು. ದಾವಣಗೆರೆಯಲ್ಲಿ ನಡೆದ ಈ ಎಲ್ಲ ವಿದ್ಯಮಾನಗಳನ್ನು ಕುರಿತೇ ಮುಂದೆ 'ಜ್ವಾಲಾಮುಖಿಯ ಮೇಲೆ' ಎಂಬ ಕಾದಂಬರಿಯನ್ನು ಬರೆದರು. ವರ್ಗಹೋರಾಟದ ವಾಸ್ತವ ಚಿತ್ರಣವನ್ನು ಕೊಡುವ ಈ ಕಾದಂಬರಿ ಅಪ್ಪಟ ಪ್ರಗತಿಶೀಲ ಕಾದಂಬರಿಯೆಂದು ಹೆಸರಾಯಿತಲ್ಲದೆ, ಸೋವಿಯತ್ ದೇಶದ ನೆಹರೂ ಪ್ರಶಸ್ತಿಯನ್ನೂ ಪಡೆಯಿತು. ಇದು ಕಟ್ಟಿಮನಿಯವರ ಪತ್ರಕರ್ತ ಜೀವನದ ಕಥೆ. ಈ ಎಲ್ಲ ಅನುಭವವಾದ ಮೇಲೆ ಅವರು ಮಲಾಮರಡಿಗೆ (ಅವರ ಊರು) ತೆರಳಿ ದಂಟಿನ ಕೋಣೆಯೊಂದನ್ನು ಮಾಡಿಕೊಂಡು ಅಲ್ಲಿಯೇ ಕುಳಿತು ಒಂದಾದರ ನಂತರ ಮತ್ತೊಂದರಂತೆ ಕಾದಂಬರಿಗಳನ್ನು ಬರೆಯತೊಡಗಿದರು. ಇಷ್ಟಾದರೂ ಪತ್ರಿಕೆಗಳಲ್ಲಿ ಕ್ರಾಂತಿಕಾರಿ ಲೇಖನಗಳನ್ನು ಬರೆಯುವುದನ್ನು ಅವರು ಎಂದೂ ನಿಲ್ಲಿಸಲಿಲ್ಲ. 1980ರ ದಶಕದಲ್ಲಿ ಬಂದ 'ಲಂಕೇಶ್ ಪತ್ರಿಕೆ' ಅವರ ನೇರನುಡಿಯ ಲೇಖನಗಳಿಗೆ ಮತ್ತೊಂದು ಅಖಾಡಾ ಆಯ್ತು. ಕೊನೆಯ ಉಸಿರಿರುವ ವರೆಗೂ ಅವರು ಕರ್ನಾಟಕದ ಬೇರೆ ಬೇರೆ ಪತ್ರಿಕೆಗಳಲ್ಲಿ ತಮ್ಮ ಬಂಡಾಯ ಧೋರಣೆಯ ಲೇಖನಗಳನ್ನು ಬರೆಯುತ್ತಲೇ ಬಂದರು.


**ಸ್ವಾತಂತ್ರ್ಯ ಹೋರಾಟ–ಜೇಲುವಾಸ:**

ಅನ್ಯಾಯದೆದುರು ಪ್ರತಿಭಟನೆ, ಶೋಷಣೆಯೆದುರು ಹೋರಾಟ– ಇಂಥ ಧೋರಣೆಗೆ ಬದ್ಧರಾಗಿದ್ದ ಕಟ್ಟೀಮನಿಯವರಿಗೆ ದೇಶದ ಪಾರತಂತ್ರ್ಯ ಮತ್ತು ಬ್ರಿಟೀಶರ ದಬ್ಬಾಳಿಕೆಯ ವಿರುದ್ಧ ಎಲ್ಲಿಲ್ಲದ ಸಿಟ್ಟು. 1942ರ ಅಗಸ್ಟ್ 8ರಂದು ಅಖಿಲಭಾರತ ಕಾಂಗ್ರೆಸ್ ಸಮಿತಿಯು ಕೊಟ್ಟ 'ಚಲೇಜಾವ್' ಕರೆ ದೇಶದಾದ್ಯಂತ ಪ್ರತಿಧ್ವನಿಸಿದಾಗ ಬ್ರಿಟೀಶರು ದೇಶದ ಪ್ರಮುಖ ನಾಯಕರನ್ನೆಲ್ಲ ಬಂಧಿಸಿದರು. ಆಗ ರಾಷ್ಟ್ರದುದ್ದಕ್ಕೂ ಹೋರಾಟ ತೀವ್ರವಾಯ್ತು. ಇದರ ಅಂಗವಾಗಿ ಧಾರವಾಡದಲ್ಲಿ ನಡೆದ ಪ್ರತಿಭಟನಾ

ಮೆರವಣಿಗೆಯಲ್ಲಿ ಕಟ್ಟೀಮನಿಯವರು ಉಗ್ರ ಹೋರಾಟಕ್ಕಿಳಿದರು. ಆಗಸ್ಟ್ 9ರಂದು ಧಾರವಾಡದ ಕಡಪಾ ಮೈದಾನದಲ್ಲಿ ತೀವ್ರ ಪ್ರತಿಭಟನಾ ಸಭೆ ನಡೆದಾಗ ಲಾಠಿ ಪ್ರಹಾರ ನಡೆಯಿತಲ್ಲದೆ, ಪ್ರಮುಖ ಹೋರಾಟಗಾರರ ಬಂಧನವಾಯಿತು. ಅದರಲ್ಲಿ ಕಟ್ಟೀಮನಿಯವರೂ ಒಬ್ಬರು. ಯಾವ ಅಪರಾಧದ ಹೊಣೆಯೂ ಅವರ ಮೇಲೆ ಇರದಿದ್ದ ಕಾರಣದಿಂದ ಕೆಲವೇ ದಿನಗಳಲ್ಲಿ ಅವರ ಬಿಡುಗಡೆಯಾಯಿತು. ಹೊರಗೆ ಬಂದ ಕಟ್ಟೀಮನಿಯವರು ಸುಮ್ಮನೇ ಕೂಡಲಿಲ್ಲ. 'ರಣಭೇರಿ' ಎಂಬ ಕೈಬರಹದ ಪತ್ರಿಕೆಯನ್ನು ಸಿದ್ಧಪಡಿಸಿ, ಸ್ನೇಹಿತರೊಂದಿಗೆ ಧಾರವಾಡದ ಬೇರೆ ಬೇರೆ ಭಾಗಗಳಲ್ಲಿ ಗೋಡೆಗಳಿಗೆ ಅಂಟಿಸಿ ತಮ್ಮ ಹೋರಾಟವನ್ನು ಮುಂದುವರೆಸಿದರು. ಸರಕಾರದ ದಮನ ನೀತಿಯನ್ನು ಖಂಡಿಸಲು ದಿ.19–8–1942ರಂದು ಧಾರವಾಡದಲ್ಲಿ ಒಂದು ದೊಡ್ಡ ಸಭೆ ನಡೆದಾಗ ಅದರಲ್ಲಿ ಕಟ್ಟೀಮನಿಯವರು ಬ್ರಿಟೀಶರ ಶೋಷಣೆಯ ವಿರುದ್ಧ ಉಗ್ರಬಾಷಣ ಮಾಡಿದರು. ಈ ಕಾರಣಕ್ಕಾಗಿ ಪೋಲಿಸರು ಅವರನ್ನು ಮತ್ತೆ ಬಂಧಿಸಿ ಹಿಂಡಲಗಿ ಜೇಲಿಗೆ ದೂಡಿಬಿಟ್ಟರು. ಅವರ ಕ್ರಿಯಾಶೀಲತೆಗೆ ಈ ಬಂಧನ ದೊಡ್ಡ ಆತಂಕವಾಯ್ತು. ಜೇಲಿನಲ್ಲಿ ಸುಮ್ಮನೆ ಕೂಡದ ಕಟ್ಟೀಮನಿಯವರು ಅಲ್ಲಿ ವಿವಿಧ ರಾಜಕೀಯ ಸಿದ್ಧಾಂತಗಳನ್ನು ಕುರಿತಾಗಿ ಆಳವಾದ ಅಧ್ಯಯನ ಮಾಡಿದರು. ಅದಾಗಲೇ ಬರವಣಿಗೆಗೆ ತೊಡಗಿದ್ದ ಅವರು ಜೈಲಿನಲ್ಲಿ ಕುಳಿತೇ ಹತ್ತು–ಹನ್ನೊಂದು ಮೌಲಿಕ ಕಥೆಗಳನ್ನೂ ಬರೆದರು.

**ರಾಜಕೀಯ ಮತ್ತು ಕಟ್ಟೀಮನಿ:**

ಬರಹಗಾರರಾಗಿ ಬೆಳೆದಂತೆ ಹಲವಾರು ರಾಜಕೀಯ ಮುಖಂಡರ ನೇರ ಸಂಪರ್ಕ ಕಟ್ಟೀಮನಿಯವರಿಗಾಯಿತು. ಅದು ಇನ್ನೂ ಗಾಢವಾದಂತೆ ರಾಜಕೀಯ ಕ್ಷೇತ್ರ ಅವರಿಗೆ ಆಕರ್ಷಕವಾಯಿತು. ಮಾರ್ಕ್ಸವಾದದಿಂದ ಮೊದಲೇ ಆಕರ್ಷಿತರಾಗಿದ್ದ ಅವರು ಮುಂದೆ ಬೇರೆ ಬೇರೆ ರಾಜಕೀಯ ಸಿದ್ಧಾಂತಗಳನ್ನು ಓದಿಕೊಂಡ ಹಾಗೆ ಸಕ್ರಿಯ ರಾಜಕಾರಣದಲ್ಲಿ ತೊಡಗಬೇಕೆಂಬ ಹುಚ್ಚನ್ನು ಹಿಡಿಸಿಕೊಂಡರು. ಇದರ ಪರಿಣಾಮವಾಗಿ ಮೊದಲು ಅವರು ಕಾಂಗ್ರೆಸ್ ಸಮಾಜವಾದಿ ಪಕ್ಷದ ನಿಷ್ಠಾವಂತ ಸದಸ್ಯರಾದರು. ಆದರೆ ಎಷ್ಟೇ ನಿಷ್ಠೆಯಿಂದ ಕೆಲಸ ಮಾಡಿದರೂ ಅಲ್ಲಿ ಅವರಿಗೆ ಯಾವ ಸ್ಥಾನವೂ ಸಿಗದಿದ್ದಾಗ ಸಿಟ್ಟಿನಿಂದ ಹೊರಬಂದು, ಜನಸಾಮಾನ್ಯರನ್ನು ಕಲೆ ಹಾಕಿ ತಾವೇ 'ರೈತ ಕೂಲಿಕಾರರ' ಪಕ್ಷವನ್ನು ಕಟ್ಟಿದರು. ಆ ಪಕ್ಷವೂ ಬೆಳೆದು ದೊಡ್ಡದಾದಂತೆ ವೃತ್ತಿನಿರತ ರಾಜಕಾರಣಿಗಳೇ ಅದರೊಳಗೆ ಹೊಕ್ಕು, ಕಟ್ಟೀಮನಿಯವರನ್ನೇ ಕಡೆಗಣಿಸತೊಡಗಿದರು. ಒಳ್ಳೆಯ ಪಾಠ ಕಲಿತ ಅವರು ಅಲ್ಲಿಂದ ಹೊರಬಂದು ಮತ್ತೆ ಕಾದಂಬರಿಗಳ ರಚನೆಗೆ ತೊಡಗಿದರಾದರೂ ರಾಜಕೀಯದ ವಾಸನೆ ಮತ್ತು ಹುಚ್ಚು ಅವರನ್ನು ಬಿಟ್ಟಿರಲಿಲ್ಲ. "ಆ ಹುಚ್ಚಿಗೊಳಗಾಗಿ ಹುಚ್ಚನಂತೆಯೇ ತಿರುಗಾಡುತ್ತಿದ್ದೆ" ಎಂದು ಅವರೇ ಹೇಳಿಕೊಂಡಿದ್ದಾರೆ. "ಲೇಖಕರು ಪ್ರತ್ಯಕ್ಷ ರಾಜಕೀಯದಲ್ಲಿ ಇರಬಾರದು "– ಎಂದು ಅವರ ಹಲವಾರು ಸ್ನೇಹಿತರು ಬುದ್ಧಿವಾದ ಹೇಳಿದರೂ ಅವರು ಕೇಳಲಿಲ್ಲ. 1962ರಲ್ಲಿ ನಡೆಯಲಿದ್ದ ಚುನಾವಣೆಯಲ್ಲಿ




ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಲೇಬೇಕೆಂಬ ಹಟ ತೊಟ್ಟು ಅದರ ಟಿಕೀಟಿಗಾಗಿ ಇನ್ನಿಲ್ಲದಂತೆ ಪ್ರಯತ್ನಿಸಿದರು. ಟಿಕೆಟ್ ಸಿಗದೇ ನಿರಾಶರಾದ ಅವರು ಆ ಹಂತದ ಎಲ್ಲ ಘಟನೆಗಳನ್ನೇ 'ಬೆಂಗಳೂರಿಗೊಂದು ಟಿಕೀಟು' ಎಂಬ ಕಾದಂಬರಿಯ ಮೂಲಕ ಬಿಚ್ಚಿಟ್ಟರು.

ಇದಾದ ನಂತರ ಕೌನ್ಸಿಲ್ಲಿನ ನಾಮಕರಣಕ್ಕಾಗಿ ಅವರು ಹಲವಾರು ಹಿರಿಯ ನಾಯಕರ ಬಾಗಿಲು ತಟ್ಟಿದರು. ನಿರಂತರ ಪ್ರಯತ್ನದ ನಂತರ 1968ರಿಂದ 1974ರ ಅವಧಿಗೆ ಅವರು ವಿಧಾನ ಪರಿಷತ್ತಿನ ಸದಸ್ಯರಾದರು. ವಿಧಾನಪರಿಷತ್ತಿನಲ್ಲೂ ಅವರು ತಮ್ಮ ಕ್ರಾಂತಿಕಾರಿ ಮನೋಭಾವವನ್ನೇ ಪ್ರದರ್ಶಿಸಿದರು. ಹಲವಾರು ಪ್ರಗತಿಪರ ಯೋಜನೆಗಳನ್ನು ರೂಪಿಸುವಲ್ಲಿ ತಮ್ಮ ಕೈಲಾದ ಪ್ರಯತ್ನ ಮಾಡಿದರು. 1969ರಿಂದ 1972ರ ವರೆಗೆ ಕರ್ನಾಟಕ ವಿಶ್ವವಿದ್ಯಾಲಯದ ಸೆನೇಟ್ಟಿಗೆ ಅವರ ನಾಮಕರಣವಾಯ್ತು. ಕನ್ನಡ ವಿಭಾಗಕ್ಕೊಂದು ಪ್ರತ್ಯೇಕ ಕಟ್ಟಡವಿರಬೇಕೆಂಬ ವಿಚಾರವನ್ನು ಮಂಡಿಸಿದ ಅವರು ಅದನ್ನು ಕಾರ್ಯಗತಗೊಳಿಸಿದರು ಕೂಡ. 1974ರಲ್ಲಿ ಪರಿಷತ್ತಿನಿಂದ ನಿವೃತ್ತರಾದಾಗ ಮತ್ತೊಂದು ಅವಧಿಗೆ ಸದಸ್ಯರಾಗಬೇಕೆಂದು ಹಂಬಲಿಸಿ ಅವರು ಮತ್ತೆ ಹಲವಾರು ರಾಜಕಾರಣಿಗಳನ್ನು ಕಂಡರು. ಆದರೆ ಅದು ಫಲಕಾರಿಯಾಗಲಿಲ್ಲ. ಅವರು ಮತ್ತೆ ಧಾರವಾಡಕ್ಕೆ ಮರಳಿದರು. ರಾಜಕೀಯ ಕ್ಷೇತ್ರದ ಈ ಒಡನಾಟ ಅವರಿಂದ 'ಚಕ್ರವ್ಯೂಹ', 'ಬಲೆಯ ಬೀಸಿದರು', 'ಮಾಜೀ ಮಂತ್ರಿ'– ಇವೇ ಮೊದಲಾದ ಕಾದಂಬರಿಗಳನ್ನು ಬರೆಸಿತು. ಈ ಕಾದಂಬರಿಗಳಲ್ಲಿ ಅವರು ರಾಜಕೀಯದ ಅಂತರಂಗವನ್ನು ಬಗೆದಿದ್ದಾರೆ.

**ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ:**

ಕಟ್ಟೀಮನಿಯವರ ಅಪಾರವಾದ ಕ್ರಾಂತಿಕಾರಿ ಸಾಹಿತ್ಯ ಕೃಷಿಯನ್ನು ಗಮನಿಸಿದ ಕನ್ನಡ ಸಾಹಿತ್ಯ ಪರಿಷತ್ತು 1980ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ 52ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿತು. ಉತ್ಸಾಹದಿಂದ ಸಮ್ಮೇಳನದಲ್ಲಿ ಪಾಲ್ಗೊಂಡ ಅವರು ಕನ್ನಡ ನಾಡು, ನುಡಿ, ಸಾಹಿತ್ಯ, ಸಮಾಜ, ರಾಜಕೀಯ, ಶೋಷಣೆ, ಪ್ರಗತಿಪರತೆ– ಇತ್ಯಾದಿ ವಿಚಾರಗಳನ್ನು ಕುರಿತಾಗಿ ಖಡಕಿನ ಭಾಷಣ ಮಾಡಿದರು. ಗಡಿ ವಿವಾದವನ್ನು ಪ್ರಮುಖವಾಗಿ

ಪ್ರಸ್ತಾಪಿಸಿ, "ಬೆಳಗಾವಿ ಒಂದು ಕುಡುಗೋಲು ಇದ್ದಂತೆ. ಅದನ್ನು ನುಂಗಬೇಕೆನ್ನುವವರನ್ನೇ ಅದು ಕೊಯ್ಯುತ್ತದೆ"– ಎಂದು ಗುಡುಗಿ, "ಬೆಳಗಾವಿ ಕರ್ನಾಟಕದ್ದೇ"– ಎಂಬ ಧೀರವಾಣಿಯನ್ನು ಮೊಳಗಿಸಿದರು. ಮುಂದೆ 1980ರ ವರ್ಷವಿಡೀ ಅವರು ಕರ್ನಾಟಕದ ಉದ್ದಗಲಕ್ಕೂ ಪ್ರವಾಸ ಮಾಡಿದರು. ಈ ಪ್ರವಾಸ ಅವರಿಗೆ ನಾಡಿನ ವಿವಿಧ ಮುಖಗಳನ್ನು ದರ್ಶಿಸಿತು. ಅನಂತರ ಮಲಾಮರಡಿಗೆ ಮರಳಿದ ಅವರು ಅಲ್ಲಿನ ಪ್ರಶಾಂತ ವಾತಾವರಣದಲ್ಲಿ ಕುಳಿತು ತಮ್ಮ ಆತ್ಮಕಥೆ ' ಕಾದಂಬರಿಕಾರನ ಕಥೆ 'ಯನ್ನು ಬರೆದು ಮುಗಿಸಿದರು.

**ಗೋಕಾಕ್ ಚಳವಳಿ– ಕಟ್ಟೀಮನಿ:**

ಕರ್ನಾಟಕದ ಶಿಕ್ಷಣ ವ್ಯವಸ್ಥೆಯಲ್ಲಿ ಕನ್ನಡದ ಸ್ಥಾನ–ಮಾನವನ್ನು ನಿರ್ಧರಿಸುವ ಸಲುವಾಗಿ ಸರಕಾರವು ಡಾ. ವಿ. ಕೃ. ಗೋಕಾಕ್ ಅವರ ನೇತೃತ್ವದಲ್ಲಿ ಸಮಿತಿಯೊಂದನ್ನು ನಿಯಮಿಸಿತು. ಇಂಥ ಉದ್ದೇಶವೇ ಅನಗತ್ಯವೆಂದು, ಧಾರವಾಡದ ಸಾಹಿತಿಗಳು ಸಮೀಕ್ಷೆಗೆಂದು ಬಂದ ಗೋಕಾಕ್ ಸಮಿತಿಯನ್ನೇ "ಗೋ ಬ್ಯಾಕ್"–ಎಂದು ವಾಪಸು ಕಳಿಸಿತು. ಅ ಹೋರಾಟದಲ್ಲಿದ್ದ ಮುಖ್ಯರಲ್ಲಿ ಒಬ್ಬರು ಬಸವರಾಜ ಕಟ್ಟೀಮನಿ. ಅನಂತರ ಗೋಕಾಕರು ಕನ್ನಡಕ್ಕೆ ಶಿಕ್ಷಣದಲ್ಲಿ ಏಕೈಕ್ಯ ಪ್ರಥಮ ಸ್ಥಾನ ಇರಬೇಕಂದು ವರದಿ ಸಲ್ಲಿಸಿದರೂ, ಅದನ್ನು ಜಾರಿಗೊಳಿಸುವಲ್ಲಿ ಸರಕಾರ ಹಿಂದೆ–ಮುಂದೆ ನೋಡತೊಡಗಿತು. ಸರಕಾರದ ಈ ವಿಳಂಬ ನೀತಿಯನ್ನು ವಿರೋಧಿಸಿ ಕಟ್ಟೀಮನಿಯವರು ಆಮರಣ ಉಪವಾಸ ಸತ್ಯಾಗ್ರಹ ಮಾಡುವುದಾಗಿ ಕರಪತ್ರ ಹಂಚಿದರು. ಈ ಹಿನ್ನೆಲೆಯಲ್ಲಿಯೇ ಧಾರವಾಡದ ಸಾಹಿತಿಗಳು, ವಿದ್ವಾಂಸರು, ವಕೀಲರು, ಸಾರ್ವಜನಿಕರು ಸೇರಿ ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ 'ಕನ್ನಡ ಕ್ರಿಯಾಸಮಿತಿ' ಯನ್ನು ಆರಂಭಿಸಿ (24–2–1982) 'ಗೋಕಾಕ್ ವರದಿ ಜಾರಿಗೆ ಬರಲಿ' ಎಂದು ಹೋರಾಟಕ್ಕಿಳಿದರು. ಈ ಹೋರಾಟದ ಮೂಲ ಮತ್ತು ಮುಖ್ಯ ಪ್ರೇರಣೆ ಬಸವರಾಜ ಕಟ್ಟೀಮನಿಯವರು. ಹೋರಾಟದ ಅಂಗವಾಗಿ, ಕಟ್ಟೀಮನಿಯವರು, ವಿಶ್ವಕನ್ನಡ ಸಮ್ಮೇಳನಕ್ಕಾಗಿ ಆ ಮೊದಲು 'ಮಾಡಿ ಮಡಿದವರು' ಕಾದಂಬರಿಯ ಪ್ರಕಟನೆಗೆ ಕೊಟ್ಟಿದ್ದ ಒಪ್ಪಿಗೆಯನ್ನು ಹಿಂತೆಗೆದುಕೊಂಡರು. 19–4–1982ರಂದು ಸರಕಾರ ಗೋಕಾಕ್ ವರದಿಯನ್ನು ವಿಕೃತಗೊಳಿಸಿ ಜಾರಿ ಮಾಡಿದಾಗ ಕ್ರಿಯಾಸಮಿತಿಯು ಮತ್ತೊಮ್ಮೆ ಉಗ್ರ ಹೋರಾಟಕ್ಕಿಳಿಯಿತು. ಹೋರಾಟವನ್ನು ನಿಯಂತ್ರಿಸಲು ಸರಕಾರ ನಿಷೇದಾಜ್ಞೆಯನ್ನು(144ನೆಯ ಕಲಮನ್ನು) ಜಾರಿ ಮಾಡಿತು. ಸರಕಾರದ ದಮನ ನೀತಿಯನ್ನು ವಿರೋಧಿಸಿ ಹೋರಾಟ ಮುಂದುವರೆಸಿದಾಗ ಬಸವರಾಜ ಕಟ್ಟೀಮನಿ, ಚೆನ್ನವೀರ ಕಣವಿ, ಪಾಟೀಲ ಪುಟ್ಟಪ್ಪ, ಡಾ. ರಾ. ಯ.ಧಾರವಾಡಕರ, ಡಾ.ಆರ್.ಸಿ. ಹಿರೇಮಠ, ವೆಂಕಟೇಶ್ ಕುಲಕರ್ಣಿ– ಮೊದಲಾದ ಇಪ್ಪತ್ತು ಜನರನ್ನು ಬಂಧಿಸಲಾಯ್ತು. ಕಟ್ಟೀಮನಿಯವರ ಆರೋಗ್ಯ ಹದಗೆಟ್ಟ ಕಾರಣ ಅವರನ್ನು ಅಲ್ಲಿಂದಲೇ ಸಿವಿಲ್ ಆಸ್ಪತ್ರೆಗೆ ಸಾಗಿಸಲಾಯ್ತು. ಕ್ರಿಯಾಸಮಿತಿಯೊಂದಿಗೆ ರಾಜೀ ಮಾಡಿಕೊಂಡ ಸರಕಾರ, ಕನ್ನಡವು ಶಿಕ್ಷಣದಲ್ಲಿ

ಏಕೈಕ ಕಡ್ಡಾಯ ಭಾಷೆಯೆಂದು ಸಾರಿದಾಗ (24–6–1982) ರಾಜ್ಯದಾದ್ಯಂತ ವಿಜಯೋತ್ಸವವನ್ನು ಆಚರಿಸಲಾಯ್ತು. ತಮ್ಮ ಅನಾರೋಗ್ಯವನ್ನೂ ಲೆಕ್ಕಿಸದೇ ಕಟ್ಟೀಮನಿಯವರು ಆ ವಿಜಯೋತ್ಸವದಲ್ಲಿ ಪಾಲ್ಗೊಂಡರು. ಹೀಗೆ ಗೋಕಾಕ್ ಚಳವಳಿಯ ಸಂದರ್ಭದಲ್ಲಿ ಕಟ್ಟೀಮನಿಯವರು ಬಹುಮುಖ್ಯ ಹೋರಾಟಗಾರರಾಗಿದ್ದು ಗಮನಾರ್ಹ. ಇದೇ ರೀತಿ ಅವರು ಎಲ್ಲ ಜನಪರ ಹೋರಾಟಗಳಲ್ಲೂ ಮುಂದೆಯೇ ಇರುತ್ತಿದ್ದರು.

**ಸಾಹಿತ್ಯ ಸಮೃದ್ಧಿ:**

ಮೆಟ್ರಿಕ್ ಪರೀಕ್ಷೆಯನ್ನೂ ಪಾಸಾಗದ ಕಟ್ಟೀಮನಿಯವರು ಮಲಾಮರಡಿಯಂಥ ಸಣ್ಣ ಹಳ್ಳಿಯಲ್ಲಿ, ದಂಟಿನ ಕೋಣೆಯನ್ನು ನಿರ್ಮಿಸಿಕೊಂಡು, ಅಲ್ಲಿಯೇ ಕುಳಿತು ಬರೆದು,ಕನ್ನಡ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಅಪಾರವಾದದ್ದು. 40 ಕಾದಂರಿಗಳು, 10 ಕಥಾ ಸಂಕಲನಗಳು, 1 ಅನುವಾದಿತ ಕಥಾಸಂಕಲನ, 1 ನಾಟಕ, 2 ಕವನ ಸಂಕಲನಗಳು,2 ಮಕ್ಕಳ ಸಾಹಿತ್ಯ ಕೃತಿಗಳು 1 ಪ್ರವಾಸ ಕಥನ, 2 ಜೀವನ ಚಿತ್ರಗಳು, 4 ಸಂಪಾದಿತ ಕೃತಿಗಳು ಹಾಗೂ ಅವರ ಸಮಗ್ರ ಬದುಕಿನ ವಿವರಗಳನ್ನು ಬಿಚ್ಚಿಡುವ ಒಂದು ಆತ್ಮಕಥೆ– ಹೀಗೆ ಅವರ ಒಟ್ಟು ಸಾಹಿತ್ಯ ಕೃತಿಗಳು 64. ಅವರು ನಿರಂತರವಾಗಿ ಬರೆಯುತ್ತ ಬಂದ ಪತ್ರಿಕಾ ಬರಹಗಳು ಹಾಗೂ ಪ್ರಕಟಿಸುತ್ತ ಬಂದ ಸಣ್ಣಕಥೆಗಳಂತೂ ಅಸಂಖ್ಯ. ಪ್ರತಿಭಟನೆಯನ್ನೇ ಸ್ಥಾಯಿಯಾಗಿಟ್ಟುಕೊಂಡು ಬರೆಯುತ್ತ ಬಂದ ಅವರು ಹೇಳಿದ್ದು –" ಮೈಯಲ್ಲಿ ರಕ್ತವಿರುವ ವರೆಗೆ, ಕೈಯಲ್ಲಿ ಶಕ್ತಿಯಿರುವ ವರೆಗೆ ಬರೆದೇ ಬರೆಯುತ್ತೇನೆ. ಬರವಣಿಗೆ ನಿಂತಾಗ ಉಸಿರೂ ನಿಲ್ಲುತ್ತದೆ. "–ಎಂಬ ಮಾತನ್ನು. ಕಟ್ಟೀಮನಿಯವರಿಗೆ ಐವತ್ತು ತುಂಬಿದಾಗ ಹೇಳಿದ ಈ ಮಾತನ್ನು ಕೃತಿ ಮಾಡಿ ತೋರಿಸುತ್ತಲೇ ಬಂದ ಅವರು ಲೇಖನಿ ಮತ್ತು ಉಸಿರು ಎರಡನ್ನೂ ಒಟ್ಟಿಗೇ ನಿಲ್ಲಿಸಿದ್ದು ಕುತೂಹಲಕರ ಸತ್ಯ.

ಕಟ್ಟೀಮನಿಯವರ ಕಾದಂಬರಿಗಳಲ್ಲಿ ಬರುವ ಕಥಾನಕಗಳ ಸಂಖ್ಯೆ ಅವರ ಕಾದಂಬರಿಗಳಷ್ಟೇ ದೊಡ್ಡದು. ಇಲ್ಲೆಲ್ಲ ಅವರು ಮುಖ್ಯವಾಗಿ ಗಮನ ಹರಿಸಿದ್ದು ನಮ್ಮ ಸಮಾಜದ ವಿವಿಧ ಸಮಸ್ಯೆಗಳ ಕಡೆಗೆ. ಪಾರತಂತ್ರ್ಯದ ಸಮಸ್ಯೆ, ಕಾರ್ಮಿಕರ ಸಮಸ್ಯೆ, ಜಾತಿ ಸಮಸ್ಯೆ, ವೇಶ್ಯಾ ಸಮಸ್ಯೆ, ಬಾಲ್ಯ ವಿವಾಹದ ಸಮಸ್ಯೆ, ವರದಕ್ಷಿಣೆ ಸಮಸ್ಯೆ, ಮಹಿಳೆಯರ ಸಮಸ್ಯೆಗಳು ಹೀಗೆ ಹಲವಾರು ಸಮಸ್ಯೆಗಳನ್ನೇ ವಸ್ತುವಾಗಿಟ್ಟುಕೊಂಡು ಕಥೆ–ಕಾದಂಬರಿಗಳನ್ನು ಬರೆದ ಅವರು ಆ ಸಮಸ್ಯೆಗಳ ಮೂಲ ಬೇರುಗಳ ಶೋಧನೆಗೆ ತೊಡಗುತ್ತಾರೆ. ಈ ಬಗೆಯ ಸಮಸ್ಯೆಗಳು ಹುಟ್ಟಲು ಕಾರಣರಾದವರನ್ನು ಬಯಲಿಗೆಳೆದು ತೋರಿಸುವುದೇ ಅವರ ಮುಖ್ಯ ಗುರಿ. ಹೀಗಾಗಿಯೇ ಅವರ ಕೃತಿಗಳಲ್ಲಿ ಬಂಡವಾಳಶಾಹಿಗಳು, ಕೆಟ್ಟ ರಾಜಕಾರಣಿಗಳು, ಅನ್ಯಾಯದಿಂದ ಗಳಿಸಿದ ಶ್ರೀಮಂತರು, ಕಾಮುಕ ಹಾಗೂ ಕಳ್ಳ ಸ್ವಾಮಿಗಳು,

ಅತೃಪ್ತ ಕಾಮಿಗಳು, ಆಷಾಡಭೂತಿಗಳು, ಭ್ರಷ್ಟ ಅಧಿಕಾರಿಗಳು – ಇಂಥ ಸಮಾಜ ವಿರೋಧಿಗಳೆಲ್ಲ ಬತ್ತಲೆಗೊಳ್ಳುತ್ತಾರೆ. ಇದರ ಜೊತೆಗೇ ಹಲವಾರು ಬಗೆಯಲ್ಲಿ ಶೋಷಣೆಗೊಳಗಾದ ಜನವರ್ಗದತ್ತ ಕಟ್ಟೀಮನಿಯುವರು ಅಪಾರವಾದ ಅಸಹಾನುಭೂತಿಯನ್ನು ವ್ಯಕ್ತಪಡಿಸುತ್ತಾರೆ. ಸಮಾಜದಲ್ಲಿ ಕೆಟ್ಟದ್ದೆಂದು ಕಂಡವರನ್ನು, ಕೆಟ್ಟವರನ್ನು ಅವರು ಮತ್ತೆ ಮತ್ತೆ ಎತ್ತಿ ತೋರಿಸುತ್ತಾರೆ. ಆ ವರ್ಗದವರತ್ತ ಕಟ್ಟೀಮನಿಯವರಿಗೆ ಎಲ್ಲಿಲ್ಲದ ಸಿಟ್ಟು. ಆ ಸಿಟ್ಟೇ ಅವರ ಕಾದಂಬರಿಗಳ ಮುಖ್ಯ ಸ್ಥಾಯಿಯಾಗುತ್ತದೆ. ಜೊತೆಗೆ ಆ ಸಿಟ್ಟೇ ಅವರ ಕೃತಿಗಳ ನಡೆಯನ್ನು ಏಕಮುಖಗೊಳಿಸಿಬಿಡುತ್ತದೆ. ಇದು ಅವರ ಸಾಹಿತ್ಯದ ಮಿತಿ ಕೂಡ ಆಗುತ್ತದೆ. ಹೆಂಡ, ಹೆಣ್ಣು, ಕೆಟ್ಟ ರಾಜಕಿಯಗಳ ರುಚಿ ಹಚ್ಚಿಸಿಕೊಂಡ ನಮ್ಮ ಗ್ರಾಮೀಣರ ಬದುಕುಗಳು ಹೇಗೆ ಅವನತಿಯತ್ತ ಸಾಗುತ್ತಿವೆಯೆಂಬುದನ್ನು ಕಟ್ಟೀಮನಿಯವರು 'ಹೆಂಡತಿ', ಹಾಗೂ 'ಮಣ್ಣು ಮತ್ತು ಹೆಣ್ಣು'– ಕಾದಂಬರಿಗಳಲ್ಲಿ ತೆರೆದಿಡುತ್ತಾರೆ. ಈ ಕಾದಂಬರಿಗಳು ಎಲ್ಲ ರೀತಿಯಲ್ಲೂ ಗ್ರಾಮರಸದಿಂದ ಕೂಡಿದ್ದು, ನಮ್ಮ ಗ್ರಾಮೀಣ ಬದುಕು ಹೇಗೆ ಕೆಟ್ಟ ಬದಲಾವಣೆಗಳತ್ತ ಸಾಗುತ್ತಿದೆಯೆಂಬುದನ್ನು ದರ್ಶಿಸುತ್ತವೆ. ಹಾಗೆಯೇ ಕನ್ನಡ ಸಾಹಿತ್ಯದಲ್ಲಿ ಅಪರೂಪವಾಗಿರುವ ಪೋಲೀಸ್ ಪ್ರಪಂಚದ ಒಳ–ಹೊರಗನ್ನು ಅವರು 'ಬಂಗಾರದ ಜಿಂಕೆಯ ಹಿಂದೆ' ಹಾಗೂ 'ನಾನೂ ಪೋಲೀಸನಾಗಿದ್ದೆ' ಎಂಬ ಕಾದಂರಿಗಳಲ್ಲಿ ತೆರೆದಿಟ್ಟಿದ್ದಾರೆ. ಅಲ್ಲಿನ ಭ್ರಷ್ಟತೆ, ಕಾಮ, ಹಾದರ, ಮೋಸ ಇವೆಲ್ಲ ಈ ಕಾದಂಬರಿಗಳಲ್ಲಿ ಅನಾವರಣಗೊಂಡಿವೆ. ಕಿತ್ತೂರಿನ ಹೋರಾಟ, ನರಗುಂದದ ಬಂಡಾಯ ಹಾಗೂ ಅಕ್ಕಮಹಾದೇವಿಯನ್ನು ಕುರಿತಂತೆ ಕಟ್ಟೀಮನಿಯವರು ನಾಲ್ಕು ಐತಿಹಾಸಿಕ ಕಾದಂಬರಿಗಳನ್ನೂ ರಚಿಸಿದ್ದಾರೆ. ಇಲ್ಲಿಯೂ ಅವರ ಪ್ರಗತಿಪರ ಮನೋಧರ್ಮ, ವಾಸ್ತವತೆ ಮತ್ತು ವೈಚಾರಿಕತೆಗಳದೇ ಮೇಲುಗೈ ಇದೆ.

"ಪ್ರತಿಯೊಂದು ಕಾದಂಬರಿಯಲ್ಲೂ ಒಂದು ಹೊಸ ಲೋಕ ಸೃಷ್ಟಿಸಬೇಕೆಂಬುದು ನನ್ನ ಹಟ" ಎಂದು ಹೇಳುವ ಬಸವರಾಜ ಕಟ್ಟೀಮನಿಯವರು ಬಹುಮಟ್ಟಿಗೆ ಆ ಹಟವನ್ನು ಸಾಧಿಸಿದ್ದಾರೆ ಕೂಡ. ಆದರೆ ಅವರ ಎಲ್ಲಾ ಕಾದಂಬರಿಗಳು ಒಂದೇ ಮಟ್ಟದವು ಹಾಗೂ ಉನ್ನತ ಮಟ್ಟದವು ಎಂದು ಹೇಳಲಾಗದು. ಆ ಕಾದಂಬರಿಗಳಲ್ಲಿ ಕೆಲವು ಶ್ರೇಷ್ಠ ಮಟ್ಟದವು ಇರುವಂತೆ ಮತ್ತೆ ಕೆಲವು ಮೂರನೆಯ ದರ್ಜೆಯವೂ ಇವೆ. ಬರೆದೇ ಬದುಕನ್ನು ನಿರ್ವಹಿಸುವ ಅನಿವಾರ್ಯತೆ ಬಂದಾಗ ಅವರು ಕೆಲವು ಸಾಮಾನ್ಯ ಕಾದಂಬರಿಗಳನ್ನು ಬರೆದಿದ್ದುಂಟು. ಅದನ್ನು ಅವರೇ ಸ್ವತ: ಒಪ್ಪಿಕೊಂಡಿದ್ದಾರೆ. ಕಟ್ಟೀಮನಿಯವರ ಎಲ್ಲ ಬರವಣಿಗೆಯನ್ನು ಅವಲೋಕಿಸಿದಾಗ ಅವರು ಕಲೆಗಾರಿಕೆಗೆ ಮತ್ತು ಸಾಹಿತ್ಯಾಂಶಗಳ ಕಡೆಗೆ ಆಷ್ಟೊಂದು ಗಮನ ಕೊಟ್ಟಿಲ್ಲದಿರುವುದು ಎದ್ದು ಕಾಣುತ್ತದೆ. ಅವರ ಕ್ರಾಂತಿಕಾರಿ ಮನೋಭಾವಕ್ಕನುಗುಣವಾಗಿ ಅವರ ಸಾಹಿತ್ಯಕೃತಿಗಳಲ್ಲಿ ನೇರನುಡಿ, ಬಿಚ್ಚುಮಾತು ಎದ್ದು ಕಾಣುತ್ತವೆ. "ಕಲೆಗಾಗಿ ಕಲೆ ಎನ್ನುವ ದೃಷ್ಟಿ ನನ್ನದಲ್ಲ. ನಮ್ಮ ಸುತ್ತಲಿನ ಹತ್ತಾರು ಜೀವಗಳ ಬದುಕು ಬಂಗಾರವಾಗಬೇಕು ಎನ್ನುವ ದೃಷ್ಟಿ ನನ್ನದಾಗಿದೆ"

ಎನ್ನುವ ಅವರ ಮಾತಿನಲ್ಲಿ ಅವರ ಬರವಣಿಗೆಯ ಮೂಲ ಮತ್ತು ಮುಖ್ಯ ಉದ್ದೇಶ ಏನೆಂಬುದು ಸ್ಪಷ್ಟವಾಗುತ್ತದೆ. "ಆರ್ಥಿಕ ವಿಷಮತೆ ನಾಶವಾಗದ ಹೊರತು ಜನತೆಗೆ ನಿಜವಾದ ಸ್ವಾತಂತ್ರ್ಯ ಬರಲಾರದು" ಎನ್ನುವ ಅವರು ನಮ್ಮ ಅಸಂಖ್ಯ ಸಾಮಾಜಿಕ ಸಮಸ್ಯೆಗಳ ಮೂಲ ಬೇರನ್ನು ಆರ್ಥಿಕ ರಂಗದ ಅವ್ಯವಸ್ಥೆಯಲ್ಲಿ ಕಾಣುತ್ತಾರೆ. ಇಂಥ ಅಸಮ ಅರ್ಥವ್ಯವಸ್ಥೆ ಸುಧಾರಣೆಯಾಗಿ ಎಲ್ಲರ ಬದುಕುಗಳು ಹಸನಾಗಬೇಕೆಂಬುದೇ ಅವರ ಹೆಬ್ಬಯಕೆ. ಶೋಷಣೆರಹಿತ, ಸಮಾನತೆಯ, ಸ್ವಸ್ಥ ಸಮಾಜವೊಂದರ ಕನಸು ಅವರದಾಗಿತ್ತು. ಆ ಕನಸನ್ನು ನನಸು ಮಾಡುವುದರತ್ತಲೇ ಅವರ ಸಾಹಿತ್ಯದ ಮುಖ್ಯ ತುಡಿತವಿದೆ.

ಇಷ್ಟೆಲ್ಲ ಮಹತ್ವದ ಸಾಧನೆ ಮಾಡಿರುವ ಬಸವರಾಜ ಕಟ್ಟೀಮನಿಯವರು ಮೆಟ್ರಿಕ್ಕನ್ನೂ ದಾಟಿರದ, ಹಳ್ಳಿಗಾಡಿನ ಒಬ್ಬ ಸಾಮಾನ್ಯ ಮನುಷ್ಯ ಎಂಬುದು ಗಮನಾರ್ಹ. ಇಂಥ ಮಹತ್ಸಾಧನೆ ಮಾಡಿರುವ ಅವರನ್ನು ಕನ್ನಡ ಸಾಹಿತ್ಯ ಲೋಕ ಮತ್ತು ಸರಕಾರ ಗಮನಿಸಬೇಕಾದ ರೀತಿಯಲ್ಲಿ ಗಮನಿಸಲಿಲ್ಲ. ಸಾಹಿತ್ಯ ಪ್ರಪಂಚದಲ್ಲಿನ ಜಾತಿರಾಜಕರಣ ಆ ಸಂದರ್ಭದಲ್ಲಿ ಅವರನ್ನು ಕಡೆಗಣಿಸುತ್ತಲೇ ಬಂತು. ಅಷ್ಟೇ ಅಲ್ಲ; ಪ್ರಗತಿಶೀಲ ಬರಹಗಾರರನ್ನೇ ಕನ್ನಡ ವಿಮರ್ಶಾಲೋಕ ಮುಕ್ತ ಮನಸ್ಸಿನಿಂದ ಕಾಣಲಿಲ್ಲ. ಈ ಎಲ್ಲ ಕಾರಣಗಳಿಂದಾಗಿ ಅವರು ತುಂಬ ನೊಂದಿದ್ದರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಾಗಿ ಅವರು ಕಾಯುತ್ತಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿಗಾಗಿ ನಿರೀಕ್ಷಿಸುತ್ತಿದ್ದರು. ಅವರ ಕಾದಂರಿಗಳನ್ನು ಕುರಿತಂತೆ ನಾನು ಪಿಎಚ್.ಡಿ. ಮಾಡಿ ಡಾಕ್ಟರೇಟ್ ಪದವಿಯನ್ನು ಪಡೆದಾಗ "ಕಟ್ಟೀಮನಿಗೆ ಡಾಕ್ಟರೇಟ್ ಸಿಗದಿದ್ದರೂ, ಅವನ ಕಾದಂಬರಿಗಳ ಬಗೆಗೆ ಮಾಡಿದ ಅಧ್ಯಯನಕ್ಕಾದರೂ ಡಾಕ್ಟರೇಟ್ ಬಂತಲ್ಲ! ಅಷ್ಟಾದರೂ ಸಾಕು"– ಎಂದು ಸಮಾಧಾನಪಟ್ಟುಕೊಂಡಿದ್ದರು. ಈ ಎಲ್ಲ ಬಗೆಯ ನೋವಿನಲ್ಲಿ ಬದುಕಿದ ಹಾಗೂ ನಿರಂತರ ಬರೆಯುತ್ತಲೇ ಬಂದ ಕಟ್ಟೀಮನಿಯವರು ತಮ್ಮ ಕೊನೆಯ ದಿನಗಳಲ್ಲಿ ಈ ಲೇಖಕನಿಗೆ ಬರೆದ ಪತ್ರವೊದರಲ್ಲಿ ಮುಂದಿನ ಮಾತುಗಳಿವೆ. " ಈ ಲೋಕದಲ್ಲಿ ನಾವು ಇರುವುದು ಕೆಲವು ವರ್ಷಗಳು ಮಾತ್ರ. ಈ ಅರಿವು ಯಾವಾಗಲೂ ಇರಬೇಕು. ಈ ಅಲ್ಪಾವಧಿಯಲ್ಲಿ ನಮ್ಮಿಂದ ಶಕ್ಯವಿದ್ದಷ್ಟು ಒಳ್ಳೆಯ ಕೆಲಸ ಮಾಡಿ, ಸಾಮಾನ್ಯ ಜನರ ಪ್ರಗತಿಗಾಗಿ ಪ್ರಯತ್ನಿಸಿ ಸದ್ದಿಲ್ಲದಂತೆ ಹೊರಟು ಹೋಗಬೇಕು. ವೈಯಕ್ತಿಕ ಜೀವನದಲ್ಲಿ ಏಳು–ಬೀಳು, ಸುಖ–ದು:ಖ ಎಲ್ಲಾ ಇರುತ್ತವೆ. ಸಮಸ್ಯೆಗಳನ್ನು ಎದುರಿಸಿ ಬದುಕಬೇಕು" ಈ ಹೇಳಿಕೆ ಉಪದೇಶವಲ್ಲ, ಹಿತವಚನವಲ್ಲ, ಮಾರ್ಗದರ್ಶನವೂ ಅಲ್ಲ; ಸಮಾಜದ ಮತ್ತು ಜನಸಾಮಾನ್ಯರ ಪ್ರಗತಿಗಾಗಿ ತುಡಿದ ಹಾಗೂ ಮಿಡಿದ ಬಸವರಾಜ ಕಟ್ಟೀಮನಿಯವರ ಬದುಕು–ಬರಹಗಳೆರಡರ ರೀತಿಯನ್ನು ಅಕ್ಷರಕ್ಷರವೂ ದಾಖಲಿಸುವ ಶಾಸನದ ಉಕ್ತಿಯಂತಿವೆ ಈ ಮಾತುಗಳು.

■



# ಮೆವ್ಲಾನಾ ಜೆಲಾಲುದ್ದಿನ್ ರೂಮಿ

**ಆರ್. ವಿಜಯರಾಘವನ್**

ಇಪ್ಪತ್ತನೆಯ ಶತಮಾನದ ಮೊದಲರ್ಧದಲ್ಲಿ ರೂಮಿಯ ಮಸ್ನವಿ ಮತ್ತು ಗೀತೆಗಳು ಇಂಗ್ಲಿಶ್‌ಗೆ ಅನುವಾದಗೊಂಡವು. ಅದನ್ನು ಮಾಡಿದ್ದು ಬ್ರಿಟಿಶ್ ವಿದ್ವಾಂಸರಾದ ರೆನಾಲ್ಡ್ ನಿಕಲ್ಸನ್ ಮತ್ತು ಆರ್ಥರ್ ಜಾನ್ ಆರ್ಬರಿ. ಇವು ವಿದ್ವಾಂಸರಿಗೆ ಮಾತ್ರ ಗೋಚರವಾಗಿ ಉಳಿದವು. ಬಳಿಕ ಅಮೆರಿಕನ್ ಕವಿ ಕೋಲ್ಮನ್ ಬಾರ್ಕ್ಸ್‌ರವರ ದಿ ಎಸೆನ್ಷಿಯಲ್ ರೂಮಿ ಪ್ರಕಟವಾಗಿ ಬೆಸ್ಟ್ ಸೆಲ್ಲರ್ ಆಗಿ ಬಹಳ ಪ್ರಖ್ಯಾತವಾಯಿತು. 1976ರವರೆಗೂ ಬಾರ್ಕ್ಸ್‌ಗೆ ರೂಮಿಯ ಪರಿಚಯವಿರಲಿಲ್ಲ. ಸಹ ಕವಿ ರಾಬರ್ಟ್ ಬ್ಲೈ ಬಾರ್ಕ್ಸ್‌ಗೆ ಎ. ಜೆ ಆರ್ಬರಿಯ ಅನುವಾದದ ಪುಸ್ತಕ ಕೊಟ್ಟು ಈ ಕವಿತೆಗಳನ್ನು ಅವುಗಳ ಪಂಜರದಿಂದ ವಿಮೋಚನೆಗೊಳಿಸಬೇಕೆಂದು ಹೇಳಿದರಂತೆ. ಬಾರ್ಕ್ಸ್‌ಗೆ ಪರ್ಷಿಯನ್ ಭಾಷೆ ಬರುತ್ತಿರಲಿಲ್ಲ. ಜಾನ್ ಮೋಯ್ನ್‌ರ ಅಪ್ರಕಟಿತ ಹಸ್ತಪ್ರತಿ ಹಾಗೂ ಶ್ರೀ ಲಂಕಾದ ಸೂಫಿ ಸಂತ ಬೋವಾ ಮೊಹಯೊದ್ದೀನ್‌ರ ನೆರವಿಂದ ಬಾರ್ಕ್ಸ್ ಮುಕ್ತ ಛಂದದಲ್ಲಿ ಅನುವಾದ ಮಾಡಿದ ಕೃತಿ ದಿ ಎಸೆನ್ಷಿಯಲ್ ರೂಮಿ. ಅವಿದ್ದ ಪಂಜರಗಳಿಂದ ಕವಿತೆಗಳ ಬಿಡಿಸಿ ತನ್ನ ವ್ಯಕ್ತಿತ್ವದ ಪಂಜರದೊಳಗೆ ರೂಮಿಯನ್ನ ಬಾರ್ಕ್ಸ್ ಕಟ್ಟಿಹಾಕಿದರೆಂಬ ಮಾತಿದೆ. ರೆನಾಲ್ಡ್ ನಿಕಲ್ಸನ್ ಮಸ್ನವಿಯ

ಮೊದಲ ವಿಮರ್ಶಾತ್ಮಕ ಅನುವಾದ ಮಾಡಿದರು. ಅದರಲ್ಲಿ ನಮಗೆ ಎದ್ದು ಕಾಣುವುದು ಬೌದ್ಧಿಕ ಪ್ರಾಮಾಣಿಕತೆ. ಅವರ ಅನುವಾದ ಲಿಟರಲ್. ಅವರು ತನ್ನ ಉದ್ದೇಶಗಳಿಗೆ ರೂಮಿಯನ್ನು ಬದಲಾಯಿಸಲು ಹೋಗಿಲ್ಲ.

ಯಾವುದೇ ಧಾರ್ಮಿಕ ಕೃತಿಯನ್ನು ಎರಡು ಬಗೆಗಳಲ್ಲಿ ಪ್ರವೇಶಿಸಬಹುದು. ಒಂದು ಸಾಹಿತ್ಯ ಕೃತಿಯಾಗಿ, ಇನ್ನೊಂದು ಧರ್ಮದ ಭಾಗವಾಗಿ. ಸಾಹಿತ್ಯವಾಗಿ ಓದುವವರು ಅವುಗಳ ಸೌಂದರ್ಯವನ್ನು ಅನುಭವಿಸುತ್ತಾರೆ. ಸಾಹಿತ್ಯದಂತೆ ಓದುವವರು ಸಹ ಅದನ್ನು ಧಾರ್ಮಿಕ ಭಾವದಿಂದ ನೋಡುವವರ ಬಗ್ಗೆ ಗೌರವ ಇಟ್ಟುಕೊಂಡಿರಬೇಕು. –ಮಜಿದ್ ನಫೀಸಿ

2. ಪರ್ಷಿಯಾದ ಅತ್ಯಂತ ಮಹತ್ವದ ಅನುಭಾವಿ ಸೂಫಿ ಕವಿ ಜಲಾಲುದ್ದಿನ್ ರೂಮಿ ಹುಟ್ಟಿದ್ದು 1207ರಲ್ಲಿ, ಊರು ಕೊರಸಾನ್. ಅದು ಈಗಿನ ಅಫ್ಘಾನಿಸ್ತಾನದಲ್ಲಿ. ಆಗ ಅಫ್ಘಾನಿಸ್ತಾನ ಪರ್ಷಿಯಾದ ಆಳ್ವಿಕೆಗೆ ಒಳಪಟ್ಟಿತ್ತು. 1219ರಲ್ಲಿ ರೂಮಿಯ ತಂದೆ ಕುಟುಂಬ ಸಮೇತರಾಗಿ ಪಶ್ಚಿಮದ ಕಡೆಗೆ ವಲಸೆ ಹೋದರು. ಅದು ಕೊರಸಾನ್‌ನತ್ತ ಮುನ್ನುಗ್ಗುತ್ತಿದ್ದ ಮಂಗೋಲರ ಆಕ್ರಮಣದ ಭಯದಿಂದ ಎಂದು ಹೇಳಲಾಗಿದೆ. ಹೀಗೆ ವಲಸೆ ಹೋದ ಕುಟುಂಬ ಕಡೆಗೆ ಡಮಾಸ್ಕಸ್ ಮೂಲಕ ಟರ್ಕಿಯ ರಮ್ ಪಟ್ಟಣದಲ್ಲಿ ನೆಲೆಗೊಂಡಿತು. ರೂಮಿ ಎಂಬ ಹೆಸರು ಅಂಟಿಕೊಂಡಿದ್ದು ಈ ರಮ್ ಎಂಬ ಪಟ್ಟಣದಿಂದ ಬಂದವನಾಗಿದ್ದರಿಂದ. ತನ್ನ 20ನೇ ವಯಸ್ಸಿನಲ್ಲಿ ರೂಮಿ ಸೂಫಿ ತತ್ತ್ವದ ಕಡೆಗೆ ಆಕರ್ಷಿತನಾದ.

ರೂಮಿಯ ಬದುಕನ್ನು ಮೂರು ಅವಸ್ಥೆಗಳಲ್ಲಿ ವಿವರಿಸಲಾಗಿದೆ. ಆ ಮೂರೂ ಅವಸ್ಥೆಗಳಲ್ಲಿ ಅವನಿಗೆ ಒಬ್ಬೊಬ್ಬ ಸಂಪೂರ್ಣ ಮನುಷ್ಯ ಹತ್ತಿರವಾಗುತ್ತಾನೆ. ಆ ಸಂತರಲ್ಲಿ ದೈವೀಗುಣಗಳು ಪ್ರತಿಫಲಿತವಾಗುತ್ತಿರುತ್ತವೆ. ಆ ದೇವನ ಬೆಳಕಲ್ಲಿ ತನ್ನನ್ನು ಕಂಡುಕೊಳ್ಳುವ ರೂಮಿಗೆ ತಾನು ಮತ್ತು ತನ್ನ ಪ್ರಿಯ ದೇವ ಬೇರೆಯಲ್ಲ ಎನ್ನುವ ಬೋಧೆಯಾಗುತ್ತದೆ.

1244ರಲ್ಲಿ ಕೋನ್ಯಾಗೆ ತಬ್ರಿಜ್‌ನ ಶಂಸ್ ಉದ್‌ದಿನ್ ಎಂದು ಹೆಸರುಗೊಳ್ಳುವ ಅಲೆದಾಡುವ ಸಂತನ ಆಗಮನವಾಗುತ್ತದೆ. ಅವನಲ್ಲಿ ರೂಮಿಗೆ ಅವನು ಆವರೆಗೆ ಹುಡುಕುತ್ತಿದ್ದ ಪ್ರಿಯಕರನ ನಿಖರ ನಿಲವು ಕಂಡುಬರುತ್ತದೆ. ಅವನನ್ನು ಮನೆಗೆ ಕರೆದೊಯ್ಯುತ್ತಾನೆ ರೂಮಿ. ಅಲ್ಲಿ ಒಂದು ವರ್ಷ ಎರಡು ತಿಂಗಳ ಕಾಲ ಅವರಿಬ್ಬರೂ ಒಬ್ಬರನ್ನೊಬ್ಬರು ಅಗಲದಂತೆ ಇದ್ದರು. ರೂಮಿಯ ಮಗ ಸುಲ್ತಾನ್ ವಲಾದ್ ಅವರ ಒಟ್ಟಿಗಿದ್ದ ಕಾಲವನ್ನು ಅತಿ ಶ್ರೇಷ್ಠ ಅನುಭಾವಿತ್ವ ದೊರಕಿಸುವ, ದೇವರೆಡೆಗಿನ ಹಾದಿಯಲ್ಲಿ ಯಾತ್ರಿಕರಿಗೆ ದಾರಿತೋರುವಂತಹ ಸಂತ ಖಾದಿರ್‌ನ ಜೊತೆ ನಡೆದ ಮೋಸಸ್‌ರ ಯಾತ್ರೆಗೆ (ಕೊರಾನ್ 18, 64–80) ಹೋಲಿಸುತ್ತಾನೆ.

ಮೌಲ್ವಿ ರೂಮಿಯು ದೊರಕದೆ ಕಲಿಕೆಯಿಂದ ವಂಚಿತರಾದ ಅವನ ಶಿಷ್ಯರು ಶಂಸ್ ಉದ್‌ದಿನ್‌ನನ್ನು ಹೆದರಿಸಿ ಬೆದರಿಸಿ ಮಾಡಿದಾಗ ಅವನು ಡಮಾಸ್ಕಸ್‌ಗೆ

ಹೋಗಿಬಿಡುತ್ತಾನೆ. ಆದರೆ ಗೆಳೆಯನನ್ನು ಕಳೆದುಕೊಂಡ ರೂಮಿ ಅವನನ್ನು ಹುಡುಕಿ ಕರೆತರಲು ಮಗ ಸುಲ್ತಾನ್ ವಲದ್‌ನನ್ನ ಕಳುಹಿಸುತ್ತಾನೆ. ವಲದ್ ಶಂಸ್‌ನನ್ನು ಮರಳಿ ಕರೆತರುತ್ತಾನೆ. ಶಿಷ್ಯರ ಪಶ್ಚಾತ್ತಾಪದಿಂದ ಅವರನ್ನು ಕ್ಷಮಿಸುವುದರೊಂದಿಗೆ ಪ್ರಕರಣ ಸುಖಾಂತ್ಯಗೊಂಡಂತೆ ತೋರಿದರೂ ಅವರ ಸ್ನೇಹವ ಕುರಿತ ಅಸೂಯೆಯ ಕಾರಣದಿಂದ ಮತ್ತೆ ಶಂಸ್ ಡಮಾಸ್ಕಸ್‌ಗೆ ಓಡಿಹೋಗಬೇಕಾಗಿ ಬರುತ್ತದೆ. ಈ ಬಾರಿಯೂ ವಲದ್ ನಿಯೋಜಿತನಾದರೂ ಶಂಸ್ ಯಾವ ಕುರುಹನ್ನೂ ಬಿಡದೆ ಮಾಯವಾಗಿಹೋಗುತ್ತಾನೆ.

ಸುಲ್ತಾನ ವಲದ್ ಶಂಸ್‌ನನ್ನು ವಿವರಿಸುವುದು ಹೀಗೆ:

**ಕ್ಷಣವೊಂದು ಕಳೆಯಲಿಲ್ಲ**
**ಸಂಗೀತವನಾಲಿಸದೆ, ನರ್ತಿಸದೆ**
**ಒಂದಿರುಳು ಹಗಲವನು ವಿಶ್ರಮಿಸಲಿಲ್ಲ**
**ಅವನು ನ್ಯಾಯಾಧೀಶನಾಗಿದ್ದ,**
**ಕವಿಯಾದ, ಸಂತನಾಗಿದ್ದ**
**ಪ್ರೀತಿಯ ಅಮಲಿನಲ್ಲಿ ಕೊಚ್ಚಿಹೋಗಿದ್ದ**
**ದ್ರಾಕ್ಷಿಯ ಮದಿರೆಯನ್ನಲ್ಲ**
**ಆ ಬೆಳಗುವಾತ್ಮ ಕುಡಿದಿದ್ದು**
**ಬೆಳಕಿನ ದ್ರಾಕ್ಷಾರಸವನ್ನು**

ಇಲ್ಲಿ ವಲದ್ ದಿವಾನ್ ಇ ಶಂಸ್ ಇ ತಬ್ರಿಜ್ ಹೆಸರಿನ ಅನುಭಾವಿ ಕಥನಗಳ ಸಂಕಲನವನ್ನು ಭಿನ್ನ ವ್ಯಕ್ತಿತ್ವದ ಜಲಾಲುದ್ದೀನ್ ರೂಮಿಗೆ ಸೂಚ್ಯವಾಗಿ ಆರೋಪಿಸುತ್ತಾನೆ. ಶಂಸ್‌ನ ಕಳಕೊಂಡ ರೂಮಿಯ ದುಃಖಿತ ಮನಸ್ಸು ಮೆವ್ಲವಿ ಧಾರ್ಮಿಕ ನೃತ್ಯವನ್ನೂ ಅದರೊಡನೆ ಬಳಸುವ ಶೋಕಗೊಳಲಿನ ವಾದನವನ್ನೂ ಶುರುಮಾಡಿತು ಎನ್ನಲಾಗಿದೆ.


ಮುಂದಿನ ಪ್ರಸಂಗ (1252–1261) ರೂಮಿಯ ಬದುಕಿನಲ್ಲಿ ಸಂಭವಿಸಿದ್ದು ಅವನ ಸಹಾಯಕನಾಗಿದ್ದ ಸಲಾಹುದ್ದಿನ್ ಫರೀದುನ್ ಝುರ್ಕುಬ್‌ಗೆ ಸಂಬಂಧಿಸಿ. ಶಂಸ್ ಕಾಣೆಯಾದ ಬಳಿಕ ಸಲಾಹುದ್ದಿನ್‌ನಿಗೆ ರೂಮಿ ತನ್ನ ಸೇವೆಯನ್ನು ಮುಡಿಪಾಗಿಟ್ಟ. ಮತ್ತದೇ ಬಗೆಯ ಪ್ರತಿರೋಧಗಳಿಗೆ ಅವನು ಗುರಿಯಾದ.

1261ರಲ್ಲಿ ಸಲಾಹುದ್ದಿನ್ ಮೃತನಾದ. ರೂಮಿಗೆ ದೊರೆತದ್ದು ಅವನ ಇನ್ನೊಬ್ಬ ಅನುಯಾಯಿ ಹುಸಾಮುಲ್ ದಿನ್. ಅವನ ಹೆಸರನ್ನು ರೂಮಿ ಮಸ್ನವಿಯ ಜೊತೆ ಆನುಭಾವಿಕವಾಗಿ ತಳುಕು ಹಾಕಿದ್ದಾನೆ. ಮಸ್ನವಿಯನ್ನು ಅವನು ಹುಸಮ್‌ನ ಪುಸ್ತಕ ಎಂದು ಹೇಳಿಕೊಂಡಿದ್ದಾನೆ. ತನ್ನನ್ನು ತಾನು ಸೃಷ್ಟಿಸಿದ ಶೋಕಗೀತೆಯ ನುಡಿವ ಹುಸಾಮುಲ್‌ನ ತುಟಿಯ ಮೇಲಿನ ಕೊಳಲು ಎಂದು ಕರೆದುಕೊಂಡಿದ್ದಾನೆ.

1273ರಲ್ಲಿ ರೂಮಿ ಮೃತನಾಗುವವರೆಗೂ ಹುಸಾಮುಲ್ ರೂಮಿಯ ಖಲೀಫನಂತೆ ಇದ್ದನಲ್ಲದೆ ಮೆವ್ಲವಿ ಪರಂಪರೆಯ ಮುಖಂಡನಾಗಿ ಇದ್ದ.

ಆಧ್ಯಾತ್ಮಿಕ ನಿಷ್ಕಾಮ ಪ್ರೇಮ ಸೂಫಿಗಳ ನಡುವೆ ಬೆಳೆಯುವುದು ರೂಮಿ ತನ್ನ–ಶಂಸ್‌ನ ನಡುವಣ ಪ್ರೀತಿಯು ಒಂದು ಆತ್ಮ ಎರಡು ದೇಹ ಎಂದು ಹೇಳುವ ಮೊದಲೇ ಇತ್ತು. ಪ್ರೀತಿಸುವ ಮನಸ್ಸುಗಳ ನಡುವೆ ಎಲ್ಲ ಭಿನ್ನತೆಗಳೂ ಅಳಿದುಹೋಗುತ್ತವೆ. ಅಲ್ಲಿ ಉಳಿಯುವುದು ಪ್ರೀತಿಯ ಏಕತೆ. ಪ್ರಣಯಿ ಮತ್ತು ಪ್ರಿಯತಮೆ ತಮ್ಮ ಭಿನ್ನ ವ್ಯಕ್ತಿತ್ವಗಳನ್ನು ನಿರಸನಗೊಳಿಸಿಕೊಂಡು ಏಕತ್ರವಾಗಿರುತ್ತಾರೆ. ಪಶ್ಚಿಮದ ಓದುಗರಿಗೆ ಇದರ ಸಮಾನಾಂತರ ರೂಪವೊಂದು ಡಾಂಟೆಯಲ್ಲಿ ದೊರೆಯುತ್ತದೆ. ಅವನು ತನ್ನ ಪ್ರೇಯಸಿಯನ್ನು ಸ್ವರ್ಗದ ಜ್ಞಾನವನ್ನಾಗಿಸಿ ಬಿಯಾಟ್ರಿಸ್‌ನ ಹೆಸರಿನಲ್ಲಿ ಹಾಡಿಹೊಗಳಿದ್ದು ಅದು.

ರೂಮಿಯ ಸಾಹಿತ್ಯ ವಿಫುಲವಾದದ್ದು ಮತ್ತು ಗಹನವಾದದ್ದು. ಆಧ್ಯಾತ್ಮಿಕವಾಗಿ ರೂಪಕಾತ್ಮಕವಾದ 2500 ಗೀತಗಳು ದಿವಾನ್ ಇ ಶಂಸ್ ಇ ತಬ್ರಿಜ್‌ನಲ್ಲಿವೆ. ಆರು ಸಂಪುಟಗಳ ಮಸ್ನವಿಯಲ್ಲಿ 25000 ದ್ವಿಪದಿಗಳಿವೆ. ಅವನದೆಂದು ಖಚಿತವಾದ ರುಬಾಯತ್‌ಗಳು 1600.



ಶಂಸ್ ಇ ತಬ್ರೀಜ್

ಅವನ ಕಾವ್ಯ ಮಾರ್ಗವು ಅವನಿಗಿಂತ ಹಿಂದೆಯೇ ನಿರ್ಮಿತವಾದದ್ದು. ಇಬ್ಬರು ಮಹತ್ವದ ಸೂಫಿ ಕವಿಗಳಾದ ಘಝ್ನಾ ಮತ್ತು ನಿಶಾಪುರದ ಫರೀದುದ್ದಿನ್ ಅತ್ತಾರ್ ಅವರು ಅದರ ಮಾರ್ಗ ಪ್ರವರ್ತಕರು. ಅವರಿಗೆ ರೂಮಿ ಋಣಿಯಾಗಿದ್ದಾನೆ. ಆದರೆ ರೂಮಿಯ ವಿಶ್ವ ಅವರಿಗಿಂತಲೂ ವಿಶಾಲವಾದದ್ದು. ಅವನ ಆಯ್ಕೆಯ ವಸ್ತುಗಳು ಹೊಸವು. ಅವುಗಳ ನಿರ್ವಹಣೆಯ ವಿಧಾನವೂ ಹೊಸತು. ಅವನ ಕಾವ್ಯದ ಸಾಮಾನ್ಯ ಲಕ್ಷಣಗಳು ಸರಳವಾದವು ಹಾಗೂ ನಂಬಿಕೆಗೆ ಅರ್ಹವಾದವು. ಮಸ್ನವಿಯಲ್ಲಿ ಅವು ವಿಸ್ತಾರಗೊಂಡವು. ಅಲ್ಲಿನ ಹರವು ಮತ್ತು ಸ್ವಾತಂತ್ರ್ಯ ನಮಗೆ ಬೆರಗನ್ನು ಉಂಟುಮಾಡುತ್ತದೆ. ಕಾವ್ಯ ಹಾದಿಯಿಲ್ಲದ ಸಾಗರದಂತೆ. ಅದಕ್ಕೆ ಸೀಮೆಗಳಿಲ್ಲ. ಅವನು ಸಾದರಪಡಿಸುವುದರಲ್ಲಿ ಸಿಪ್ಪೆ ತಿರುಳುಗಳ ಭಿನ್ನತೆಯಿಲ್ಲ.

ರೂಮಿಯ ಫಿಲಾಸಫಿ ಏಕದೇವನ ಕಲ್ಪನೆಯದ್ದು. ಮತ್ನವಿಯ ಬಗ್ಗೆ ರೂಮಿ ಅದು ಏಕತೆಯನ್ನು ಮಾರುವ ಅಂಗಡಿ(ವಹಾದತ್). ನಿಮಗೆ ಅಲ್ಲಿ ಕಾಣುವುದೆಲ್ಲ ಒಂದೇ. ಬೇರೆ ಏನಾದರೂ ಕಂಡರೆ ಅದು (ದೇವರ)ಪ್ರತಿಕೃತಿ ಅಷ್ಟೇ. ಅಸ್ತಿತ್ವದ ರಣರಂಗದಲ್ಲಿ ಅದರ ಎಲ್ಲ ತೊಳಲಾಟಗಳು, ವೈಮನಸ್ಸುಗಳು ವೈಶ್ವಿಕ ಸಾಮರಸ್ಯದ ವ್ಯವಸ್ಥೆಯಲ್ಲಿ ನಿಬಾಯಿಸಬೇಕಾದ ಕರ್ತವ್ಯಗಳು. ಅವುಗಳ ನಿಜಾರ್ಥ ದಕ್ಕುವುದು ಅನುಭಾವಿಗಳಿಗೆ ಮಾತ್ರ ಎನ್ನುತ್ತಾನೆ.

ಸೂಫಿ ವಿಶ್ವದೇವೈಕ್ಯವಾದ(ಪ್ಯಾನ್‌ಥೀಯಿಸಂ) ಕೆಳಗಿನ ಪ್ರಮೇಯಗಳನ್ನು ಒಳಗೊಂಡಿದೆ.

1. ಒಂದು ನಿಜವಾದ ಅಸ್ತಿತ್ವವಿದೆ, ಅದು ಎಲ್ಲ ಅಸ್ತಿತ್ವಗಳಿಗೂ ಆತ್ಯಂತಿಕವಾದ ಎಡೆ. ಇದನ್ನು ದೇವನೆಂದು ಅಥವಾ ಮರೆಯ ಚೇತನವನ್ನು ಪ್ರಕಟಪಡಿಸುವ ವಿಶ್ವವೆಂದು ನೋಡಬಹುದು.

2. ಕಾಲದಲ್ಲಿ ಸೃಷ್ಟಿ ಎನ್ನುವುದಿಲ್ಲ. ದೈವಿಕ ಸಂಭವಿಸುವಿಕೆಯು ನಿರಂತರವಾದುದು. ವಿಶ್ವದ ಎಲ್ಲವೂ ಬದಲಾಗುತ್ತಲೂ, ನೇಪಥ್ಯಕ್ಕೆ ಸರಿಯುತ್ತಲೂ ಇರುವಂತೆಯೇ ಒಂದು ಕಣದ ನಿಲುಗಡೆಯೂ ಇಲ್ಲದೆ ಎಲ್ಲವೂ ಪುನರ್ನವೀಕರಣಗೊಳ್ಳುತ್ತಿರುತ್ತವೆ. ಇವು ದೇವನೊಟ್ಟಿಗೆ ಏಕಕಾಲದ ಅಸ್ತಿತ್ವ ಹೊಂದಿರುತ್ತವೆ. ಅವನ ಅರಿವಿನಲ್ಲಿ ಅದು ಇಲ್ಲದೇ ಇರುವ ಕಾಲವೇ ಇಲ್ಲ.

3. ದೇವನು ಎಲ್ಲ ಇಂದ್ರಿಯ ಗೋಚರ ವಸ್ತುಗಳಲ್ಲೂ ಸಂಭವಿಸಿರುತ್ತಾನೆ ಮತ್ತು ಕಂಡುಬರುತ್ತಾನೆ. ಅವನು ಎಲ್ಲ ರೂಪಗಳ ಮೀರಿದ್ದಾನೆ ಮತ್ತು ಅಗ್ರಾಹ್ಯನೂ, ಅತೀತನೂ ಆಗಿದ್ದಾನೆ.

4. ದೈವಿಕ ಸಾರಸಂಗ್ರಹವು ಅರಿಯಲಾಗದ್ದು. ಅವನು ಕೊರಾನ್‌ನಲ್ಲಿ ಬರುವ ಪಾತ್ರಗಳ, ಹೆಸರುಗಳ ಮೂಲಕ ತನ್ನ ಗುಣವನ್ನು ವ್ಯಕ್ತಪಡಿಸುತ್ತಾನೆ. ದೇವರ ಗುಣಗಳು ವೈವಿಧ್ಯಮಯವಾದವು ಮತ್ತು ಒಂದಕ್ಕೊಂದು ವಿರೋಧವಾದವು. ಇದರಲ್ಲಿನ ಭಿನ್ನತೆಗಳು ಈ ಇಂದ್ರಿಯ ಗೋಚರ ವಿಶ್ವದಲ್ಲಿಯೇ ಗೋಚರಿಸುತ್ತವೆ.

ಇದರ ಹೊರತು ಒಳಿತು ಕೆಡುಕುಗಳನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲ. ವಾಸ್ತವದಲ್ಲಿ ಕೇಡು – ಈವಿಲ್ ಎಂಬುದಿಲ್ಲ.

5. ಪವಿತ್ರ ಪರಂಪರೆಯ ಪ್ರಕಾರ ನಾನು ಎಲ್ಲ ಜೀವಿಗಳನ್ನೂ ಸೃಷ್ಟಿಸಿದ್ದೇನೆ, ನಾನಿರುವುದನ್ನು ತಿಳಿಸುವುದಕ್ಕೋಸ್ಕರ ಎನ್ನುವುದು ದೇವವಾಣಿ. ದೇವನ ಜ್ಞಾನವೆಲ್ಲವೂ ವಸ್ತು ರೂಪದಲ್ಲಿ ಮೂರ್ತೀಕರಿಸಲ್ಪಟ್ಟಿವೆ, ಅದರಲ್ಲೂ ವಿಶೇಷವಾಗಿ ಮನುಷ್ಯನಲ್ಲಿ. ಈ ವಿಶ್ವವನ್ನು ಆಳುವ, ಕ್ರಿಯಾಶೀಲವಾಗಿಸುವ ದೈವೇಚ್ಛೆಯೆಂಬ ಅಂತರ್ಗತವಾದ ವಿವೇಚನಾಯುಕ್ತ ತತ್ತ್ವ(ದೈವವಾಕ್ಯ)ವು ಪರಿಪೂರ್ಣ ಮನುಷ್ಯನಲ್ಲಿ ಪರಿಪೂರ್ಣವಾಗಿ ವ್ಯಕ್ತವಾಗುತ್ತದೆ. ಈ ಪರಿಪೂರ್ಣ ಮನುಷ್ಯನಲ್ಲಿ ಪರಿಪೂರ್ಣವಾಗಿ ವ್ಯಕ್ತವಾಗುವಂತಹ ಪರಿ ಮೊದಲೇ ಇದ್ದ ವಾಸ್ತವ ಅಥವಾ ಮುಹಮ್ಮದರ ಚೇತನ. ಅದು ಆಡಂನಿಂದ ಪ್ರಾರಂಭವಾದ ಮತ್ತು ಮುಹಮ್ಮದರ ಆಧ್ಯಾತ್ಮಿಕ ಉತ್ತರಾಧಿಕಾರಿ ಸಂತರುಗಳ ಮೂಲಕ ಮುಂದುವರೆದ ಪ್ರವಾದಿ ಪರಂಪರೆಯ ಮೇಲೆ ಬೆಳಕು ಚೆಲ್ಲಿ ಪ್ರಜ್ವಲಿಸುವಂತೆ ಮಾಡುತ್ತದೆ. ಪ್ರವಾದಿಯಾಗಿರಲಿ, ಸಂತನಾಗಿರಲಿ ಪರಿಪೂರ್ಣ ಮನುಷ್ಯ ದೇವನೊಂದಿಗೆ ಒಂದಾಗುವುದನ್ನು ಪಡೆದುಕೊಂಡಿರುತ್ತಾನೆ. ಅವನು ಪ್ರಮಾಣೀಕೃತ ಆಕೃತಿ ಮತ್ತು ದೈವದ ವ್ಯಕ್ತ ರೂಪ. ಆದ್ದರಿಂದಲೇ ಸೃಷ್ಟಿಯ ಅಂತಿಮ ಕಾರಣ. ಏಕೆಂದರೆ ಅವನ ಮೂಲಕವೇ ಭಗವಂತ ಸ್ವಯಂ ತನ್ನ ತಾನರಿತ ಜಾಗೃತನಾಗುವುದು.

ಇವು ರೂಮಿಯ ಕಾವ್ಯದಲ್ಲಿ ಅಂತರ್ಗತವಾಗಿ ಹರಿಯುವ ವಸ್ತುಗಳು. ಅವುಗಳನ್ನು ಮೊದಲಿಗೆ ಬರೆದವ ರೂಮಿ ಅಲ್ಲ. ಅದು 9ನೇ ಶತಮಾನದಿಂದ ಶುರುವಾಗಿ ಸೂಫಿ ಪರಂಪರೆಯಲ್ಲಿ ಕಾಲಕ್ರಮೇಣ ಅರಳಿಕೊಂಡ ಅಂತಿಮವಾಗಿ ಅಂಡಲೂಸಿಯನ್ ಅನುಭಾವಿ ಇಬ್ನ್ ಅಲ್ ಅರಬಿ(1165–1240)ಯಿಂದ ರೂಪಿತವಾದ ನಂಬಿಕೆಗಳು. ಇಸ್ಲಾಮಿನ ವಿಶ್ವ ದೈವೇಕವಾದದ ತಂದೆ ಎಂದು ಅರಬಿಯನ್ನು ಕರೆಯುವುದು ಸರಿಯಾದುದು.

ರೂಮಿಯಲ್ಲಿ ಪರ್ಷಿಯನ್ ಅನುಭಾವಿಕತೆಯು ಪರಮೋಚ್ಚ ಅಭಿವ್ಯಕ್ತಿಯನ್ನು ಕಂಡುಕೊಂಡಿದೆ. ಸೂಫಿ ಕಾವ್ಯದ ಲ್ಯಾಂಡ್‌ಸ್ಕೇಪ್‌ನಲ್ಲಿ ಅವನೊಂದು ಗಂಭೀರ ಪರ್ವತ ಶಿಖರ. ಹೋಲಿಕೆಯಲ್ಲಿ ಉಳಿದವರು ಬದಿಯ ಗುಡ್ಡ ದಿಬ್ಬಗಳು.

**– ಆರ್ ಎ ನಿಕಲ್ಸನ್‌ರ ಮುನ್ನುಡಿಯಿಂದ**

3. ಮತ್ನವಿಗೂ ದಿವಾನ್‌ಗೂ ಇರುವ ವ್ಯತ್ಯಾಸವೆಂದರೆ ಒಂದು ಮಹಾಘನ ಗಂಭೀರ ನದಿ ಶಾಂತ, ಆಳ. ಹಲವು ಬಗೆ ನೆಲದ ಮೇಲೆ ಸಾಗಿ ಅಳೆಯಲಾಗದ ಸಾಗರವ ಸೇರುವುದು. ಇನ್ನೊಂದು ಬೆಟ್ಟ ಗುಡ್ಡಗಳ ಮೇಲೆ ಬೆಳ್ನೊರೆಯನ್ನುಕ್ಕಿಸಿ ಅವುಗಳ ಏಕಾಕಿತನದ ಬೇಸರವ ಕಳೆಯುವುದು. ರೂಮಿಯ ಕವಿತೆ ಜಾಮಿಯ ತಾಂತ್ರಿಕ ಪರಿಣತಿಯಲ್ಲಿ ನಯಗೊಳಿಸಿದ್ದಲ್ಲ. ಅವನಿಗೆ ಕೆಲವು ಪದಗಳ ಪರಿಭಾಷೆಗಳ ಮೇಲೆ ಅತೀವ ಪ್ರೀತಿ. ಅಲ್ಲದೆ ಅವನಲ್ಲಿ ಹಾಸ್ಯದ ಸುಳಿವೇ ಇಲ್ಲ. ಆದರೂ ಅವೆಲ್ಲ ಅವನ ಹಲವು ಕವಿತೆಗಳ ಭವ್ಯತೆಯಲ್ಲಿ ಹೊಳಪು ಕಳೆದುಕೊಂಡುಬಿಡುತ್ತವೆ.

ಅವನ ಕವಿತೆಗಳ ಸ್ವರ್ಗ ಸಂಗೀತ ನಮ್ಮನ್ನು ಬೇರೆ ಲೋಕಕ್ಕೆ ಕೊಂಡೊಯ್ದುಬಿಡುತ್ತದೆ. ಅವನು ಹಾಡುತ್ತಾನೆ, ನಮ್ಮ ಪಯಣ ಬೆಸುಗೆಯ ಗುಲಾಬಿ ತೋಟದೆಡೆಗೆ ಎಂದು. ಆ ದಿವ್ಯ ಗುಲಾಬಿ ತೋಟವನ್ನು ಕುರಿತು ಹಾಡಿದ ರೂಮಿ ಆ ಗುಲಾಬಿ ಬಾಡುವುದನ್ನು, ಮನುಷ್ಯ ಹೃದಯಗಳು ನೋವುಂಡು ನೋಯುವುದನ್ನೂ ಕುರಿತು ಹಾಡುವುದ ಮರೆಯಲಿಲ್ಲ.

ಮಸ್ನವಿ ಬರೆಯಲು ಮೊದಲಿಟ್ಟಾಗ ರೂಮಿಗೆ 43 ವರ್ಷ. ಹಲವು ರಾತ್ರಿಗಳನ್ನು ರಚಿಸುತ್ತಲೇ ಕಳೆದ. ಅವನು ಹಾಡಿದುದನ್ನು ಅವನ ಗೆಳೆಯ ಹಸಮ್ ಬರೆದುಕೊಳ್ಳುತ್ತಿದ್ದ. ಮೊದಲ ಪುಸ್ತಕ ಮುಗಿದಾಗ ಹಸಮ್‌ನ ಪತ್ನಿ ತೀರಿಹೋದಳು. ಮತ್ತೆ ಕೆಲಸ ಶುರುವಾದದ್ದು ಎರಡು ವರ್ಷದ ನಂತರ.

**– ಹ್ಯಾಡ್ಲ್ಯಾಂಡ್ ಡೇವಿಸ್.**

■



# ರೂಮಿಯ ಒಂದಿಷ್ಟು ದಿವಾನ್‌ಗಳು

**ಆರ್. ವಿಜಯರಾಘವನ್**

[ಸೂಚನೆ: ಇಲ್ಲಿ ದಿವಾನ್‌ಗಳ ಒಂದಿಷ್ಟು ಅನುವಾದವಿದೆ. ನನಗೆ ಸಂತೋಷ ತಂದ ಒಂದಿಷ್ಟನ್ನು ಕಾಲ ಕಾಲಗಳಲ್ಲಿ ಅನುವಾದಿಸಿದ್ದೇನೆ. ಅನುವಾದಕ್ಕೆ ಆಯ್ದುಕೊಂಡ ಆಕರಗಳು ಆರ್ ಎ ನಿಕಲ್ಸನ್, ಎ ಜೆ ಆರ್ಬರಿ, ಕೋಲ್‌ಮನ್ ಬಾರ್ಕ್ಸ್, ರಾಬರ್ಟ್ ಬ್ಲೈ, ಹಾಡ್ಲಂಡ್ ಡೇವಿಸ್, ನಾದಿರ್ ಖಲೀಲಿ, ಜೊನಾಥನ್ ಸ್ಟಾರ್ ಅವರು ಮಾಡಿದ ಇಂಗ್ಲಿಷ್ ಅನುವಾದಗಳು. ಈ ಅನುವಾದಗಳ ಮುಖ್ಯ ಉದ್ದೇಶ ಕನ್ನಡಿಗರಿಗೆ ಇದು ಇಲ್ಲುಂಟು ಎಂದು ತೋರುವ ಪ್ರಯತ್ನ]

## ಎತ್ತಿಕೋ ವೀಣೆಯನು

ಅನುದಿನದ ಹಾಗೆಯೇ ಈ ದಿನವೂ
ನಾವು ಕೆಟ್ಟುಹೋಗಿದ್ದೇವೆ, ಸುರೆಯಿಂದ
ಎತ್ತಿಕೋ ವೀಣೆಯನು,
ತೆರೆಯಬೇಡ ಚಿಂತೆಗಳ ಕದವನ್ನು

ಪ್ರಾರ್ಥನೆಗೊ ನೂರುವಿಧ:
ತಲೆಬಾಗುವುದು, ಸಾಷ್ಟಾಂಗವೆರಗುವುದು

ಆ ಪ್ರಿಯಕರನ ಸೊಬಗು ಅವನಿಗೆ
ಯಾವನ ಪ್ರಾರ್ಥನೆಯು ಸೊಬಗೋ ಅವನಿಗೆ
***

## ಕನಸಿನಲ್ಲಿ ಕುಡಿದ ನೀರು

ತಿನ್ನಬಹುದು ನೀನು
ಒಳ್ಳೊಳ್ಳೆಯ ಸವಿದಿನಿಸನ್ನು
ಒಳ್ಳೆಯ ಹುರಿದ ಮಾಂಸವನ್ನು
ಮತ್ತೆ ಕುಡಿಯಲೂಬಹುದು
ಅತ್ಯುತ್ಕೃಷ್ಟ ಮಧುವನ್ನು

ತಿಳಿ ಮನದಣಿಯೆ ತಿಳಿನೀರನ್ನು
ಕನಸಿನಲಿ ನೀನು ಕುಡಿದೆ

ನಿದ್ರೆಯಿಂದೆದ್ದಾಗ
ನೀನಿನ್ನೂ ಬಾಯಾರಿದವನು
ಯಾತಕ್ಕೂ ಬಾರದು
ಕನಸಿನಲ್ಲಿ ಕುಡಿದ ನೀರು
***



## ಕದಪುಗಳು

ಗುಲಾಬಿ ತೋಟದಲ್ಲಿ
ಅಡ್ಡಾಡಲು ಹೋದೆ
ಪ್ರಿಯತಮೆಯ ಕೂಡಿ
ಹರಿಯಿತು ನೋಟ
ಹೂವೊಂದರ ಮೇಲೆ.
ನಿಂತು ನೋಡಿದೆ
ಪರಿವೆಯಿರದೆ

ಛೇಡಿಸಿದಳೆನ್ನ ಪ್ರಿಯತಮೆ
ನಾಚಿಕೆಯಾಗಬೇಕು ನಿನಗೆ



ಹುಚ್ಚ
ಗುಲಾಬಿಯೆಸಳುಗಳ
ನೋಡುತ್ತಿರುವೆ
ಇಗೋ ಇಲ್ಲಿವೆ
ನನ್ನ ಕದಪುಗಳು
***

## ಇನ್ನೆರಡು ಬಟ್ಟಲು

ಓ ಮದಿರೆಯ ಬಟ್ಟಲನ್ನು ತುಂಬುತ್ತಿರುವವನೇ
ಮೊದಲು ನೀ ಮದಿರೆಯನ್ನಿತ್ತ ಪಾತ್ರೆಯಿಂದ
ಇನ್ನೆರಡು ಬಟ್ಟಲು ತುಂಬಿಕೊಡು

ಅನಂತವಾಗಲಿ ನನ್ನ ಆನಂದ
ಗುಟ್ಟಾಗಿರಲಿ ಅದರ ಸವಿ

ಇನ್ನೊಮ್ಮೆ ನೀನೇನಾದರೂ
ಅದರ ಮುಚ್ಚಳವ ತೆರೆದೆಯಾದರೆ
ಕುಡಿಕುಡಿದು ಹಾಳಾಗುವಂತೆ ಮಾಡು ನನ್ನ

## ನೀನು ಅರಸನ ಹದ್ದು

ಪ್ರತಿ ಕ್ಷಣವೂ ಮನುಷ್ಯನ ಅಂತರಾಳಕ್ಕೆ
ಸ್ವರ್ಗದಿಂದ ಒಂದು ದಿವ್ಯದರ್ಶನ ಒಲಿದು ಬರುತ್ತದೆ
ಇನ್ನೆಷ್ಟು ಕಾಲ ಗಸಿಯಂತೆ ಈ ಭೂಮಿಯ ಮೇಲಿರುತ್ತೀಯ
ಬಂದುಬಿಡು, ಮೇಲಕ್ಕೆ
ಕೊನೆಗಾಲದಲ್ಲಿ ಮನಸ್ಸು ಅತಿಭಾರವಾಗಿರುವವನು
ತಾನು ಗಸಿಯೆಂಬುದನ್ನು ಸಾಬೀತುಪಡಿಸುತ್ತಾನೆ
ಆ ಮೇಲೆಯೇ ತನ್ನ ಪಾತ್ರೆಯಲ್ಲಿ
ಅವನು ಗಸಿತೊಳೆದು ಮೇಲೇರುವುದು

ನಿಮಿಷ ನಿಮಿಷಕ್ಕೂ ಪಾತ್ರೆಯನ್ನ ಕಲಕಬೇಡ
ನಿನ್ನ ನೀರು ತಿಳಿಯಾಗಲಿ
ನಿನ್ನ ಕೆಸರು ಹೂಳಿಗೆ ಬೆಳಕು ಹಿಡಿಯಲಿ
ಆಗಿ ನಿನ್ನ ನೋವುಗಳು ಮಾಯವಾಗಲಿ

ಇದು ಆಧ್ಯಾತ್ಮಿಕ, ಪಂಜಿನಂತೆ
ಆದರೆ ಇದರ ಬೆಳಕಿಗಿಂತ ಹೊಗೆಯೇ ಹೆಚ್ಚು
ಹೊಗೆಯು ಮಿತಿಯ ಮೀರಿದಾಗ
ಮನೆಯ ಪ್ರಭೆಯನ್ನು ತೋರಗೊಡುವುದಿಲ್ಲ.
ಹೊಗೆಯನಣಗಿಸು, ಪಂಜಿನ ಬೆಳಕು ಆನಂದ ನೀಡುವುದು
ಈ ಮನೆ ಮತ್ತದು ಎರಡೂ ಬೆಳಗುವವು
ನಿನ್ನ ಬೆಳಕಿನಿಂದ

ಕೆಸರು ನೀರಲ್ಲಿ ನೋಡಿದೆಯೆನ್ನು, ಚಂದಿರನೂ ಕಾಣುವುದಿಲ್ಲ
ಆಗಸವೂ ಕಾಣದು. ವಾತಾವರಣವನ್ನು ಕತ್ತಲೆಯು ಕೊಂಡರೆ
ಸೂರ್ಯಚಂದ್ರರು ಮಾಯವಾಗುವರು

ಉತ್ತರದ ಗಾಳಿ ಬೀಸುತ್ತಿದೆ. ವಾತಾವರಣ ತಿಳಿಯಾಗಲಿದೆ
ಆಹ್ಲಾದದ ಸುಳಿಗಾಳಿ ಬೆಳಗಿನಲಿ ಬೀಸುವುದು ಈ ಪ್ರಭೆಗಾಗಿಯೇ
ಈ ಆಧ್ಯಾತ್ಮದ ಸುಳಿಗಾಳಿ ದುಃಖದೆಲ್ಲ ಎದೆಗಳನ್ನೂ ಸಂತವಿಸುತ್ತದೆ
ಒಂದು ಕ್ಷಣ ಉಸಿರು ನಿಂತುಹೋಗಲಿ ಸಾಕು
ಚೇತನದ ಮೇಲೆ ನಿರ್ವಾಣ ಆವರಿಸಿ ಬರುವುದು

ಆತ್ಮ ಈ ವಿಶ್ವದಲ್ಲಿ ಅಪರಿಚಿತ. ಬಯಸಿ ಬಾಯಿಬಿಡುತ್ತಿದೆ
ಅನಿಕೇತನಕ್ಕೆ. ಏಕೆ? ಅದೇಕೆ ಪಶುಪ್ರವೃತ್ತಿ
ಇಷ್ಟು ಕಾಲ ತೆಗೆದುಕೊಳ್ಳುತ್ತಿದೆ, ಮೇಯುವುದಕ್ಕೆ?

ಪರಿಶುದ್ಧ, ಸದ್ಗುಣಿ ಆತ್ಮ, ಎಷ್ಟು ಕಾಲ ಕಳೆಯುತ್ತಿ ಯಾತ್ರೆಯಲ್ಲಿ?
ನೀನು ಅರಸನ ಹದ್ದು. ಅವನ ಸಿಳ್ಳೆಯ ಶಬ್ದಕ್ಕೆ ಹಾರು ಹಿಂದಕ್ಕೆ
***

## ಕೊಳಕು ಒಂಟೆಯ ಹಾಲು

ಇಂದು ಆ ಪರಿಶುದ್ಧ ಮಧುವನ್ನು ಬಟ್ಟಲಲಿ ತುಂಬಿ ಕೊಡು
ಈ ಸ್ವರ್ಗದ ಆತುರದ ಚಕ್ರವನು ಗೊಂದಲಾಧಿಕ್ಯದಲ್ಲಿ ಬಡಿ
ಕಣ್ಣು ತಪ್ಪಿಸಿ ಬಂದಿದೆ ಆ ಅಗೋಚರ ಪಾತ್ರೆ ಎಂದುಕೊಂಡರೂ
ಮಧುಮತ್ತತೆಯನ್ನು, ನೈತಿಕ ಚಂಚಲತೆಯನ್ನು ಬಚ್ಚಿಡಲಾಗದು
ಖುಷಿಯ ರಸದಾಟದ, ಸವಿನುಡಿಯ, ಮಧುರ ಚಿಂತನೆಯ ಪ್ರೀತಿಯೆ
ಆ ಮರೆಗೆ ತೆರೆಹೊದ್ದರಸನ ಅವಕುಂಠನವ ಕಿತ್ತುಕೊಂಡುಬಿಡು

ಪವಿತ್ರವಾದವನೆ, ಆ ಸಂಭ್ರಮದ ಕೇಕೆಗಳು
ಇತ್ತತ್ತ ಎತ್ತೆತ್ತಲಿಂದಲೂ ಮೊಳಗಬಹುದು

ತುಂಬು ಗುಲಾಬಿ ಕೆಂಪು ಕೆನ್ನೆ, ಪಾತ್ರೆ ಕುಡಿಕೆಯನ್ನೂ
ಆ ರೋಜಾ ಹೂಗಿಡವ ಬಯಲಿಗಿಡುವುದು ಬೇಡವೆನಿಸಿದರೆ ನಿನಗೆ
ಆ ಪನ್ನೀರಿನ ಅಂಗಡಿಯನ್ನೇಕೆ ತೆರೆದೆ

ನಮ್ಮೆಲ್ಲ ವಿವೇಕಗಳ ಕದ್ದು ಈ ನದಿಯ ಹರಿಯಲು ಬಿಟ್ಟೆ –
ಎಸೆದು ನೀರಿಗೆ ನೀರ ಸೆಳೆವಿನ ವೇಗದಲಿ ಕೊಚ್ಚಿ ಹೋಗುವಂತೆ
ಮನವೇ, ನಾವು ಈ ಬಯಲಿನಲಿ ಹುಟ್ಟಿದ ಕಂತೆಯಂತೆ
ಒಣದುಟಿಗಳಲಿ ಮಳೆ ಹೊತ್ತ ಮೋಡವ ಹುಡುಕುತ್ತಿದ್ದೇವೆ
ಈ ದೇಹ ಹೊತ್ತು

ಎತ್ತೆತ್ತಲೂ ಹೊಸ ದೂತನೊಬ್ಬ ಸಾರುತ್ತಾನೆ
ನೀನೆಂದಿಗೂ ಕಾಣಲಾರೆ, ಹೋಗಿಬಿಡು
ಬೇಡಿಕೋ ದೇವರೇ ಕಾಪಾಡು, ಆ ಅಪಶಕುನದ ಕಾಗೆಯಿಂದ
ಎಲ್ಲ ಚೇತನಗಳಲ್ಲು ದಂಗೆಯ ಪ್ರಚೋದಿಸುವವನೇ
ಪ್ರತಿಯೊಬ್ಬ ಗೋಹಾನ  ಥೈಲಿ ಕದಿಯುವವನೇ
ಆ ಪಿಟೀಲು ನುಡಿಸುವ ಬು ಬಕರ್‌ನ  ಕೈನಿಂದ
ಪಿಟೀಲು ಕಿತ್ತುಕೊಳ್ಳುವವನೇ
ಇಂದು ನಾನು ಬಯಸುತ್ತೇನೆ, ನೀನು ಈ ಚಪಲಮಾತಿನ
ಆತ್ಮಕ್ಕೆ ಮತ್ತೇರಿಸು, ಹುಚ್ಚುಹಿಡಿಸು ಎಂದು
ಬರಿ ಮಾತಿನ ವಿವೇಕವದು
ನಮಗೆ ಜೀವಜಲವು ಪುನರುತ್ಥಾನವಾದಂತೆ
ಬೆಡೋಯಿನ್ನನಿಗೆ ಕೊಳಕು ಒಂಟೆಯ ಹಾಲು ಬದುಕಾದಂತೆ

ಅನುಪಮ ನಿನ್ನ ಅಂದ, ಗಾಂಭೀರ್ಯ
ಮೌನವಾಗಿರು, ಉಸಿರ ಹಿಡಿದುಕೋ
ಉದಾಸೀನರಾಗಿ ಜೂಗರದಲಿ ಮುಳುಗಿರುವ
ನಾವಿರುವುದು ಅರಿವಿಗೆ ಬಾರದಿರುವಂತೆ

***



## ಮಾತೆಂಬ ಮೋಡಗಳಲ್ಲಿರುವ ಸೂರ್ಯ

ಪ್ರೀತಿಗೆ ನೆತ್ತರ ಪರದೆಗಳ ನಡುವೆ
ರೋಸ್ ಬೋವರ್ ಪೊದೆಗಳಿವೆ

ಪ್ರಣಯಿಗಳಿಗೆ ಪ್ರೀತಿಯ ಹೋಲಿಸಲಸದಳ
ಸೌಂದರ್ಯದಲ್ಲಿ ತೊಡಗಲು ವಿಷಯಗಳಿವೆ

ಬುದ್ಧಿ ಹೇಳುತ್ತದೆ: ಆರು ದಿಕ್ಕುಗಳೇ ಸೀಮೆಗಳು
ಹೊರಕ್ಕೆ ಯಾವ ದಾರಿಯೂ ಇಲ್ಲ

ಪ್ರೀತಿ ನುಡಿಯುತ್ತದೆ ಒಂದು ಮಾರ್ಗವಿದೆ
ನಾನದರಲ್ಲಿ ಹಲವು ಸಲ ಪಯಣಿಸಿದ್ದೇನೆ

ಬುದ್ಧಿ ಒಂದು ಬಜಾರನ್ನು ನೋಡಿತು,
ಅದು ವ್ಯಾಪಾರ ಶುರುಮಾಡಿತು

ಪ್ರೀತಿ ಅದೆಷ್ಟೋ ಬಜಾರುಗಳನ್ನು ನೋಡಿದೆ
ಬುದ್ಧಿಯ ಬಜಾರಿಗಿಂತಲೂ ಮಿಗಿಲಾದವುಗಳು

ಬಹಳ ಮಂದಿ ಮರೆಯ ಮನ್ಸೂರರು ಅಲ್ಲಿದ್ದಾರೆ
ಅವರು ಪ್ರೀತಿಯ ಆತ್ಮದಲ್ಲಿ ನಂಬಿಕೆಯಿಟ್ಟು
ದಿಬ್ಬವ ಜರೆದು ಜಗುಲಿಯ ಮೇಲೇರಿದ್ದಾರೆ

ಅತ್ಯಲ್ಪ ಬಯಸುವ ಪ್ರೇಮಿಗಳು ಅಂತರಂಗದಲ್ಲಿ
ಆನಂದದ ಪರಿಕಲ್ಪನೆಗಳನ್ನು ತುಂಬಿಕೊಂಡಿದ್ದಾರೆ

ಬುದ್ಧಿಯ ಜನರು ತಮಂಧರು
ನಿರಾಕರಣೆಗಳನ್ನೇ ಸ್ವೀಕರಿಸುವವರು

ಬುದ್ಧಿ ಹೇಳುತ್ತದೆ ಕಾಲು ನೆಲಕ್ಕಿಡಬೇಡ
ಅಂಗಳದಲ್ಲಿ ಎಲ್ಲೆಲ್ಲೂ ಮುಳ್ಳೋ ಮುಳ್ಳು

ಪ್ರೀತಿ ನುಡಿಯುತ್ತದೆ, ಈ ಮುಳ್ಳುಗಳು
ನಿನ್ನೊಳಗಿನ ಬುದ್ಧಿಗೆ ಸೇರಿದವು

ಎಚ್ಚರ, ಸದ್ದಿಲ್ಲದಿರು, ಅಸ್ತಿತ್ವದ ಮುಳ್ಳನ್ನು
ನಿನ್ನ ಹೃದಯದ ಪಾದದಿಂದ ಕಿತ್ತುಬಿಡು
ನಿನ್ನೊಳಗಿರುವ ರೋಸ್‌ಬೋವರ್ ನಿನಗೆ ಕಂಡಾವು

ಶಂಸ್ ಇ ತಬ್ರಿಜ್, ಮಾತೆಂಬ ಮೋಡಗಳಲ್ಲಿರುವ ಸೂರ್ಯ ನೀನು
ನಿನ್ನ ಸೂರ್ಯ ಮೂಡಿದಾಗ ಮಾತೆಲ್ಲವೂ ಅಸ್ತಿತ್ವ ಕಳಕೊಂಡವು
***

## ಅಹೋ ಮದಿರೆಯೇ

ಆ ಚಂದ್ರ ಮರಳಿದ್ದಾನೆ ಅವನಂಥವನ ಈ ಆಗಸ
ಎಂದೂ ಕನಸಿನಲ್ಲೂ ಕಂಡಿರದ ಹಾಗೆ
ಅವನು ತಂದಿದ್ದಾನೆ ಕಿಚ್ಚೊಂದನ್ನು, ಅದನ್ನಾವ ನೀರೂ ಆರಿಸದು
ನೋಡು ದೇಹದ ಕಟ್ಟಡ, ನೋಡು ನನ್ನ ಆತ್ಮಸಂಗಾತದ ಕುಡಿಕೆ
ಒಂದಕ್ಕೆ ಮತ್ತೇರಿಸಿ ಇನ್ನೊಂದನ್ನು ಹಾಳುಮಾಡಿದೆ
ಪಡಖಾನೆಯ ಒಡೆಯ ಹೃದಯದ ಸಂಗಾತಿಯಾದರೆ
ನನ್ನ ಮೈನ ನೆತ್ತರು ಪ್ರೀತಿಯಿಂದ ಮಧುವಾಗಿ ಮಾರ್ಪಟ್ಟಿತು
ನನ್ನ ಹೃದಯ ನಂಜಿಕೊಳ್ಳಲು ಹುರಿದ ಮಾಂಸ
ಕಣ್ಣ ತುಂಬ ಅವನ ರೂಪವೇ ತುಂಬಿರಲು
ಒಂದು ಸ್ವರ ಘೋಷಿಸುತ್ತದೆ
ಒಳ್ಳೆಯದು ಮಾಡಿದೆ ಪಾತ್ರೆಯೇ, ಅಹೋ ಮದಿರೆಯೇ

ನನ್ನ ಹೃದಯ ಥಟ್ಟನೆ ಒಲವಿನ ಸಾಗರವ ವರ್ಣಿಸಿಯೇಬಿಟ್ಟಿತು
ನನ್ನಿಂದ ಜಿಗಿದು ಹೋಗಿಯೇಬಿಟ್ಟಿತು
ಬಾ ಈಗ ನನ್ನ ಹುಡುಕು ಎನ್ನುತ್ತಾ

ಶಂಸಿದ್ದೀನ್‌ನ ಮುಖಾರವಿಂದದ ಹೊಳಪು ಸೂರ್ಯ
ತಬ್ರೀಝ್‌ನ ಹೆಮ್ಮೆ
ಅದರ ಹಾದಿಯಲ್ಲಿ ಮುಗಿಲಿನ ಸಾಲು ಮೋಡಗಳಂತೆ
ಎಲ್ಲ ಹೃದಯಗಳೂ ಓಡುತ್ತಿವೆ
***

## ಇಂದಿನಿರುಳು ಅಫೀಮು ಸೇವಿಸಬೇಡ

ಸಮಾಜ ನಿನ್ನ ಪ್ರೀತಿಸುವಂತೆ ನಡೆ,
ನಿನಗೆ ಅಲೌಕಿಕಾನಂದ ಲಭಿಸುವುದು

ಪಡಖಾನೆಯ ದಾರಿಯನು ಹಿಡಿ
ಮದಿರೆ ಕುಡಿದುನ್ಮತ್ತರಾದವರು ಕಾಣುವರು

ಅನುರಕ್ತಿಯ ಬಟ್ಟಲನು ಹೀರಿ ಖಾಲಿಮಾಡು
ನಿನಗೆ ಅಪಮಾನ ತಟ್ಟದು

ನಿನ್ನ ಶಿರದಲ್ಲಿನ ಕಣ್ಣುಗಳ ಮುಚ್ಚು
ಒಳಗಣ್ಣು ತೆರೆಯುವುದು



ಬಾಹುಗಳನ್ನಗಲಿಸು, ನೀನು ಆಲಂಗಿಸಬೇಕೆಂದರೆ
ಮಣ್ಣಿನ ಮೂರ್ತಿಯ ಒಡೆದುಹಾಕು
ಸುಂದರನ ಮುಖವನ್ನು ಕಾಣುವೆ

ಒಬ್ಬ ಮುದುಕಿಯ ಸಲುವಾಗಿ
ಅಷ್ಟೊಂದು ಕನ್ಯಾಶುಲ್ಕವನ್ನೇಕೆ ತೆರುವೆ
ಮೂರು ಚೂರುಗಳಿಗಾಗಿ
ಅದೆಷ್ಟು ಕಾಲ ಕತ್ತಿ, ಭಲ್ಲೆಗಳ ಕಾಯುತ್ತಿ

ಇರುಳಿನಲ್ಲಿ ಯಾವತ್ತೂ ಬರುತ್ತಾನೆ, ಪ್ರೇಮಿ
ಇಂದಿನಿರುಳು ಅಫೀಮು ಸೇವಿಸಬೇಡ
ಅನ್ನಕ್ಕೆ ಬಾಯಿ ಮುಚ್ಚಿಕೋ
ಬಾಯಿಯ ಸವಿ ನಿನಗೆ ತಿಳಿದೀತು

ನೋಡು, ಆ ಮದಿರೆಯ ಬಟ್ಟಲ ತರುವವನು
ಎಂದಿಗೂ ಹಿಂಸ್ರಕನಲ್ಲ
ಅವನ ಸಮೂಹದಲ್ಲೊಂದು ವೃತ್ತವಿದೆ.
ಅದರೊಳಕ್ಕೆ ಬಾ, ಬಂದು ಕೂರು

ಎಷ್ಟು ಕಾಲ ನೀನು ಕಾಲದ ಆವರ್ತನಗಳನ್ನೆಣಿಸುತ್ತೀಯ
ನೋಡು ಇಲ್ಲೊಂದು ಚೌಕಾಶಿಯಿದೆ,
ಬದುಕೊಂದನು ಕೊಟ್ಟು ನೂರು ಕೊಂಡೊಯ್ಯಿ

ತೋಳ ನಾಯಿಗಳಂತೆ ವರ್ತಿಸುವುದ ಬಿಡು
ನಿನಗೆ ಕುರುಬನ ಪ್ರೀತಿ ದೊರಕೀತು

ನೀನಂದೆ, ನನ್ನ ಶತ್ರು ನನ್ನಿಂದ ಒಂದನ್ನು ಕೊಂಡೊಯ್ದುಬಿಟ್ಟ
ಹೋಗು ಅವನನ್ನು ಪರಿತ್ಯಜಿಸಿಬಿಡು

ಆ ಅವನ ಮೇಲೆನ್ನ ಧ್ಯಾನ ನೆಲೆಗೊಳ್ಳಲು
ಯೋಚನೆಯ ಸೃಷ್ಟಿಕರ್ತನ ಹೊರತು ಬೇರೆ ಯೋಚಿಸಬೇಡ
ಅನ್ನಕ್ಕೆ ಹಪಹಪಿಸುವುದಕ್ಕಿಂತ ಅವನಿಗೆ ಹಪಹಪಿಸುವುದು ಲೇಸು

ದೇವನ ನೆಲವಿಷ್ಟು ವಿಶಾಲವಿರುವಾಗ
ಬಂಧೀಖಾನೆಯಲ್ಲೇಕೆ ಮಲಗಿ ನಿದ್ರಿಸುವೆ

ದೂರವಿರಿಸು ಕಗ್ಗಂಟಾದ ಚಿಂತೆಗಳನ್ನು
ಸ್ವರ್ಗದಲ್ಲಿ ನಿನಗೆ ಉತ್ತರಗಳು ದೊರಕಿಯಾವು

ಮಾತನಾಡುವುದ ತೊರೆ
ಮಾತ ಗೆಲ್ಲುವೆ ನೀನು

ಈ ವಿಶ್ವ, ಈ ಬದುಕುಗಳ ತೊರೆ
ವಿಶ್ವದ ಜೀವವನೆ ಕಂಡೀಯ

***

## ಮುಖದ ಮೌನದ ಭಾವ

ಪ್ರೀತಿ ಬರುತ್ತದೆ ಚೂರಿಯೊಂದನ್ನು ಹಿರಿದು
ಬರುವುದಿಲ್ಲವದು ಲಜ್ಜೆಯ ಪ್ರಶ್ನೆಯೊಂದನು ಹಿಡಿದು
ತನ್ನ ಗೌರವವ ಕುರಿತ ಭಯದಿಂದಲು

ಈ ಮಾತುಗಳನ್ನು ನಿರಾಸಕ್ತಿಯಿಂದ
ನುಡಿಯುತ್ತಿದ್ದೇನೆ, ಅವುಗಳನ್ನು ಹಾಗೆಯೇ ಸ್ವೀಕರಿಸು

ಒಲವು ಒಬ್ಬ ಹುಚ್ಚ
ಹುಚ್ಚು ಕಲ್ಪನೆಗೆ ಬಂದದ್ದೆಲ್ಲವನ್ನ ಮಾಡುತ್ತ
ತನ್ನ ಬಟ್ಟೆಗಳ ಹರಿದುಕೊಳ್ಳುತ್ತ
ಬೆಟ್ಟ ಗುಡ್ಡಗಳಲ್ಲಿ ಓಡುತ್ತ
ವಿಷವಸ್ತುಗಳ ಕುಡಿಯುತ್ತ
ಕೊನೆಗೆ ತಂತಾನೆ
ವಿಲಯವಾಗುವುದನ್ನು ಆಯ್ದುಕೊಳ್ಳುತ್ತ

## ಅನಿಕೇತನ | ೧೩೮

ಒಂದು ಸಣ್ಣಜೇಡ
ಬಲು ದೊಡ್ಡ ಕಣಜದ ಹುಳುವನ್ನು
ಬಲೆಗೆ ಸಿಲುಕಿಸಲು ಯತ್ನಿಸುತ್ತಿದೆ

ಮಹಮ್ಮದರು ಮಲಗಿದ್ದ ಗುಹೆಯ ಉದ್ದಕ್ಕೂ
ಬಲೆ ನೇಯ್ದ ಜೇಡವನ್ನು ಕುರಿತು ಯೋಚಿಸಿ

ಪ್ರೇಮ ಕಥೆಗಳಿವೆ
ಪ್ರೇಮವನು ಕೊಂದು ಪ್ರೇಮದಂತೆನಿಸುವ
ಕಥೆಗಳೂ ಇವೆ

ಕಡಲ ಕಿನಾರೆಯಲ್ಲಿ ನಡೆಯುತ್ತಿರುವೆ
ನೀ ತಡಿಯದಿರಲು ಬಟ್ಟೆ ಮೇಲೆತ್ತಿ
ಬೆತ್ತಲೆ ಮುಳುಗಬೇಕು
ಸಾವಿರ ಪಟ್ಟು ಆಳ ಆಳಕ್ಕೆ

ಪ್ರೀತಿ ಹರಿಯುತ್ತದೆ ನೆಲಕ್ಕೆ
ನೆಲ ಆಗಸಕ್ಕೆ ಶರಣಾಗುತ್ತದೆ
ಬಂದದ್ದೆಲ್ಲವನ್ನೂ ಅನುಭವಿಸುತ್ತದೆ

ಹೇಳು ಈ ನೆಲವೇನು ನಿಕೃಷ್ಟವೇ
ಹಾಗೆ ಶರಣಾಗುವುದಕ್ಕೆ

ನಗಾರಿಯ ಮೇಲೆ ಕಂಬಳಿಗಳ ಕವುಚಬೇಡ
ಬೆಡಗಾಗು ತೆರೆದುಕೋ ಇಡಿಯಿಡಿಯಾಗಿ

ನಿನ್ನ ಒಲುಮೆ ಹೊತ್ತಕಿವಿಯು ಆಲಿಸಲಿ
ಹಸಿರು ಗುಮ್ಮಟದ ಭಾವೋದ್ದೀಪ್ತ ಮರ್ಮರವನ್ನು

ನಿನ್ನ ನಿಲುವಂಗಿಯ ನೀಳಪಟ್ಟಿಯ ಗಂಟುಗಳ ಬಿಚ್ಚಿಬಿಡು
ಹೊಸ ಪ್ರಣಯದಲಿ ಭೂಮ್ಯಂತರಿಕ್ಷಗಳ ಕೊಡವಿ ಮೀರು

ರವಿ ಉದಯಿಸುತ್ತಾನೆ, ಆದರೆ ಇರುಳು
ನಡೆದ ಹಾದಿ ಯಾವುದು?

ನನ್ನ ಬಳಿ ಇನ್ನು ಮಾತುಗಳಿಲ್ಲ
ಆತ್ಮ ಮಾತಾಡಲಿ ಮೌನ ಮುಖದಲಿ
ಹಬ್ಬಿರುವ ಭಾವಗಳ ಕೂಡ

***

## ಪ್ರೇಮಿಗಳೂ, ಪ್ರಿಯಕರನೂ ನಾಶವಾಗಿದ್ದಾರೆ

ಪ್ರೇಮಿಗಳೂ, ಪ್ರಿಯಕರನೂ ನಾಶವಾಗಿದ್ದಾರೆ, ಇಬ್ಬರೂ
ಅವರಷ್ಟೇ ಅಲ್ಲ, ಪ್ರೀತಿಯೂ ನಾಶವಾಗಿ ಹೋಗಿದೆ
ಈ ಇಲ್ಲದ ಭಾವಗಳನ್ನು ಪ್ರಚೋದಿಸುವವನು ದೇವನೊಬ್ಬನೇ
ಮಾಡುತ್ತ ಇಲ್ಲದ ಒಂದು ಇಲ್ಲದ ಮತ್ತೊಂದರ ಜೊತೆ ಪ್ರಣಯದಲಿ ಬೀಳ್ವಂತೆ
ಹೃದಯವಲ್ಲದ ಹೃದಯದಲ್ಲಿ, ಅಸೂಯೆ ಎನ್ನುವುದು ಮನಸ್ಸಿಗೇರುತ್ತದೆ
ಹಾಗೆ ಬಂದು ಅನಸ್ತಿತ್ವವನ್ನು ಕದಡುತ್ತದೆ

ದೇವತೆಗಳೇ, ಅವನನ್ನು ನನ್ನಡೆಗೆ ಮರಳಿ ತನ್ನಿ
ಅವನ ಹೃದಯದ ಕಣ್ಣುಗಳು ಭರವಸೆಯ ಮೇಲೆ ನಿಂತಿವೆಯಾಗಿ
ಇದರ ಪರಿಣಾಮಗಳ ಪರಿವೆಯಿಲ್ಲದೆ ನಾನವನನ್ನು ಬಿಡುಗಡೆಗೊಳಿಸುತ್ತೇನೆ
ಅವನ ಪಾಪದ ದಾಖಲೆಗಳ ಮೇಲೆ ಪೆನ್ನಿಂದ ಗೆರೆ ಎಳೆದುಬಿಡುತ್ತೇನೆ
***

## ಸಂಜೆಗಳ ಕುರಿತು ಕುತೂಹಲಗಳಿಲ್ಲ

ಸಂಜೆಗಳ ಕುರಿತು ಕುತೂಹಲಗಳಿಲ್ಲ
ಈ ಲೌಕಿಕ ಪ್ರಪಂಚ ಗೌರವಿಸುವುದು
ಆತ್ಮ ಸತ್ಯದ ಬೆಳಕಿನಲ್ಲಿ ಹೊಳೆಯುವುದಿಲ್ಲ

ನೀನು ನಿನ್ನ ನೆರಳಿನಲ್ಲಿ ಆಸಕ್ತಿ ಹೊಂದಿರುವೆ
ಬದಲಿಗೆ ನೇರ ಸೂರ್ಯನನ್ನು ನೋಡು

ಪರಸ್ಪರರ ಕಾಲ ದೇಶ ಆಕೃತಿಗಳನ್ನು
ಸುಮ್ಮನೆ ನೋಡುವುದರಿಂದ ನಾವು ಅರಿಯುವುದೇನು?

## ಅನಿಕೇತನ | ೧೪೦

ರಾತ್ರಿಯಲ್ಲಿ ಅರೆ ನಿದ್ರೆಯಲ್ಲಿ ಇರುವವನು
ಊಹಾತ್ಮಕ ಅಪಾಯಗಳನ್ನು ಕಲ್ಪಿಸಿಕೊಳ್ಳುತ್ತಾನೆ

ಮುಂಜಾವಿನ ನಕ್ಷತ್ರ ಹುಟ್ಟಿ ಏರುತ್ತದೆ
ಕ್ಷಿತಿಜಗಳಿಗೆ ರೂಪ ಬರುತ್ತದೆ
ಚಲಿಸುವ ಕಾರವಾನುಗಳಲ್ಲಿ
ಜನರು ಗೆಳೆಯರಾಗುತ್ತಾರೆ

ಇರುಳ ಹಕ್ಕಿಗಳು ಬೆಳಗು ಒಬ್ಬಗೆಯ ಕತ್ತಲೆಂದು ಭಾವಿಸಬಹುದು
ಏಕೆಂದರೆ ಅವು ಅರಿತಿದ್ದಷ್ಟೆ

ಸಂಜೆಯೊಂದಿಗೆ ಕುತೂಹಲ ತಾಳದೆ ಭಾಗ್ಯಶಾಲಿ ಹಕ್ಕಿ
ಸೂರ್ಯನಲ್ಲಿ ಹಾರುತ್ತದೆ. ಅದನ್ನು ನಾವೆನ್ನುತ್ತೇವೆ ಶಂಸ್



## ನನ್ನ ಕಂಗಳಿಂದ ನೋಡುತ್ತಿರುವವನು ಯಾರು?

ದಿನವಿಡೀ ನಾನು ಅದನ್ನು ಕುರಿತೇ ಯೋಚಿಸುತ್ತೇನೆ,
ಇರುಳಲ್ಲಿ ಅದನ್ನೇ ನುಡಿಯುತ್ತೇನೆ
ನಾನು ಬಂದುದೆಲ್ಲಿಂದ, ನಾನು ಮಾಡಬೇಕಿದ್ದುದು ಏನು
ನನಗದರ ಅರಿವಿಲ್ಲ
ನನ್ನ ಆತ್ಮವೆಲ್ಲಿಯದೋ, ಇಲ್ಲಿನದಂತೂ ಅಲ್ಲ, ನಾನದನು ಬಲ್ಲೆ
ಇದನ್ನು ಇಲ್ಲಿಗೇ ಮುಗಿಸಬೇಕು

ಕುಡಿಯುವುದು ಶುರುವಾದದ್ದು ಬೇರೊಂದು ಪಡಖಾನೆಯಲ್ಲಿ
ನಾನು ಮರಳಿ ಅಲ್ಲಿಗೆ ಹೋಗುವಾಗ
ಸಂಪೂರ್ಣ ಸ್ವಸ್ಥಚಿತ್ತನಾಗಿರುತ್ತೇನೆ
ಮತ್ತನಲ್ಲ. ಅದೇ ವೇಳೆ ನಾನು ಮತ್ತೊಂದು ಖಂಡದ ಹಕ್ಕಿ
ಈ ಹಕ್ಕಿ ಗೂಡಲ್ಲಿ ಕುಳಿತಿದ್ದೇನೆ
ಹಾರಿಹೋಗುವ ದಿನ ಬರುತ್ತಲಿದೆ
ನನ್ನ ಕಿವಿಯಲ್ಲಿ ಕುಳಿತು
ನನ್ನ ಮಾತನ್ನ ಆಲಿಸುತ್ತಿರುವ ಇವನು ಯಾರು?
ನನ್ನ ಬಾಯಲ್ಲಿ ನನ್ನ ಮಾತ ನುಡಿಯುತ್ತಿರುವ ಇವನು ಯಾರು?

ನನ್ನ ಕಂಗಳಿಂದ ನೋಡುತ್ತಿರುವವನು ಯಾರು?
ಆತ್ಮವೆಂದರೆ ಯಾವುದು?
ಕೇಳದೆ ಇರಲಾರೆ
ಉತ್ತರದ ಒಂದು ಹನಿಯಾದರೂ ಕುಡಿಯಲು ಸಿಕ್ಕಿದ್ದರೆ
ಈ ಸೆರೆಯದಾಸರ ಸೆರೆಯನ್ನು ಹರಿದು ಹೊರಬರುತ್ತಿದ್ದೆ
ನಾನು ಇಲ್ಲಿಗೆ ನನ್ನ ಇಚ್ಛೆಯಂತೆ ಬಂದುದಲ್ಲ,
ಹಾಗೆಯೇ ಇಲ್ಲಿಂದ ಹೋಗಲೂ ಅರೆ
ಯಾರೆನ್ನನಿಲ್ಲಿಗೆ ತಂದನೋ ಅವನೇ ನನ್ನನ್ನೊಯ್ಯಬೇಕು ಮನೆಗೆ

ಈ ಕವಿತೆ, ನಾನೇನು ಹೇಳಲಿರುವೆನೋ ಅರಿಯೆ,
ನಾನದನ್ನು ಯೋಜಿಸುವುದಿಲ್ಲ
ಹೇಳುವುದರಿಂದ ಹೊರಗಿರುವಲ್ಲಿ ಶಾಂತತೆಯೊಂದು ಲಭಿಸುತ್ತದೆ
ಮಾತು ಮರೆಯಾಗುತ್ತದೆ
ನಮ್ಮ ಬಳಿ ಬಾನೆಯ ತುಂಬ ಮಧುವಿದೆ, ಬಟ್ಟಲುಗಳಿಲ್ಲ

ಅದಂತೂ ಒಳ್ಳೆಯದೇ
ಪ್ರತಿ ದಿನದ ಮುಂಜಾವಿನಲ್ಲಿ ನಾವು ಹೊಳೆಯುತ್ತೇವೆ
ಮತ್ತು ಸಂಜೆಯಲ್ಲಿ ಮತ್ತೆ ನಾವು ಬೆಳಗುತ್ತೇವೆ

***

## ಪ್ರೇಮದ ಸಾಗರ

ಮಾನವ ಜನಾಂಗ ಎದ್ದುಬಂದಿದೆ ಕಡಲಿನಿಂದ
ನೀರಹಕ್ಕಿಗಳಂತೆ. ಆತ್ಮಸಾಗರದಿಂದ
ಕಡಲಿನಿಂದೆದ್ದ ಹಕ್ಕಿ ಇಲ್ಲೇಕೆ ಮನೆಯ ಮಾಡಿಕೊಳ್ಳಬೇಕು?
ಇಲ್ಲ. ನಾವು ಆ ಕಡಲ ಮುತ್ತುಗಳು
ಅಲ್ಲಿ ನಾವು ಎಲ್ಲರೂ ಸಲ್ಲುವವರು
ಅಲ್ಲದಿರೆ ಆತ್ಮಸಾಗರದ ಒಳಗಿಂದಲೆದ್ದ
ಅಲೆಯನಿನ್ನೊಂದಲೆಯೇಕೆ ಹಿಂಬಾಲಿಸುವುದು?
ಇದು ಸಮಾಗಮವ ಹೊಂದಲು ಒದಗಿದ ಕಾಲ
ಇದು ಅನಂತದ ಚೆಲುವಿನ ಕಾಣುವ ಕಾಲ
ಇದು ದಯೆಯ, ಕೊಡುಗೆಗಳ ಪಡೆವ ಕಾಲ
ಇದು ಪರಿಪೂರ್ಣ ಶುದ್ಧ ಸಾಗರ
ಕೊಡುಗೆಯುಕ್ಕಿ ಬಂದಿದೆ ಪ್ರತ್ಯಕ್ಷ
ಕಡಲ ಗುಡುಗೆದ್ದು ಬಂದಿದೆ
ವರಕರುಣೆಯ ಮುಂಜಾವಿನುದಯವಾಗಿದೆ
ಬೆಳಗೇ? ಅಲ್ಲ, ಇದು ಭಗವಂತನ ಬೆಡಗು



## ಪುಟ್ಟ ಪುಟ್ಟ ಚಿಂತನೆಗಳು

ಪೇಲವ ಸೂರ್ಯಕಿರಣ
ಗೋಡೆಯೂ ಬಿಳಿಚಿಕೊಂಡಿದೆ

ಪ್ರೀತಿ ಸರಿದುಹೋಗುತ್ತಿದೆ
ಬೆಳಕು ಬದಲಾಗುತ್ತದೆ

ನನಗಿನ್ನಷ್ಟು ಕರುಣೆ ಬೇಕು
ನಾನು ಅಂದುಕೊಂಡದ್ದಕ್ಕಿಂತ ಹೆಚ್ಚು
***

ಅರ್ಧ ತುಂಡು ಬ್ರೆಡ್ಡಿನೊಂದಿಗೆ ತನ್ನ ಆವರಿಸುವ
ಸಣ್ಣದೊಂದು ಗೂಡಂಥ ಎಡೆಗೆ ಹೋಗಿರುವವ

ಇನ್ನೇನೂ ಬೇಡವಾದವ ತಾನೇ ತಾನಾಗದವ
ಅವನನ್ನ ಬಯಸುವ ಅನೇಕ ಮಂದಿ
ಎಲ್ಲರಿಗೂ ಅವನೊಂದು ಕಾಗದ
ತೆರೆದು ನೋಡು, ಅದು ಹೇಳುತ್ತದೆ: ಬಾಳು ಎಂದು
***

ನಾನು ನಿನ್ನೊಂದಿಗಿರುವಾಗ ಎದ್ದಿರುತ್ತೇನೆ ರಾತ್ರಿಯಿಡೀ
ನೀನಿಲ್ಲದಿರುವಾಗ ನಾನು ಎದ್ದಿರುತ್ತೇನೆ ರಾತ್ರಿಯಿಡೀ

ಈ ಇಬ್ಬರು ನಿದ್ರಾಹೀನರಿಗಾಗಿ ಭಗವಂತನನ್ನು ಸ್ತುತಿಸು
ಅಂತೆ ಅವರಿಬ್ಬರ ನಡುವಿನ ಭಿನ್ನತೆಗಾಗಿ
***
ನನ್ನ ಮೊದಲ ಪ್ರೇಮ ಪ್ರಕರಣವನ್ನು ಕೇಳಿದೊಡನೆಯೇ
ನಿನಗಾಗಿ ಹುಡುಕುವುದ ಶುರುಮಾಡಿದೆ
ಅದೆಷ್ಟು ಕುರುಡು ಎಂಬುದನ್ನರಿಯದೆಯೇ

ಪ್ರೇಮಿಗಳು ಕಡೆಗೆ ಎಲ್ಲೋ ಬೆರೆಯುವುದಿಲ್ಲ
ಅವರು ಒಬ್ಬರಲ್ಲೊಬ್ಬರಿರುತ್ತಾರೆ, ಸದಾ
***



# ತಿಲಕ್ ಕವಿತೆಗಳಿಗೊಂದು ಮುನ್ನುಡಿ

ಮೂಲ: ಕಂದುರ್ತಿ
ಅನುವಾದ: ಸ.ರಘುನಾಥ

ಆಧುನಿಕ ಕಾವ್ಯ ಕ್ಷೇತ್ರದಲ್ಲಿ – ಅಂದರೆ, ಶ್ರೀಶ್ರೀ ಯುಗದಲ್ಲಿ – ತಮ್ಮ ರಚನೆಗಳು ಗ್ರಂಥರೂಪ ಪಡೆವ ಮೊದಲೇ ಇಡೀ ಆಂಧ್ರಪ್ರದೇಶದಲ್ಲಿ ಉತ್ತಮ ಕವಿಗಳಾಗಿ ಪ್ರಖ್ಯಾತರಾದವರು ಮುವ್ವರಿದ್ದಾರೆ. ಅವರಲ್ಲಿ ತಿಲಕರೊಬ್ಬರು. ಉಳಿದಿಬ್ಬರು ಶ್ರೀಶ್ರೀ, ಅಜಂತರು. ಇದಕ್ಕೆ ಕಾರಣ, ಶ್ರೀಶ್ರೀಯವರಲ್ಲಾದರೆ, ಅವರ ಪದ್ಯಗಳಲ್ಲಿ ಹೊರಹೊಮ್ಮಿದ ಅವರ ಅಪೂರ್ವ ಭಾವಕ್ರಾಂತಿ. ಅವರು ರಚಿಸಿದ ಪ್ರತಿಯೊಂದು ಪದ್ಯವೂ ಪ್ರತಿಯೊಬ್ಬ ತೆಲುಗನ ಹೃದಯದಲ್ಲಿ ಪ್ರತಿಧ್ವನಿಸಿತು. ಅಭ್ಯುದಯ(ಪ್ರಗತಿಶೀಲ) ಕಾವ್ಯ ಯುಗಕ್ಕೆ ಆತನೇ ಆದ್ಯನೆಂದು ಅಂಗೀಕರಿಸುವಂತೆ ಮಾಡಿತು. ಉಳಿದಿಬ್ಬರಲ್ಲಿ ಆ ಗೌರವಕ್ಕೆ ಕಾರಣ, ಅವರು ಸಾಧಿಸಿದ ಶೈಲಿ,

ರಮ್ಯತೆ. ಅಜಂತಾ ಒಟ್ಟಾರೆ ಬರೆದುದು ಹತ್ತೋ ಹನ್ನೆರಡೋ ಪದ್ಯಗಳನ್ನು ಮಾತ್ರ. ಅಷ್ಟರಲ್ಲೇ ತನ್ನದಾದ್ದೊಂದು ಸ್ವಂತ ಶೈಲಿಯನ್ನು ಸ್ಥಾಪಿಸಿಕೊಂಡವರು. ತಿಲಕರು ಅದಕ್ಕಿಂತಲೂ ವಿಸ್ತೃತವಾಗಿ, ಬಹುಮುಖಿಯಾಗಿ ಬರೆದು ತಮ್ಮ ಶೈಲಿಯನ್ನು ಸ್ಥಾಪಿಸಿಕೊಂಡರು. ಕವಿತೆಯನ್ನು ಕಡಿಮೆ ಬರೆದರೂ ಹೆಚ್ಚು ಬರೆದರೂ ತನ್ನದೆಂದು ಹೇಳಿಕೊಳ್ಳುವಂಥ ಶೈಲಿಯನ್ನು ದಕ್ಕಿಸಿಕೊಳ್ಳದವನು ಸಾಹಿತ್ಯ ಚರಿತ್ರೆಯಲ್ಲಿ ನಿಲ್ಲಲಾರ. ನನ್ನಯ, ತಿಕ್ಕನ, ಶ್ರೀನಾಥ, ಪೋತನ, ಪೆದ್ದನ – ಹೆಸರುಗಳಿಗೆಲ್ಲ ಈ ಶೈಲಿಯ ಸಂಬಂಧ ಇದ್ದೇ ಇರುತ್ತದೆ. ಪ್ರೇಮಕವಿಗಳಲ್ಲಿ ಕೃಷ್ಣಶಾಸ್ತ್ರಿಗಳಿಗೆ ಅಗ್ರತಾಂಬೂಲ ನೀಡಿದ್ದೂ ಇದಕ್ಕಾಗಿಯೇ. ಅಭ್ಯುದಯ ಕಾವ್ಯ ಯುಗದಲ್ಲಿ ನೂರಾರು ಮಂದಿ ಕವಿಗಳು ಏಕರೀತಿಯ ಭಾವಗಳನ್ನು ಕವಿತೆಯಲ್ಲಿ ಪ್ರಕಟಪಡಿಸಿದರೂ ಅವರಲ್ಲಿ ಬೆರಳೆಣಿಕೆಯಷ್ಟು ಜನರಷ್ಟೇ ಕವಿಗಳಾಗಿ ಚಲಾವಣೆಗೊಳ್ಳಲು ಇದೇ ಕಾರಣ. ಈ ಮಾತಿನಿಂದಾಗಿ ಪ್ರತಿಪಾದಿತ ವಸ್ತುವಿಗಿಂತಲೂ, ಅದರ ಪ್ರಯೋಜನಕ್ಕಿಂತಲೂ ಶೈಲಿಗೆ ಹೆಚ್ಚಿನ ಪ್ರಾಧಾನ್ಯತೆಯ ನೀಡುತ್ತಿರುವೆನೆಂದು ಯಾರೂ ತಪ್ಪಾಗಿ ಭಾವಿಸುವ ಅಗತ್ಯವಿಲ್ಲ. ಕಾವ್ಯದಲ್ಲಿ ಶೈಲಿಗಿರುವ ಪ್ರಾಮುಖ್ಯತೆಯನ್ನು ವಿವರಿಸುವುದು, ತಿಲಕ್ ಎಲ್ಲ ಓದುಗರಿಗೂ ಆಕರ್ಷಕವಾದ ಶೈಲಿ ವಿನ್ಯಾಸಗಳನ್ನು ರೂಪಿಸಿದರೆಂದು ಹೇಳುವುದಷ್ಟೇ ಇದರ ಉದ್ದೇಶ.

ವಚನ(ಮುಕ್ತಛಂದ) ಕಾವ್ಯ ಪ್ರಕ್ರಿಯೆಯನ್ನು ಪರಿಪುಷ್ಟಗೊಳಿಸಿದ ಕೆಲವೆ ಕವಿಗಳಲ್ಲಿ ತಿಲಕರಿಗೆ ವಿಶೇಷ ಸ್ಥಾನವುಂಟು. ಇಂದು ಬಹುತೇಕ ಪರಿಪಕ್ವವಾಗಿರುವ ವಚನ ಕಾವ್ಯಶೈಲಿಗವರು ಬಲ ನೀಡಿದರು. ವಚನ, ಪದ್ಯ ಶೈಲಿಯಲ್ಲಿ ತಿಲಕರು ತೋರಿದ ಮಾಂತ್ರಿಕತೆಯಿಂದಾಗಿ ಆ ಪ್ರಕ್ರಿಯೆ ಸಂಪ್ರದಾಯ ಪದ್ಯಕಾವ್ಯಾಭಿಮಾನಿಗಳನ್ನೂ ಬಹುವಾಗಿ ಆಕರ್ಷಿಸಿತು. ಸಂಪ್ರದಾಯವಾದಿಗಳ ಮೆಚ್ಚುಗೆ ನಮಗೇಕೆಂದು ವಾದಿಸುವ ತೀವ್ರವಾದಿಗಳಿರುವರೆಂಬುದನ್ನು ನಾನು ಬಲ್ಲೆ. ಆದರೆ, ಒಂದು ಹೊಸ ಪ್ರಕ್ರಿಯೆ ಸಾಹಿತ್ಯದಲ್ಲಿ ನೆಲೆಗೊಳ್ಳಲು ಮಾಡುವ ಪ್ರಯತ್ನದಲ್ಲಿ ಸಂಪ್ರದಾಯವಾದಿಗಳ ಸಮ್ಮತಿಯೂ ಒಂದು ಮುಖ್ಯ ಘಟ್ಟವೆಂದು ನಾನು ಅಂದುಕೊಳ್ಳುತ್ತೇನೆ. ತಮ್ಮ ಪ್ರತಿಭಾ ಸಂಪನ್ನತೆಯಿಂದ ವಚನಕಾವ್ಯ ಪ್ರಕ್ರಿಯೆಯನ್ನು ಈ ಹಂತಕ್ಕೆ ಮುಟ್ಟಿಸಿದ ಹೊಸ ತಲೆಮಾರಿನ ಕವಿಗಳಲ್ಲಿ ತಿಲಕ್ ಹೆಸರಿಸಬಹುದಾದವರು.

ವಚನಕಾವ್ಯವಿಂದು ಮುಖ್ಯವಾಗಿ ಎರಡು ವಿಧವಾದ ಶೈಲಿಗಳನ್ನು ಆಶ್ರಯಿಸಿ ಮುಂದುವರೆಯುತ್ತಿದೆ. ಒಂದು: ಸಮಾಸ ಬಾಹುಳ್ಯತೆ, ಸಂಸ್ಕೃತ ಇಲ್ಲವೆ, ಇಂಗ್ಲಿಷ್ ಭಾಷೆಯ ಶಬ್ದ ಪ್ರದರ್ಶನ, ನುಡಿಯಲ್ಲಿ ಗ್ರಾಂಥಿಕ ಛಾಯೆಗಳಿದ್ದು, ಪದ್ಯ, ವಚನಪದ್ಯವೆಂಬ ಭೇದವನ್ನಷ್ಟೆ ಉಳಿಸಿಕೊಂಡು ಪೂರ್ವ ಕಾವ್ಯಭಾಷಾ ಸಂಪ್ರದಾಯಕ್ಕೆ ಹತ್ತಿರವಾದ ಶೈಲಿ. ಎರಡನೆಯದು: ಆಡುನುಡಿವಾದವನ್ನು ಅರಗಿಸಿಕೊಂಡು, ಜನರ ನುಡಿಯಲ್ಲಿನ ಸೂಕ್ಷ್ಮಗಳನ್ನು ಗ್ರಹಿಸಿ, ತೆಲುಗು ಭಾಷೆಯ ಸೊಬಗನ್ನು ದಕ್ಕಿಸಿಕೊಂಡ, ವರ್ತಮಾನ ಕಾಲದ ಪರಿಸ್ಥಿತಿಗಳಿಗೆ, ಸಮಕಾಲೀನ ಜನರ ಹೃದಯಗಳಿಗೆ ಹತ್ತಿರವಾಗಿ ಸಾಗುತ್ತಿರುವ ಶೈಲಿ. ತೆಲುಗು ಭಾಷೆ, ಭಾವ ವಿಕಾಸದ ಚಳವಳಿಗಳಿಗೆ ಮೊದಲಿಗರಾದ ಗಿಡುಗು, ಗುರಜಾಡರ ಆಶಯಗಳಿಗೆ ಈ ಎರಡನೇ ಶೈಲಿ ನಿಜವಾದ ಮುಂದುವರಿಕೆ.

ಮೊದಲನೆಯದು ನನ್ನಯಾದಿಗಳಿಂದ ಬರುತ್ತಿರುವ ಕಾವ್ಯಭಾಷೆಯ ಸಂಪ್ರದಾಯಕ್ಕೆ ಹತ್ತಿರದ ಸಂಬಂಧಿ. ಜನರ ಭಾಷೆಯಿಂದ ಸಹಜವಾಗಿ ಬಂದ ಶಬ್ದಗಳಾಗಲಿ, ಪದಬಂಧಗಳಾಗಲಿ, ಅಲಂಕಾರಗಳಾಗಲಿ, ನುಡಿಗಟ್ಟಿನ ಚೆಲುವಾಗಲಿ ಅಭಿವ್ಯಕ್ತಗೊಳ್ಳುವಷ್ಟು ಶಕ್ತಿಶಾಲಿಯಾಗಿ ಭಾವವನ್ನು ಕಾವ್ಯಭಾಷೆಯ ಸಂಬಂಧವುಳ್ಳ ಕಾವ್ಯವಸ್ತು ಅಭಿವ್ಯಕ್ತಗೊಳಿಸಲಾಗಲಿಲ್ಲವೆಂಬುದು ಪ್ರತಿಯೊಬ್ಬರಿಗೂ, ಪ್ರತಿಯೊಬ್ಬ ಕವಿಗೂ ಅನುಭವವೇದ್ಯವಾದ ವಿಷಯವೆ. ಆದರೆ, ಕಾವ್ಯ ರಚನೆಗೆ ಮೊದಲಿಟ್ಟ ಕೂಡಲೇ ತಾನು ಯಾವುದೋ ಒಂದು ಮೇಲಂತಸ್ತಿನಲ್ಲಿರುವೆನೆಂಬ ಭ್ರಮೆಗೆ ಒಳಗಾಗುವುದರಿಂದ, ಆ ಅಂತಸ್ತಿಗೆ ತಕ್ಕ ಭಾಷೆ ಕಾವ್ಯದ ಭಾಷೆಯೇ ಎಂಬ ಮೂಢನಂಬಿಕೆಯಿಂದ ಕವಿಗಳು ಕೃತ್ರಿಮವೆಂಬ ಕೆಸರಿನಲ್ಲಿ ಇಳಿಯುವುದಾಗುತ್ತಿದೆ. ಕಾವ್ಯ ಜನರಿಂದ ದೂರ ಸರಿಯುತ್ತಿರುವುದಕ್ಕೆ ಇದೇ ಮೊದಲ ಕಾರಣ. ಈ ಕಾವ್ಯಭಾಷೆಯೆಂಬ ಸಂಕೋಲೆಯನ್ನು ಮುರಿಯಲಾಗದಿರುವುದು, ಗ್ರಾಂಥಿಕ ಭಾಷೆಯನ್ನು ಅನಿವಾರ್ಯವಾಗಿ ಆದರಿಸಬೇಕಾಗಿ ಬಂದುದು, ಸಾಂಪ್ರದಾಯಿಕ ಛಂದಸ್ಸುಗಳನ್ನು ಸ್ವಲ್ಪ ಮಟ್ಟಿಗೆ ಮಾತ್ರಾಛಂದಸ್ಸುಗಳನ್ನೂ ಬಳಸುವ ಸಂದರ್ಭಗಳ ಹೊರತಾಗಿ ವಚನಕಾವ್ಯ ಪ್ರಕ್ರಿಯಾ ಕ್ಷೇತ್ರದಲ್ಲಿ ಹೆಜ್ಜೆಯಿಟ್ಟವರಿಗೆ ಎಷ್ಟು ಮಾತ್ರಕ್ಕೂ ಅಗತ್ಯವಿರದು. ಆದರೆ ಪೂರ್ವವಾಸನೆಯನ್ನು ಸಂಪೂರ್ಣವಾಗಿ ಬಿಟ್ಟುಕೊಡಲಾಗದೆ ಹೋದದ್ದರಿಂದ, ಉದ್ದಸಮಾಸಗಳೋ ಕ್ಲಿಷ್ಟ ಸಂಸ್ಕೃತ ಶಬ್ದಗಳೋ ಇಲ್ಲದೆ ಕಾವ್ಯರೂಪ ಸಿದ್ಧಿಸದೇನೊ ಎಂಬ ಅನುಮಾನದಿಂದಲೂ ಆಧುನಿಕರಾದ ಕವಿಗಳಲ್ಲಿ ಹೆಚ್ಚು ಮಂದಿ – ಈ ನಿಟ್ಟಿನಲ್ಲಿ ನೋಡಿದಾಗ – ತಪ್ಪು ಹೆಜ್ಜೆ ಹಾಕುತ್ತಿರುವರೆಂದೇ ಹೇಳಬೇಕಾಗುತ್ತದೆ. ಈ ಪರಿಸ್ಥಿತಿಯನ್ನು ತಿಲಕರು ಸಹ ಮೀರದಾದ ಸಂದರ್ಭಗಳು ಅನೇಕ ಕಡೆ ಕಂಡುಬರುತ್ತದೆ.

ಶೈಲಿಯಲ್ಲಿಯು, ಉಕ್ತಿ ವಿಧಾನದಲ್ಲಿಯು, ಕೆಲವು ಕಡೆ ಕಾವ್ಯವಸ್ತುವಿನಲ್ಲಿಯು ಕೂಡ ರಮ್ಯಕಾವ್ಯ ಬಂಧದಿಂದ ಹೊರಬರಲಾಗದ ಪರಿಸ್ಥಿತಿ ತಿಲಕರಲ್ಲಿ ಸ್ಪಷ್ಟವಾಗಿ ಕಂಡುಬರುವುದು. 'ಆರ್ತಗೀತೆ'ಯಲ್ಲಿ 'ನಿಜವಾಗಿಯೂ ನಾ ಕಂಡೆ ಹಸಿವೆಯಿಂದ ಕಂಗಾಲಾಗಿ ಆಲದಡಿ ಮರಣಿಸಿದ ಮುದುಕನನ್ನು' ಅನ್ನುವ ಸಾಲಿನಿಂದ ಆರಂಭಗೊಂಡು, ಕವಿ ತನ್ನ ಹೃದಯವನ್ನು ಚೂರುಗಳಾಗಿ ಕತ್ತರಿಸಿ ಹೊರಕ್ಕೆಸೆದಂತೆ ಶರಪರಂಪರೆಯಾಗಿ ನುಗ್ಗಿ ಬಂದ ಕರುಣಾಮಯ ದೃಶ್ಯಗಳನ್ನು ಬಣ್ಣಿಸಿದ ರೀತಿಗೂ ಅದೇ ಕವಿತೆಯಲ್ಲಿ, 'ನವ ಸಿಂಗಾರ ಬೇಡ, ಉದಾತ್ತ ಸುಗಂಧಿತ ಶಯ್ಯಾಲಂಕಾರ ಬೇಡ, ರಸವ್ಯಾಪ್ತಿ ಬೇಡ'ದಂತಹ ಸಾಲುಗಳಲ್ಲಿನ ಗ್ರಾಂಥಿಕ ವಾಸನೆಗೂ ಇರುವ ವ್ಯತ್ಯಾಸವನ್ನು ಗಮನಿಸಿದರೆ ನಾನು ಹೇಳಬೇಕೆಂದುಕೊಂಡ ಭಾವ ಸ್ಪಷ್ಟವಾಗುತ್ತದೆ. ಈ ಲೋಪ ಒಬ್ಬ ತಿಲಕರಲ್ಲಿಯೆ ಅಲ್ಲ, ಆಡುನುಡಿಗೂ(ವ್ಯವಹಾರಿಕ ಭಾಷೆ), ಮುಕ್ತಛಂದ(ವಚನ)ಕಾವ್ಯ ಪ್ರಕ್ರಿಯೆಗೂ ಇರುವಂತಹ ಚಾರಿತ್ರ್ಯಕಪರಿಣಾಮ ಸಂಬಂಧವನ್ನು ಸರಿಯಾಗಿ ಗ್ರಹಿಸದ ಅನೇಕ ಆಧುನಿಕ ಕವಿಗಳಲ್ಲಿಯೂ ಕಂಡುಬರುತ್ತದೆ. 'ನೀನು' ಎಂಬ ಖಂಡಿಕೆಯಲ್ಲಿ ಬಳಸಿದ ಶೈಲಿ ಯಾವುದಾದರು ಲಲಿತ ಗೇಯ ಕವಿತೆಗಳನ್ನು ರಚಿಸುವಾಗ ಅನುಸರಿಸಬೇಕಾಗಿತ್ತು. ಸರಿಸುಮಾರು ವೆಂಕಟ ಪಾರ್ವತೀಶ್ವರ ಕವಿಗಳ ಕಾಲದ ಸರಳ ವಚನಶೈಲಿ, ಅರೆ ಗ್ರಾಂಥಿಕ, ಅರೆ ಆಡುನುಡಿಯ ಶೈಲಿ. ಈ

ಶೈಲಿಯು ಸಂಕರ ದೆಸೆಯ ವಚನಕಾವ್ಯದಿಂದ ದೂರ ಸರಿಯಲು ಮತ್ತಷ್ಟು ಸಮಯ ಬೇಕಾಗುವುದು. ತಿಲಕರೊಂದು ರಮಣೀಯ ಶೈಲಿಯನ್ನು ದಕ್ಕಿಸಿಕೊಂಡವರಾದುದರಿಂದ ಅವರ ಶೈಲಿಯ ಬಗ್ಗೆ, ಅದರ ಮೇಲ್ಮೆ, ಲೋಪಗಳನ್ನು ಕುರಿತು ಇಷ್ಟೆಲ್ಲ ಬರೆಯಬೇಕಾಯಿತು.

ಪ್ರಧಾನವಾಗಿ ತಾನು ಅನುಭೂತಿವಾದಿಯೆಂದು ತಿಲಕ್ ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ. ಈ ಅನುಭೂತಿವಾದ ಇತ್ತೀಚೆಗೆ ನವೋದಯ ಯುಗಕ್ಕೆ ಸಂಬಂಧಿಸಿದ್ದು. ಇದು ವ್ಯಕ್ತಿವಾದಕ್ಕೆ ಇನ್ನೊಂದು ಹೆಸರು. 'ನನ್ನ ಅನುಭವ ನನ್ನದು; ನಾನದನ್ನು ಆವಿಷ್ಕರಿಸುತ್ತೇನೆ' ಎಂಬ ತತ್ವ, ಕವಿ ಪಡೆದ ಪ್ರಧಾನ ಅನುಭವಗಳ ಆಕೃತಿಯಲ್ಲಿ ಕಾವ್ಯವನ್ನು ದರ್ಶಿಸುವ ವ್ಯವಸ್ಥೆ. ಇಷ್ಟಕ್ಕೇ ಆದರೆ ಯಾರಿಗೂ ತೊಂದರೆಯಿರದು. ಏಕೆಂದರೆ ವಸ್ತು ಆಶ್ರಿತ ಕವಿತೆಯಲ್ಲೂ ಪಾತ್ರಗಳ ಸ್ವಭಾವ, ಸ್ವರೂಪ ಚಿತ್ರಣ, ವಿವಿಧ ರಸ ಪೋಷಣೆ ಮುಂತಾದವುಗಳಲ್ಲಿ ಕವಿಯ ಅನುಭವ ಪ್ರಧಾನ ಪಾತ್ರ ವಹಿಸುತ್ತಲೇ ಇರುತ್ತದೆ. ಆದರೆ ಈ ಅನುಭೂತಿವಾದ, ಈ ವ್ಯಕ್ತಿವಾದದ ಪ್ರಾಬಲ್ಯ ಸಮಾಜವನ್ನು ನುಂಗುವುದಾಗಿದ್ದಾಗಲೆ ಬಿಕ್ಕಟ್ಟು ಉಂಟಾಗುತ್ತದೆ. ಕವಿಯ ಭಾವನೆಯಲ್ಲಿ ಸಾಮಾಜಿಕ ಪ್ರಯೋಜನೆಯ ಚೈತನ್ಯ ಅನ್ವೇಷಿತವಾಗುವವರೆಗೆ ವ್ಯಕ್ತಿತ್ವ ವಿಸ್ತೃತಗೊಂಡರೆ ಆ ಕವಿ ಸಂಪೂರ್ಣವಾಗಿ ಜನರಿಂದ ದೂರವಾಗದಿರನು. ಇದನ್ನು ತಿಲಕರಿಗೆ ಅನ್ವಯಿಸಿ ನೋಡಿದಾಗ, ತಿಲಕ್ ತಮ್ಮ ಕಾವ್ಯವನ್ನು ಕುರಿತು ಯಾವ ವಿಧವಾಗಿ ಸಮರ್ಥಿಸಿಕೊಂಡರೂ ಅವರ ಕಲ್ಪನೆಯಲ್ಲಿ ಅಡಿಗಡಿಗೆ ಅಭ್ಯುದಯ ಭಾವಾವೇಶ ಇಣುಕುತ್ತಲೇ ಇರುತ್ತದೆ. 'ಪ್ರಾರ್ಥನೆ, ಆರ್ತಗೀತೆ'ಯಂತಹ ಮಹೋತ್ತಮ ಗೇಯಕವಿತೆಗಳನ್ನು ತಿಲಕರಷ್ಟೇ ಬರೆಯಬಲ್ಲರು. ಅಭ್ಯುದಯ ಕಾವ್ಯಯುಗ ಪ್ರವರ್ಧಮಾನಕ್ಕೆ ಬಂದ ಕಾಲದಲ್ಲಿ ಕವಿಗಳನೇಕರು ಶೈಲಿಗೂ ನುಡಿ ರಮ್ಯತೆಗೂ ಪ್ರಾಮುಖ್ಯತೆ ಕೊಡದಿದ್ದುದರಿಂದ ಅದೊಂದು ಲೋಪವಾಗಿ ಪರಿಣಮಿಸಿತು. ಈ ದೋಷವನ್ನು ಪರಿಹರಿಸಿಕೊಂಡ ತಿಲಕ್, ಅಭ್ಯುದಯ(ಪ್ರಗತಿಶೀಲ) ಭಾವಗಳಿಗೆ ರಮ್ಯಶೈಲಿಯನ್ನು ತರುವುದರಲ್ಲಿ ಕೃತಕೃತ್ಯರಾದರು. ಒಟ್ಟಾರೆಯಾಗಿ ನೋಡಿದಾಗ ಅಭ್ಯುದಯಭಾವ, ಕಾಲ್ಪನಿಕ ಚಳವಳಿಯ ಕಾಲದ ಶಬ್ದ ಸೌಂದರ್ಯ, ಈ ಎರಡರ ಸಮ್ಮಿಲನ ತಿಲಕರ ಕಾವ್ಯವೆಂದು ಹೇಳಬಹುದು.

ಪ್ರಗತಿಶೀಲ ಕಾವ್ಯಯುಗದಲ್ಲಿ ಕಾವ್ಯದ ವಸ್ತು ಕೆಲವು ಪರಿಮಿತಿಗಳಿಗೆ ಒಳಗಾಗಿ, ಕೆಲವು ನಿರ್ದಿಷ್ಟ ಅಂಶಗಳಿಗಷ್ಟೇ ಮಿತಗೊಂಡಂತೆ ಕಂಡುಬರುತ್ತದೆ. ಪ್ರಾರಂಭದ ದಿಸೆಯಲ್ಲಿನ ಆವೇಶ ಹಾಗೆಯೆ ಉಳಿದಿದೆ. ಅದರ ಪರಿಧಿಯನ್ನು ವಿಸ್ತರಿಸಿ, ಅದನ್ನು ಬದುಕಿನೆಲ್ಲ ಕ್ಷೇತ್ರಗಳಿಗು ವ್ಯಾಪಕಗೊಳಿಸಬೇಕೆಂಬ ಪ್ರಯತ್ನ ವಚನಕಾವ್ಯ ಯುಗದಲ್ಲಿ ಕಂಡುಬಂದ ಹೊಸ ಬದಲಾವಣೆ. ಎಲ್ಲ ರಸಗಳನ್ನೂ ವಚನಕಾವ್ಯದಲ್ಲಿ ನಿರ್ವಹಿಸಿ ಒಪ್ಪಿಸಬೇಕೆಂಬ ಸಮಾನ ಮನಸ್ಕರ ಆಕಾಂಕ್ಷೆಗೆ ಉದಾಹರಣೆಯಾಗುವಂಥ ಕಾವ್ಯವನ್ನು ತಿಲಕ್ ಬರೆದು ತೋರಿಸಿದರು. 'ನೀನಿಲ್ಲ, ನಿನ್ನ ಹಾಡಿದೆ'ಯಂಥ ಗೇಯತೆಯುಳ್ಳ ಕವಿತೆಗಳು, ಮುಕ್ತಛಂದದ ಕಾವ್ಯ ಪ್ರಕ್ರಿಯೆಯಲ್ಲಿ ಪ್ರೀತಿಯ ಭಾವನೆಗಳನ್ನು ಕೂಡ

ಎಷ್ಟೊಂದು ಸುಂದರವಾಗಿ ಹೇಳಲು ಸಾಧ್ಯವಿದೆಯೆಂದು ನಿರೂಪಿಸುತ್ತವೆ. 'ಮಳೆ ಸುರಿದ ರಾತ್ರಿ' ಕವಿತೆಯಲ್ಲಿ ಹೇಳಿರುವಂತೆ ನಿಜಕ್ಕೂ ನಾವೆಲ್ಲ ಕಾಣದ ಸಮಯದಲ್ಲಿ ಒಂಟಿಯಾಗಿ ಹೊರಟು, ಬೆಳದಿಂಗಳ ಬಯಲಿನಲ್ಲಿ ಸುರಿದ ಅಮೃತದ ಮಳೆಯಲ್ಲಿ ತೊಯ್ದು, ಬೊಗಸೆಯಲ್ಲಿ ಕುಡಿದು ಮರಳಿದವನಂತೆ ಮಧುರಾತಿ ಮಧುರವಾಗಿ ಕವಿತೆ ಬರೆದಿದ್ದಾರೆ ತಿಲಕ್. ಶೃಂಗಾರಾದಿ ಇತರೆ ರಸಗಳಿಗೂ ಅನ್ವಯಿಸುವ ಪರಿಯಲ್ಲಿ ವಚನ ಕಾವ್ಯ ಪ್ರಕ್ರಿಯೆಯಲ್ಲಿ ಈಗ ಕಂಡುಬರುತ್ತಿರುವ ಈ ಬದಲಾವಣೆಯನ್ನು – ಒಟ್ಟಾರೆಯಾಗಿ ಕಾವ್ಯದಲ್ಲಿ ಸಾಮಾಜಿಕ ಪ್ರಯೋಜನಾ ಚೈತನ್ಯವೆಂಬ ಪರಮ ಲಕ್ಷ್ಯಕ್ಕೆ ಭಂಗ ಬರದಿರುವವರೆಗೆ – ನಾನು ಹೃದಯಪೂರ್ವಕವಾಗಿ ಆಹ್ವಾನಿಸುತ್ತೇನೆ.

ತಿಲಕರು ಖಚಿತ ಮಾನವತಾವಾದಿ. ಕೇವಲ ವ್ಯಕ್ತಿಗತವಾದ ಅನುಭವಕ್ಕೆ ಸಂಬಂಧಿಸಿದ ಮಾನವೀಯ ಭಾವನೆಗೂ ಸಹಜ ಮಾನವ ಪರವಾದ ಭಾವನೆಗೂ ಬಹಳ ವ್ಯತ್ಯಾಸವುಂಟು. ನಿಶ್ಚಯವಾಗಿಯೂ ತಿಲಕ್ ಎರಡನೇ ರೀತಿಗೆ ಸೇರಿದವರು. ಪ್ರಗತಿಶೀಲ(ಅಭ್ಯುದಯ) ಕಾವ್ಯದ ಪ್ರಮುಖ ಲಕ್ಷಣವಾದ 'ವಿಶ್ವಭಾವ', 'ಸಂಕುಚಿತಗೊಂಡ ಜಾತಿ ಧರ್ಮಗಳ ಸರಹದ್ದುಗಳನ್ನು ಅಳಿಸಿ', "ಅಕುಂಠಿತ ಮಾನವೀಯತೆಯ ಬಾವುಟ ಹಾರಿಸುವ' ಮನೋಭಾವದ ಅಭ್ಯುದಯ ಕವಿಗೊರಳು ಅವರದು.

ತಿಲಕರ ಕಾವ್ಯ, ಸ್ವಲ್ಪ ಭಾಗ ಪ್ರಗತಿಶೀಲತೆ, ಕೊಂಚ ಭಾಗ ರಮ್ಯತೆ ಬೆರೆತ ಸಮ್ಮಿಶ್ರ ರೂಪ. 'ನನ್ನ ಅಕ್ಷರಗಳು ಜನಶಕ್ತಿ ಪಡೆಯುವ ವಿಜಯ ಐರಾವತಗಳು, ನನ್ನ ಅಕ್ಷರಗಳು ಬೆಳದಿಂಗಳಲ್ಲಿ ಆಡುವ ಸುಂದರ ಹೆಣ್ಣುಮಕ್ಕಳು' ಎಂದು ಹೇಳಿಕೊಂಡಿದ್ದಾರೆ ತಿಲಕ್. ಇಲ್ಲಿ ಅವರ ಭಾವನೆ ಏನೇ ಆಗಿರಲಿ. ಮೊದಲನೆಯದು ಅವರ ಕಾವ್ಯವಸ್ತುವನ್ನು ಕುರಿತು, ಎರಡನೆಯದು ಅವರ ಶೈಲಿಯನ್ನು ಕುರಿತು ಹೇಳಿಕೊಂಡಿರುವಂತೆ ನಾನು ಅರ್ಥಮಾಡಿಕೊಂಡಿದ್ದೇನೆ. ತಿಲಕರು ಅಭ್ಯುದಯ ಭಾವಕ್ಕೆ ಸುಂದರವಾದ ಶೈಲಿಯನ್ನು ತಂದುಕೊಂಡು, ಅಭ್ಯುದಯ ಕಾವ್ಯ ಕಾಲದಲ್ಲಿದ್ದ ದೋಷವನ್ನು ನೀಗಲು ಪ್ರಯತ್ನಿಸಿದರೆಂದು ಹೇಳಬಹುದು. ನವೋದಯ ಕವಿಗಳು ಶಬ್ದ ಸೌಂದರ್ಯಕ್ಕೆ, ಶೈಲಿ ರಮ್ಯತೆಗೆ ಪ್ರಾಧಾನ್ಯವಿತ್ತರು. ಪ್ರಗತಿಶೀಲ ಕವಿಗಳು ಪ್ರಗತಿಕಾರಕವಾದ ವಸ್ತುವಿಗೆ ಪ್ರಾಮುಖ್ಯತೆಯನ್ನು ನೀಡಿದರು. ಈ ಎರಡರಲ್ಲಿನ ಒಳಿತನ್ನು ಒಂದೆಡೆಗೆ ತಂದುಕೊಳ್ಳುವ ಪ್ರಯತ್ನದಲ್ಲಿ ತಪ್ಪೇನು ಇಲ್ಲ. ಭಾವ ಎಷ್ಟು ಪ್ರಗತಿಶೀಲವಾದುದಾದರೂ ಸುಂದರವಾಗಿ, ವ್ಯಂಗ್ಯ ವಿಲಸಿತವಾಗಿ ಹೇಳಲಾಗದಿದ್ದರೆ ಬಾಳದು. ಪ್ರಗತಿಶೀಲ ಕಾವ್ಯವನ್ನೂ ಸಹ ಕೋಮಲವಾಗಿಯೇ ಅಲ್ಲದೆ, ಅಂದವಾಗಿಯೂ ಹೇಳೋಣವೆಂದೇ ತಿಲಕರು ಆಚರಣೆಯ ಮೂಲಕ ನೀಡಿದ ಸೂಚನೆ.


ತಿಲಕ್ ಒಳ್ಳೆಯ ಕವಿಯಾದ್ದರಿಂದ, ಅವರ ಭಾವ ಪ್ರಭಾವ ಯುವಕರ ಮೇಲೆ ಆಗಿಯೇ ಇರುತ್ತದೆ. ಅಭಿನವ ಕಾಲ್ಪನಿಕವಾದವೆಂದು ಹೇಳಬಹುದಾದ ಅವರ ಅನುಭೂತಿವಾದ ಕಾವ್ಯಕ್ಕೆ ಇದು ಅಂತಿಮ ತೀರ್ಮಾನವಾಗಲಾರದು. ತಿಲಕರು ನವೋದಯ ಕಾವ್ಯ ಮಾರ್ಗದಿಂದ ಬಂದವರಾದ್ದರಿಂದ ಅದರಲ್ಲಿನ ಒಳಿತಿನೊಂದಿಗೆ

ದೋಷಗಳೂ ಅವರಲ್ಲಿ ಇರುವುವೇ. ಅವುಗಳನ್ನು ನೀಗಿಕೊಳ್ಳಬೇಕು. ಇತ್ತೀಚಿನ ಹೊಸ ತಲೆಮಾರಿನ ಕವಿಗಳಲ್ಲಿ ವ್ಯಕ್ತಿತ್ವವಾದವೂ, ಅದರ ಫಲವಾದ ಅರಾಜಕವಾದವೂ, ತೀವ್ರವಾದಿ ಧೋರಣೆಗಳೂ ಕಂಡುಬರುವ ಸೂಚನೆಗಳಿವೆ. ಕವಿತೆಯಲ್ಲಿ ಸಾಮಾಜಿಕ ಉಪಯುಕ್ತತೆಯ ಲಕ್ಷ್ಯ ಕೊರೆಗೊಳ್ಳುತ್ತಿರುವುದೇನೊ ಅನ್ನಿಸುತ್ತದೆ. ಇದರಿಂದ ಕಾವ್ಯ ಜನರಿಂದ ದೂರ ಸರಿಯುವ ಪ್ರಮಾದ ಉಂಟಾಗುತ್ತಿದೆ. ಯುವಕವಿಗಳು ಇತ್ತ ಸರಿಯಾಗಿ ಆಲೋಚಿಸಬೇಕೆಂದು, ಸರಿದಾರಿಯನ್ನು ಅನುಸರಿಸಬೇಕೆಂಬುದು ನನ್ನ ಅಪೇಕ್ಷೆ.

ತಿಲಕ್ ನನಗೆ ಆಪ್ತಮಿತ್ರ. ನಮ್ಮದು ಸುಮಾರು ಇಪ್ಪತ್ತೈದು ವರ್ಷಗಳ ಪರಿಚಯ. ಆ ದಿನಗಳಲ್ಲಿ ನಾವು ಸುಬ್ಬಾರಾವು ಪೇಟೆಯಲ್ಲಿ ಸ್ಥಾಪಿಸಿದ 'ನವ್ಯ ಕಲಾ ಪರಿಷತ್'ನಲ್ಲಿ ಆತ ಪ್ರಮುಖ ಸದಸ್ಯ. ಆತನ ಅನಾರೋಗ್ಯದಿಂದಾಗಿ ನಮ್ಮ ನಡುವಿನ ಪರಿಚಯ ಸಂಬಂಧ ಬಹುಕಾಲದವರೆಗೆ ಕಡಿದು ಹೋಗಿತ್ತು. ಅಂತಿಮ ಚರಣದಲ್ಲಿ ಮರಳಿ ಒಗ್ಗೂಡಿದೆವು. ಅವರಿಗೆ ಆ ಅನಾರೋಗ್ಯವಿಲ್ಲವಾಗಿದ್ದರೆ ಇನ್ನೆಷ್ಟು ಬರೆಯುತ್ತಿದ್ದರೋ ಎಂಬುದು ಕೇವಲ ಕಲ್ಪನೆಯಲ್ಲಿ ಮಾತ್ರ ಇರುವಂಥದು. ಇನ್ನು ಅಕಾಲ ಮರಣಕ್ಕೆ ತುತ್ತಾಗದೆ ಇದ್ದಿದ್ದರೆ? ಅದೂ ಅಷ್ಟೆ ..... ಇಷ್ಟಕ್ಕೂ ನಮಗಾತ ಉಳಿಸಿ ಹೋದ ಆಸ್ತಿ ಈ ಕಾವ್ಯ. ಅಮೂಲ್ಯವಾದ ಈ ನಿಧಿಗೆ ಬೆಲೆಗಟ್ಟುವ ಹೊಣೆಯನ್ನು ವಿಶಾಲಾಂಧ್ರದವರು ನನಗೆ ಹೊರೆಸಿದರು. ನಿಜವಾಗಿಯೂ ಇದು ನನ್ನ ಅದೃಷ್ಟವೆಂದುಕೊಳ್ಳುತ್ತೇನೆ.

ತಿಲಕ್ ದೈಹಿಕವಾಗಿ ಒಳ್ಳೆಯ ರೂಪವಂತ. ಹಾಗೆಯೇ ಮಾನಸಿಕವಾಗಿಯೂ ಸಹ. ಒಳ್ಳೆಯವನು, ಮೃದುತಮನು, ಸ್ನೇಹಶೀಲಿ, ಕವಿ, ರಸಜ್ಞ..... ಇಷ್ಟೆಲ್ಲ ಮಾತುಗಳೇಕೆ, ನಾನೇ ಒಂದೆಡೆ ಹೇಳಿದಂತೆ "ನಮ್ಮವನೇ – ಬಲು ಗಟ್ಟಿಗನು." ●

(ಫೀವರ್ಸ್ ಫ್ರಂಟ್, ಹೈದರಾಬಾದ್, 3, ಜೂನ್ 1968)



# ತಿಲಕರ ಹತ್ತು ಅನುವಾದಿತ ಕವಿತೆಗಳು

ಅನುವಾದ: ಸ.ರಘುನಾಥ

### 1. ನನ್ನ ಕವಿತೆ

ನನ್ನ ಕವಿತೆಯಲ್ಲ ಒಂದು ತತ್ವ
ಮತ್ತಲ್ಲ ನೀವನ್ನುವ ತತ್ವ
ಧನಿಕವಾದವಲ್ಲ, ಸಮತಾವಾದ–
ಅಲ್ಲಯ್ಯಾ ಅಯೋಮಯ, ಜರಾಮಯ

ಗಾಜಿನಲೆಗಳ ಬೆಳದಿಂಗಳ ಸಮುದ್ರಗಳೂ
ಜಾಜಿ ಸುಮಗಳ ಅತ್ತರು ದೀಪಗಳೂ
ಮಾಯಾಲೋಕದ ಮಣಿಸ್ತಂಭಗಳೂ
ನನ್ನ ಕವಿತೆ ಗಂಧದ ಗುಡಿಯ ಸುಂದರ ಚಿತ್ರ ವಿಚಿತ್ರಗಳು

ಅಗಾಧ ಬಾಧೆಗಳ ಬೆಂಕಿ ಪತಂಗಗಳೂ
ಧರ್ಮವೀರರ ಕೃತ ರಕ್ತನಾಳಗಳೂ
ತ್ಯಾಗಶಕ್ತಿ ಪ್ರೇಮರಕ್ತಿ ಶಾಂತಿಸೂಕ್ತಿ
ನನ್ನ ಕವಿತೆ ಕರವಾಳ ಝಳಪಿನ ದನಿಗಳು

ನನ್ನ ಅಕ್ಷರಗಳು ಕಣ್ಣೀರ ಜಡಿಯಲ್ಲಿ ನೆನೆದ ದಯೆಯ
ಪಾರಿವಾಳಗಳು
ನನ್ನ ಅಕ್ಷರಗಳು ಜನಶಕ್ತಿ ಹೊಂದುವ ವಿಜಯ
ಐರಾವತಗಳು
ನನ್ನ ಅಕ್ಷರಗಳು ಬೆಳದಿಂಗಳಲ್ಲಿ ಆಡುವ ಸುಂದರ
ಹೆಣ್ಣುಮಕ್ಕಳು.

–1941

## 2. ಅಮೃತ ಸುರಿದಿರುಳು



ಅಮೃತ ಸುರಿದಿರುಳು
ಎಲ್ಲರೂ ಮಲಗಿರಲು
ನಾನು ಮಾತ್ರವೆ
ಕದ ತೆರೆದು ಮನೆ ತೊರೆದು
ಎಲ್ಲಿಗೋ ದೂರ
ಬೆಟ್ಟ ದಾಟಿ ಕೊಳ್ಳ ದಾಟಿ
ಬೆಳದಿಂಗಳ ಬಯಲಿಗೆ
ಹೋಗಿ ನಿಂತೆ.

ಅಪ್ಸರೆಯರಾಕಾಶದಲ್ಲಿ
ಓಡುತಿಹರೊಯ್ಯಾರದಲಿ
ಅವರ ಪಾದಗಳ
ತಾರಾಮಂಜೀರಗಳು
ಮೊಳಗುತಿವೆ ಘಲ್ಲು ಘಲಿರೆಂದು
ಅವರ ಮುಡಿಗಳ ಪಾರಿಜಾತಗಳು
ತೂಗುತಿವೆ ಗೊಂಚಲು ಗೊಂಚಲಾಗಿ
ಅವರು ಕುಂಭಕುಚ ನಿತಂಬ ಭರದಿ
ಹರೆಯದ ಬಿಲ್ಲುಗಳಂತೆ ಬಾಗುತಿದ್ದಾರೆ.

ನನ್ನ ಕಂಡು ಕಿಲಕಿಲ ನಕ್ಕು ಅಂದರು ಹೀಗೆ
ನೋಡಿವನು
ಸುಂದರನು
ಆನಂದ ನರನಾದವನು
ಕನಸುಗಳ ರೇಷಿಮೆಯ ಕುಚ್ಚುಗಳು ತೂಗುತಿಹ
ಕಿರೀಟ ಧರಿಸಿರುವ
ಕಡೆಗಣ್ಣಲಿ ಕಾಂತಿ ಸಂಗೀತ ಗೀತೆಯ ರಚಿಸುತ್ತಿರುವ

ಯಾರಿಗೂ ಸಿಗದ ಗುಟ್ಟುಗಳ ವಶಪಡಿಸಿಕೊಳ್ಳುತಿರುವ
ಬದುಕ ಪ್ರೀತಿಸಿದವನು ಬದುಕಲರಿತವನು
ನವನವೀನವಾದ ಊಹೆಗಳ ವರ್ಣಗಳ ಕಡಲುಗಳ ಮೇಲೆ
ಉದಿಸಿದ ಸೂರ್ಯನು
ಇವನೇನಮ್ಮ ನಮ್ಮ ಪ್ರಿಯನು ನರನು ನಮಗೆ ವರನು

ಜಲಜಲನೆ ಸುರಿಯಿತು ಮಳೆ
ಪ್ರವಹಿಸಿತು ಅಮೃತದ ಸೋನೆ
ಬೊಗಸೆಯಲಿ ಕುಡಿದು ಮರಳಿಬಂದೆ
ದುಃಖವನು ಮರಣವನು ಹೊರಟು ಹೋಗೆಂದೆ
ಬಯಕೆಯ ಮಧುರ ಕಾಶ್ಮೀರಾಂಬರವ ಹೊದ್ದುಕೊಂಡೆ
ಬದುಕ ನಗೆ ಮಂದಾರ ಮಾಲೆಯಾಗಿ ಧರಿಸಿದೆ
ಜೈತ್ರಯಾತ್ರೆಯ ಪಥದಲ್ಲಿ ಮೊದಲಡಿಯನಿಟ್ಟೆ

ಅಮೃತ ಸುರಿದಿರುಳು
ಎಲ್ಲರೂ ಮಲಗಿರಲು
ಬಳಲಿ ನಿತ್ಯ ಜೀವನದಿ ದಣಿದು ಸುಷುಪ್ತಿ ಹೊಂದಿದೆ
ಅಭ್ಯಾಸವನು ಅಸ್ವತಂತ್ರತೆಯನು ಅಪ್ಪಿಕೊಂಡಿದ್ದಾರೆ
ಅಧೈರ್ಯದಲಿ ತಮ್ಮಲ್ಲಿ ತಾವು ಮುದುಡಿ ಮಲಗಿದ್ದಾರೆ
ಅನಂತ ಚೈತನ್ಯೋತ್ಸವದ ಆಹ್ವಾನವನ್ನು ಆಲಿಸದೆ ಹೋದರು

ಅದಕಾಗಿಯೇ ಪಾಪ
ಇಂದಿಗೂ ತಿಳಿಯದಾರಿಗೂ
ನಾನು ಅಮರನೆಂದು!

–1962

## ೩. ವಸುಧೈಕಗೀತೆ

ಭೂಮಧ್ಯರೇಖೆ ನನ್ನ ಹೃದಯದೊಳಗಿಂದ ಹಾದು ಹೋಗುತ್ತದೆ
ಹುಬ್ಬಿನೊಳಗೆ ನಕ್ಷತ್ರಗೋಳ ತಿರುಗುತ್ತದೆ
ಈ ಹೊತ್ತು ನನ್ನ ಗುರುತು ಹಿಡಿಯಲಾರೆ ನೀನು
ಸೂರ್ಯನನ್ನು ನೋಡು ನನ್ನ ತಲೆ ಮೇಲಿನ ಹುವ್ವು

ಅಟ್ಲಾಂಟಿಕ್ ಕಲ್ಲೋಲ ತರಂಗಗಳ ದೇಹ ಮಣಿಸಿದ್ದು ನಾನು
ಫೆಸಿಫಿಕ್ ಆಳಗಳಲ್ಲಿ ರತ್ನಗಳ ಹುಡುಕಿ ಹೆಕ್ಕಿದ್ದು ನಾನು
ಉತ್ತರಧ್ರುವದಲ್ಲೊಂದು ಪಾದ, ದಕ್ಷಿಣಧ್ರುವದಲ್ಲೊಂದು ಪಾದ
ಸಕಲ ಚಕ್ರವರ್ತಿಯ ಪದವಿ ಗಳಿಸಿಕೊಂಡೆ ನಾನು.

ಸಂಕುಚಿತವಾದ ಜಾತಿಮತಗಳ ಎಲ್ಲೆಗಳ ಅಳಿಸಿ ಹಾಕುತ್ತಿರುವೆನಿಂದು
ಅಕುಂಠಿತವಾದ ಮಾನವೀಯ ಪತಾಕೆಯ ಹಾರಿಸುತ್ತಿರುವೆ ನೋಡು

ಚರಿತ್ರೆಗಳ ನೆತ್ತರ ಕಡಲಿಗೆ ಸ್ನೇಹ ಸೇತುವೆಯ ನಿರ್ಮಿಸುತ್ತಿರುವೆ ಬನ್ನಿ
ಕವಿನುಡಿಯ ಸೂರ್ಯಕಾಂತಿ ಪ್ರವಾಹವಿದು ಸ್ವಚ್ಛಂದ ಸ್ನಾನ ಮಾಡಿ.

ಮಧ್ಯಧರೆಯ ಸಮುದ್ರ ತೀರದ ಖರ್ಜೂರ ತರು ನೆರಳ ಮಧ್ಯಾಹ್ನದ ವೇಳೆ
ನಿನ್ನ ಸ್ನಿಗ್ಧ ಕಪೋಲತಲ್ಪದಲಿ ಮುತ್ತಿಟ್ಟ ಪ್ರಿಯಸಖನು ನಾನು.
ಮೌಂಟ್ ವೆಸೂವಿಯಸ್ ಆಗ್ನೇಯ ದರ್ಪೋಜ್ವಲ ಜ್ವಾಲೆ
ಹೊತ್ತಿಸಿ ದಿಗ್ಭಿತ್ತಿಗಳು ಪ್ರಕಂಪಿಸಲು ಹಾಡಿದ್ದು ನಾನು.

ಅಮೆರಿಕನ್ ಪಾಲ್‌ರಾಬ್ಸನ್ ಸಂಗೀತ ಗೀತೆಯಲ್ಲಿ ಕರುಣೆಯಾಗಿ
ಆಫ್ರಿಕಾದ ಕತ್ತಲ ಕಾಡುಗಳ ಸಿಂಹ ಘರ್ಜನೆಯ ನಿರ್ಘೋಷವಾಗಿ
ಕೈಲಾಸ ಹಿಮಗೊರಳು ತೆರೆದು ಬಹ ಶಾಂತಿ ಸಂದೇಶವಾಗಿ
ನುಡಿದದ್ದು ನಾನು, ಮಾನವ ಕುಲಕ್ಕೆ ಅಭಯಹಸ್ತ ನೀಡಿದ್ದು ನಾನು.

ಎಷ್ಟು ಕಣ್ಣೀರ ಮುನ್ನೀರಾಗಿ ಸುರಿಸಿದೆ ನಿಮಗಾಗಿ
ಎಷ್ಟು ಆಕಾಶಗಂಗೆಯ ಪನ್ನೀರಾಗಿ ಇಳಿಸಿದೆ ನಿಮಗಾಗಿ
ವರ್ತಮಾನವಿಂದು ಸುಂದರ ಅಭಿಸಾರಿಕೆಯಂತೆ ವಿಶೇಷದಿ
ಆಗಾಮಿ ಕಾಲ ಗಂಭೀರಸ್ವಾಮಿ ಕೊರಳಿಗೆ ತೊಡಿಸುವ ಮಾಲೆಯಾಗಿ
ನಿಂತದ್ದು ನಾನು, ಕರೆದದ್ದು ನಾನು, ದಶದಿಕ್ಕುಗಳ ಕೂಡಿಸಿದ್ದು ನಾನು.

– 1962

## 4. ಆರ್ತಗೀತೆ

ನನ್ನ ದೇಶವನ್ನು ಕುರಿತು ಹಾಡಲಾರೆ, ನಿನ್ನ ಆ ದೇಶವನ್ನು ಮನ್ನಿಸಲಾರೆ
ಈ ವೀಣೆಗೆ ಶ್ರುತಿ ಕೂಡಿಸಲಾರೆ,
ಈ ದಿನವೆನಗೆ ವಿಷಾದ ಸ್ಮೃತಿ, ವಿಧಿಗತ್ತಲು ಮುಚ್ಚಿದ
ಹಗಲುಗುರುಡಿನ ಧ್ವನಿ,
ನನ್ನೊಳು ಕೊರಡಾದುದೊಂದು ದುಸ್ಥಿತಿ.

ನಿನ್ನ ನವಸಿಂಗಾರ ಬೇಡ, ಉದಾತ್ತ ಸುಗಂಧಿತ
ಶಯ್ಯಾಲಂಕಾರ ಬೇಡ,
ರಸ ವ್ಯಾಪ್ತಿ ಬೇಡ,
ಚಿತ್ರ ಶಿಲ್ಪ ಕವಿತಾ ಪ್ರಸಂಗ ಬಯಸೆ, ತತ್ವಸೂತ್ರ
ವಾದೋಕ್ತಿ ನಡೆಸೆ,
ಸುಂದರ ವಧುವಿನ ಬೆಚ್ಚನಪ್ಪುಗೆಗಳ ರಸಿಕನಾಗೆ,
ಗತ ಚಾರಿತ್ರ್ಯಕ ಯಶಸ್ಸಿನ ಕಲಾಪಗಳ ವಿವರಿಸಬೇಡ, ಅಧಿಕ

ವೀರರನೇಕ ಗಾಥಾ ಸಹಸ್ರ ಕೇಳಿಸಬೇಡ,
ಇನ್ನು ನನ್ನ ಬೇಸರಗೊಳಿಸಬೇಡ.

ನಾನಿಂದು ಕಣ್ಣೀರಾಗಿ ಕರಗಿದ ಗೀತೆ, ನಾಚಿಕೆಯಿಂದ ಎರಡಾಗಿ
ಸೀಳಿದ ಬಿದಿರುಬೊಂಬು
ಕಿಚ್ಚಿನಲಿ ಒಳಗೆಲ್ಲ ಸುಟ್ಟ ಬೂದಿ,
ಮೇಲೆ ದೈವಕ್ಕೆ, ಕೆಳಗೆ ಮಾನವನಿಗೆ ಉತ್ತರಿಸಬೇಕಾದವನು,
ರಸಾತಲದತ್ತ ತಲೆ ಬಾಗಿಸಿದವನು.

ಈ ದಿನ ನಾನು ಕಂಡುದೇನು? ವಿಧಿಯಿಷ್ಟು ಕತ್ತಿಗಳ
ಎಸೆದುದೇನು?
ಜಾಗೃತಿ ಕಿರಣಗಳ ಮೊನಚು ನೆತ್ತರೇನು?
ನಿಜವಾಗಿಯೂ ನಾ ಕಂಡೆ ಹಸಿವೆಯಿಂದ ಕಂಗಾಲಾಗಿ ಆಲದಡಿ
ಮರಣಿಸಿದ ಮುದುಕನನ್ನು;
ನಿಜವಾಗಿಯೂ ನಾ ಕಂಡೆ ಬಿರುಮಳೆಯಲ್ಲಿ ಸೇತುವೆಯಡಿ
ತುಂಬು ಬಸುರಿ
ಹಡೆದು ಅರಿವಳಿದ ದೃಶ್ಯವನ್ನು;
ನಿಜವಾಗಿಯೂ ನಾ ಕಂಡೆ ತಾಯ್ತಂದೆಯಿರದೆ ಕೂಳಿರದೆ
ಅಳುತಳುತ
ಮುಂಗೈಗಳಿಂದ ಕಣ್ಣೊರೆಸಿಕೊಳ್ಳುತ್ತ ಚರಂಡಿ
ಬದಿಯಲ್ಲೆ ನಿದ್ರಿಸಿದ ಮೂರರ ಎಳೆ ಬಾಲಕನ;
ನಿಜವಾಗಿಯೂ ನಾ ಕಂಡೆ ಮಕ್ಕಳಿಗೆ ಗಂಜಿ ಕಾಯಿಸಿ ಕುಡಿಸಿ
ತಾ ಹಸಿದು
ಕಂಬನಿಯ ತಡೆ ಹಿಡಿದು ಆಫೀಸಿಗೆ ಬಂದ ವೃದ್ಧನ
ಜವಾನ ವೀರಣ್ಣನ;
ನಿಜವಾಗಿಯೂ ನಾ ಕಂಡೆ ಕ್ಷಯಪೀಡಿತ ಮಡದಿ ಇನ್ನುಳಿಯಳೆಂದು
ವೈದ್ಯ ನುಡಿದಾಗ
ಪ್ರಚಂಡ ಬಿರುಗಾಳಿಗೆ ಸಿಕ್ಕಿದ ದಾಸವಾಳದ ಟಿಸಿಲಂತೆ
ಗಡಗಡ ನಡುಗಿದ ಬಿಳುಚಿದ ಅಶಕ್ತ ಗುಮಾಸ್ತನ,
ಐದಾರು ಮಂದಿ ಮಕ್ಕಳಿದ್ದವನ,
ನಿಜವಾಗಿಯೂ ನಾ ಕಂಡೆ ಮೂರ್ತಿಭವಿಸಿದ ದೀನತೆಯ, ಹೀನತೆಯ,
ತಲ್ಲಣಿತ ಕಲ್ಲೋಲ ಕಡಲುಗಳ, ಹೊರಟ ಶವಾಕಾರ ವಿಕಾರರ

ಇದಾವ ನಾಗರಿಕತೆಗೆ ಫಲಶ್ರುತಿ? ಯಾವ ವಿಜ್ಞಾನದುತ್ಕರ್ಷಕೆ ಪ್ರಕೃತಿ?
ಯಾವ ಬುದ್ಧದೇವರ ಜನ್ಮಭೂಮಿಗೆ ಅಭಿಮಾನ ಸ್ಮೃತಿ?

ಇನ್ನು ನನ್ನನ್ನು ನಿರ್ಬಂಧಿಸಬೇಡ ಗೆಳೆಯ. ಈ ರಾತ್ರಿ ನಾನು
ಹಾಡಲಾರೆ; ಈ
ಕೃತ್ರಿಮ ವೇಷವನ್ನು ಅಭಿನಯಿಸಲಾರೆ.
ಮಾನವೀಯತೆಯಿರದ ಲೋಕವ ಸ್ತುತಿಸಲಾರೆ.
ಮಾನವನಾಗಿ ತಲೆಯೆತ್ತಿ ನಡೆಯಲಾರೆ.
ಈ ನಾಗರಿಕತೆಯ ಅರಣ್ಯವಾಸ ಭರಿಸಲಾರೆ.
ಒಬ್ಬ ಕಡುಬಡವನಿರುವವರೆಗೆ, ಒಂದು ಮಲಿನ ಕಣ್ಣೀರ
ಹನಿ ಹರಿಯುತಿರುವವರೆಗೆ
ಒಂದು ಕರುಳ ಹಸಿವೆ ಕನಲುತಿರುವವರೆಗೆ
ಒಂದು ಬತ್ತಿದ ಮೊಲೆಯ ಬಳಿ ಹಸಿದಳುವ ಹಸುಗೂಸು
ಇರುವವರೆಗೆ
ಒಬ್ಬ ತಾಯ ನೀರವಾಕ್ರೋಶ ಧ್ವನಿ ಕೇಳುತಿರುವವರೆಗೆ
ಒಂದು ಕ್ಷತ ದುಃಖಿತ
ಹೃದಯ
ನನಗೆ ಶಾಂತಿ ದೊರೆಯದಿನ್ನು ಗೆಳೆಯ, ನಾನು ನಿಗರ್ವಿಯಾಗಿರುವೆ,
ಈ ಲಜ್ಜೆಗೆಟ್ಟ ಮುಖವನ್ನು
ತೋರಿಸಲಾರೆ,
ಈ ಹೃದಯಗೂಡಿನ ಬಿಗಿ ಸಡಿಲಗೊಂಡಿದೆ ಎಲ್ಲೋ, ಈ ಕಣ್ಣುಗಳು
ನೆರೆಯಾಗಿ ಹರಿದಿವೆ,
ಈ ಕನಸುಗಳು ಕಾಗದದ ಚೂರುಗಳಾಗಿ ಉದುರಿವೆ.

ಈ ದುಃಖ ಯಾವ ಸೌಧಾಂತರಾಳಕ್ಕೆ ಪಯಣಿಸಬಲ್ಲದು
ಯಾವ ರಾಜಕಾರಣಿಗಳ ಹೃದಯಗಳ
ತಾಕಬಲ್ಲದು? ಯಾವ ದೇವನಿಗೆ
ನಿವೇದಿಸಬಲ್ಲದು .....?

– 1956

## 5. ನೆರಳುಗಳು

ಚಿಕ್ಕಮ್ಮಾ
ಇವರ ಮೇಲೆ ಮುನಿಯಬೇಡ
ಇವರ ಅಸಹ್ಯಿಸಿಕೊಳ್ಳಬೇಡ
ನಿನ್ನೆಷ್ಟೋ ಆಡಿಕೊಂಡರು ಅವಮಾನದ ಪಾಲು ಮಾಡಿದರು
ಅನೀತಿಯ ಹೊರೆಸಿದರು
ಹೆಣ್ಣಿಗೆ ಸಾಹಸ ಕೆಲಸಕ್ಕೆ ಬಾರದೆಂದರು

ಚಿಕ್ಕಮ್ಮಾ
ಇವರೆಲ್ಲ ಭಯಗೊಂಡ ಮನುಷ್ಯರು
ನಾಳೆಯ ಕುರಿತ ಭಯ ಸಮಾಜದ ಭಯ
ಅಜ್ಞಾತವಾಗಿ ತಮ್ಮೊಳಡಗಿದ ತಮ್ಮನ್ನು ಕಂಡು ಭಯ
ಗತದಲ್ಲಿ ಹೂತು ಹೋದ ಮನುಷ್ಯರು
ಕಳೆದ ಕಾಲದ ನೆರಳುಗಳು

ಚಿಕ್ಕಮ್ಮಾ
ಇವರೆಲ್ಲ ಬಾಲ ಮುರಿದ ಇಲಿಗಳು
ಬಿಲಗಳಿಂದ ಹೊರಬರಲಾರರು
ಒಳಗೊಳಗೆ ಓಡಾಡಿಕೊಳ್ಳುತ್ತಾರೆ
ಮೌಢ್ಯದಿಂದಾಗಿ ಬಲಾಢ್ಯರು
ಅವಿವೇಕದಿಂದಾಗಿ ಅವಿನಾಶಿಗಳು
ಸಮಾಜದ ನಿಬಂಧನೆಗಳಿಗೆ ರಕ್ಷಕ ಭಟರು
ಶ್ರೀಮಂತರ ಸ್ವೇಚ್ಛಾಚಾರಗಳಿಗೆ ಭಾಷ್ಯಕಾರರು ಶಿಥಿಲಾಲಯಗಳಿಗೆ ಪೂಜಾರಿಗಳು

ಚಿಕ್ಕಮ್ಮಾ
ಇವರೆಲ್ಲ ಅರೆಬರೆ ಮನುಷ್ಯರು
ಮತ್ತೊಂದರೆ ಮರೆಗೊಂಡ ಭೀತರು ಬಾಧೆಗ್ರಸ್ಥರು
ಭಾರತ ಭಾಗವತಗಳನ್ನೋದುವವರು
ಪಾಪ ಪುಣ್ಯಗಳ ವಿಭಾಗಿಸುವವರು
ದಿನಪತ್ರಿಕೆಗಳ ತಿರುವಿ ಹಾಕುವವರು
ಖುಷಿಯಿಂದಿದ್ದಂತೆ ನಟಿಸುವವರು
ಹೇಳಲಾದ ನಿನ್ನೆಯ ಮಾತುಗಳನ್ನೇ ಮಾತಾಡಿಕೊಳ್ಳುವವರು

ಹೊದೆಸಿಟ್ಟ ನಿನ್ನೆಯ ಕನಸುಗಳನ್ನೇ ನೆನೆಯುವರು
ಹಲ್ಲುಗಳ ಸಂದಿಯಲಿ ಸಣ್ಣಗೆ ನಗುತ್ತಾರೆ
ಹಠಾತ್ತಾಗಿ ಭಯಗೊಳ್ಳುತ್ತಾರೆ
ನೆಟ್ಟಗೆ ನಿಲ್ಲಲಾರರು
ಇವರೆಲ್ಲ ಚೂರುಗಳಾದ ಗಾಜಿನ ಹರಳುಗಳು
ಚಲ್ಲಾಪಿಲ್ಲಿಯಾದ ಮೂಕ ಮುತ್ತುಗಳು
ಸುಳ್ಳು ತಟವಟವರಿಯದ ಕುರುಡರ ಗುಂಪುಗಳು
ತಮ್ಮ ತಾವೇ ವಂಚಿಸಿಕೊಂಬ ವಿದ್ಯಾವಂತರು ವಿದೂಷಕರು
ತಮ್ಮ ಮರದ ಕೊಂಬೆಯ ತಾವೇ ಕಡಿದುಕೊಂಬ ಅಮಾಯಕರು
ಸಾಂಪ್ರದಾಯಿಗಳು

ಚಿಕ್ಕಮ್ಮಾ
ಇವರನಗಲಿ ಹೋಗಬೇಡ
ಇವರೆಲ್ಲ ನಿನ್ನ ಮಕ್ಕಳು
ಹಸಿವು ಅಗತ್ಯಗಳು ನೀಗದ ಕಷ್ಟಗಳ ಗೆಡ್ಡೆಗಳು
ವಾಚಿಕೆಗಳಲ್ಲಿನ ನೀತಿಗಳ ಹೇಳುತ್ತ
ದಾರಿದ್ರ್ಯದಲ್ಲಿ ಹರಿದ್ರಾ ಶೋಭೆಗಳ ಗುರುತಿಸುತ್ತ
ತಾಳ್ಮೆಯಿರದ ಮಡದಿಯರಿಗೆ ಸಹನೆ ಬೋಧಿಸುತ್ತ
ಧೈರ್ಯವಿರದ ತಮ್ಮ ಸ್ವಭಾವವನ್ನು ಧರ್ಮವೆಂದು ಕರೆಯುತ್ತ
ಭಾರವಾಗಿ ಬೆದರುಗೊಂಡು ಬದುಕುತಿರುವ ಇವರ ನಡುವೆ
ಡೈನಮೆಂಟು ಸಿಡಿಯಬೇಕು
ಡೈನಮೋಗಳು ತಿರುಗಬೇಕು
ಕಾಳರಾತ್ರಿಯ ವೇಳೆ ಎಲುಬು ಗೂಡುಗಳು ಹೇಳಿದ ಗುಟ್ಟು ತಿಳಿಯಬೇಕು
ಹಾದಿ ಬದಿ ನಿಂತ ಬೋಳುಮರಗಳ ನೋವ ಅನುವಾದಿಸಬೇಕು
ಹುಲ್ಲಿನಲ್ಲಿ ಅವಿತ ಹಾವುಗಳ ಬುಟ್ಟಿಯೊಳಗೆ ಹಿಡಿಯಬೇಕು
ನಾಳಿನ ಉದಯಕ್ಕೆ ಈವೊತ್ತು ಬೆಳಕುಗಳ ಹೊಂದಿಸಿಕೊಳ್ಳಬೇಕು

ಚಿಕ್ಕಮ್ಮಾ
ನಾನು ಹೊರಟೆ
ಕತ್ತಲಿಳಿಯುತ್ತಿದೆ
ಕೊನೆಕೊಂಬೆಯಲ್ಲಿ ಚುಕ್ಕಿ ಸಿಕ್ಕಿಕೊಂಡಿದೆ
ಶಿಥಿಲ ಸಂಜೆಯಾಕಾಶ ನೆತ್ತರು ಕಕ್ಕುತ್ತಿದೆ
ದಾರಿಯೆಲ್ಲ ಹಳ್ಳ ಕೊರಕಲು ಮನೆಯೋ ದೂರ
ಕೈಯಲ್ಲಿ ದೀಪವಿಲ್ಲ ಧೈರ್ಯವೇ ಒಂದು ಕವಚ.

– 1964

## ೬. ಸಾವಿರದ ಹಾಡು

ಅಣ್ಣಾ
ಸಾವಿರ ಹೋಳಾದ ಈ ಹೃದಯದಲ್ಲಿ
ಸಂಗೀತವಿನ್ನೂ ಕೇಳಿಬರುತ್ತಿದೆ
ಸಾಯೆನೆಂಬ ನಂಬಿಕೆ ಹುಟ್ಟಿಕೊಂಡಿದೆ
ಸಾವಿಲ್ಲ ನನಗೆಂದು ಸಾರಿಹೇಳಬೇಕೆನಿಸಿದೆ.

ಅಣ್ಣಾ
ಒಂದು ಚಮ್ಮಟಿಗೆ ಏಟಿಗೇ
ಸುರಿದ ನೆತ್ತರ ಒರೆಸಿಕೊಳ್ಳುವಷ್ಟರಲ್ಲೆ
ಚೆನ್ನ ಸಣ್ಣಜಾಜಿ ಚಪ್ಪರದಡಿ ಕನಸಿನ ಸುರಹೊನ್ನೆ
ನಿಲ್ಲುವಳು
ನಗುತ್ತ ಕರೆಯುವಳು
ದೇಹದಲಿ ಹರಿವ ಬೆವರ ಹನಿಯ
ಮೇಘವಸ್ತ್ರದಿಂದೊರೆಸುವಳು.

ಅಣ್ಣಾ
ನಾನು ಕಟ್ಟಿಕೊಂಡ ಆಸೆಯ ಚಂದ್ರಶಾಲೆಯಲ್ಲಿ
ಕಾಲ ಕರಗಿ ಬೆಳದಿಂಗಳಾಗಿದೆ
ನನ್ನ ಭಾವ ವೀಣೆಯ ಧ್ವನಿಯಾಗಿದೆ
ನನ್ನ ಹಾಡು ಗಲಕು ಗೆಜ್ಜೆಗಳ ನಿನಾದವಾಗಿದೆ
ನಾನು ಯೌವ್ವನಾನಂದ ಜೀವನ ವನ
ಒಂದು ಪ್ರಶಾಂತ ಹಿಮಕಣ ಸೋಕಿದರೂ
ಒಂದು ಚಂದ್ರಿಕೆಯ ಶೀತಲ ಕಿರಣರೇಖೆ ಪ್ರಸರಿಸಿದರೂ
ಒಂದು ದಯಾಮಯಿ ಹೆಜ್ಜೆ ಧ್ವನಿ ಮಾತನಾಡಿಸಿದರೂ
ಕೋಟಿ ಹೂಗಳನರಳಿಸುತ್ತೇನೆ
ಕೋಟಿ ನಗೆಗಳ ಚೆಲ್ಲುತೇನೆ

ಅಣ್ಣಾ
ದೂರ ತೀರದಲಿ ನಾವೆಯ ಬಿಳಿಹಾಯಿ ಕದಲಿದಾಗ
ಭಾವ ಹೃದಯದಲಿ ನಿಟ್ಟುಸಿರ ಗಾಳಿ ಬೀಸಿದಾಗ
ದುಃಖಿತನೊಬ್ಬ ನಕ್ಕಾಗ

ಪತಿತನೊಬ್ಬ ಕಣ್ತೆರೆದಾಗ
ಅಲ್ಲಿ ನನ್ನ ಹೆಜ್ಜೆ ಜಾಡು ಗುರುತಿಸಬಲ್ಲೆ
ಅಲ್ಲಿ ನನ್ನ ಸಂದೇಶವನ್ನು ಕಣ್ಣೀರ ಸಂಗೀತವನ್ನು ಆಹ್ಲಾದಿಸಬಲ್ಲೆ.

– 1964

## 7. ಸಿ.ಐ.ಡಿ. ವರದಿ

ಅಯಿನಾಪುರದ ಕೋಟೀಶ್ವರರಾವ್
ಅಕಾಲ ಮರಣ ಹೊಂದಿದ್ದರಲ್ಲಿ
ಅಂತಹ ರಹಸ್ಯವಾಗಲಿ, ಸಂಚಾಗಲಿ, ಶತ್ರು ಪ್ರಯೋಗವಾಗಲಿ ಇಲ್ಲೆಂದು
ಪರಿಶೋಧನೆಗಳಿಂದ ಮೇಲುನೋಟಕ್ಕೆ ತಿಳಿದುಬರುತ್ತದೆ.

ಆದರೆ, ಡಿಲಕ್ಸ್ ಹೋಟೆಲಿನಲ್ಲಿ, ಮೂರನೇ ಅಂತಸ್ತಿನಲ್ಲಿ, ಹದಿಮೂರನೇ
ನಂಬರಿನ ಕೋಣೆಯಲ್ಲಿ
ಹಾಗೆ ಮಾತಾಡುತ್ತ ಮರಣಿಸಿದ್ದು ಸಭ್ಯತೆಯಲ್ಲವೆಂಬ ಸಂಗತಿ ನಿರ್ವಿವಾದಾಂಶ
ಸ್ವಾಮಿ ವಿಧೇಯನಾದ ಕಾರಕೂನ ಕೋಟೇಶ್ವರರಾವು ಕಛೇರಿ ಕೆಲಸದ ಮೇಲೆ
ಹೋಗಿದ್ದರೆ
ಕೆಲಸ ಸಾಂಗವಾಗಿ ಮುಗಿಯುವ ಮುನ್ನ ಮರಣಿಸಿದ್ದು ಡೆರಿಲಿಕ್ಷನ್ ಆಫ್ ಡ್ಯೂಟಿ
ಅನ್ನಬಹುದು,
ಮೂರು ಅಂತಸ್ತುಗಳವರೆಗಿದ್ದ ಮೆಟ್ಟಿಲುಗಳೇರಿದ್ದರಿಂದ
(ಲಿಫ್ಟ್ ಎಂದರೆ ಅವನಿಗೆ ಭಯ, ಉದ್ಯೋಗದಲ್ಲಿ ಅದನೆಂದೂ ಬಯಸಿರಲಿಲ್ಲ)
ವಿಧೇಯನಾದ ಅವನ ಅವಿಧೇಯ ಹೃದಯ
ಪ್ರತಿಭಟಿಸಿ ಕೈಕೊಟ್ಟಿದ್ದರಿಂದ ಅನ್ನಬಹುದು
ಏನಾದರೂ ಕೋಟೇಶ್ವರರಾವು ಮರಣಿಸಿದ್ದು ನಿಜ
ವೈದ್ಯರ ತೀರ್ಮಾನಕ್ಕಿಂತ ಮೇನೇಜರು ಬರುತ್ತಲೆ ಎದ್ದು ನಿಲ್ಲದಾದುದು ಇದಕ್ಕೆ
ನಿದರ್ಶನ.

ಇವನ ಕುರಿತಾದ ವಿವರಗಳಾವುವೂ ಪ್ರಮಾದಕರವಾಗಿಲ್ಲ
ಇವನಪ್ಪ ಗುಮಾಸ್ತೆ, ತಾತ ಗುಮಾಸ್ತೆ, ಮುತ್ತಾತ ಗುಮಾಸ್ತೆ
ಸಾಂಪ್ರದಾಯಿಕವಾದ ವಿನಯ ವಿಧೇಯತೆಗಳಿಗೆ, ಗೌರವಪ್ರದವಾದ ದಾರಿದ್ರ್ಯಕ್ಕೆ
ಇವರ ವಂಶವೊಂದು ರಸ್ತೆ

## ಅನಿಕೇತನ | ೧೬೦

ಮನೆಯಲ್ಲಿವನಿಗೆ ಆರು ಮಂದಿ ಮಕ್ಕಳು, ಒಬ್ಬ ವೃದ್ಧ ತಾಯಿ, ನರಪೇತಲ ಬೆಕ್ಕು
ಒಬ್ಬಳೇ ದುರ್ಬಲ ಮಡದಿ
ಇವನು ಬಾಡಿಗೆಗಿರುವ ಭಗದಲ್ಲಿ ಎರಡೂವರೆ ಕೋಣೆಗಳು, ಒಂದು
ಟೆಲಿವಿಷನ್‌ನಂಥ ಬಚ್ಚಲು,
ಒಂದು ಅಟ್ಟ

ಇವನು ಕೆಂಪಂಗಿ ತೊಡುತ್ತಾನೆ, ಆದರೆ ಕಮ್ಯೂನಿಸ್ಟನಲ್ಲ
ಇವನು ಸಂದಿಗಳಲ್ಲಿ ನಡೆಯುತ್ತಾನೆ, ಆದರೆ ಸರ್ರಿಯಲಿಸ್ಟನಲ್ಲ
ನಡೆಯುತ್ತ ನಡೆಯುತ್ತ ನಗುತ್ತಾನೆ, ಗೊಣಗಿಕೊಳ್ಳುತ್ತಾನೆ, ಆದರೆ ಯೋಗಿಯಲ್ಲ
ಹಾಗೆ ಆಕಾಶದತ್ತ ಹುಚ್ಚಾಗಿ ನೋಡುತ್ತಾನೆ, ಆದರೆ ನಿಜಕ್ಕೂ ಕವಿಯಲ್ಲ
ಪ್ರತಿ ತಿಂಗಳು ಹಾಲಿನ ಬಾಕಿ, ದಿನಸಿಯಂಗಡಿಯ ಸಾಲ, ಆಣೆಪೈಸೆಗಳೊಂದಿಗೆ
ಪಾವತಿಸುತ್ತಾನೆ
ಆದುದರಿಂದ ಕಡೇ ವಾರದಲ್ಲಿ ಹೆಂಡತಿಯೊಂದಿಗೆ ಹಸಿದಿರುತ್ತಾನೆ
ಹರಿಕಥೆಗಳಿಗೆ, ಬೀದಿನಾಟಕಗಳಿಗೆ ಆಗೀಗ ಹೋಗುತ್ತಾನೆ
ವಿ.ಡಿ.ಗಳು ಯಾಕೆ ಬರುತ್ತವೋ ತಿಳಿಯದು, ಕಡೆಗೆ
ಬೀಡಿ ಸೇದುವುದನ್ನೂ ತಿಳಿಯದವನು.

ವರ್ಷಕ್ಕೊಂದು ಸಿನಿಮಾಗೆ ಹೋಗಿ ಸರತಿ ಸಾಲಿನ ಕೊನೆಯಲ್ಲಿ ಬುದ್ಧಿಯಿಂದ
ನಿಲ್ಲುತ್ತಾನೆ
ರಾಜಕೀಯ ಸಾಹಿತ್ಯ ಸಾಮಾಜಿಕ ಸಂಸ್ಥೆಗಳಲ್ಲಿ ಯಾವುದಕ್ಕೂ ಸದಸ್ಯನಲ್ಲ
ಚುನಾವಣೆಗಳಲ್ಲಿ ಮೇಲಿನಧಿಕಾರಿ ಯಾರಿಗೆ ಓಟು ಹಾಕೆಂದರೆ ಅವರಿಗೆ
ಹಾಕುತ್ತಾನೆ
ಪ್ರತಿ ಶನಿವಾರ ದೇವರ ಪಟವನ್ನು ಪೂಜಿಸುತ್ತಾನೆ, ಕಲ್ಲುಸಕ್ಕರೆ ಪ್ರಸಾದ
ತಿನ್ನುತ್ತಾನೆ
ಲಂಚ ಮುಟ್ಟುವುದಿಲ್ಲ, ಯಾರನ್ನೂ ಬೈಯುವುದಿಲ್ಲ, ಯಾರೇನೆಂದರೂ
ಗಮನಿಸುವುದಿಲ್ಲ
ನೀತಿ ನಿಯತ್ತು ಉಳ್ಳವನು, ನಿರ್ಮಲ ದೈವಭಕ್ತಿಯುಳ್ಳವನು

ಆದರೆ, ಮರಣಿಸುವ ಹಿಂದಿನ ದಿನವೇ ಕನಕಯ್ಯನೆಂಬ ಗೆಳೆಯನ ಕಂಡು
ಸುಖವೆಂದರೇನು? ಹೇಗಿರುತ್ತೆ? ಎಲ್ಲಿ ಸಿಗುತ್ತದೆ? ಎಂದು ಕೇಳಿದನಂತೆ!
ಈ ಅನುಮಾನ ಅವನ ಬದುಕಿಗೇ ಒಂದು ಮಚ್ಚೆ
ಇನ್ನೂ ಬೆಳೆದು ದೊಡ್ಡದಾಗದೆ ಅವನು ಮರಣಿಸಿದ್ದು ದೇಶಕ್ಕೇ ರಕ್ಷೆ.

– 1965

## ೪. ಹೋಗಿ, ಹೊರಟು ಹೋಗಿ

ಯಾರು ನೀವೆಲ್ಲ, ಹೀಗೇಕೆ ಬಾಗಿದ ಸೊಂಟ ಕಣ್ಣೀರಿನೊಂದಿಗೆ
ಕೆದರಿದ ಕೂದಲು ಜಾರಿದ ಸೆರಗಿನೊಂದಿಗೆ
ಈ ಸಮಾಧಿಗಳ ಸುತ್ತ ಹುಡುಕುತ್ತ ಅಲೆಯುತಿರುವಿರಿ
ತಾಯಂದಿರೆ ಮಡದಿಯರೆ ಅಕ್ಕ ತಂಗಿಯರೆ ನೀವು
ಎಂದಿನವರು ಎತ್ತಲವರು ನೀವು
ಯಾವ ಸಮರದಲಿ ಮರಣಿಸಿದ ನಿಮ್ಮವನು ಯಾವ ತುಕಡಿ ಯಾವ ಸಂಖ್ಯೆ

ಕುರುಕ್ಷೇತ್ರವಾದರೆ ಕೃಷ್ಣನ ಕೇಳು
ಪಾಣಿಪಟ್ಟಾದರೆ ಪೇಷ್ವೆಯರ ಕೇಳು
ಬೊಬ್ಬಿಲಿಯಾದರೆ ಬುಸ್ಸೀಯ ಕೇಳು
ಕ್ರಿಮಿಯಾ ಯುದ್ಧ ಕೋರಿಯಾ ಯುದ್ಧ
ಮೊದಲನೇ ಎರಡನೇ ಜಾಗತಿಕ ಯುದ್ಧಗಳು
ಬಿಸ್ಮಾರ್ಕನ ಕೇಳು ಹಿಟ್ಲರನ ಕೇಳು
ಬ್ರಹ್ಮದೇವನ ಕೇಳು

ಅಯ್ಯಯ್ಯೋ ನೋಡಬೇಡಿ ಹಾಗೆ
ಬತ್ತಿದ ಕಂಗಳಿಂದ ಬಿಗಿದ ಹಲ್ಲುಗಳಿಂದ
ಅಳು ಬತ್ತಿಹೋದ ಬೆಂಗಾಡಿನೆದೆಗಳ ತೋರಬೇಡಿ
ಏನು ಹೇಳಲಿ ನಿಮಗೆ, ಹೊಣೆಯಾರೆಂದು ಹೇಳಲಿ

ಕತ್ತಲಿಳಿವ ಹೊತ್ತು
ಚಿರತೆ ಹುಲಿಗಳು ದನಗಳ ಬಾಯಲ್ಲಿ ಕಚ್ಚಿ ಹೋಗುವ ಹೊತ್ತು
ಹಾಳು ಬಾವಿಯಲ್ಲಿ ಹರೆಯದ ವಿಧವೆಯರು ಬೀಳುವ ಹೊತ್ತು
ಸತ್ತ ಇತಿಹಾಸದ ಮೂಳೆಗಳಿಗಾಗಿ ನಾಯಿಗಳು ಕಚ್ಚಾಡುವ ಹೊತ್ತು
ದೆವ್ವದಾಲದ ಮರದ ಮೇಲೆ ದೀನವಾಗಿ ಅರಚುತ್ತ ಹಕ್ಕಿಗಳು ಕಣ್ಣ ತೇಲಿಸುವ
ಹೊತ್ತು

ಏನೋ ಭಯಭಯ
ಸುತ್ತ ನೊರೆಗರಳ
ಉರಗವಿಷ
ಅಚ್ಚರಿಯ ವಿಷ
ನೋವಿನ ವಿಷ

ದುಃಖದ ವಿಷ
ಹರಿಹರಿದು ಉಕ್ಕುಕ್ಕಿ ಬರುತಲಿದೆ

ಅಮ್ಮಾ ಹೋಗಿರಮ್ಮಾ
ಹೀಗೇಕೆ ಬಾಗಿಬಾಗಿ ಕುಗ್ಗಿಕುಗ್ಗಿ
ಈ ಸಮಾಧಿಗಳ ಸುತ್ತಲರಸುತ್ತಲಲೆವಿರಿ
ಹೆಣಗಳು ಮಾತಾಡುವುದಿಲ್ಲ
ಸಮಾಧಿಗಳು ತೋರಿಸುವುದಿಲ್ಲ
ಮಣ್ಣು ಗುರುತಿಸದು
ಸಾವಿಗೆ ದಯೆಯಿರದು

ನಿಮ್ಮ ರೋದನೆಯ ನಿಮ್ಮಲ್ಲೆ ಅಡಗಿಸಿಕೊಂಡು
ನಿಮ್ಮ ಕಣ್ಣುಗಳ ನೀವೆ ಚುಚ್ಚಿಕೊಂಡು
ಹೀಗೆ ಹೀಗೆ ಈ ಹಾವುಗಳ ಹುತ್ತಗಳತ್ತ
ಈ ಬೋಳು ಮರಗಳ ಹಿಂದೆ ಈ ಕುಸಿದ ಗುಡ್ಡಗಳ ಹಿಂದೆ
ಹೊರಟು ಹೋಗಿ ಹೊರಟು ಹೋಗಿ ಹೊರಟು ಹೋಗಿ.

– 1966

## ೯. ಕರೆ

ನೆಲದಾಯ ಎದೆ ಮೇಲೆ
ಯುದ್ಧದ ಕೋಳ್ಳಿಗಳ ಕಿಡಿಗಳು
ನೀವು ಯಾರಾದರು ಕಂಡಿರಾ
ಕಣ್ಣೀರನಾದರು ಹರಿಸಿದಿರಾ

ಕೋಟಿ ಕೋಟಿ ಸೈನಿಕರ ಕಿತ್ತುಬಿದ್ದ
ಕಣ್ಣುಗುಡ್ಡೆಗಳ ಕನ್ನಡಿಯಲ್ಲಿ ಪ್ರತಿಫಲಿಸುವ ಸತ್ಯಗಳ
ನೀವೆಂದಾರ ಕಂಡಿರಾ
ಕಣ್ಣೀರನಾದರೂ ಸುರಿಸಿದಿರಾ

ದರಿದ್ರನ ಬಾಯಿ ಇರದ ಹೊಟ್ಟೆ
ತೆರಕೊಂಡ ನಾಲಗೆ ಬೂದಿಯಲಿ ಬರಕೊಂಡ ಮಾತುಗಳು
ನೀವೆದಾದರೂ ಕಂಡಿರಾ
ಕಣ್ಣೀನಾದರೂ ಹರಿಸಿದಿರಾ

ಮುರಿದು ಹೋದ ಬಂಡಿಯ ಚಕ್ರದಂತೆ ಕಾಲ ಚಲಿಸದೆ ಉರುಳಿ ಬಿದ್ದರೆ
ಮೊಂಡುಕೈಗಳ ಮಾನವೀಯತೆ ಬಿಳುಚಿಕೊಂಡ ದೀನ ದೃಶ್ಯ
ನೀವು ಯಾರಾದರೂ ಕಂಡಿರಾ
ಕಣ್ಣೀರನಾದರೂ ಸುರಿಸಿದಿರಾ

ಮಡಚಿಕೊಂಡ ಕಾಗದದ ಹೃದಯ ಹರಿದು ಹೋಗದಿದ್ದರೆ
ಅಡಗಿಸಿಟ್ಟ ಕರಿಜ್ವಾಲೆಗಳು ಗಗನ ಕವಿವ ಮೊದಲೆ
ನೀವು ಎಚ್ಚೆತ್ತುಕೊಳ್ಳುವಿರಾ
ಈಗಲಾದರೂ ಕತ್ತಲ ಪರದೆಗಳ ಹರಿಯುವಿರಾ
ಪ್ರಭಾತ ವೀಣೆಯ ಮೀಟುವಿರಾ?

– 1944

## 10. ಸೈನಿಕನ ಕಾಗದ

ಇಲ್ಲಿ ನಾನು ಕ್ಷೇಮ – ಅಲ್ಲಿ ನೀನು ಸಹಾ
ಮುದಿ ತಾಯಿ, ಹಳೇ ಮಂಚದ ಕಾಲು
ನಮ್ಮ ಚಿಕ್ಕ ಮಗ, ಕೆರೆಯ ಕೊಕ್ಕರೆ ..... .....

ಈಗ ರಾತ್ರಿ, ನಟ್ಟಿರುಳು
ನನಗೇನೂ ತೋಚದು ನನ್ನಲ್ಲೊಂದು ದಿಗಿಲು
ಬೆಳ್ಳನೆಯ ತೆಳು ಮಂಜು ಇರುಳ ಕತ್ತಲೆಗಂಚು
ದೂರ ಪಕ್ಕದ ಗುಡಾರದಲ್ಲಿ ಕಾರ್ಪೊರಲ್ ಬೂಟುಗಳ ಸದ್ದು
ಯರೋ ಹುಲ್ಲಿನ ಬಣವೆ ಮೇಲಿಂದ ಉರುಳಿದಂತೆ
ನಿಶ್ಶಬ್ದದಲ್ಲಿ ನಿದ್ರಿಸಿದ ಸೈನಿಕರ ಗೊರಕೆ
ಸತ್ತ ಜೀವಿಗಳ ಮೋರೆಯಂತಿದೆ.

ಅಬ್ಬಾ ಚಳಿ! ನೆತ್ತರು ತಣ್ಣಗಾಗುವ ಕಪ್ಪಾಗುವ ಚಳಿ!
ಉದ್ದವಾದ ಚುಟ್ಟಾ ಸೇದಿದರೂ
ಲಿಂಡೆಲ್ (ಅದರ ಪಾಪದ ಬೆಲೆ ರೂಪಾಯಿ)
ಗುಂಡಿಗೆಯನಪ್ಪಿದರೂ
ಅದರ ಸಾರಾಯಿ ಬಾಯಿ ನೀರು ಕುಡಿದರೂ ಹೋಗದೀ ಚಳಿ.

ನನ್ನಲ್ಲಿ ಭಯ ಹೋಗದು ಮತ್ತೆ ನಾಳೆ ಉದಯ
ಬೆಂಗಾಡುಗಳ ನದಿಗಳ ಅರಣ್ಯಗಳ ದಾಟಬೇಕು
ಟ್ರೆಂಚುಗಳಲ್ಲಿ ಅಡಗಬೇಕು

ಮೇಲೆ ವಿಮಾನ ಕೈಯಲ್ಲಿ ಸ್ಪೆನ್‌ಗನ್ನು
ಕೀ ಕೊಟ್ಟರೆ ತಿರುಗುವ ರಟ್ಟಿನ ಚೂರು ಸೈನಿಕರು
ಮಾರ್ಚ್!

ಒನ್ ಟೂ ಥ್ರೀ ಷೂಟ್ ಡೆಡ್ ಯಾರ್
ನೀನಾ ನಾನಾ
ಕೊಡಿ ಟೆಲಿಗ್ರಾಮು ಕೇರಾಫ್ ಸೋ ಅಂಡ್ ಸೋ
(ನಿಮ್ಮವನು ಡೆಡ್.)

ಅರಿವಳಿದ ಅನೆಸ್ತೇಷಿಯದಲ್ಲಿ
ಬೆನ್ನುಮೂಳೆ ಕೋಲಿನಂತೆ ಬಿಗಿದುಕೊಂಡಿದೆ
ಯುದ್ಧ ಯುದ್ಧ
ಲಿಬಿಯಾದಲ್ಲಿ ಬರ್ಲಿನ್‌ನಲ್ಲಿ ಸ್ಟ್ಯಾಲಿನ್‌ಗ್ರಾಡ್‌ನಲ್ಲಿ
ಸ್ವಾರ್ಥ ಹುಚ್ಚುನಾಯಿಯಂತೋಡುತ್ತಿದೆ.
ಅಬ್ಬಾ! ನಡುಗಿಸುವ ಚಳಿ
ಎಲ್ಲರೂ ನಿದ್ರಿಸುತ್ತಿದ್ದಾರೆ
ಎಲ್ಲರೂ ಸಾಯುತ್ತಿದ್ದಾರೆ
ಅರ್ಧರಾತ್ರಿ ದಾಟಿತೆಂದು ಮೊಳಗಿದ ಒಂದು ಗಂಟೆ
ಉರಿಯಂತೆ ಮುಖಕ್ಕೆ ಬಡಿದಿದೆ.

ನಾನು ಇಲ್ಲೀವರೆಗಿನ ನಾನಲ್ಲ
ನನಗೆ ಬೆಲೆಯಿಲ್ಲ
ನನಗೆ ಅನುಭೂತಿಯಿಲ್ಲ
ಕೊಲ್ಲುವುದು, ಸಾಯುವುದು
ಮೀಸೆ ತಿರುಗಿಸುವಂತಹುದು ರೂಢಿಯಾಗಿದೆ.

ಕಾಣಿಸುವ ಈ ಸಮವಸ್ತ್ರದಡಿ
ಒಂದು ದೊಡ್ಡ ನಿರಾಸೆ, ಒಂದು ಅನಾಗರಿಕತೆ
ಸೇತುವೆಯಡಿಯ ನದಿಯಂತೆ ಗುಪ್ತವಾಗಿದೆ
ಬಿಡಲಾಗದ ಮೋಸದ ಕಳ್ಳಹೂಳಿನಂತಿದೆ
ನಾನೆಂದರೆ ನನಗೇ ಅಸಹ್ಯ
ಆದರಿಂದಾಗಿಯೇ ಮತ್ತೆಮತ್ತೆ ಕೊಲ್ಲುತ್ತೇನೆ, ಮತ್ತೆಮತ್ತೆ ಕುಡಿಯುತ್ತೇನೆ
ಇನ್ನೇನು ಮಾಡಿದರೂ ಯಾರೂ ಒಪ್ಪುವುದಿಲ್ಲ.
ಇನ್ನು ಬೆಳಗಾಗುತ್ತದೆ

ದೂರದಲ್ಲಿ ಆಲ್ಪ್ಸ್ ಮೇಲೆ ಹಿಮ ದುಃಖದಂತೆ ಕರಗುತ್ತದೆ
ಪ್ರಭಾತ ಕಡಲಿನ ಮೇಲೆ ಬೆಳ್ಳಿನಾವೆಯಂತೆ ತೂಗಾಡುತ್ತದೆ
ಮತ್ತೆ ಯಾವಾಗ ನಮ್ಮೂರಿಗೆ ಬರುವೆನೋ!
ನಿನ್ನ ಕಂಡೇನೋ!

ಸುಂದರ ಧವಳ ಹಾಸ ನಿನ್ನ ಕೊರಳಿನಲ್ಲಿ
ಸರ ಸರಗಳಾಗಿ ಕದಲಿದಾಗ,
ಅದೊಂದು ರೀತಿಯ ತೇವಗೊಂಡ ನೋಟ
ನವಿಲ ರೆಕ್ಕೆಯಂತೆ ಬಿಚ್ಚಿಕೊಂಡಾಗ

ಎಂದಿಗೆಂದಿಗೆ!
ಸಾವಿರಾರು ಮೈಲುಗಳ ದೂರ ನಮ್ಮ ನಡುವೆ
ಒಂದು ಯುಗದಂತೆ ಅಡ್ಡಲಾಗಿದೆ
ಇನ್ನು ಇರುವೆ ಮೈ ಡಿಯರ್
ನಿದ್ದೆ ಬರುತಿದೆ ಅಮಲಾಗಿ ಕಪ್ಪಗೆ
ಅದೋ ಸೆಂಟ್ರಿ –
ಡೇರೆಯ ಮುಂದೆ ಗೊರಿಲ್ಲಾ ನಿಂತಿದ್ದಾನೆ

ಅದೋ ಇನ್ನೂ
ಕಾರ್ಪೊರಲ್ ಬೂಟುಗಳ ಸದ್ದು
ಹೊಟ್ಟೆಯಲ್ಲಿ ನೀರಲುಗುತಿರುವಂತೆ.
ಜೋಪಾನವಮ್ಮ ಜೋಪಾನ
ನೀನೂ ಮಕ್ಕಳೂ ಹಲ್ಲಿಗಳೂ ಎಲ್ಲರೂ.

ಮತ್ತೆ ಪತ್ರ ಬರೆ!
ಎಂದಿಗೋ ಮತ್ತೆ
ಇರುವೆ! ಅಬ್ಬಾ! ಚಳಿ!
ಚಳಿ ಎದೆಗಳ ಮೇಲೆ ಕತ್ತಿಯಂತೆ ಹರಿದಿದೆ
ನಿನ್ನ ರೂಪ ನನ್ನ ದೇಹಕ್ಕೆ ಬೆಚ್ಚಗೆ ಸೋಕಿದೆ.

–1943

